THE BOOK WAS
DRENCHED

# Noise Book

TIGHT BINDING BOOK

TEXT LIGHT
WITHIN THE
BOOK ONLY

UNIVERSAL LIBRARY

OU_200045

UNIVERSAL LIBRARY

**OSMANIA UNIVERSITY LIBRARY**

Call No. Accession No.

Author

Title

This book should be returned on or before the date last marked below.

# ತಾಯಿ - ಮಕ್ಕಳು

ವಾಹಿನಿ ಪ್ರಕಾಶನ
ಜಯಚಾಮರಾಜರಸ್ತೆ, ಬೆಂಗಳೂರು-೨

ಮೊದಲನೆಯ ಮುದ್ರಣ : ಆಗಸ್ಟ್ ೧೯೫೫

ಮುಖಚಿತ್ರ :

**ಶ್ರೀ ಆರ್. ಎಸ್. ನಾಯ್ಡು**

ಮುದ್ರಕರು :

**ಎಂ. ಎಸ್. ಚಿಂತಾಮಣಿ, ಬಿ. ಎಸ್‌ಸಿ.,**

**"ಈಸ್ಟರ್ನ್ ಪ್ರೆಸ್", ಜಯಚಾಮರಾಜ ರಸ್ತೆ,**

**ಬೆಂಗಳೂರು-೨**

# ಮುನ್ನುಡಿ

‘ **ಗೃಹಲಕ್ಷ್ಮಿ** ’ (೧೯೫೩)ಯಲ್ಲಿ ಆರಂಭಿಸಿದ ರುಕ್ಮಿಣಿಯ ಅನುಪಮ ಜೀವನ ಕಥೆಯನ್ನು ‘ **ರುಕ್ಮಿಣಿ** ’ (೧೯೫೪)ಯಲ್ಲಿ ಮುಂದುವರಿಸಿ, ‘ **ತಾಯಿ–ಮಕ್ಕಳು** ’ (೧೯೫೫) ಕಾದಂಬರಿಯಲ್ಲಿ ಮುಕ್ತಾಯಗೊಳಿಸಿದ್ದೇನೆ

ನಮ್ಮ ನಾಡಿನ ಸಾಂಸ್ಕೃತಿಕ ದೇವಾಲಯವನ್ನು ಕಟ್ಟಿ ಬೆಳಿಸಿದ ಮಹಾಪುರುಷರು, ಸಂತರು, ಭಕ್ತರ ಚರಿತ್ರೆ ಅಪೂರ್ಣವಾಗಿಯಾದರೂ ನಮ್ಮ ಕರಗತವಾಗಿದೆ ಪ್ರಸಿದ್ಧಿಗೆ ಬಾರದೆ, ಎಲೆಯ ಮರೆಯ ಕಾಯಿಯಂತಿದ್ದು ಈ ಸಂಸ್ಕೃತಿ ವೃಕ್ಷಕ್ಕೆ ನೀರೆರೆದು ಪೋಷಿಸಿದ ದಿವ್ಯ ಜೀವಿಗಳ ಚರಿತ್ರೆ ನಮಗೇನೂ ತಿಳಿಯದು. ಅಪ್ರಸಿದ್ಧಳಾದರೂ ಅಗಣ್ಯಳಲ್ಲದ ಒಬ್ಬ ಸಾಧ್ವಿಯ ಆತ್ಮೋತ್ಕ್ರಾಂತಿಯನ್ನೇ ಸಾಮಾನ್ಯ ಜೀವನದ ಅಸಾಮಾನ್ಯತೆಯನ್ನು ಚಿತ್ರಿಸುವುದರ ಜತೆಗೆ ನಮ್ಮ ನಾಡಿನ ಹಿರಿಯ ಆಸ್ತಿಯಾದ ಆಧ್ಯಾತ್ಮಿಕ ಸಂಸ್ಕೃತಿಯ ಹಲಕೆಲವು ಆವಿಷ್ಕಾರಗಳನ್ನು ಪರ್ಯಾಯವಾಗಿ ಚಿತ್ರಿಸಿದ್ದೇನೆ

ಪರಧರ್ಮ ಪರ ಸಂಸ್ಕೃತಿಯನ್ನು ಅಲ್ಲಗಳೆಯುವುದು ಭಾರತದ ವೈಶಿಷ್ಟ್ಯಕ್ಕೇ ಅನನುಗುಣವಾದುದೆಂದು ನನ್ನ ಸ್ಪಷ್ಟಾಭಿಪ್ರಾಯ. ವಿಲಾಯಿತಿ ಎಂದರೆ ಹಾರಿ ಕುಪ್ಪಳಿಸಿ ಅದರ ಸಂಸ್ಕೃತಿಯನ್ನು ಸಾಕಲ್ಯವಾಗಿ ಅಂಗೀಕರಿಸುವುದೆಷ್ಟು ದೋಷಯುತವಾದುದೋ ಅಷ್ಟೇ ದೋಷಯುತವಾದುದು ಅದನ್ನು ಸಂಪೂರ್ಣವಾಗಿ ನಿರಾಕರಿಸುವುದು. ಪಾಶ್ಚಾತ್ಯ ಲೋಕದಲ್ಲಿಯೂ ಋಜು ಜೀವನ ಅಧ್ಯಾತ್ಮ, ಮಾನವತೆ ಬೆಳದಿದೆಯೆನ್ನುವುದನ್ನು ನಾವು ಅರ್ಥಮಾಡಿಕೊಳ್ಳಬೇಕು. ಪ್ರಾಚ್ಯ ಪಾಶ್ಚಾತ್ಯ ಸಂಸ್ಕೃತಿಗಳ ಆದ್ಯ ತತ್ತ್ವಗಳನ್ನು ಸಮನ್ವಯ ದೃಷ್ಟಿಯಿಂದಲೇ ನಾವು ನೋಡಬೇಕು.

ವಿಶ್ವಮಾನವನ ಅವತಾರವಾಗಲು ಹಾದಿ ಹಸನುಗೊಳಿಸುವ ಹೆಚ್ಚಿನ ಜವಾಬ್ದಾರಿ ಸ್ವತಂತ್ರ ಭಾರತದ ಪ್ರಜೆಗಳಾದ ನಮ್ಮ ಮೇಲೆ ಬಿದ್ದಿದೆ. ನಮ್ಮ ರಾಷ್ಟ್ರದ ಮಹಾನಾಯಕರಾದ ಪಂಡಿತ ಜವಾಹರಲಾಲ್‌ಜೀಯವರು ಈ ವಿಷಯದಲ್ಲಿ ನಮಗೆ ಮಾತ್ರವೇ ಅಲ್ಲ–

ಇಡಿಯ ವಿಶ್ವಕ್ಕೇ ಮಾರ್ಗದರ್ಶನ ಮಾಡಿದ್ದಾರೆ. ಯಾವದು ಒಂದು ಕಾಲಕ್ಕೆ ಕೇವಲ ಕವಿಗಳ ಕನಸಾಗಿತ್ತೋ ಅದು ಇಂದು ಸತ್ಯವಾಗುತ್ತಿದೆ ರೋಗ ರುಜಿನಾದಿಗಳನ್ನು ತೊಡೆದುಹಾಕಲು ವಿಜ್ಞಾನಿಗಳು ಪ್ರಯತ್ನಿಸಿದಂತೆ ಯುದ್ಧ, ಯುದ್ಧದ ಭೀತಿಯನ್ನು ತೊಡೆದುಹಾಕಲು ಭಾರತದ ಮಹಾಪ್ರಧಾನಿ ದುಡಿಯುತ್ತಿದ್ದಾರೆ. ಇವರ ಪ್ರಯತ್ನದ ಜಯಾಪಜಯವನ್ನೇ ಜಗತ್ತಿನ ಭವಿಷ್ಯ ಅವಲಂಬಿಸಿದೆಯೆಂದರೆ ತಪ್ಪಾಗಲಾರದು

ವಿಶ್ವಬಾಂಧವ್ಯದ ಕನಸು ನನಸಾಗಲು ಅಪ್ರತ್ಯಕ್ಷವಾಗಿ ಶ್ರಮಿಸಿದ ಮಹಾವ್ಯಕ್ತಿ ರುಕ್ಮಿಣಿ ಆಕೆ ನೆಟ್ಟ ಕಲ್ಪವೃಕ್ಷ ಮುಂದಿನ ತಲೆಮಾರಿನಲ್ಲಿ ಚಿಗುರಿ, ಗಿಡವಾಗಿ, ಹೆಮ್ಮರವಾಗಿ ಹಲವರ ಆಶ್ರಯಸ್ಥಾನವಾದುದನ್ನು '**ತಾಯಿ-ಮಕ್ಕಳು**' ಕಾದಂಬರಿಯಲ್ಲಿ ಓದುಗರು ಗುರುತಿಸಬಹುದು. ರುಕ್ಮಿಣಿ, ಗೋದಮ್ಮ, ಕಮಲ, ಮಾಧವರಾಯ ಒಂದು ಸಂಸ್ಕೃತಿಗೆ ಸೇರಿದವರಾದರೆ ಫ್ಲೋರಾ, ಪ್ರೊ. ಡ್ರೂ, ನೀನಾ, ಪೀಟರ್ ಸಿಮ್ಮನ್ಸ್ ಬೇರೊಂದು ಸಂಸ್ಕೃತಿಗೆ ಸೇರಿದವರು. ಆದರೆ ಈ ವ್ಯಕ್ತಿಗಳಲ್ಲಿ ಎಂಥ ಭಾವ ಸಾಮಂಜಸ್ಯ, ಆದರ್ಶ ಸಮನ್ವಯವಿದೆಯೆಂಬುದು ಓದುಗರನ್ನು ಅಚ್ಚರಿಗೊಳಿಸಬಹುದು ಇವು ಲೇಖಕನ ಮಾನಸ ಸರೋವರದ ಮಂದಾರ ಕುಸುಮಗಳೆಂದು ಕೆಲವು ಓದುಗರು ಭಾವಿಸಬಹುದು ಆದರೆ ಲೇಖಕ ತಾನು ಕಂಡ ಹಲವು ಪ್ರಾಚ್ಯ ಪಾಶ್ಚಾತ್ಯ ವ್ಯಕ್ತಿಗಳ ಜೀವನದಿಂದ ಸ್ಫೂರ್ತಿಗೊಂಡೇ ಈ ಚಿತ್ರಗಳನ್ನು ರೂಪಿಸಿದ್ದಾನೆ.

ಓದುಗರಿಗೆ ಈ ಪವಿತ್ರಾನಂದ ಒದಗಿಸುವುದರಲ್ಲಿ ನನ್ನ ಪಾಲುಗಾರರಾಗಿ ಶ್ರಮಿಸಿರುವ ವಾಹಿನಿ ಪ್ರಕಾಶನದ ಶ್ರೀ ಎಂ. ಎಸ್. ಚಿಂತಾಮಣಿಯವರಿಗೆ ಧನ್ಯವಾದಗಳನ್ನರ್ಪಿಸುತ್ತೇನೆ.

ಬೆಂಗಳೂರು-೪
೪-೮-೧೯೫೫

ಅ. ನ. ಕೃ

ನನ್ನ ಪ್ರೇರಕಶಕ್ತಿಯಾಗಿ ನಿಂತು

**'ಗೃಹಲಕ್ಷ್ಮಿ' - 'ರುಕ್ಮಿಣಿ' - 'ತಾಯಿ-ಮಕ್ಕಳು'**

ಕಾದಂಬರಿಗಳನ್ನು ಬರೆಯಿಸಿದ

ನನ್ನ ತಾಯಿದೇವಿ

**ಮಾ॥ ಶ್ರೀ॥ ಸೌ॥ ಅನ್ನಪೂರ್ಣಮ್ಮನವರ**

ದಿವ್ಯಸ್ಮೃತಿಗೆ

ಈ ಗ್ರಂಥಗಳನ್ನು ಭಕ್ತಿಪೂರ್ವಕವಾಗಿ ಅರ್ಪಿಸಿದ್ದೇನೆ.

**ಅ. ನ. ಕೃ**

# ತಾಯಿ-ಮಕ್ಕಳು

೧

ಯಾರಿಗೆ ಯಾರೂ ಸಮಾಧಾನ ಹೇಳುವಂತಿರಲಿಲ್ಲ

ಗಂಡ ಮಾಧವರಾಯ, ಮಕ್ಕಳು – ನಾರಾಯಣ, ಕಮಲ, ಪದ್ಮ, ಮೊಮ್ಮಕ್ಕಳು – ಗೋಪಾಲಿ, ಸೌಭಾಗ್ಯ ಎಲ್ಲರೂ ದುಃಖದ ಭಾರದಿಂದ ಕುಸಿದುಬಿದ್ದಿದ್ದರು

ಜವರೇಗೌಡರು, ಪರ್ನಿ ಸಾಹೇಬರು, ಕರಿಯಪ್ಪಗೌಡರು, ಸರ್ವೋತ್ತಮ, ರಾಮು, ಶ್ರೀದೇವಿ, ಸಾವಿತ್ರಮ್ಮ, ಭರಮೇಗೌಡ, ಲಕ್ಕಿ ಇವರಿಗೆ ಪ್ರಪಂಚವೇ ಶೂನ್ಯವಾಗಿ ಕಂಡುಬಂದಿತು.

ಗೋದಮ್ಮನವರ ಕಣ್ಣುಗಳಿಂದ ಹನಿಗಳುದುರಲಿಲ್ಲ. ಅವು ಘನೀಭೂತವಾಗಿ ಹೃದಯದಲ್ಲಿ ನಿಂತು ಮಹಾಗ್ನಿರೂಪ ತಳೆದು ಅವರ ಜೀರ್ಣಕಾಯವನ್ನು ಸುಡುತ್ತಿತ್ತು.

'ಜವರಾಯನಿಗೆ ಆಹುತಿ ಬೇಕಿದ್ದರೆ ನಾನಿರಲಿಲ್ಲವೇ ?

'ಮನೆಗೇ ಹೊರೆಯಾಗಿರುವ ನನಗೆ ಆಯುಷ್ಯವಿದೆ–ಅನ್ನವಿದೆ; ಊರಿನ ಮಂಗಳಲಕ್ಷ್ಮಿ ರುಕ್ಮಿಣಿಗೆ ಈ ವಿಶಾಲ ಜಗತ್ತಿನಲ್ಲಿ ಎಡೆಯಿಲ್ಲವೇ ?

'ತಿರುಪತಿಯ ವೆಂಕಟರಮಣಸ್ವಾಮಿ, ಉಡುಪಿಯ ಶ್ರೀಕೃಷ್ಣ, ಧರ್ಮಸ್ಥಳದ ಮಂಜುನಾಥಸ್ವಾಮಿ, ಸುಬ್ರಹ್ಮಣ್ಯದ ಸುಬ್ರಹ್ಮಣ್ಯ ಯಾರೂ ನನ್ನ ರುಕ್ಮಿಣಿಯನ್ನು ಉಳಿಸಿಕೊಳ್ಳಲಾಗಲಿಲ್ಲವೇ ?

'ಮಂತ್ರಾಲಯದ ವೃಂದಾವನದಲ್ಲಿ ತಪೋನಿರತರಾಗಿರುವ ಯತಿಶ್ರೇಷ್ಠ ಶ್ರೀಗುರು ರಾಘವೇಂದ್ರಸ್ವಾಮಿಗಳವರೂ ನಮ್ಮ ಕೈ ಬಿಟ್ಟರೇ ?

'ನನ್ನನ್ನು ಅನುಗ್ರಹಿಸಿದ್ದ ಮಹಾಪತಿವ್ರತೆಯರು ರುಕ್ಮಿಣಿಯನ್ನು ತಮ್ಮ ಮಹಾಮನೆಗೆ ಕರೆದೊಯ್ದರೇ ?

'ರುಕ್ಮಿಣಿ-ರುಕ್ಮಿಣಿ-ರುಕ್ಕು'

ಗೋದಮ್ಮನವರ ಹೃದಯಾಂತರಾಳದಲ್ಲಿ ಎದ್ದಿದ್ದ ಆಕ್ರಂದನಕ್ಕೆ ನೂರಾರು, ಸಾವಿರಾರು ಹೃದಯಗಳ ಪ್ರತಿಧ್ವನಿ - ಪ್ರತಿಸ್ಪಂದನ - ಪ್ರತಿರೋದನ.

ರುಕ್ಮಿಣಿ-ತಾಯಿ ರುಕ್ಮಿಣಮ್ಮ-ಆರಾಧ್ಯದೇವಿ !

ಲೋಗರ ಕೂಗು ಕೇಳದ ದಿವ್ಯಧಾಮದಲ್ಲಿ ರುಕ್ಮಿಣಿ ಪ್ರತಿಷ್ಠಿತಳಾಗಿದ್ದಳು

ಸುಖ ದುಃಖ, ತ್ಯಾಗ ಭೋಗ, ಶ್ರೇಯಸ್ಸು ಪ್ರೇಯಸ್ಸುಗಳ ಚಕ್ರವ್ಯೂಹದ ಅಗಾಧ ಪ್ರಭಾವದಿಂದ ದೂರಳಾಗಿದ್ದಳು

ರುಕ್ಮಿಣಿಯು ವ್ಯಕ್ತಿಶಕ್ತಿ – ಶಕ್ತಿವ್ಯಕ್ತಿಯಾಗಿತ್ತು.

ತನ್ನ ಮಹಾನಿಷ್ಕ್ರಮಣದ ಅನಂತರ ನಡೆಯುತ್ತಿದ್ದುದನ್ನು ಅವಳು ದಿವ್ಯಚಕ್ಷುಸ್ಸುಗಳಿಂದ ನೋಡುತ್ತಲೇ ಇದ್ದಳು.

ಗಂಡ-ಅತ್ತೆ – ಮಕ್ಕಳು - ಮೊಮ್ಮಕ್ಕಳು - ಇಷ್ಟಮಿತ್ರರು-ಅಭಿಮಾನಿಗಳು-ಭಕ್ತರು ಎಲ್ಲರೂ ದುಃಖಿಗಳಾಗಿದ್ದಾರೆ - ಒಂದು ಜಡದೇಹ ಬಿದ್ದು ಹೋದುದಕ್ಕೆ-ಒಂದು ಪಾರ್ಥಿವಶರೀರ ಬೂದಿಯಾದುದಕ್ಕೆ!!!

ರಕ್ತ, ಮಾಂಸ, ಮೂಳೆ, ಚರ್ಮಗಳಿಂದ ಮಾಡಿದ್ದ ಆ ತೊಗಲು ಗೊಂಬೆಯೇ ರುಕ್ಮಿಣಿಯೇ ?

ಗೊಂಬೆ ನಾಶವಾಗಿತ್ತು, ಆದರೆ ರುಕ್ಮಿಣಿ ಅವಿನಾಶಿ. ಕೆಂಡ. ಆರಬಲ್ಲದು-ಬೆಂಕಿ ಆರುತ್ತದೆಯೇ ?

ತನ್ನವರಾಗಿದ್ದವರ ದುಃಖ ಕಂಡು ರುಕ್ಮಿಣಿಯೂ ಕಣ್ಣೀರು ಸುರಿಸಿದಳು.

ಪರರ ದುಃಖಕ್ಕೆ ಮರುಗುತ್ತಿದ್ದ ಆ ಆರ್ದ್ರಜೀವಕ್ಕೆ ದುಃಖಾಂತರಾವಸ್ಥೆಯಲ್ಲಿಯೂ ಶೋಕ ತಪ್ಪಲಿಲ್ಲ

ಆದರೆ ರುಕ್ಮಿಣಿಯ ಕಣ್ಣಿನಿಂದುದುರಿದ ಹನಿ ದುರ್ಬಲ ಹೃದಯದ ಪ್ರತೀಕವಾಗಿರಲಿಲ್ಲ ಎಲ್ಲರ ಪಾಪದ ಕೊಳೆಯನ್ನು ತೊಳೆಯುವ

ಜಾಹ್ನವಿಯ ಪವಿತ್ರೋದಕದಂತೆ ಅವಳ ಕಣ್ಣೀರು ಪ್ರಭಾವಾವಿಷ್ಟವಾಗಿತ್ತು.

ರುಕ್ಮಿಣಿಯ ಪಾರ್ಥಿವಶರೀರದ ಬೂದಿಯ ಮೇಲೆ ಮೃದುವಾದ ಹೂಮಳೆಗರೆಯಿತು

ಗೃಹಲಕ್ಷ್ಮಿಗೆ – ನಾಡದೇವತೆಗೆ – ಸ್ತ್ರೀ ಜಾತಿಯ ಅನುಪಮ ಸತ್ಯ, ತ್ಯಾಗ, ವೈರಾಗ್ಯಕ್ಕೆ ದೇವಾಧಿದೇವತೆಗಳು ಪುಷ್ಪಾಂಜಲಿಯನ್ನು ಅರ್ಪಿಸುತ್ತಿದ್ದರು

ನೊಂದಜೀವಿಗಳ ಹೃದಯ ಶಾಂತಿಗಾಗಿ ರುಕ್ಮಿಣಿಯೇ ತನ್ನ ದಿವ್ಯಾನುಕಂಪದ ಕಣ್ಣೀರು ಮಿಡಿಯುತ್ತಿದ್ದಳು.

ಎಲ್ಲರೂ ಧೃತಿಗೆಟ್ಟು, ನಿಸ್ತೇಜರಾಗಿ ಕುಳಿತಿದ್ದರು

ಮಕ್ಕಳು ಹಸಿದಿದ್ದವು ಅವರತ್ತ ಯಾರ ಲಕ್ಷ್ಯವೂ ಹೋಗದು.

ಮುನಸೀಫರ ಹೆಂಡತಿ ಸುನಂದಮ್ಮ ಮೆಲ್ಲನೆ ಬಂದು ಗೋದಮ್ಮನವರ ಬಳಿ ಕುಳಿತರು. ಗೋದಮ್ಮನವರು ತಮ್ಮ ಶೂನ್ಯದೃಷ್ಟಿಯನ್ನು ಸುನಂದಮ್ಮನವರ ಕಡೆ ಬೀರಿದರು.

"ಮನೆಯಲ್ಲಿ ಎಲ್ಲರಿಗೂ ಹಿರಿಯರು ನೀವು ಈ ದುಃಖ ಒಂದೆರಡು ದಿನದ ಕಣ್ಣೀರಿನಲ್ಲಿ ಪರ್ಯವಸಾನವಾಗುವುದೆಂದು ಭಾವಿಸಿರುವಿರಾ? – ರುಕ್ಮಿಣಮ್ಮನವರ ನಿಧನದಿಂದ ನಮ್ಮೆಲ್ಲರ ಬಾಳಬೆಳಕು ಆರಿಹೋದಂತೆ ಆಗಿದೆ – ಏಳಿಯಮ್ಮ – ನಿಮ್ಮ ಮಗನಿಗೆ ಸಮಾಧಾನ ಹೇಳಿ. ಮಕ್ಕಳ ಕಡೆ ನೋಡಿ ಹಸಿದು ಕುಳಿತಿವೆ"

ಎಂದು ಸಾವಿತ್ರಮ್ಮನ* ಕಡೆ ತಿರುಗಿ

"ನಡಿ ಸಾವಿತ್ರಮ್ಮ – ಸ್ನಾನಮಾಡಿ ಮಕ್ಕಳಿಗೆ ಮೊದಲು ಅಡಿಗೆ ಮಾಡಿ ಬಡಿಸು. ರುಕ್ಮಿಣಮ್ಮನವರು ಸತ್ತು ಸಂಪಿಗೆ ಮರವಾದ ದಿನವೇ ಮಕ್ಕಳು ಉಪವಾಸವಿದ್ದರೆ ಅವರ ಆತ್ಮಕ್ಕೆ ಶಾಂತಿಯಿರುವುದಿಲ್ಲ"

ಎಂದರು. ಸಾವಿತ್ರಮ್ಮ ಸೆರಗಿನ ತುದಿಯಿಂದ ಕಣ್ಣೊರೆಸಿಕೊಂಡು

* ಸಾವಿತ್ರಮ್ಮನ ವಿಷಯ ನಾನು "ರುಕ್ಮಿಣಿ"ಯಲ್ಲಿ ಪ್ರಸ್ತಾಪಿಸಿದ್ದೇನೆ (ಪುಟ ೨೪೪). ಈಕೆಯ ಆದ್ಯಂತ ಚರಿತ್ರೆ ತಿಳಿಯಬಯಸುವವರು ನನ್ನ "ತಾಯಿಯ ಕರುಳು" ಕಾದಂಬರಿಯನ್ನು ಓದಬಹುದು.

ಎದ್ದು ಒಳಕ್ಕೆ ಹೋದಳು. ಗೋದಮ್ಮ ಸುನಂದಮ್ಮನವರ ತೊಡೆಯ ಮೇಲೆ ತಲೆಯಿಟ್ಟು

"ಸುನಂದಮ್ಮ - ನನ್ನ ರುಕ್ಕು ಹೊರಟು ಹೋದಳಲ್ರೀ!" ಎಂದರು

ರುಕ್ಮಿಣಿ ಹೊರಟು ಹೋಗಿದ್ದಳು

ಆ ಗಭೀರ–ಭೀಕರ ಸತ್ಯವನ್ನು ನಿರಾಕರಿಸುವಂತಿರಲಿಲ್ಲ ?

"ಜ್ಞಾನಿಗಳಾದ ನೀವೂ ಹೀಗೆ ಹಲುಬುವುದೇ ?"

"ನನ್ನ ಜ್ಞಾನವೆಲ್ಲಾ ಅವಳೊಂದಿಗೆ ಹೋಯಿತಮ್ಮ - ಅವಳ ಹೆಂಗಸಲ್ಲ ಸುನಂದಮ್ಮ-ಹೆಂಗಸಿನ ಯಾವ ಕುಂದು ಕೊರತೆಯೂ ಅವಳಲ್ಲಿರಲಿಲ್ಲ ಸಾಕ್ಷಾತ್ ಲಕ್ಷ್ಮಿಯೇ ನಮ್ಮ ಮನೆ ಬೆಳಗುವ ದಕ್ಕೆ ನನ್ನ ಸೊಸೆಯಾಗಿ ಬಂದಳು – ರುಕ್ಕೂ, ಎಲ್ಲಿ ಹೋದೆಯ ನನ್ನಮ್ಮ – ನಿನ್ನ ಬಿಟ್ಟು ನಾನು ಹೇಗೆ ಬದುಕಲೀ – ಏತಕ್ಕೆ ಬದುಕಲೀ ?'

"ಇದು ನೀವು ಆಡುವ ಮಾತಲ್ಲ ಗೋದಮ್ಮ. ರುಕ್ಮಿಣಮ್ಮನವರ ಎಲ್ಲ ಜವಾಬ್ದಾರಿ ನಿಮ್ಮ ಮೇಲೆ ಬಿದ್ದಿಲ್ಲವೇ ? ಅಲ್ಲಿ ನೋಡಿ – ದುಃಖ ದಲ್ಲಿ ನೊಂದು, ಹಸಿವಿನಿಂದ ಬೆಂದು, ನೊರಗಿ ಮಲಗಿರುವ ಆ ಮಕ್ಕಳಿಗೆ ಯಾರು ದಿಕ್ಕು ? – ರುಕ್ಮಿಣಮ್ಮನವರ ಹೆಸರಿನಲ್ಲಿ ನಾವು ಹಚ್ಚುವ ಸೊಡರು ನಿತ್ಯದೀಪವಾಗಿ ಬೆಳಗುತ್ತದೆ. ನೀವು ಧೈರ್ಯತಂದುಕೊಳ್ಳ ಬೇಕು – ಉಳಿದವರಿಗೆ ಧೈರ್ಯನೀಡಲೆಂದೇ ಭಗವಂತ ಆ ಶಕ್ತಿ ನಿಮಗೆ ಕೊಟ್ಟಿದ್ದಾನೆ"

ಗೋದಮ್ಮ ಮೆಲ್ಲನೆದ್ದು ಮಕ್ಕಳಿದ್ದಲ್ಲಿ ಹೋಗಿ ಕುಳಿತ ಕಮಲ, ಪದ್ಮನನ್ನು ಅಪ್ಪಿಕೊಂಡರು. ಅಸಹಾಯಕಸ್ಥಿತಿಯಲ್ಲಿದ್ದ ನಾರಾಯಣಸ್ವಾಮಿ ಅಜ್ಜಿಯ ಪಾದದ ಬಳಿ ಬಂದು ಕುಳಿತ.

ಗೋದಮ್ಮ ಮೃದುವಾಗಿ ನಾರಾಯಣಸ್ವಾಮಿಯ ತಲೆ ನೇವರಿಸಿ, ಅವನ ಕಣ್ಣಿನಿಂದ ಇಳಿಯುತ್ತಿದ್ದ ಮಣಿಮಾಲೆಯನು ಒರಸಿದರು.

ಮೂಕವೇದನೆ ಎಲ್ಲರನ್ನೂ ದುರ್ಬಲರನ್ನಾಗಿ ಮಾಡಿತ್ತು.

ಸಾವಿತ್ರಮ್ಮ ಬಂದು ಒಬ್ಬೊಬ್ಬರನ್ನಾಗಿ ಮಕ್ಕಳನ್ನು ಕ

ದೊಯ್ದು ಸ್ನಾನಮಾಡಿಸಿದಳು ನಾರಾಯಣಸ್ವಾಮಿ, ಕಮಲಾ ಇನ್ನಿತರರೂ ಸ್ನಾನ ಮುಗಿಸಿದರು

ಸಾಲಭಂಜಿಕೆಯಂತೆ ಕುಳಿತಿದ್ದ ಮಗನನ್ನು ಗೋದಮ್ಮನವರೇ ಎಬ್ಬಿಸಬೇಕಾಯಿತು.

ಸಾವಿತ್ರಮ್ಮನ ದಯೆಯಿಂದ ಮಕ್ಕಳೆಲ್ಲಾ ಅನ್ನ ಕಂಡರು. ಗೋದಮ್ಮ, ಮಾಧವರಾಯ ಯಾರೆಷ್ಟು ಉಪಚರಿಸಿದರೂ ಊಟಕ್ಕೇಳಲಿಲ್ಲ

ರುಕ್ಮಿಣಮ್ಮ ತನ್ನ ಅಂತಿಮಶಾಂತಿ ಪಡೆದು ಹದಿನಾಲ್ಕು ದಿವಸಗಳಾದವು ಈ ಅವಧಿಯಲ್ಲಿ ಆಗಬೇಕಾದ ಸಂಸ್ಕಾರಗಳೆಲ್ಲವೂ ಪೂರೈಸಿದ್ದವು ಊರ ಸಂತರ್ಪಣೆಯೂ ಮುಗಿದಿತ್ತು ವೈಕುಂಠ ಸಮಾರಾಧನೆ ಮುಗಿಸಿಕೊಂಡು ನೆಂಟರಿಷ್ಟರು ತೆರಳಿದ್ದರು.

ತಂದೆಯನ್ನು ಮಾತನಾಡಿಸಲು ನಾರಾಯಣಸ್ವಾಮಿ ಹಲವು ಬಾರಿ ಪ್ರಯತ್ನಿಸಿದ. ಮಂತ್ರಬಂಧಿತನಂತೆ ಕುಳಿತಿರುತ್ತಿದ್ದ ಮಾಧವ ರಾಯ ಯಾರೊಂದಿಗೂ ಮಾತನಾಡುತ್ತಿರಲಿಲ್ಲ.

ಯಾವದೋ ಚಿಂತೆಯಲ್ಲಿ ನಿಮಗ್ನನಾಗಿದ್ದ ಮಾಧವರಾಯನಿಗೆ ಬಾಹ್ಯಜ್ಞಾನವೇ ಶೂನ್ಯವಾಗಿತ್ತು. ಕಮಲಾ ತಂದೆಯ ಬಳಿ ಕುಳಿತು ಉಪಚರಿಸಿ ನಾಲ್ಕು ತುತ್ತು ತಿನ್ನುವಂತೆ ಮಾಡುತ್ತಿದ್ದಳು.

ತಂದೆಯ ಸಹಾಯಶೂನ್ಯ, ನಿಸ್ತೇಜ ಕಣ್ಣಿನ ದೃಷ್ಟಿರಹಿತ ವೀಕ್ಷಣೆ ಕಮಲನ ಹೃದಯದಲ್ಲಿ ಭೀತಿಯನ್ನು ಬಿತ್ತಿತ್ತು

ಅವಳಿಗೆ ರಜಾ ಮುಗಿಯುತ್ತ ಬಂದಿತ್ತು. ಬೆಂಗಳೂರಿಗೆ ಹೋಗಿ ಡ್ಯೂಟಿಯ ಮೇಲೆ ಹಾಜರಾಗುವುದು ಅನಿವಾರ್ಯವಾಗಿತ್ತು. ಹೋಗದಿದ್ದರೆ ಕೆಲಸಕ್ಕೆ ಸಂಚಕಾರ – ಹೋದರೆ ........ .?

ನಾರಾಯಣಸ್ವಾಮಿಯೂ ಸಂದಿಗ್ಧಕ್ಕೆ ಸಿಕ್ಕಿಕೊಂಡಿದ್ದ. ತಂದೆಯನ್ನು ಇಂಥ ಅಸಹಾಯಕ ಸ್ಥಿತಿಯಲ್ಲಿ ಬಿಟ್ಟುಹೋಗಲು ಮನಸ್ಸಿಲ್ಲ. ಹೋಗದಿದ್ದರೆ ವಿಧಿಯಿಲ್ಲ !

ಅಜ್ಜಿಯೊಂದಿಗೆ ವಿಚಾರ ವಿನಿಮಯ ಮಾಡಿ ಒಂದು ಇತ್ಯರ್ಥಕ್ಕೆ ಬರುವುದೇ ಯೋಗ್ಯವೆಂದು ಇಬ್ಬರೂ ನಿರ್ಧರಿಸಿದರು.

"ಸದ್ಯಕ್ಕೆ ಅಣ್ಣ ಈ ಊರು ಬಿಡದಿದ್ದರೆ ಅವರ ಆರೋಗ್ಯ ಮತ್ತಷ್ಟು ಕೆಡುತ್ತದೆ. ಇಲ್ಲಿ ಯಾವ ವಸ್ತು, ವ್ಯಕ್ತಿ ನೋಡಿದರೂ ಅಣ್ಣನಿಗೆ ಅಮ್ಮನ ನೆನಪು ಬರುತ್ತದೆ."

"ಬೇರೆಕಡೆಗೆ ಹೋದರೆ ರುಕ್ಮಿಣಿಯ ನೆನಪು ಮರೆತುಹೋಗುತ್ತದೆಯೇ ನಾಣಿ ?"

"ಮರೆತು ಹೋಗದಿದ್ದರೂ ವಾತಾವರಣ ಇಷ್ಟು ಪ್ರಚೋದಕವಾಗುವುದಿಲ್ಲ."

"ಅಜ್ಜಿ – ಅಣ್ಣ ಇಲ್ಲಿದ್ದು ಮಾಡುವುದೇನು ? ನನ್ನ ಜತೆ ಬೆಂಗಳೂರಿಗೆ ಬರಲಿ" ಎಂದು ಕಮಲ ಸೂಚಿಸಿದಳು

"ನೀನು ಹೊತ್ತಿರುವ ಹೊರೆ ಸಾಮಾನ್ಯವಾದುದಲ್ಲ ಕಮಲ. ನಾವೂ ಬೆಂಗಳೂರಿಗೆ ಬಂದು ನಿನ್ನ ಹೊರೆ ಹೆಚ್ಚಿಸುವುದು ಯಾವ ನ್ಯಾಯ ?"

"ಹೊರೆಗಿರೆಯೆಂದು ನೀನು ಮಾತನಾಡಿದರೆ ನನ್ನ ಮನಸ್ಸಿಗೆ ತುಂಬ ನೋವಾಗುತ್ತದೆ ಅಜ್ಜಿ."

"ಹಾಗಲ್ಲಮ್ಮಾ – ಎರಡು ಮಕ್ಕಳನ್ನು ಕಟ್ಟಿಕೊಂಡು, ದೇವರು ಕೊಟ್ಟುದರಲ್ಲಿ ತೃಪ್ತಿಪಟ್ಟುಕೊಂಡು ನೀನು ಮರ್ಯಾದೆಯಾಗಿ ಜೀವನ ಸಾಗಿಸುತ್ತಿರುವೆ ನಿನ್ನ ಎಳೆ ಹೆಗಲಮೇಲೆ ಎಷ್ಟು ಜವಾಬ್ದಾರಿ ಹೇರುವುದು ಕಮಲಾ."

"ಹಾಗನ್ನಬೇಡ ಅಜ್ಜಿ. ಅಣ್ಣನನ್ನು ಈ ಸ್ಥಿತಿಯಲ್ಲಿ ಬಿಟ್ಟು ನಾನು ಊರಿಗೆ ಹೋಗಲಾರೆ. ಕೆಲಸಕ್ಕೆ ರಾಜೀನಾಮೆಯಿತ್ತು ನಾನೂ ಇಲ್ಲಿಗೇ ಬಂದುಬಿಡುತ್ತೇನೆ – ದೇವರು ಮಾಡಿಸಿದಂತಾಗಲಿ."

"ಕಮಲ ಹೇಳುವುದು ನ್ಯಾಯವಾಗಿದೆ ಅಜ್ಜಿ. ಮಕ್ಕಳುಮರಿ ಜತೆಯಲ್ಲಿ ಅಣ್ಣ ಇದ್ದರೆ ಅವರಿಗೂ ದುಃಖ ಸ್ವಲ್ಪ ಮರೆತಂತೆ ಆಗುತ್ತದೆ ಕಮಲನ ಜತೆ ನೀನಿರುವುದರಿಂದ ಅವಳಿಗೂ ನೆರವಾಗುತ್ತದೆ. ಇನ್ನೂ ಒಂದು ಮಾತು – ನಾನು ಸ್ಪಷ್ಟವಾಗಿ ಆಡುತ್ತೇನೆಂದು ಬೇಸರ ಪಟ್ಟುಕೊಳ್ಳಬೇಡ."

"ಇಲ್ಲ – ಹೇಳಪ್ಪಾ" ಎಂದು ಗೋದಮ್ಮ ನುಡಿದರು.

"ಕಮಲನಿಗೆ ಬರುವ ವರಮಾನದಲ್ಲಿ ಎಲ್ಲರ ಖರ್ಚು ವೆಚ್ಚ ಪೂರೈಸುವುದು ಕಷ್ಟ ಅಣ್ಣ ಪುನಃ ಪ್ರಾಕ್ಟೀಸ್ ಆರಂಭಿಸುವ ಸ್ಥಿತಿಯಲ್ಲಿಲ್ಲ – ನಾನೀಗ ಅಲ್ಪ ಸ್ವಲ್ಪ ಸಂಪಾದಿಸುತ್ತಿದ್ದೇನೆ. ಪ್ರತಿ ತಿಂಗಳೂ ತಪ್ಪದೆ ಕಮಲನ ವಿಳಾಸಕ್ಕೆ ಸ್ವಲ್ಪ ಹಣ ಕಳಿಸುತ್ತೇನೆ"

"ನಿನ್ನ ಸಂಸಾರ.. . . . "

"ನನ್ನ ಸಂಸಾರ ನಿರ್ವಹಣಕ್ಕಾಗಿ ನಾನು ಸಂಪಾದನೆ ಮಾಡಬೇಕಾಗಿಲ್ಲ."

"ನಿನಗೆ ಲಗ್ನವಾದದ್ದು ದಿಟವೇ ನಾಣಿ "

"ಆಗಿದೆ. ನಿಮಗೆ ಯಾರಿಗೂ ತಿಳಿಸದೆ ಲಗ್ನವಾದುದಕ್ಕೆ ನಾನು ವಿಷಾದಿಸುತ್ತೇನೆ. ಸಂಪ್ರದಾಯಸ್ಥರಾದ ನೀವು ನನ್ನ ಹೆಂಡತಿಯನ್ನು ಒಪ್ಪುವುದಿಲ್ಲವೆಂದು ನಾನು ಹೀಗೆ ಮಾಡಬೇಕಾಯಿತು "

"ನೀನು ಲಗ್ನವಾದ ಮೇಲೆ ಆ ಹುಡುಗಿ ನಮ್ಮನೆ ಸೇರಿದಂತಾಯಿತು ರುಕ್ಕು ತನ್ನ ಸೊಸೆಯನ್ನು ನಿರಾಕರಿಸುತ್ತಿದ್ದಳೇ ?—ರುಕ್ಕೂ ವಿಷಯ ತಿಳಿದೂ ನೀನು ಹೀಗೆ ಮಾಡಬಹುದೇ ನಾಣಿ. ಮಾಧೂ ಒಪ್ಪುತ್ತಿರಲಿಲ್ಲ – ಆದರೆ ರುಕ್ಕೂ ಮಾತಿಗೆ ಅವನು ಪ್ರತಿಹೇಳುತ್ತಿದ್ದನೇ ?"

"ತಪ್ಪಾಯಿತು ಅಜ್ಜಿ – ತಪ್ಪಾಯಿತು. ಹುಡುಗತನದಲ್ಲಿ ನಾನು ಮಾಡುತ್ತಿದ್ದ ಅಪರಾಧಗಳನ್ನು ಕ್ಷಮಿಸುತ್ತಿದ್ದಂತೆ ಇದನ್ನೂ ಕ್ಷಮಿಸಿ."

'ಹೋಗಲಿ ಬಿಡು – ಯಾವ ದೊಡ್ಡ ವಿಷಯ – ನೀನು ಸುಖವಾಗಿದ್ದರೆ ಸಾಕು . ನಿನ್ನ ಹೆಂಡತಿ ಚೆನ್ನಾಗಿದ್ದಾಳೇನೋ ?"

"ಚೆನ್ನಾಗಿದ್ದಾಳೆ."

"ಅತ್ತಿಗೆ ಹೆಸರೇನಣ್ಣ ?"

"ಇಂದುಮತಿ."

"ಅತ್ತಿಗೆಯನ್ನು ಬೆಂಗಳೂರಿಗೆ ಯಾವಾಗ ಕರೆದುಕೊಂಡು ಬರುತ್ತೀ ?"

"ನಾನು ಮುಂಬಯಿಗೆ ಹೋದಕೂಡಲೆ ಇಂದುವನ್ನು ಕರೆದು

ಕೊಂಡು ಯೂರೋಪಿಗೆ ಹೋಗಿ ಬರುತ್ತೇನೆ. ನಾವಿಬ್ಬರೂ ಹಿಂದಿರುಗಿದ ಮೇಲೆ ಖಂಡಿತ ಕರೆದುಕೊಂಡು ಬರುತ್ತೇನಮ್ಮ – ನಿಮ್ಮೆಲ್ಲರನ್ನೂ ನೋಡಬೇಕೆಂದು ಅವಳೂ ಕಾತರಪಡುತ್ತಿದ್ದಾಳೆ."

"ಅತ್ತಿಗೆ ಮನೆಯವರು ಶ್ರೀಮಂತರೇ?"

"ಲಕ್ಷಾಧಿಕಾರಿಗಳು"

"ಅವರಿಗೂ ನಮಗೂ ತಾಳೆಯಾಗುತ್ತದೆಯೋ?"

"ಇಂದು ಹಾಗಿಲ್ಲ ಕಮಲಾ – ಆಗರ್ಭಶ್ರೀಮಂತಳಾಗಿದ್ದರೂ ಹಣದ ಪಿತ್ತ ಅವಳ ನೆತ್ತಿಗೇರಿಲ್ಲ. ನಿರ್ಗತಿಕನಾದ ನನ್ನ ಕೈ ಅವಳು ಹಿಡಿದುದೇ ಸಾಕ್ಷಿ."

"ಶ್ರೀಮಂತರ ಸಹವಾಸ ಬಹಳ ಕಷ್ಟ ಅಣ್ಣಾ – ಅವರ ಪಿತ್ಥ ಯಾವಾಗ ಕೆರಳುತ್ತದೆಂಬುದನ್ನು ಹೇಳುವುದಕ್ಕೇ ಆಗುವುದಿಲ್ಲ."

"ಒಂದು ಸಲ ನೀನು ಇಂದುಮತಿಯನ್ನು ನೋಡಿದರೆ ಸಾಕು – ನಿನ್ನ ಅಭಿಪ್ರಾಯ ಬದಲಾಯಿಸುವೆ ಕಮಲಾ."

"ನಾಣಿ – ನೀನೂ ನಿನ್ನ ತಂಗಿ ಒಳ್ಳೆಯ ಮಾತಾಡುತ್ತಿರುವಾಗ ನಾನು ಮಧ್ಯೆ ಅಪಶಕುನ ನುಡಿದೆ ಎಂದು ಭಾವಿಸಿಕೊಳ್ಳಬೇಡ — ನನಗೂ ವಯಸ್ಸಾಯಿತು. ರುಕ್ಮಿಣಿ ತನ್ನೊಂದಿಗೆ ನನ್ನ ಸಮಸ್ತ ಚೇತನವನ್ನೂ ಸೆಳೆದುಕೊಂಡು ಹೋಗಿದ್ದಾಳೆ. ಮಾಧೂ ಭೂಮಿ ಹಿಡಿದು ಕುಳಿತು ಬಿಟ್ಟಿದ್ದಾನೆ – ಕಮಲಾ ಹೆಣ್ಣು ಹೆಂಗಸು. ನೀನು ಆದಷ್ಟು ಬೇಗ ಬಂದು ನಿಮ್ಮ ತಂದೆ ಯೋಗಕ್ಷೇಮ ನೋಡಿಕೊಳ್ಳಬೇಕಪ್ಪಾ. ಸಂಪಾದಿಸಿದ ಅಧಿಕಾರ, ಪದವಿ, ಶ್ರೀಮಂತಿಕೆ ಕಳೆದು ಹೋದರೆ ಪುನಃ ಸಂಪಾದಿಸಬಹುದು – ತಾಯಿ ತಂದೆಯನ್ನು ಪುನಃ ಸಂಪಾದಿಸಲು ಸಾಧ್ಯವಿಲ್ಲ. ಜಗತ್ತಿನ ಯಾವ ಅಮೂಲ್ಯ ವಸ್ತುವೂ ಅವರ ಪಾದಧೂಳಿಗೆ ಸರಿದೂಗಲಾರರು. ಸಾಯುವ ಮುದುಕಿ ಏನೋ ಹುಚ್ಚುಹುಚ್ಚು ಮಾತಾಡುತ್ತದೆ ಎಂದು ತಿಳಿಯಬೇಡ ನಾಣಿ."

"ಇಲ್ಲ ಅಜ್ಜಿ – ನಿನ್ನ ಯಾವ ಮಾತನ್ನೂ ನಾನು ಕಡೆಗಾಣಿಸಲಾರೆ."

"ನೀನು ಯಾವತ್ತು ಹೊರಡಬೇಕು?"

"ನಾಳೆ – ನಾಡಿದ್ದು"

"ಹೋಗಿಬಿಟ್ಟು ಬಾಪ್ಪ. ನೀನು ಹಿಡಿದ ಕೆಲಸ ಜಯವಾಗುತ್ತದೆ. ನಿನ್ನ ತಾಯಿದೇವಿ ಸದಾ ನಿನ್ನ ಬೆನ್ನಿಗಾವಲಿಗಿದ್ದು ನಿನ್ನನ್ನು ರಕ್ಷಿಸುತ್ತಾಳೆ. ದಿನಕ್ಕೊಮ್ಮೆಯಾದರೂ ಅವಳನ್ನು ಸ್ಮರಿಸಿಕೋ – ಹಾಸಿಗೆ ಬಿಟ್ಟು ಏಳುವಾಗ ಅವಳ ದಿವ್ಯತೇಜಸ್ಸನ್ನು ನೆನೆಸಿಕೊಂಡೇಳು. ಆ ತೇಜಸ್ಸು ನಿನ್ನ ಮನಸ್ಸಿನ ಕತ್ತಲ – ಕಳವಳ – ನಿವಾರಿಸಿ ನಿನಗೆ ಸನ್ಮಾರ್ಗ ತೋರಿಸುತ್ತದೆ"

ಭಾವನಾವೇಶಭರಿತನಾಗಿದ್ದ ನಾರಾಯಣಸ್ವಾಮಿ ಅರೆಮೂಕನಂತೆ ಕುಳಿತ. ಅವನ ಕಣ್ಣಿನಿಂದುರುಳಿದ ನಿಷ್ಕಲ್ಮಷ ಬಿಂದುಗಳು ತಾಯಿದೇವಿಯ ಪವಿತ್ರ ಪಾದಪದ್ಮಗಳನ್ನು ತೊಳೆದವು.

## ೨

ನಾರಾಯಣಸ್ವಾಮಿ ಮುಂಬಯಿಗೆ ಪ್ರಯಾಣ ಮಾಡಿ ತನ್ನ ಸಮಸ್ಯೆ ಬಗೆಹರಿಸಿಕೊಂಡಿದ್ದ.

ತಂದೆಯ ಅಸಹಾಯಕ ಸ್ಥಿತಿಯನ್ನರಿತು ನಾರಾಯಣಸ್ವಾಮಿ ಪ್ರಯಾಣ ಮಾಡಿದನಲ್ಲಾ ಎಂದು ಕಮಲನಿಗೆ ಬೇಸರವಾಯಿತು

'ಯಾರ ಅನ್ನದ ಋಣ ಎಲ್ಲಿದೆಯೋ ? ನಾರಾಯಣಸ್ವಾಮಿ ಇಲ್ಲಿ ಕುಳಿತು ಮಾಡುವುದಾದರೂ ಏನು ?'

ಎಂದು ಗೋದಮ್ಮನವರೇ ಕಮಲನಿಗೆ ಸಮಾಧಾನ ಹೇಳಿದರು.

ಕಮಲನ ರಜಾ ಅವಧಿ ಮುಗಿದಿತ್ತು.

"ನೀನು ಬೆಂಗಳೂರಿಗೆ ಹೋಗು ಕಮಲ ನಾಲ್ಕುದಿನ ಬಿಟ್ಟು ನಾನು ಮಾಧವನ ಕರೆದುಕೊಂಡು ಬರುತ್ತೇನೆ"

ಎಂದು ಗೋದಮ್ಮನವರು ಹೇಳಿದ ಮಾತಿಗೆ ಕಮಲ ಒಪ್ಪಿಗೆಯನ್ನೀಯಲಿಲ್ಲ.

"ನೀವು ಬರುವುದಿಲ್ಲ ಅಜ್ಜಿ. ನನಗೆ ಗೊತ್ತಿದೆ. ನನ್ನ ಜತೆಯಲ್ಲಿಯೇ ನೀವು ಪ್ರಯಾಣ ಮಾಡಬೇಕು"

ಎಂದು ಕಮಲ ಹಟಹಿಡಿದು ತನ್ನ ರಜ ಮುಂದುವರಿಸಿದಳು.

ಮಾಧವರಾಯನನ್ನು ಹೊರಡಿಸಲು ಗೋದಮ್ಮ ಜವರೇಗೌಡರ ಸಹಾಯ ಪಡೆಯುವುದು ಅನಿವಾರ್ಯವಾಯಿತು.

ಗೋದಮ್ಮನವರ ವಿವರಣೆ ಕೇಳಿದ ಗೌಡರ ಮುಖ ವಿವರ್ಣವಾಯಿತು. ಹೃದಯ ತಲ್ಲಣಿಸಿತು.

"ಈ ಮಾತು ನೀವು ಹೇಳಬಹುದೇ ತಾಯೀ ?"

ಎಂದು ಗೌಡರು ಕೇಳಿದರು.

ಗೌಡರ ಹೃದಯವನ್ನು ಚೆನ್ನಾಗಿ ಅರಿತಿದ್ದ ಗೋದಮ್ಮ

"ಇನ್ನು ಮಂಡ್ಯದಲ್ಲಿ ನಮಗೇನು ಕೆಲಸ ಗೌಡರೇ. ರುಕ್ಮಿಣಿ ತನ್ನ ಸರ್ವಸ್ವವನ್ನೂ ಈ ಊರಿನ ಹಿತಕ್ಕಾಗಿ ಅರ್ಪಿಸಿದಳು – ನಾವು ರುಕ್ಮಿಣಿಯನ್ನೇ ಬಲಿದಾನವಾಗಿ ಅರ್ಪಿಸಿದೆವು."

"ಅದರಿಂದಲೇ ಮಂಡ್ಯ ಪವಿತ್ರಕ್ಷೇತ್ರವಾಯಿತು."

"ಮಾಧೂನ ಒಪ್ಪಿಸುವ ಭಾರ ನಿಮ್ಮದು ಗೌಡರೇ"

"ಬೆಂಗಳೂರಿಗೆ ಹೋಗುವ ವಿಷಯ ನಿರ್ಧರಿಸಿರುವಿರಾ ?"

"ಸದ್ಯದ ಸ್ಥಿತಿಯಲ್ಲಿ ಅದೇ ಸೂಕ್ತವೆಂದು ಕಾಣುತ್ತದೆ. ಕಮಲನ ಮಕ್ಕಳ ಸಂಗದಲ್ಲಿ ಮಾಧೂ ತನ್ನ ದುಃಖ ಸ್ವಲ್ಪ ಮರೆಯಬಹುದು."

"ಒಂದು ಮಾತು ನಾನು ಸ್ಪಷ್ಟವಾಗಿ ಕೇಳಿಬಿಡಲೇ ?"

"ನಮ್ಮ ಗೃಹಕೃತ್ಯದ ವಿಷಯ ನಿಮಗೆ ತಿಳಿಯದೇ ಇರುವುದು ಯಾವದು ಗೌಡರೇ, – ನೀವೂ ನಮ್ಮ ಮನೆಯವರೇ ಅಲ್ಲವೇ–ಕೇಳಿ, ಸಂಕೋಚವೇಕೆ ?"

"ರಾಯರಿಗೆ ಪ್ರಾಕ್ಟೀಸು ಇಲ್ಲವೆಂದು ಈ ವ್ಯವಸ್ಥೆ ಮಾಡಿರುವಿರಾ?"

"ನಾಣಿ ಈಗ ಕೈತುಂಬ ಸಂಪಾದಿಸುತ್ತಿದ್ದಾನೆ ಗೌಡರೇ–ರುಕ್ಮಿಣಿ ಕಾಲಿಟ್ಟಕಡೆ ಅನ್ನಕ್ಕೆ ಕೊರತೆಯೇ ? ಮಾಧು ಯಾವತ್ತೂ ಆಡಂಬರದ ಜೀವನಕ್ಕ ಮನಸೋತವನಲ್ಲ. ನಿಮಗೇ ತಿಳಿದಿರುವಂತೆ ಅವನ ಅತ್ಯಲ್ಪ ಅವಶ್ಯಕತಗಳನ್ನು ಪೂರೈಸುವುದು ಯಾರಿಗೂ ಕಷ್ಟವಾಗುವುದಿಲ್ಲ"

"ನೀವು ಹೇಳುವುದನ್ನೆಲ್ಲಾ ಒಪ್ಪಿದೆ ತಾಯಿ. ಆದರೆ ಈ ಸಂದರ್ಭದಲ್ಲಿ ರಾಯರಿಗೂ ನಮಗೂ ಇರುವ ಸಂಬಂಧವನ್ನು ನೀವು ಪರ್ಯಾಲೋಚಿಸಬೇಕು. ನಮ್ಮ ಸಮಸ್ತ ಅಭ್ಯುದಯಕ್ಕೂ ರಾಯರ ವಿಶ್ವಾಸ, ಅಮ್ಮಾವರ ಆಶೀರ್ವಾದವೇ ಕಾರಣ. ಅವರ ಹೆಸರು ಹೇಳಿ ನಾವು ಮನೆಯಲ್ಲಿ ದೀಪ ಹಚ್ಚುತ್ತಿದ್ದೇವೆ. ರಾಯರಿಗೆ ಒದಗಿರುವ ಈ ದುಃಖದ ಸಮಯದಲ್ಲಿ ಅವರನ್ನು ಬಿಟ್ಟುಕೊಟ್ಟರೆ ನಮ್ಮ ಯೋಗ್ಯತೆ ಎಷ್ಟರದಾಗುತ್ತದೆ? – ನೀವು ಏನು ಹೇಳಿದರೂ ಮಾಡುವುದಕ್ಕೆ, ನಾವು

ಸಿದ್ಧವಾಗಿದ್ದೇನೆ ನಿಮ್ಮ ಸಂಸಾರದ ಖರ್ಚು ತಿಂಗಳಿಗೆ ಸಾವಿರ ರೂಪಾಯಿಯಾದರೂ ಚಿಂತೆಯಿಲ್ಲ – ಅದನ್ನು ಪೂರೈಸುವ ಜವಾಬ್ದಾರಿ ನಮ್ಮದು. ಅಮ್ಮಾವರು ಜೀವಂತರಾಗಿದ್ದಾಗ ಈ ಮನೆ ಯಾವ ರೀತಿಯಲ್ಲಿ ಬಡಬಗ್ಗರ ಆಶ್ರಯಸ್ಥಾನವಾಗಿ, ನೊಂದವರ, ದುಃಖಿಗಳ ತೌರುಮನೆಯಾಗಿತ್ತೋ ಅದೇ ರೀತಿಯಲ್ಲಿ ಮುಂದೆಯೂ ನಡೆದುಕೊಂಡು ಹೋಗಬೇಕು. ಅಲ್ಪಸ್ವಲ್ಪವಾದರೂ ನಮ್ಮ ಕೃತಜ್ಞತೆ ತೋರಿಸುವ ಅವಕಾಶ ಕಲ್ಪಿಸಿಕೊಡಿ"

"ನಿಮ್ಮ ಮನಸ್ಸಿಗೆ ವ್ಯಥೆಯನ್ನುಂಟುಮಾಡಿ ಇಲ್ಲಿಂದ ಹೋಗುವುದು ನನಗೇನು ಸಂತೋಷದ ಕೆಲಸವೇ ಗೌಡರೇ ?! ಮಾಧೂ ಹಿತದ ದೃಷ್ಟಿಯಿಂದಲೇ ನೀವು ಬೆಂಗಳೂರಿಗೆ ಹೋಗಲು ಅನುಮತಿಕೊಡಿ. ಆರು ತಿಂಗಳೋ ಒಂದು ವರ್ಷವೋ ಅಲ್ಲಿದ್ದು ಮಾಧೂ ಯಥಾಸ್ಥಿತಿಗೆ ಬಂದಮೇಲೆ ನಾವು ಇಲ್ಲಿಗೇ ಬಂದರಾಗವೇ ? ಈಗಿನ ಪರಿಸ್ಥಿತಿಯಲ್ಲಿ ಕಮಲನ ಮಕ್ಕಳ ಜತೆ ಮಾಧೂ ಇರುವುದು ಯೋಗ್ಯವಾಗಿಕಾಣುತ್ತದೆ"

"ಆಗಲಿ ತಾಯಿ – ನಿಮ್ಮ ಚಿತ್ತ – ದೊಡ್ಡವರಿಗೆ ನಾನು ಏನು ಹೇಳಲು ಸಾಧ್ಯ" ಎಂದರು

ಗೌಡರ ಮನಸ್ಸು ಪ್ರಬಲ ಯಾತನೆಗೀಡಾಗಿದ್ದುದು ಸ್ವತಃಸಿದ್ಧವಾಗಿತ್ತು. ಆದರೆ ಅದಕ್ಕೆ ಪರಿಹಾರವಿರಲಿಲ್ಲ

ಮಾಧವರಾಯನನ್ನು ಒಪ್ಪಿಸಿ ಪ್ರಯಾಣಕ್ಕೆ ಸಜ್ಜುಗೊಳಿಸುವ ಕರ್ತವ್ಯಭಾರ ಜವರೇಗೌಡರ ಮೇಲೇ ಬಿದ್ದಿತು.

"ನನ್ನ ಸ್ಥಿತಿ ಅಂತರ – ಪಿಶಾಚಿಯಂತಾಗಿದೆ ಗೌಡರೇ. ಇಲ್ಲಿ ಇರಲೂ ಸಾಧ್ಯವಿಲ್ಲ – ಬೇರೆಕಡೆ ಹೋಗಲೂ ಸಾಧ್ಯವಿಲ್ಲ."

"ಸದ್ಯಕ್ಕೆ ಬೆಂಗಳೂರಿಗೆ ಹೋಗುವುದು ಸೂಕ್ತವೆಂದು ದೊಡ್ಡ ಅಮ್ಮನವರ ಅಭಿಪ್ರಾಯ."

"ನನ್ನ ಬಾಳು ಇಷ್ಟು ಭಾರವಾಗುವುದೆಂದು ನಾನು ಕನಸು ಮನಸ್ಸಿನಲ್ಲಿಯೂ ಎಣಿಸಿರಲಿಲ್ಲ."

"ಸ್ವಾಮಿ, ಹೀಗೆ ಒಳಗೇ ಕೊರಗಬೇಡಿ. ಮಕ್ಕಳು, ಮೊಮ್ಮಕ್ಕಳನ್ನು ನೋಡಿಕೊಂಡು ಮನಸ್ಸಿಗೆ ಸ್ವಲ್ಪ ಸಮಾಧಾನ ತಂದುಕೊಳ್ಳಿ."

"ಸಮಾಧಾನ – ನನಗೆಲ್ಲಿಂದ ಬಂತು ಸಮಾಧಾನ ಗೌಡರೇ. ರುಕ್ಮಿಣಿಗೂ ನನಗೂ ಮದುವೆಯಾದಾಗ ನಾವಿಬ್ಬರೂ ಸಣ್ಣ ಮಕ್ಕಳು. ಇಬ್ಬರಿಗೂ ಮದುವೆ ಹುಡುಗಾಟವಾಗಿತ್ತು. ಅವಳು ನನ್ನ ಮನೆಗೆ ಬಂದ ಮೇಲೆ ನಾಲ್ಕೇ ವರ್ಷಗಳಲ್ಲಿ ಪ್ರಬುದ್ಧಳಾದಳು. ಎಲ್ಲಿಂದ ಬಂದಿತೋ ಕಾಣೆ – ಆ ಎಳೆಯ ದೇಹದಲ್ಲಿ ಅಪಾರ ಅನುಭವ, ಅನುಕಂಪ, ತಿಳುವಳಿಕೆ ತುಂಬಿಕೊಂಡಿತು. ಅವಳು ಪೂಜೆ ಮುಗಿಸಿ ಎದ್ದು ಬಂದರೆ ಸಾಕ್ಷಾತ್ ಜಗದಂಬೆಯನ್ನು ನೋಡಿದಂತಾಗುತ್ತಿತ್ತು. 'ಈ ದೇವಿ ನನ್ನ ಹೆಂಡತಿಯೇ?' ಎಂದು ನಾನೇ ಹಲವು ಸಲ ವಿಚಾರ ಮಾಡುತ್ತಿದ್ದೆ. ರುಕ್ಮಿಣಿ ದೇವಿಯಾಗಿದ್ದಂತೆ ಹೆಂಡತಿಯೂ ಆಗಿದ್ದಳು – ನಾನು ಮೂಲವ್ಯಾಧಿಗ್ರಸ್ತನಾಗಿ ಹಾಸಿಗೆ ಹಿಡಿದು ಮಲಗಿದ್ದಾಗ ಅವಳು ಮಾಡಿದ ಸೇವೆ ಶುಶ್ರೂಷೆ ಮಾನವರಿಂದ ಸಾಧ್ಯವಿಲ್ಲ ಗೌಡರೇ. ನಿತ್ಯ ನನ್ನ ಹೊಲಸಿನಲ್ಲಿ ಕೈ ತೊಳೆಯುತ್ತಿದ್ದ ಆ ಪುಣ್ಯಾತ್ಮಳು ಒಂದು ದಿನ ಮುಖ ಸಿಂಡರಿಸಲಿಲ್ಲ. ದುರ್ಬಲ ಮಗುವನ್ನು ಸಾಕುವಂತೆ ನನ್ನನ್ನು ಸಾಕಿ ಬದುಕಿಸಿಕೊಂಡಳು. ಗಂಡಾಂತರಗಳಿಂದ – ಕಾಹಿಲೆಗಳಿಂದ – ಅಪಘಾತಗಳಿಂದ ನನ್ನನ್ನು ಪಾರುಮಾಡಿದಳು. ಯಮನ ಕೈಗೆ ಸಿಕ್ಕಿದ್ದ ನನ್ನನ್ನು ಹತ್ತು ಸಲ ಉಳಿಸಿಕೊಂಡಳು – ಅವಳನ್ನು ಉಳಿಸಿಕೊಳ್ಳುವುದು ನನ್ನಿಂದ ಸಾಧ್ಯವಾಗಲಿಲ್ಲ."

"ಆ ತಾಯಿಯ ಪುಣ್ಯ ಚರಿತ್ರೆಗೆ ಆದ್ಯಂತವಿದೆಯೇ ಸ್ವಾಮಿ. ಮಿಂಚಿನಂತೆ ಬೆಳಗಿ ನಮ್ಮೆಲ್ಲರ ಬಾಳಿಗೂ ಬೆಳಕು ನೀಡಿ ಮಹಾತಾಯಿ ಅದೃಶ್ಯರಾದರು. ನಾವು ನಿರ್ಭಾಗ್ಯರು – ನಿರ್ಭಾಗ್ಯರು!"

ಷರೀಫ ಸಾಹೇಬರು ಗಟ್ಟಿಮನಸ್ಸು ಮಾಡಿಕೊಂಡು

"ಅಮ್ಮಾನವರು ನಮ್ಮ ಮನೆಗೆ ಬಂದುದು ಒಂದೇ ದಿನ. ಕಾಲು ಗಂಟೆ ಅವರಿದ್ದರಷ್ಟೆ! ಆ ಪುಣ್ಯದಿನವನ್ನು ಇಂದಿಗೂ ನನ್ನ ಬೀಬಿ, ಮಕ್ಕಳು ಜ್ಞಾಪಿಸಿಕೊಳ್ಳುತ್ತಾರೆ. ಅಮ್ಮನವರು ನಮ್ಮ ಮನೆಯಲ್ಲಿ ಊಟ, ತಿಂಡಿ ಸ್ವೀಕರಿಸುವುದಿಲ್ಲವೆಂದು ನಾನು ಬೀಬಿಗೆ ತಿಳಿಸಿದೆ. ಅವರು ಅಮ್ಮಾನವರ ಮುಂದೆ ಒಂದು ಗ್ಲಾಸ್ ಹಾಲಿಟ್ಟು 'ಮಾಜಿ, ನಮ್ಮ ಮನೆಯಲ್ಲಿ ಸ್ವಲ್ಪ ಹಾಲು ತೆಗೆದುಕೊಳ್ಳಬಹುದೇ?' ಎಂದು

ಕೇಳಿದರು. ಅಮ್ಮಾವರು 'ಯಾಕಾಗಬಾರದು ಬೇಗಂ, ಊಟಮಾಡಿದರೂ ತಪ್ಪಿಲ್ಲ. ಆದರೆ ನಾನೊಂದು ಹಳೆಯ ಸಂಪ್ರದಾಯದಲ್ಲಿ ಬೆಳೆದುಬಿಟ್ಟೆ ತಂಗಿ. ಈಗ ಬದಲಾಯಿಸುವುದಕ್ಕೆ ತೊಂದರೆಯಾಗುತ್ತದೆ' ಎಂದರು. ಈ ಹೃದಯ ನಮಗೆ ಇನ್ನೆಲ್ಲಿ ಸಿಕ್ಕಬೇಕು - ಸರ್ಕಾರ್, ಈ ಹೊತ್ತಿನಲ್ಲಿ ನಾವು ನಿಮಗೆ ಸಮಾಧಾನ ಹೇಳಿ, ನಿಮ್ಮ ದುಃಖ ಕಡಿಮೆ ಮಾಡಬೇಕು - ಆದರ ದುಃಖಿಗಳಾದ ನಾವೇ ನಿಮ್ಮ ಸಹಾಯ ಕೋರುತ್ತಿದ್ದೇವೆ."

"ಷರೀಫ್ - ನೀವು ಕಕ್ಷಿಗಾರರಾಗಿ ನನ್ನಲ್ಲಿಗೆ ಬಂದಿರಿ. ನನ್ನ ನಿಮ್ಮ ಸಂಬಂಧ ಆಯಿತು - ಕಕ್ಷಿಗಾರರ ಸಂಬಂಧವಾಗಿಯೇ ಆರಂಭವಾಯಿತು. ರುಕ್ಮಿಣಿ ತನ್ನ ವಿಶಾಲ ಹೃದಯದಲ್ಲಿ ನಿಮ್ಮೆಲ್ಲರಿಗೂ ಎಡೆಯಿತ್ತು, ನಿಮ್ಮನ್ನು ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳಂತೆ ನಡಸಿಕೊಂಡಳು. ನೀವೂ ಹಾಗೇ ವರ್ತಿಸಿದಿರಿ. ಸಂಸಾರ ಮನೆಯಲ್ಲಿರುವ ನಾಲ್ಕು ಮಂದಿಗೆ ಅಡಕವಾಗುವುದಿಲ್ಲ. ಅದರ ವ್ಯಾಪ್ತಿಯೊಳಗೆ ಇಡಿಯ ವಿಶ್ವವೇ ಬರುತ್ತದೆ ಎಂದು ನನಗೆ ಮನದಟ್ಟುಮಾಡಿದವಳೇ ರುಕ್ಮಿಣಿ - ಎಷ್ಟು ಅತ್ತರೇನು, ಎಷ್ಟು ಯೋಚಿಸಿದರೇನು - ರುಕ್ಮಿಣಿ ಹಿಂದಿರುಗುವುದಿಲ್ಲ ಷರೀಫ್."

ವಿಷಯಾಂತರಮಾಡಲು ಬಯಸಿದ ಜವರೇಗೌಡರು

"ಬೆಂಗಳೂರಿಗೆ ಹೋಗುವುದನ್ನು ನಿರ್ಧರಿಸಿರುವಿರಾ?" ಎಂದು ಕೇಳಿದರು.

"ಅಮ್ಮ ಹಾಗೆ ಹೇಳಿದರು - ಆಗಲಿ ಎಂದು ಒಪ್ಪಿಕೊಂಡೆ."

"ನಾನೂ ಅಮ್ಮಾವರ ಹತ್ತಿರ ಚರ್ಚೆಮಾಡಿದೆ. ಅವರು ತಮ್ಮ ನಿಶ್ಚಯ ಬದಲಾಯಿಸುವಂತಿಲ್ಲ. ತಾವು ಸಂಸಾರವನ್ನೇ ಬೆಂಗಳೂರಿಗೆ ಸಾಗಿಸುವುದು ನಮಗೆ ಯಾರಿಗೂ ಒಪ್ಪಿಗೆಯಿಲ್ಲ."

"ಅಮ್ಮನ ಮಾತು ತೆಗೆದುಹಾಕುವುದು ನ್ಯಾಯವಲ್ಲ. ಸದ್ಯಕ್ಕೆ ಹೋಗಲು ಅನುಮತಿ ಕೊಡಿ-ನಾನು ಎಲ್ಲಿದ್ದರೂ ನಿಮ್ಮವನೇ ಅಲ್ಲವೇ?"

ಗೌಡರೂ ಷರೀಫ್ ಸಾಹೇಬರೂ ಅರೆಮನಸ್ಸಿನಿಂದ ಒಪ್ಪಿಕೊಳ್ಳಬೇಕಾಯಿತು.

## ೨

ಮುಂಬಯಿಗೆ ಹಿಂದಿರುಗಿದ ನಾರಾಯಣಸ್ವಾಮಿಯ ಸ್ಥಿತಿ ಕಂಡು ಇಂದುಮತಿ ಚಕಿತಳಾದಳು. ಹದಿನೈದು ದಿನಗಳ ಹಿಂದೆ ಮುಂಬಯಿ ಬಿಟ್ಟು ಹೋದ ನಾರಾಯಣಸ್ವಾಮಿಯ ಮುಖದ ಮೇಲೆ ಅಕಾಲಿಕ ವೃದ್ಧಾಪ್ಯದ ಚಿಹ್ನೆಗಳು ತೋರಿದ್ದವು. ಅವನಲ್ಲಿ ಹುದುಗಿದ್ದ ಅಮಿತೋತ್ಸಾಹ ದುಃಖ, ಚಿಂತೆಗಳಿಗೆಡೆಕೊಟ್ಟಿತ್ತು.

ನಾರಾಯಣಸ್ವಾಮಿಯ ಮನಸ್ಸಿಗೆ ಸ್ವಲ್ಪವೂ ನೆಮ್ಮದಿಯಿರಲಿಲ್ಲ.

ನಿಂತರೆ, ಕುಳಿತರೆ ಮಂಡ್ಯದ ದೃಶ್ಯಗಳು ಎದುರು ನಿಂತು ಪೀಡಿಸುತ್ತಿದ್ದವು

'ಶ್ರೀಗಂಧಕಾಷ್ಠದ ಮಧ್ಯೆ ತಪೋನಿಧಿಯಂತೆ ಅಮಲಶಾಂತಿ ತಳೆದು ಮಲಗಿದ್ದ ತಾಯಿದೇವಿ – ಸಾವಿನ ಉಡಿಯಲ್ಲಿಯೂ ಹೆಡೆಯೆತ್ತಿ ನಿಂತಿದ್ದ ಅವಳ ದಿವ್ಯ ಮುಖಕಾಂತಿ. ಸಂಧ್ಯಾಸೂರ್ಯನಿಗೆ ಆರತಿ ಬೆಳಗಿದಂತೆ ಅವಳ ಮುಖಮಂಡಲವನ್ನಲಂಕರಿಸಿದ್ದ ಕುಂಕುಮ – ಅವಳ ಚಿರಂತನತೆಯನ್ನು ಸಾರುತ್ತಿದ್ದ ಹೊಂಬಣ್ಣದ ಅರಿಶಿನ – ಬಗೆಬಗೆ ಹೂಗಳಿಂದ ಪೂಜೆಗೊಂಡು ಸೌಮ್ಯ ಸುಹಾಸವದನಳಾಗಿ, ಮಲಗಿದ್ದ ಆ ವನದೇವತೆ – ನನ್ನ ತಾಯಿ – ನನ್ನ ತಾಯಿ'

ಎಂದವನ ಹೃದಯ ಮೊರೆಯಿಟ್ಟಿತು – ಮಗ ಬಂದು ಅಗ್ನಿಸ್ಪರ್ಶನ ಮಾಡುವವರೆಗೆ ತಾಯಿಯ ಪಾರ್ಥಿವಶರೀರ ಭೂಮಿಬಿಟ್ಟು ನಿಷ್ಕ್ರಮಿಸಲು ಸಮ್ಮತಿಸಿರಲಿಲ್ಲ.

—ಅಂಬೆಗಾಲಿಕ್ಕುತ್ತ, ತೊದಲುನುಡಿ ನುಡಿಯುತ್ತ ಅಸ್ವತಂತ್ರ ಸ್ಥಿತಿಯಲ್ಲಿದ್ದ ಮಗುವಿಗೆ ತಾಯಿ ಹಾಲಿಟ್ಟು, ಪೊರೆದು, ಪೋಷಿಸಿ,

– ಅವನನ್ನು ಮನುಷ್ಯನನ್ನಾಗಿ ಮಾಡಿದ್ದಳು ಆ ತಾಯಿಗೆ ಮಗ ಬೆಂಕಿ ಕಾಣಿಸಬೇಕಾಯಿತು.

ಮೃತದೇಹವಿಟ್ಟುಕೊಂಡು ಕೂಡಲು ಸಾಧ್ಯವಿಲ್ಲ – ಅದಕ್ಕೆ ಅಗ್ನಿಸ್ಪರ್ಶನೆಯಾಗಲೇಬೇಕು. ಪಂಚಭೂತಾತ್ಮಕವಾದ ಶರೀರ ಪಂಚ ಭೂತಗಳನ್ನೇ ಸೇರಬೇಕು – ಇದು ಪ್ರತಿಷೇದವಿಲ್ಲದ ಸತ್ಯವಾಗಿತ್ತು.

—ಆದರೆ ಆ ಪಂಚಭೂತಾತ್ಮಕ ಶರೀರ ತನ್ನ ತಾಯಿಯದು – ಆ ಶರೀರವೇ ಅಲ್ಲವೇ ಈ ಶರೀರಕ್ಕೆ ಜನ್ಮವಿತ್ತುದೆಂಬ ಭಾವನೆ ದುಃಖಕ್ಕೆ ಕಾರಣವಾಗುತ್ತಿತ್ತು.

ತಾಯಿಯನ್ನು ಕಳೆದುಕೊಂಡ ದುಃಖ ಒಂದು ಕಡೆ, ಆ ತಾಯಿಗೆ ತಕ್ಕ ಮಗನಾಗಲಿಲ್ಲವಲ್ಲಾ ಎಂಬ ದುಃಖ ಮತ್ತೊಂದು ಕಡೆ ನಾರಾಯಣಸ್ವಾಮಿಯನ್ನು ಒಂದೇ ಸಮನೆ ಕೊಯ್ಯುತೊಡಗಿದವು

ಇಂದು ತನ್ನ ಶಕ್ತ್ಯಾನುಸಾರ ಅವನನ್ನು ಸಮಾಧಾನಗೊಳಿಸ ಲೆತ್ನಿಸಿದಳು ಹೊರಗೆ ಹೊರಡುವ ಮುನ್ನ

"ಸುಸ್ಮಿ – ಒಂದೇ ಕಡೆ ಕುಳಿತು ಹೀಗೆ ಚಿಂತಿಸಿದರೆ ದುಃಖ ಪರಿಹಾರವಾಗುವುದಿಲ್ಲ ಜುಹುಗಾದರೂ ಹೋಗಿ ಮಳಲು ದಂಡೆಯ ಮೇಲೆ ತಿರುಗಾಡಿ ಬರೋಣ" ಎನ್ನುತ್ತಿದ್ದಳು

ನಿರ್ವಿಣ್ಣನಾಗಿದ್ದ ನಾರಾಯಣಸ್ವಾಮಿ ಬಾಯಿಯಿಂದ ಒಂದೇ ಉತ್ತರ ಹೊರಡುತ್ತಿತ್ತು

"ನೀನು ಹೋಗಿ ಬಾ ಇಂದೂ – ನನ್ನ ಚಿಂತೆಗೆ ಯಾವ ಭಂಗ ಬರುವುದೂ ಬೇಡ"

ಎರಡು ವಾರಗಳು ಕಳೆದವು.

ನಾರಾಯಣಸ್ವಾಮಿಯ ಪರಿಸ್ಥಿತಿ ಸ್ವಲ್ಪವೂ ಸುಧಾರಿಸಲಿಲ್ಲ. ನಿದ್ರಾಹಾರಗಳನ್ನು ಕಡೆಗಾಣಿಸಿದ್ದ ಅವನ ದೇಹ ಸೊರಗುತ್ತ ಬಂದಿತ್ತು. ಕಣ್ಣುಗಳು ಗುಣಿಬಿದ್ದವು. ಮುಖದ ಮೇಲಣ ಮೂಳೆಗಳು ಎದ್ದು ನಿಂತವು.

ಗಂಡನ ಪರಿಸ್ಥಿತಿ ಕಂಡು ಇಂದುಮತಿಗೆ ಭಯವಾಯಿತು.

'ಇವರನ್ನು ಹೀಗೇ ಬಿಟ್ಟರೆ ಇವರು ಉಳಿಯುವ ಸಂಭವವಿಲ್ಲ'

ಎಂದು ನಿರ್ಧರಿಸಿಕೊಂಡಳು.

ಅಳಿಯನ ಸ್ಥಿತಿ ನೇರ್ ಮಂಗಳದಾಸರಿಗೂ ವ್ಯಸನವನ್ನುಂಟು ಮಾಡಿತು. ಅವರು ನಾರಾಯಣಸ್ವಾಮಿಗೆ

"ನೀವೂ ಇಂದೂ ಒಂದೆರಡು ತಿಂಗಳು ಎಲ್ಲಿಗಾದರೂ ಹೋಗಿ ಬನ್ನಿ. ದುಃಖ ಯಾರಿಗೂ ತಪ್ಪಿದ್ದಲ್ಲ. ಆದರೆ ದುಃಖಕ್ಕೆ ಮನತೆತ್ತು ಜೀವಿತವನ್ನೇ ಹಾಳುಮಾಡಿಕೊಳ್ಳುವುದು ಯೋಗ್ಯವಲ್ಲ"

ಎಂದು ಲೋಕಾಭಿರಾಮವಾಗಿ ಸಮಾಧಾನದ ಮಾತುಗಳನ್ನು ಹೇಳಿದರು.

ನಾರಾಯಣಸ್ವಾಮಿ ಉತ್ತರಕೊಡುವ ಗೋಜಿಗೇ ಹೋಗುತ್ತಿರಲಿಲ್ಲ

'ಏಕಿವರು ನನ್ನನ್ನು ಹೀಗೆ ಕಾಡುತ್ತಿದ್ದಾರೆ. ನನ್ನ ಪಾಡಿಗೆ ನನ್ನನ್ನು ಬಿಡಬಾರದೆ?' ಎಂದು ಸಿಡಿಮಿಡಿಗೊಳ್ಳುತ್ತಿದ್ದ.

ನಾರಾಯಣಸ್ವಾಮಿಯ ಚಿಂತಾತಪಃ ಇಂದುಮತಿಯ ಮನಃಶಾಂತಿಯನ್ನು ಕದಡಿತ್ತು. ನಿರ್ವಿಣ್ಣನಾಗಿ – ನಿರುತ್ಸಾಹಿಯಾಗಿ – ನಿರ್ಜೀವನಾಗಿ "ಕುಳಿತಿರುತ್ತಿದ್ದ ಗಂಡನನ್ನು ಕಂಡರ ಅವಳ ಕರುಳು ಕಿತ್ತು ಬರುತ್ತಿತ್ತು.

ಒಂದು ದಿನ ರಾತ್ರಿ ನಾರಾಯಣಸ್ವಾಮಿ ಯಥಾವಿಧಿಯಂತೆ ಹಜಾರದ ದೀಪ ಮೊಟಕುಮಾಡಿ, ಸೋಫಾದಮೇಲೆ ಕಾಲುಚಾಚಿಕೊಂಡು, ಗೋಡೆಯನ್ನು ದಿಟ್ಟಿಸಿನೋಡುತ್ತ ಕುಳಿತಿದ್ದ.

ಆಗಾಗ್ಗೆ ಯಾರೋ ಅಳುತ್ತಿದ್ದ ಧ್ವನಿ ಕೇಳಿಬರುತ್ತಿತ್ತು. ಮೊದಮೊದಲು ನಾರಾಯಣಸ್ವಾಮಿ ಅತ್ತ ಲಕ್ಷ್ಯಕೊಡಲಿಲ್ಲ. ಅಳುವಿನ ಧ್ವನಿ ಅಡಗದಿರಲು

"ಯಾರದು ?" ಎಂದು ಕೇಳಿದ.

ಅಳುವಿನ ಧ್ವನಿ ನಿಲ್ಲಲಿಲ್ಲ. ನಾರಾಯಣಸ್ವಾಮಿಯ ಪ್ರಶ್ನೆಗೆ ಉತ್ತರ ಬರಲಿಲ್ಲ.

"ಯಾರದು ?" ಎಂದು ಪ್ರಶ್ನೆಯನ್ನೇ ಮತ್ತೆ ಕೇಳಿದ.

ಕೃಶವಾದ ಕಂಠ "ನಾನು" ಎಂದಿತು.

"ಇಂದುವೇ ?"

"ಹೌದು."

"ಎಲ್ಲಿ ಕುಳಿತಿರುವೆ – ಇಲ್ಲಿ ಬಾ "

ಇಂದುಮತಿ ಬಂದು ನಾರಾಯಣಸ್ವಾಮಿಯ ಎದುರು ಕುಳಿತಳು.

"ಏಕಳುತ್ತಿರುವೆ ಇಂದೂ ?"

". ... . . . "

"ನನಗಾಗಿ ಅಳುತ್ತಿರುವೆಯಾ ?"

" "

"ಅಳಬೇಡ, ಯಾರೂ ನನಗಾಗಿ ಕಣ್ಣೀರು ಹಾಕಬೇಡಿ. ನಾನು ಪಾಪಿ ದೇವತೆಯಂಥ ತಾಯಿಯನ್ನು ಉಪೇಕ್ಷಿಸಿದ ಮಹಾಪಾಪಿ."

"ನೀವು ಹೀಗೆ ದುಃಖಿಸುತ್ತ ಕುಳಿತರೆ ಸ್ವರ್ಗಸ್ಥರಾದ ತಾಯಿ ಹಿಂದಿರುಗುವರೇ ?"

"ಇಲ್ಲ – ನನ್ನ ಪಾಪಕ್ಕೆ ಪ್ರಾಯಶ್ಚಿತ್ತವಾಗುತ್ತದೆ "

"ಪ್ರಾಯಶ್ಚಿತ್ತ ಮಾಡಿಕೊಳ್ಳುವಂಥ ಅಪರಾಧ ನೀವು ಮಾಡಿಲ್ಲ."

"ನನ್ನ ಅಪರಾಧದ ಪ್ರಮಾಣ ಯಾರಿಗೂ ಅರ್ಥವಾಗುವುದಿಲ್ಲ ಇಂದೂ – ನನ್ನ ತಾಯಿ ನನ್ನಿಂದ ಏನನ್ನೂ ನಿರೀಕ್ಷಿಸಲಿಲ್ಲ. ನಾನು ಒಳ್ಳೆಯ ಮಗನಾಗಿರಬೇಕೆಂದು ಅವರು ಅಪೇಕ್ಷಿಸಿದರು. ಅಷ್ಟು ಸಮಾಧಾನವನ್ನೂ ಅವರಿಗೆ ನಾನು ಒದಗಿಸಲಾರದೆ ಹೋದೆ."

"ನಮ್ಮ ಮದುವೆಯ ವಿಷಯ ಅವರಿಗೆ ಬೇಸರವನ್ನುಂಟು ಮಾಡಿತೇ ?"

"ಬೇಸರವಾಗಿದ್ದರೂ ಆಗಿರಬಹುದು. ಆದರೆ ಅದನ್ನು ಮರೆತು ನಿನ್ನನ್ನು ಸ್ವಾಗತಿಸಬಲ್ಲ ಔದಾರ್ಯ ಅವರಲ್ಲಿತ್ತು "

"ನಾನು ಅವರನ್ನು ನೋಡಲೇ ಇಲ್ಲವಲ್ಲಾ !"

"ನಿನ್ನನ್ನು ಊರಿಗೆ ಕರೆದುಕೊಂಡು ಹೋಗಿ ತಾಯಿ, ತಂದೆ, ಅಕ್ಕ ತಂಗಿಯರ ಪರಿಚಯ ಮಾಡಿಕೊಡಬೇಕೆಂಬ ಆಸೆಯಿತ್ತು. ಸದವಕಾಶ ದೊರೆಯಲಿಲ್ಲ."

"ಚೆಲ್ಲಿಹೋದ ಹಾಲಿಗಾಗಿ ಅತ್ತರೇನು ಪ್ರಯೋಜನ ? ನೀವು

ಹೀಗೆ ಕೊರಗುವುದರಿಂದ ಯಾರಿಗೂ ಲಾಭವಿಲ್ಲ."

"ಅದನ್ನು ಬಲ್ಲೆ ಇಂದೂ. ಯಾವ ಕಾರಣಕ್ಕೂ ನನಗೆ ದುಃಖವಾಗಬಾರದೆಂಬುದೇ ನನ್ನ ತಾಯಿಯ ಅಭೀಷ್ಟವಾಗಿತ್ತು. ಆದರೆ ಹಳೆಯ ನೆನಪುಗಳು ಕಾಡುತ್ತಿವೆ. ಕುಳಿತಲ್ಲಿ ನಿಂತಲ್ಲಿ ನನ್ನ ಮಹಾಪರಾಧ ಬೃಹತ್‌ಸ್ವರೂಪ ತಳೆದು ನಿಲ್ಲುತ್ತದೆ "

"ಇದಕ್ಕೊಂದು ಪರಿಹಾರವಿದೆ ಸೂಚಿಸಲೇ ?"

"ಹೇಳು."

"ನೀವೂ ನಾನೂ ಯೂರೋಪಿಗೆ ಹೋಗಿಬರಬೇಕೆಂದು ಹಿಂದೆಯೇ ನಿಶ್ಚಯಿಸಿದ್ದೆವು ಇದೇ ಸಕಾಲವಾಗಿದೆ ಹಳೆಯ ನೆನಹುಗಳನ್ನು ಮರೆಯಲು ನಿಮಗೂ ಅವಕಾಶವಾಗುತ್ತದೆ "

"ನಾವು ಊರುಬಿಟ್ಟು ಹೋದವರೆ ಚಿಂತೆ ನಮ್ಮನ್ನು ಬಿಟ್ಟು ಹೋಗುವುದೇ ?"

"ಇಲ್ಲ – ಆದರೆ ಹೊಸಸ್ಥಳ – ಹೊಸ ವಾತಾವರಣದಿಂದ ಮನಸ್ಸು ಪ್ರಫುಲ್ಲವಾಗಬಹುದು."

"ನಿಮ್ಮ ತಂದೆಯವರಿಗೆ ಈ ವಿಷಯ ತಿಳಿಸಿರುವೆಯಾ ?"

"ಈ ಸೂಚನೆಯಿತ್ತವರೇ ಅವರು."

"ಇಂದೂ. .. . ."

"ಏನು ಡಿಯರ್ ?"

"ನಾನು ನಿಮಗೆ ಹೊರೆಯಾಗುತ್ತಿದ್ದೇನೆ."

"ಹಾಗೆ ಯಾರಾದರೂ ಆಡಿದರೆ ?"

"ಇಲ್ಲ ಇಲ್ಲ – ನನ್ನ ಅಂತರಂಗಕ್ಕರಿವಾಗಿರುವುದನ್ನು ಇತರರೇಕೆ ಹೇಳಬೇಕು."

"ನನ್ನಲ್ಲಿ ಭೇದವೆಣಿಸುವಿರಾ ?"

"ಇಲ್ಲ."

"ನಿಮ್ಮದೆಲ್ಲಾ ನನ್ನದು. ನನ್ನದೆಲ್ಲಾ ನಿಮ್ಮದಲ್ಲವೇ ?"

"ನನ್ನದಾಗಿ ನಿನಗೆ ಕೊಡುವುದೇನಿದೆ. ನೀನು ಲಕ್ಷ್ಮೀಪುತ್ರಿ."

"ನೀವು ಸರಸ್ವತೀ ಪುತ್ರರು."

"ಲಕ್ಷ್ಮೀ ಸರಸ್ವತಿಯರು ಸತಿಯರು"
"ಅಲ್ಲ - ಅಕ್ಕತಂಗಿಯರು"
"ನೀನೊಬ್ಬಳೇ ಯೂರೋಪಿಗೇಕೆ ಹೋಗಿ ಬರಬಾರದು."
"ನನ್ನನ್ನು ರೇಗಿಸಲು ಇಚ್ಛಿಸುತ್ತಿರುವಿರಾ?"
"ರೇಗುವ ಅಭ್ಯಾಸ ನಿನಗಿಲ್ಲವೆಂದು ನನಗೆ ಗೊತ್ತು."
"ಈಗದರ ಪರೀಕ್ಷೆ ಮಾಡುತ್ತಿರುವಿರೇನೋ?"
"ನಾನೇನು ಹೇಳಲಿ ಇಂದೂ"
"ಒಪ್ಪಿಕೊಂಡರೆ ಎನ್ನಿ - ತಂದೆಯವರಿಗೆ ಹೇಳಿ ಮುಂದಿನ ವ್ಯವಸ್ಥೆ ಮಾಡಿಸುತ್ತೇನೆ"
"ಇದು ನಿನ್ನ ಆಜ್ಞೆಯೇ?"
"ಹೌದು."
"ನಾನೇನು ಮಾಡಬೇಕು"
"ಆಜ್ಞೆ ಪಾಲಿಸಬೇಕು"
"ನಿರಾಕರಿಸಿದರೆ"
"ಶಿಕ್ಷೆಯಾಗುತ್ತದೆ."
"ಏನು ಶಿಕ್ಷೆ?"
"ನಾನು ನಿಮ್ಮ ಜತೆ ಮಾತೇ ಆಡುವುದಿಲ್ಲ."
"ನಾನು ಆಡಿಸುತ್ತೇನೆ."
"ನೀವು ಆಡಿಸಿದರೂ ಆಡುವುದಿಲ್ಲ"
"ನನ್ನ ಅಪರಾಧಕ್ಕೊಪ್ಪಿರಿದ ಶಿಕ್ಷೆಯಾಯಿತು.
"ಶಿಕ್ಷೆ ಬೇಡವೆನ್ನುವವರು ಅಪರಾಧವನ್ನೇ ಮಾಡಬಾರದು—Prevention is better than cure."
"ನಿನ್ನ ಇಷ್ಟದಂತೆಯೇ ಆಗಲಿ ಇಂದೂ."
ಇಂದುಮತಿ ಹರ್ಷಚಿತ್ತಳಾಗಿ
"Thank you my dear" ಎಂದಳು.

೪

ಕಮಲಳ ಹೆಗಲ ಮೇಲೆ ಹೆಚ್ಚಿನ ಜವಾಬ್ದಾರಿ ಬಿದ್ದಂತಾಯಿತು. ತಾನು, ತನ್ನ ಮಕ್ಕಳು, ಸಾವಿತ್ರಮ್ಮ, ಜತೆಗೆ ದುರ್ಬಲನಾಗಿದ್ದ ತಂದೆ, ವಯೋವೃದ್ಧಳಾಗಿದ್ದ ಗೋದಮ್ಮನವರೂ ಬಂದು ಸೇರಿಕೊಂಡರು.

ತಾನು ನಿರ್ಗತಿಕಳಾಗಿ ಮಂಡ್ಯಕ್ಕೆ ಬಂದು ರುಕ್ಮಿಣಮ್ಮನ ಆಶ್ರಯದಲ್ಲಿ ನಿಂತುದನ್ನು ಸಾವಿತ್ರಮ್ಮ ಸ್ವಲ್ಪವೂ ಮರೆತಿರಲಿಲ್ಲ. ದಿನಕ್ಕೆ ಹತ್ತು ಸಲವಾದರೂ ರುಕ್ಮಿಣಮ್ಮನ ನೆನಪು ತಂದುಕೊಳ್ಳದೆ ಆಕೆ ತೃಪ್ತಳಾಗುತ್ತಿರಲಿಲ್ಲ. ಮನೆಗೆಲಸದ ಪೂರ್ಣ ಹೊಣೆ ಸಾವಿತ್ರಮ್ಮ ಹೊತ್ತಿದ್ದುದರಿಂದ ಕಮಲಳಿಗೆ ವ್ಯವಧಾನ ಸಿಕ್ಕುತ್ತಿತ್ತು. ಬೆಳಿಗ್ಗೆ ಊಟಮಾಡಿ ಕಾಲೇಜಿಗೆ ಹೋಗುತ್ತಿದ್ದವಳು ಸಂಜೆಗೆ ಕಾಲೇಜಿನಿಂದ ಹಿಂದಿರುಗಿದ ಮೇಲೆ ಅವಳು ಗೋಪಾಲಿ, ಸೌಭಾಗ್ಯರ ಆಟಪಾಟಗಳಲ್ಲಿ ಮಗ್ನಳಾಗುತ್ತಿದ್ದಳು.

ಗೋದಮ್ಮನವರ ದಿನಚರಿಯಲ್ಲಿ ಯಾವ ವ್ಯತ್ಯಾಸವೂ ಆಗಲಿಲ್ಲ. ಪೂಜೆ ಪುರಸ್ಕಾರಗಳಿಗೇ ಅವರಿಗೆ ಹೊತ್ತು ಸಾಲದಾಗುತ್ತಿತ್ತು. ಅವುಗಳ ಮಧ್ಯೆ ಪುರಸತ್ತು ಮಾಡಿಕೊಂಡು ಸಾವಿತ್ರಮ್ಮನಿಗೆ ನೆರವಾಗುತ್ತಿದ್ದರು.

"ಪರವಾಗಿಲ್ಲ ಬಿಡ್ರೀ – ನಾನು ಮಾಡಿಕೊಳ್ಳುತ್ತೇನೆ."

ಎಂದು ಸಾವಿತ್ರಮ್ಮ ಹೇಳಿದರೆ

"ನಾನು ಕುಳಿತುಕೊಂಡು ಕಾಲಹರಣ ಮಾಡಬೇಕೇ ಸಾವಿತ್ರಮ್ಮ – ಎಲ್ಲಾ ಕೆಲಸ ನಿಮ್ಮ ಹೆಗಲಮೇಲೆ ಹಾಕಿ. ಕೆಲಸ ಮಾಡಿದರೆ ನನ್ನ ಕೈ ಸವೆದು ಹೋಗುತ್ತದೆಯೇ ?"

ಎಂದು ಹೇಳುತ್ತಿದ್ದರು

ಮಾಧವರಾಯನ ಯೋಗಕ್ಷೇಮ ಯಾರೂ ನಿರ್ಲಕ್ಷಿಸದಿದ್ದರೂ, ಆ ಬಗ್ಗೆ ವಿಶೇಷ ಗಮನ ಕೊಟ್ಟಿದ್ದವರು ಗೋದಮ್ಮ. ಒಣ ಉಪಚಾರದಿಂದ ಮಗನನ್ನು ತಣಿಸಲು ಗೋದಮ್ಮ ಪ್ರಯತ್ನಿಸದಿದ್ದರೂ, ಸೂಕ್ಷ್ಮ ನೋಟದಿಂದಲೇ ಅವನ ಸಮಸ್ತ ಚಲನವಲನವನ್ನೂ ಗಮನಿಸುತ್ತಿದ್ದರು. ಪ್ರತಿ ಕ್ಷಣದಲ್ಲಿಯೂ ಮಾಧೂರಾಯನ ಮನಸ್ಸಿನಲ್ಲಾಗುತ್ತಿದ್ದ ಆಂದೋಲನ ಗೋದಮ್ಮನವರ ಚಿತ್ತಕ್ಕೆ ವೇದ್ಯವಾಗುತ್ತಿತ್ತು.

'ರುಕ್ಮಿಣಿ ಕೃಪಿಷಿದಿದ್ದಳು. ಸಣ್ಣ ಹುಡುಗಿಯಾಗಿದ್ದಾಗಲೇ ಅತ್ತೆಯ ಮನೆ ಸೇರಿದ ರುಕ್ಮಿಣಿ ತನ್ನ ಅನ್ಯಾದೃಶ ಜೀವನದಿಂದ ಮನೆಯ ಮಂಗಳಲಕ್ಷ್ಮಿಯಾಗಿ ಬೆಳಗಿದಳು

'ಮನೆಯನ್ನು ವೈಕುಂಠ ಮಾಡಿದಳು.

'ಮನೆಯ ಮೇಲೆ ಮಾತ್ರವಲ್ಲದೆ ನೆರೆಹೊರೆಯವರ ಮೇಲೆ – ಊರಿನ ಮೇಲೆ ಪ್ರಭಾವ ಬೀರಿ ಅವರ ಜೀವನಕ್ಕೆ ಬೆಳಕು ನೀಡಿದಳು

'ರುಕ್ಮಿಣಿ ವ್ಯಕ್ತಿಯಲ್ಲ – ಒಂದು ದಿವ್ಯ ಕನಸು.

'ಕಮಲಿನಲ್ಲಿ ತಾಯಿಯಗುಣ ಮಡಿಮೂಡಿದೆ – ಪದ್ಮ ಇನ್ನೂ ಮಗು – ಆದರೆ ನಾಣಿ !'

ನಾರಾಯಣಸ್ವಾಮಿಯ ನೆನಪು ಬಂದೊಡನೆಯೇ ಮಾಧವರಾಯನ ಮನಸ್ಸು ತಲ್ಲಣಗೊಳ್ಳುತ್ತಿತ್ತು

'ನಾಣಿಯೂ ರುಕ್ಮಿಣಿಯ ಮಗನಲ್ಲವೇ–ಅವನಲ್ಲೇಕೆ ತಾಯಿಯ ಗುಣ ರೂಪುಗೊಳ್ಳಲಿಲ್ಲ ಸ್ವಾರ್ಥವೇ ಪರಮಾರ್ಥವೆಂಬ ಭಾವನೆ ಅವನ ಹೃದಯದಲ್ಲೇಕೆ ನೆಲಸಿತು. – ನಾಣಿಗಾಗಿ ರುಕ್ಕು ಎಷ್ಟು ತಪಿಸಿದಳು ಅವಳ ಕೊನೆಯ ದಿನದಲ್ಲಿ ಕೂಡ ನಾಣಿ ಹತ್ತಿರವಿರಲಿಲ್ಲವಲ್ಲಾ !'

ಮಾಧವರಾಯ ಏಕಾಂತಚಿಂತೆಯಲ್ಲಿ ಹೊತ್ತುಗಳೆಯುವುದಕ್ಕೆ ಗೋದಮ್ಮ ಅವಕಾಶಕೊಡುತ್ತಿರಲಿಲ್ಲ. ಮಾಧವರಾಯ ಮನೆಯ ಕಾಂಪೌಂಡಿನಲ್ಲಿ ಶಥಪಥ ಸುತ್ತುವುದಕ್ಕಾರಂಭಿಸಿದ ಕೂಡಲೆ ಗೋದಮ್ಮ ಮೆಲ್ಲನೆ ಬಂದು ಕಲ್ಲುಬೆಂಚಿನ ಮೇಲೆ ಕುಳಿತು

"ಏನು ಯೋಚಿಸುತ್ತಿರುವೆ ಮಾಧೂ?" ಎನ್ನುತ್ತಿದ್ದರು.

"ಏನು ಇಲ್ಲಮ್ಮ."

"ಏನೂ ಇಲ್ಲವೆಂದರೆ ನಾನು ಒಪ್ಪಿಕೊಳ್ಳುತ್ತೇನೆಯೇ ?"

"ಇಷ್ಟೇ ಇದೆಯಲ್ಲಾ – ನಾಣಿಯ ಚಿಂತೆ."

"ಬಂಗಾರದಂಥ ಹುಡುಗ – ಅವನ ಜೀವನವೂ ಬಂಗಾರವಾಗುತ್ತದೆ."

"ನೀನು ಅವನ ಪ್ರೀತಿ ಅಜ್ಜಿ – ಹಾಗೆ ನೀನು ಹೇಳುವುದು ಸ್ವಾಭಾವಿಕ."

"ನಾಣಿ ವಿಷಯಕ್ಕೆ ರುಕ್ಕೂನೂ ಒಂದು ದಿವಸ ನನ್ನ ಕೈಯಲ್ಲಿ ವ್ಯಾಜ್ಯ ಕಾದಿದ್ದಳು."

"ಕಮಲನ ಸ್ಥಿತಿ ನೋಡಿದರೆ ಅಯ್ಯೋ ಎನಿಸುತ್ತದೆ. ಹೆಣ್ಣಿಗೆ ಹೆಣ್ಣಾಗಿ ಗಂಡಿಗೆ ಗಂಡಾಗಿ ಅವಳು ದುಡಿಯಬೇಕಾಗಿದೆ. ಅವಳು ಹೊತ್ತಿರುವ ಹೊಣೆ ನ್ಯಾಯವಾಗಿ ನಾಣಿ ಹೊರಬೇಡವೇ ?"

"ಕೈಯಲ್ಲಿರುವ ಐದು ಬೆರಳುಗಳೂ ಒಂದೇ ರೀತಿಯಾಗಿರುತ್ತವೆಯೋ ಮಾಧೂ. ಒಂದು ಮರದಲ್ಲಿ ಬೆಳೆಯುವ ಹಣ್ಣುಗಳೆಲ್ಲಾ ಒಂದೇ ರುಚಿಯನ್ನು ತಳೆದಿರುತ್ತವೆಯೇ ?"

"ಮಾವಿನಮರದಲ್ಲಿ ಬೇವಿನಕಾಯಿ ಹುಟ್ಟಬಾರದು ?"

"ಹುಟ್ಟಿರುವುದು ಬೇವಿನ ಕಾಯಲ್ಲ – ದೋರೆಗಾಯಿ – ಈಗ ಸ್ವಲ್ಪ ಹುಳಿಯಾಗಿದೆ. ಮಾಗಿದರೆ ಸಿಹಿಯಾಗುತ್ತದೆ."

"ನಿನ್ನ ನಂಬಿಕೆ ನನಗೆ ಬಾರದಲ್ಲ !"

"ನಾಣಿಯೂ ರುಕ್ಮಿಣಿಯ ಮಗ ಎಂಬುದನ್ನು ನೀನು ಜ್ಞಾಪಿಸಿಕೊಂಡರೆ ನಂಬಿಕೆ ಬರುತ್ತದೆ. ಈಗಾಗಲೇ ನಾಣಿ ಲೋಕವಿಖ್ಯಾತಿ ಪಡೆದಿರುವುದನ್ನು ಮರೆಯಬೇಡ."

"ಮನೆಗೆ ಹೆಮ್ಮಾರಿಯಾಗಿ ಪರರುಪಕಾರಿಯಾದರೇನು ಪ್ರಯೋಜನ ?"

"ಸ್ವಲ್ಪ ತಾಳ್ಮೆ ತಂದುಕೋ ಮಾಧೂ – ನಾಣಿಯ ಮನಸ್ಸು ಕಮಲನ ಮನಸ್ಸಿನಷ್ಟು ವೇಗವಾಗಿ ಬೆಳೆದಿಲ್ಲ – ನಿಜ – ಆದರದು

ಕರಟುಬಿದ್ದಿದೆಯೆಂಬುದನ್ನು ನಾನು ಒಪ್ಪುವುದಿಲ್ಲ."

"ನಿನ್ನ ಮಾತಿಗೆ ಪ್ರತಿಹೇಳಬೇಕಾದರೆ ನನ್ನ ಜೀವ ಕುತ್ತಿಗೆಗೆ ಬರುತ್ತದೆ – ಆದರೆ ಈ ವಿಷಯದಲ್ಲಿ ನಾನು ನಿನ್ನ ಅಭಿಪ್ರಾಯ ವಿರೋಧಿಸಬೇಕಾಗಿದೆ. – ಆಗಲಿ ನೋಡುವ, ನೀನು ಹೇಳಿದಂತೆ ಈ ದೋರೆಗಾಯಿ ಯಾವ ಕಾಲಕ್ಕಾದರೂ ಮಾಗುವುದೇನೋ!"

ಯಾವುದೋ ಹಿರಿಧೈರ್ಯ ಗೋಪಮ್ಮನವರ ಮನಸ್ಸನ್ನು ತುಂಬಿತ್ತು.

"ಆಗಲಿ ನೀನೇ ನೋಡುವೆಯಂತೆ" ಎಂದರು

ಅವರು ಮಾತನಾಡುತ್ತಾ ಕುಳಿತಿರುವಂತೆ ಅಂಚೆಯಾಳು ಒಂದು ಕಾಗದ ತಂದು ಮಾಧವರಾಯನ ಕೈಯಲ್ಲಿಟ್ಟು ಹೋದ. ಮಾಧವರಾಯ ಕಾಗದ ಓದಿಕೊಂಡು ತಿರಸ್ಕಾರಪೂರ್ವಕ ನಕ್ಕ

"ಯಾರದು ಕಾಗದ ಮಗೂ' ಎಂದು ಗೋಪಮ್ಮ ಕೇಳಿದರು.

"ಅವನದೇ – ನಿನ್ನ ಮುದ್ದು ಮೊಮ್ಮಗನದು."

"ಏನು ಬರೆದಿದ್ದಾನೆ"

"ಅವನೂ ಅವನ ಹೆಂಡತಿ ಯೂರೋಪಿಗೆ ಪ್ರಯಾಣ ಹೊರಡುತ್ತಾರಂತೆ."

"'ಹೋಗಿ ಬಾ ದೇವರು ಒಳ್ಳೆಯದು ಮಾಡಲಿ' ಎಂದು ಚೆನ್ನಾಗಿ ಒಂದು ಕಾಗದ ಬರೆಯಪ್ಪಾ"

'ಯಾರನ್ನು ಉದ್ಧಾರಮಾಡುವುದಕ್ಕೆ ಹೋಗುತ್ತಾನೋ ಹೋಗಲಿ ಇಲ್ಲಿ ಹೆಣ್ಣು ಹುಡುಗಿ ಕಮಲ ರಟ್ಟೆಮುರಿಯ ದುಡಿಯುತ್ತಿದ್ದರೆ ಇವನಿಗೆ ವಿಲಾಯಿತಿಯಾತ್ರೆ ಮುಖ್ಯವಾಯಿತು."

"ನಾಣಿ ಈಗ ಹೋದರೆ ಬರುವುದು ಯಾವಾಗ ?"

"ವರ್ಷ – ಎರಡು ವರ್ಷವಾಗಬಹುದು."

"ಇಷ್ಟೇತಾನೇ – ಹೇಗೋ ಕಾಲತಳ್ಳಿಹೋಗುತ್ತದೆ – ಹುಟ್ಟಿಸಿದ ದೇವರು ಹುಲ್ಲು ಮೇಯಿಸುವುದಿಲ್ಲ ಅವನ ಅಭಿವೃದ್ಧಿಗೆ ನಮ್ಮ ತಾಪತ್ರಯವೇಕೆ ಅಡ್ಡಿಯಾಗಬೇಕು."

"ಅವನು ಹೋಗುವುದಕ್ಕೆ ನಾನು ಅಡ್ಡಿ ಮಾಡಲಿಲ್ಲಮ್ಮ."

"ಅವನು ಹೋಗುವುದು ನಿನಗೆ ಸಮಾಧಾನವಿಲ್ಲ !"

"ಹೇಗಿರುತ್ತದೆ ನೀನೇ ಹೇಳು."

"ಆಡಿದ ಮಾತೇ ಪುನಃ ಪುನಃ ಆಡಿದರೆ ಏನು ಸಾರ್ಥಕ ಮಾಧೂ. ನಮ್ಮ ಮಕ್ಕಳು ಮುಂದಕ್ಕೆ ಒಂದು ತಮ್ಮ ಜೀವನ ಸರಿಯಾಗಿ ರೂಪಿಸಿಕೊಂಡರೆ ಅದೇ ನಮಗೆ ಅವರು ಕೊಡಬೇಕಾದ ಕಾಣಿಕೆ. ಇದಕ್ಕಿಂತ ಹೆಚ್ಚಾಗಿ ತಾಯಿ ತಂದೆ ಇನ್ನೇನು ಬಯಸುತ್ತಾರೆ?"

ತಮ್ಮ ಹಿರಿಯ ಬಾಳಿಗನುಗುಣವಾಗಿ ಗೋದಮ್ಮ ನುಡಿದಿದ್ದರು. ಅವರ ಮನಸ್ಸಿನ ಅದ್ಭುತ ಪ್ರಮಾಣವನ್ನು ಅರ್ಥಮಾಡಿಕೊಳ್ಳುವುದು ಮಾಧವರಾಯನಿಗೆ ಕಷ್ಟವಾಯಿತು.

## ೫

ವಿರಾಮವಿಲ್ಲದ ತುಂಬಿದ ಜೀವನ ನಡೆಸಿದ ಮಾಧವರಾಯನಿಗೆ ಬೆಂಗಳೂರು ವಾಸ ಬೇಸರವನ್ನುಂಟುಮಾಡುತ್ತಿತ್ತು. ಬೆಳಿಗ್ಗೆಯಿಂದ ಸಂಜೆಯವರೆಗೂ 'ಹಿಂದೂ' ಪತ್ರಿಕೆ ಓದುವುದು, ಆಯಾಸವಾದಾಗ ಹೋಗಿ ಮಲಗುವುದು ಎರಡೇ ಅವನ ವಿಧಾಯಕ ಕಾರ್ಯಕ್ರಮಗಳಾದವು. ಪುರಸತ್ತು ಸಿಕ್ಕಾಗಲೆಲ್ಲಾ ಗೋದಮ್ಮ ಯಾವುದಾದರೂ ಮಾತು ತೆಗೆದು ಮಗನೊಂದಿಗೆ ಸ್ವಲ್ಪ ಹೊತ್ತು ಕಳೆಯುತ್ತಿದ್ದರು.

ಆಟಗೂಳಿಯಾದ ಗೋಪಾಲಿ ತಾತನ ಬಳಿ ಸುಳಿಯುತ್ತಿರಲಿಲ್ಲ. ಸೌಭಾಗ್ಯ ಆಗಾಗ್ಗೆ ತಾತನ ಬಳಿ ಕುಳಿತು ತನ್ನ ಶಾಲೆ – ಗೆಳತಿಯರು– ಆಟಪಾಟಗಳನ್ನು ವರ್ಣಿಸುತ್ತಿದ್ದಳು.

ಯಾರಿದ್ದರೇನು ? – ಯಾರು ಮಾತನಾಡಿಸಿದರೇನು – ಯಾರು ಸಮಾಧಾನ ಹೇಳಿದರೇನು ?

ರುಕ್ಮಿಣಿ ಇಲ್ಲ !

ರುಕ್ಮಿಣಿ ಕಣ್ಮರೆಯಾದುದರ ಆವೇಗ – ಆಳವಂತ್ಯವರಿಯದ ದುಃಖ ದಿನಗಳೆದಂತೆ ಉಲ್ಬಣಿಸುತ್ತ ಬಂದಿತು.

ಈ ದುಃಖಕ್ಕೆ ಪೋಷಕವಾಗಿ ಕಮಲನ ಆಶ್ರಯದಲ್ಲಿ, ಅವಳ ದುಡಿಮೆಯಿಂದ ಬರುತ್ತಿದ್ದ ನಾಲ್ಕು ಕಾಸಿನಲ್ಲಿ ಬಾಳಬೇಕಲ್ಲ ಎನ್ನುವ ವ್ಯಾಕುಲ !

ಮಗನ ಮನಸ್ಸಿನಲ್ಲಿ ನಡೆಯುತ್ತಿದ್ದ ಮಹಾಯುದ್ಧವನ್ನು ಗೋದಮ್ಮ ಚೆನ್ನಾಗಿ ಬಲ್ಲರು. ಆದರೆ ಅದಕ್ಕೆ ಪರಿಹಾರ ಒದಗಿಸುವುದು ತಮ್ಮ ಕೈಮೀರಿದ ಕೆಲಸವೆಂಬ ತಿಳಿವು ಅವರನ್ನು ಅತೀವ ದುಃಖ

ಕ್ಕೀಡುಮಾಡುತ್ತಿತ್ತು.

'ನಾವು ಮಂಡ್ಯ ಬಿಟ್ಟು ಬರಬಾರದಾಗಿತ್ತು. ಗೌಡರು, ಷರೀಫ ಸಾಹೇಬರ ಸಹವಾಸದಿಂದ ಮಾಧೂ ಸ್ವಲ್ಪ ಶಾಂತನಾಗಿರುತ್ತಿದ್ದ.

'ಕಮಲನ ಮಾತಿಗೆ ಕಿವಿಗೊಟ್ಟುದು ತಪ್ಪಾಯಿತೇ ?

'ಈಗಲೂ ಮಂಡ್ಯಕ್ಕೆ ಹೋಗಬಹುದು – ಹೋಗಿ ಏನು ಮಾಡುವುದು. – ಅಲ್ಲಿ ನಿಂತರೆ ದುಃಖ ಮತ್ತಷ್ಟು ಹೆಚ್ಚುತ್ತದೆ. ಮಂಡ್ಯದ ಪ್ರತಿಯೊಂದು ಸ್ಥಳದಲ್ಲಿಯೂ ರುಕ್ಮಿಣಿ ತುಂಬಿದ್ದಾಳೆ. ಅವಳ ಜೀವಚೇತನ ಅಲ್ಲಿನ ಗಿಡಮರಬಳ್ಳಿಗಳಲ್ಲಿಯೂ ಮಿಡಿಯುತ್ತಿದೆ.

'ಮಾಧೂ ಬದುಕಬೇಕಾಗಿದ್ದರೆ ರುಕ್ಮಿಣಿಯನ್ನು ಮರೆಯಬೇಕು.

'ರುಕ್ಮಿಣಿಯನ್ನು ಮರೆತು ಮಾಧೂ ಬದುಕಬಲ್ಲನೇ ?

'ರುಕ್ಮಿಣಿಯನ್ನು ಯಾರು ಮರೆಯಲು ಸಾಧ್ಯ – ಮರೆತು ಯಾರು ಬದುಕಲು ಸಾಧ್ಯ'

ಎಂದು ಒಂದೇ ಸಮನೆ ಯೋಚಿಸುವರು.

ಒಂದು ದಿನ ತನ್ನನ್ನು ಹುಡುಕಿಕೊಂಡು ಬಂದ ಕೇಶವಮೂರ್ತಿಯನ್ನು ಕಂಡು ಮಾಧವರಾಯನಿಗೆ ಆಶ್ಚರ್ಯವಾಯಿತು.

"ಬಾ ಕೇಶವಮೂರ್ತಿ – ಎಷ್ಟು ದಿವಸಗಳಾಯಿತಪ್ಪಾ ನಿನ್ನನ್ನು ನೋಡಿ – ಮನೆಯಲ್ಲಿ ಎಲ್ಲರೂ ಕ್ಷೇಮವೇ ?"

ಕೇಶವಮೂರ್ತಿ ತುಸುಮುನಿಸಿನಿಂದಲೇ

"ಒಳ್ಳೆಯ ಗೃಹಸ್ಥನಯ್ಯ ನೀನು – ಬೆಂಗಳೂರಿಗೆ ಬಂದು ತಿಂಗಳು ಗಟ್ಟಳೆಯಾದರೂ ಮನೆಯ ಹತ್ತಿರ ಸುಳಿಯಬೇಡವೇ. ನೀನು ಬಂದಿರುವ ಸುದ್ದಿ ತಿಳಿಸಿದ್ದರೆ ನಾನೇ ಬರುತ್ತಿದ್ದೆ."

"ಯಾವ ಮುಖವೆತ್ತಿಕೊಂಡು ಬರಲಿ ಕೇಶವಮೂರ್ತಿ-"

"ಏಕೆ ? ನೀನೇನು ಮಾಡಬಾರದ್ದು ಮಾಡಿರುವುದು ?"

"ನಮ್ಮ ಮನೆ ವಿಷಯ ತಿಳಿಯಲಿಲ್ಲವೇ ?"

"ತಿಳಿಯಿತು – ಹುಟ್ಟು ಸಾವು ಯಾರಧೀನ ಮಾಧೂ."

"ರುಕ್ಮಿಣಿ ಕಣ್ಮುಚ್ಚಿದ ಮೇಲೂ ನಾನು ಬದುಕಿದ್ದೇನೆ ಕೇಶವ ಮೂರ್ತಿ."

"ಎಲ್ಲಾ ತಿಳಿದ ನೀನೇ ಹೀಗೇ ಮಾತನಾಡುವುದೇ ?"

"ಇನ್ನೊಬ್ಬರ ದುಃಖಕ್ಕೆ ಸಮಾಧಾನ ಹೇಳುವುದು ಸುಲಭ ಕೇಶವಮೂರ್ತಿ – ನಮಗೇ ದುಃಖ ಒದಗಿದರೆ ಅನುಭವಿಸುವುದು ಕಷ್ಟ."

"ನಾನೂ ದುಃಖಿ ಮಾಧೂ ತಂದೆ ತೀರಿಕೊಂಡ ಸಂಗತಿ ನಿನಗೆ ಗೊತ್ತಿರಬಹುದು."

"ಇಲ್ಲ – ಏನಾಗಿತ್ತು ?"

"ವೃದ್ಧಾಪ್ಯ ಜಲೋದರವಾಗಿ ಕೊನೆಗಾಲದಲ್ಲಿ ಬಹಳ ಕಷ್ಟಪಟ್ಟರು."

ಮಾಧವರಾಯರು ನಿಟ್ಟುಸಿರುಬಿಟ್ಟು

"ಹಿರಿಯರೆಲ್ಲಾ ಒಬ್ಬೊಬ್ಬರಾಗಿ ಕೈಬಿಟ್ಟು ಹೋಗುತ್ತಿದ್ದಾರೆ ಕೇಶವಮೂರ್ತಿ. ನಾನು ವಿದ್ಯೆ ಕಲಿತು, ಬೆಳೆದು, ಒಬ್ಬ ಮನುಷ್ಯ ನಾದುದು ನಿಮ್ಮ ತಂದೆ ರಾಮರಾಯರ ಆಶೀರ್ವಾದದಿಂದ ಅವರು ನನಗೆ ಮಾಡಿರುವ ಉಪಕಾರ ಏಳೇಳು ಜನ್ಮಕ್ಕೆ ತೀರಿಸಲಾರೆ."

"ಅವರ ಋಣ ನೀನೆಂದೋ ತಿರಿಸಿಬಿಟ್ಟಿರುವೆ ಮಾಧೂ. ಇಂದು ನೂರಾರು ಜನ ನಿನ್ನ ಹೆಸರು ಹೇಳಿಕೊಂಡು ನಿನ್ನ ಕೈಹಿಡಿದ ಮಹಾ ಲಕ್ಷ್ಮಿಯ ಹೆಸರು ಹೇಳಿಕೊಂಡು ಬದುಕುತ್ತಿದ್ದಾರೆ. ಈ ದೇಶವೇ ಸತಿಪತಿಯರು ನಿಮ್ಮಿಬ್ಬರ ಉಪಕಾರ ಮರೆಯಲು ಸಾಧ್ಯವಿಲ್ಲ."

"ನಿನ್ನ ಪ್ರ್ಯಾಕ್ಟೀಸ್ ಹೇಗಿದೆ?"

"ತಂದೆಯವರ ಕಾಲದಲ್ಲಿದ್ದಷ್ಟು ಚೆನ್ನಾಗಿಲ್ಲ. ಕೋಮುವಾರು ಭೂತ ಸಾಕಷ್ಟು ಹಾವಳಿ ಮಾಡಿದೆ ತಲೆಮಾರುಗಳಿಂದ ನಮ್ಮ ಆಫೀಸಿಗೆ ಬರುತ್ತಿದ್ದ ನಮ್ಮ ಕಕ್ಷಿಗಾರರು ಈಗ ಸ್ವಜಾತೀಯ ಲಾಯರು ಗಳನ್ನು ಹುಡುಕಿಕೊಳ್ಳುತ್ತಿದ್ದಾರೆ. ಈಗ ಬೆಂಗಳೂರಲ್ಲಿ ಹಾದಿಗೊಬ್ಬ ಲಾಯರು, ಬೀದಿಗೊಬ್ಬ ಲಾಯರು. ಅಸಹ್ಯ ಸ್ಪರ್ಧೆ – ಛೇಂಬರ್ ಪ್ರ್ಯಾಕ್ಟೀಸಿನ ಪ್ರಭಾವ ಎಲ್ಲಾ ಸೇರಿಕೊಂಡಿದೆಯಪ್ಪ ಹಾಗೂ ಹೀಗೂ ಹೊಟ್ಟೆ ಬಟ್ಟೆ ಕಳೆಯುತ್ತಿದೆ. ಇದೇ ಉತ್ತಮಕಾಲವೆನ್ನಬೇಕು. ಮುಂದೆ ಇಷ್ಟೂ ನಡೆಯುತ್ತದೆಯೋ ಇಲ್ಲವೋ ಅನುಮಾನ."

"ಹಾಗಾದರೆ ನಾನು ಪ್ರ್ಯಾಕ್ಟೀಸ್ ಬಿಟ್ಟದ್ದೇ ಒಳ್ಳೆಯದಾಯಿತು

ಅನ್ನು."

"ಪ್ರ್ಯಾಕ್ಟೀಸ್ ಬಿಟ್ಟುಬಿಟ್ಟೆಯಾ ?"

"ದೇಹವೂ ದುರ್ಬಲವಾಯಿತು. ಕೋರ್ಟಿಗೆ ಹೋಗುವುದಕ್ಕೆ ಕೈಯಲ್ಲಿಯೂ ಆಗುವುದಿಲ್ಲ."

"ಕನ್‌ಸಲ್ಟೇಷನ್ (consultation) ಆದರೂ ಇಟ್ಟುಕೊಳ್ಳ ಬೇಕಾಗಿತ್ತು."

"ಯಾವದಕ್ಕೂ ಮನಸ್ಸಿಲ್ಲ ಕೇಶವಮೂರ್ತಿ ಎಲ್ಲರೂ ಮೃತ್ಯು ವನ್ನು ಜಯಿಸುವ ಜಪಮಾಡಿದರೆ ನಾನು ಮೃತ್ಯುವನ್ನು ಸ್ವಾಗತಿಸುವ ಜಪ ಮಾಡುತ್ತಿದ್ದೇನೆ."

ಕೇಶವಮೂರ್ತಿ ಮುಖಗಂಟುಹಾಕಿಕೊಂಡು

"ಲೋಕದಲ್ಲಿರುವವರೆಗೆ ನಮ್ಮ ಕರ್ತವ್ಯ ಮರೆಯುವುದಕ್ಕಾಗು ತ್ತದೆಯೇ ? ಈಸಬೇಕು, ಇದ್ದು ಜೈಸಬೇಕು" ಎಂದ.

ತಾನು ಬೆಂಗಳೂರಿಗೆ ಬಂದು ನೆಲಸಿರುವ ಸುದ್ದಿ ಕೇಶವ ಮೂರ್ತಿಯವರಿಗೆ ಹೇಗೆ ಮುಟ್ಟಿತೆಂಬುದನ್ನು ತಿಳಿಯಲು ಆಸಕ್ತನಾದ ಮಾಧವರಾಯ

"ನಾನಿಲ್ಲಿರುವುದು ನಿನಗೆ ಹೇಗೆ ಗೊತ್ತಾಯಿತು ಕೇಶವ" ಎಂದು ಕೇಳಿದ.

"ಗೋದಜ್ಜಿ ನಮ್ಮ ಮನೆಗೆ ಬಂದಿದ್ದರು - ಅವರೇ ಎಲ್ಲಾ ಹೇಳಿದರು."

"ಓಹೋ ! ಸರಿಸರಿ !"

"ಮನೆಯಲ್ಲಿಯೇ ಕುಳಿತುಕೊಂಡೇನು ಮಾಡುತ್ತೀ ಮಾಧೂ."

"ಮೊದಲಿನಿಂದ ಕೊನೆಯವರೆಗೆ 'ಹಿಂದೂ' ಪತ್ರಿಕೆ ಓದುತ್ತೇನೆ. ಆಗಾಗ್ಗೆ ರಾಮಾಯಣ, ಭಾರತ ಪುಟ ತಿರುವಿಹಾಕುವುದೂ ಉಂಟು."

"ನನ್ನ ಆಫೀಸಿಗಾದರೂ ಬಂದು ಕೂಡಬಾರದೇ ? ನಿನಗೂ ಹೊತ್ತು ಹೋಗುತ್ತದೆ – ನನಗೂ ಜತೆಯಾಗುತ್ತದೆ."

"ನಿನ್ನ ಕೆಲಸಕ್ಕೆ ವಿಘ್ನವಷ್ಟೆ !"

"ಇಲ್ಲಯ್ಯಾ – ನಿನ್ನ ಕೈಯಲ್ಲಿ ಸ್ವಲ್ಪ ಬಿಟ್ಟಿ ಚಾಕರಿ ಮಾಡಿಸು

ತ್ತೀನೆ ”

“ಆಗಲಿ – ಯಾವಾಗಲಾದರೂ ಬರುತ್ತೇನೆ.”

“ಹಾಗಂದರಾಗದು. ದಿನವೂ ಕ್ರಮವಾಗಿ ಬರಬೇಕು.”

“ಅಮ್ಮ ನೀನೂ ನನ್ನ ಮೇಲೆ ಪಿತೂರಿ ಮಾಡಿರುವ ಹಾಗಿದೆ.”

“ಹೂ – ಸ್ವಲ್ಪ ಹಾಗೇನ್ನು – ಇನ್ನೊಂದು ವಿಷಯ ನಿನ್ನ ಕೇಳುವುದನ್ನೇ ಮರೆತೆ – ನಾಣಿ ವಿಲಾಯಿತಿಗೆ ಪ್ರಯಾಣಮಾಡಿದ ನಂತೆ.”

“ಹೌದು – ನಿನಗೆ ಹೇಗೆ ಗೊತ್ತಾಯಿತು ?’

“ಪತ್ರಿಕೆಗಳಲ್ಲಿ ಸುದ್ದಿ ಬಂದಿತ್ತು. ‘ಇಲ್ಲಸ್ಟ್ರೇಟೆಡ್ ವೀಕ್ಲಿ’ಯಲ್ಲಿ ಅವನ ಛಾಯಾಚಿತ್ರ ಪ್ರಕಟವಾಗಿತ್ತು. ನಾಣಿಗೆ ಮದುವೆಯಾದ ವಿಷಯ ನನಗೆ ಗೊತ್ತೇ ಇರಲಿಲ್ಲ. ಹೆಣ್ಣು ಯಾರು ?”

“ಯಾರೋ ಗುಜರಾತಿಯಂತೆ – ಮುಂಬಯಿಯ ಶ್ರೀಮಂತ ನೊಬ್ಬನ ಮಗಳಂತೆ !”

“ನಿನಗೆ ತಿಳಿಸದೆಯೇ ಅವನು ಮದುವೆ ಮಾಡಿಕೊಂಡನೇ ?”

“ನನಗೆ ತಿಳಿಸಬೇಕಾದ ಅಗತ್ಯವೇನಿತ್ತಪ್ಪಾ–ನಾನು ಯಾರು ?”

“ನಾಣಿ ಸ್ವಭಾವತಃ ಉದ್ಧಟನಲ್ಲ.”

“ನಿನ್ನ ನನ್ನ ಕಾಲ ಬೇರೆ – ಈಗಿನ ಸ್ಥಿತಿಗತಿ ಬೇರೆ ಕೇಶವ. ನಮಗೆ ತಂದೆತಾಯಿಯ ಎದುರು ನಿಂತು ಮಾತನಾಡುವ ಧೈರ್ಯ ವಾಗುತ್ತಿರಲಿಲ್ಲ.”

“ಹೋಗಲಿ – ನಾಣಿ ಸುಖವಾಗಿದ್ದಾನಷ್ಟೆ !”

“ಇರಬಹುದು.”

“ಮನೆಗೆ ಯಾವಾಗ ಬರುತ್ತೀ ?”

“ನಾಳೆ – ನಾಡಿದ್ದು ಬರುತ್ತೇನೆ.”

ಎಂದು ಮಾಧವರಾಯ ಹೇಳಿದ. ಈ ಮಾತು ಬೆಳಸಿ ಒತ್ತಾಯ ಮಾಡಲು ಕೇಶವಮೂರ್ತಿ ಇಷ್ಟಪಡಲಿಲ್ಲ.

## ೬

ಸೇಠ್ ಮಂಗಳದಾಸ್ ಪಾರೀಖರ ವ್ಯಾಪಾರ ಕೇವಲ ಮುಂಬಯಿಗೇ ಅಡಕವಾಗಿರಲಿಲ್ಲ. ಅವರ 'ಇಂಡೋ-ಫಾರಿನ್ ಇಮ್‌ಪೋರ್ಟರ್ಸ್, ಎಕ್ಸ್‌ಪೋರ್ಟರ್ಸ್ (Indo-Foreign Imports, Exports)ಕಂಪೆನಿಯ ಶಾಖೆಯೊಂದು ಲಂಡನ್ನಿನಲ್ಲಿ ಬೆಲ್‌ವಡೇರ್ ಟೆರೇಸ್ (Belvadere Terrace) ಮೇಲಿತ್ತು. ಮಂಗಳದಾಸರ ಪ್ರತಿನಿಧಿಯಾಗಿ ಕಲ್ಯಾಣ್‌ಜೀ ಅಲ್ಲಿ ವ್ಯವಹಾರ ನಡೆಸುತ್ತಿದ್ದ

ಬೆಲ್‌ವಡೇರ್ ಟೆರೇಸಿನ ಒಂದು ಭಾಗ ಕಲ್ಯಾಣ್‌ಜೀಯ ಕಛೇರಿಯಾಗಿತ್ತು. ಇನ್ನೊಂದು ಭಾಗದಲ್ಲಿ ಅವನೇ ವಾಸಿಸುತ್ತಿದ್ದ. ಉಳಿದಿದ್ದ ನಾಲ್ಕು ಕೋಣೆಗಳು ಅತಿಥಿ ಅಭ್ಯಾಗತರಿಗೆ ಮೀಸಲಾಗಿದ್ದವು.

ಮಂಗಳದಾಸರ ಮಗಳು, ಅಳಿಯ ಬರುವ ಸುದ್ದಿ ಲಾಂಗ್ ಡಿಸ್ಟೆನ್ಸ್ ಕಾಲ್(Long Distance Call)ಮೂಲಕ ಬಂದೊಡನೆಯೇ ಕಲ್ಯಾಣ್‌ಜಿ ಅತಿಥಿಮಂದಿರವನ್ನು ಸಜ್ಜುಗೊಳಿಸಿ ಬಾಗಿಲು, ಕಿಟಕಿಗಳ ತೆರೆಗಳನ್ನು ಬದಲಾಯಿಸಿ ಅಚ್ಚುಕಟ್ಟುಮಾಡಿದ.

ನಿಲ್ದಾಣದಲ್ಲಿಳಿದ ಇಂದುಮತಿ, ನಾರಾಯಣಸ್ವಾಮಿಯನ್ನು ಗುರುತಿಸಿ ಕಲ್ಯಾಣ್‌ಜೀ ಮಾತನಾಡಿಸಿದ. ಇಂದುಮತಿ ಅವನಿಗೂ ಅವನ ಹೆಂಡತಿ ಮೃದುಲಾಬಾಯಿಗೂ ನಾರಾಯಣಸ್ವಾಮಿಯ ಪರಿಚಯಮಾಡಿಕೊಟ್ಟಳು.

ಲಂಡನ್ ಪಟ್ಟಣದ ಜನಜಂಗುಳಿ ಕಂಡು ನಾರಾಯಣಸ್ವಾಮಿಗೆ ಕಕ್ಕಾಬಿಕ್ಕಿಯಾಯಿತು. ಇರುವೆ ಸಾಲಿನಂತೆ ನಡೆಯುತ್ತಿದ್ದ ಜನ, ವಾಹನಗಳು ಅವನನ್ನು ದಿಙ್ಮೂಢನನ್ನಾಗಿ ಮಾಡಿದವು.

ಇಂದುಮತಿ, ಮೃದುಲಾ ಪೂರ್ವಪರಿಚಿತರಾಗಿದ್ದುದರಿಂದ ಅವರಲ್ಲಿ ಯಾವ ಸಂಕೋಚವೂ ಉಳಿದಿರಲಿಲ್ಲ

ಎಲ್ಲರೂ ಮನೆಗೆ ಬಂದು ಕುಳಿತ ಮೇಲೆ ಮೃದುಲಾ ಚಹಾ ಮಾಡಿ ತಂದುಕೊಟ್ಟಳು ನಾರಾಯಣಸ್ವಾಮಿಯ ಹೊಸತನ ಮಾಣಿಸಲು ಕಲ್ಯಾಣ್‌ಜೀ

"ಇದು ವಿಲಾಯಿತಿಗೆ ನಿಮ್ಮ ಪ್ರಥಮಯಾತ್ರೆಯಲ್ಲವೇ ?" ಎಂದು ಕೇಳಿದ

"ಹೌದು "

"ಲಂಡನ್ನಿನ ಬಗ್ಗೆ ನಿಮ್ಮ ಪ್ರಥಮ ಭಾವನೆಯೇನು ?"

"ಈ ಜನ ಇವರ ದೇಶ ನೋಡದೆಯೇ ಇವರ ಬಗ್ಗೆ ನನಗೆ ಗೌರವವಿತ್ತು - ಈಗ ಗೌರವವಿಮ್ಮಡಿಸಿತು ಕಳೆದ ಮಹಾಯುದ್ಧದ ಗುರುತುಗಳು ಇನ್ನೂ ಕಾಣಿಸುತ್ತಿವೆ. ಬಾಂಬಿನ ಹೊಡೆತಕ್ಕೆ ಸಿಕ್ಕಿ ಮುರಿದುಬಿದ್ದಿರುವ ಮನೆಗಳು ದಾರಿಯುದ್ದಕ್ಕೂ ಕಂಡುಬಂದಿತು. ಇಷ್ಟೊಂದು ಆಘಾತ ಅನುಭವಿಸಿಯೂ ಈ ಜನ ಚೇತರಿಸಿಕೊಂಡು ತಲೆಯೆತ್ತಿ ನಿಂತಿರುವುದು ಆಶ್ಚರ್ಯಕರವಾಗಿದೆ "

"ಇಂಗ್ಲೀಷಿನವರ ಸ್ವಭಾವದಲ್ಲಿಯೇ ಈ ಗುಣ ಬೆರೆತಿದೆ ಮಿ. ಸ್ವಾಮಿ. ಈ ಜನ ಸ್ವಭಾವತಃ ಬಹು ನಿಧಾನಿಗಳು. ಹೊಸ ಭಾವನೆ, ವಿಚಾರಗಳಿಗೆ ಇವರು ಕೂಡಲೆ ಮುಗಿಬೀಳುವುದಿಲ್ಲ. ಆದರೆ ಒಂದು ತತ್ತ್ವ ಇವರ ಮನಸ್ಸಿಗಂಟಿದರೆ, ಅದನ್ನೇ ಬಲವಾಗಿ ನಂಬಿಕೊಳ್ಳುತ್ತಾರೆ. ಅವರ ನಂಬಿಕೆಯನ್ನು ಅಲುಗಾಡಿಸಲು ಯಾರಿಗೂ ಸಾಧ್ಯವಾಗುವುದಿಲ್ಲ. ನಮ್ಮಲ್ಲಿ ವ್ಯಕ್ತಿಧರ್ಮ ಬೆಳೆದಿರುವಂತೆ ಇವರಲ್ಲಿ ರಾಷ್ಟ್ರಧರ್ಮ ಬೆಳೆದಿದೆ. ಯುದ್ಧಕಾಲದಲ್ಲಿ ರೆಷನಿಂಗ್ ಜಾರಿಗೆ ಬಂದಾಗ ಕ್ಯಾಬಿನೆಟ್ ಮಂತ್ರಿಗಳಾದ ಸರ್ ಸ್ಟ್ಯಾಫರ್ಡ್ ಕ್ರಿಪ್ಸ್ ಕ್ಯೂನಲ್ಲಿ ನಿಂತು ತಮ್ಮ ಪಡಿತರ ತೆಗೆದುಕೊಂಡು ಹೋಗುತ್ತಿದ್ದರೆಂದ ಮೇಲೆ ಈ ಜನರ ರಾಷ್ಟ್ರನೀತಿಗೆ ಬೇರೆ ನಿದರ್ಶನ ಬೇಕೇ ?"

"ಕನ್‌ಸರ್‌ವೆಟಿವ್, ಲಿಬರಲ್, ಲೇಬರ್ ಎಂದು ಇವರೂ ಬಡಿದಾಡುತ್ತಾರಲ್ಲಾ ಕಲ್ಯಾಣಜೀ !"

"ಹೌದು – ಬಡಿದಾಡುತ್ತಾರೆ. ಅದು ಮನೆಯ ಜಗಳ. ವಿದೇಶಾಂಗ ನೀತಿಯ ಬಗ್ಗೆ ಎಲ್ಲ ರಾಜಕೀಯ ಪಕ್ಷಗಳ ಧೋರಣೆಯೂ ಒಂದೇ ಆಗಿರುತ್ತವೆ. ರಾಷ್ಟ್ರಕ್ಕೆ ಕುತ್ತು ಬಂದರೆ ಎಲ್ಲ ಪಕ್ಷಗಳೂ ತಮ್ಮ ತಮ್ಮ ಭಿನ್ನಾಭಿಪ್ರಾಯಗಳನ್ನು ಮರೆತು ಒಂದುಗೂಡುತ್ತಾರೆ ಆಲ್ ಫಾರ್ ಒನ್, ಒನ್ ಫಾರ್ ಆಲ್(All for one, one for all)ಎಂಬ ನೀತಿಯ ಬಗ್ಗೆ ಇಂಗ್ಲೀಷಿನವರಿಗೆ ತುಂಬ ಆದರ."

"ಇಂಗ್ಲೀಷಿನವರು ಎರಡು ಶತಮಾನ ನಮ್ಮ ದೇಶದಲ್ಲಿ ರಾಜ್ಯಭಾರ ಮಾಡಿದರೂ, ಈ ಸದ್ಗುಣಗಳನ್ನು ನಮ್ಮ ಜನರಿಗೆ ಕಲಿಸಿಕೊಡಲಿಲ್ಲ."

"ಕಲಿಯದಿದ್ದುದು ನಮ್ಮ ತಪ್ಪು."

"ನನಗೆ ಏನು ವ್ಯವಸ್ಥೆ ಮಾಡಿರುವಿರಿ ಕಲ್ಯಾಣ್‌ಜೀ ?"

"ನಮ್ಮ ಮನೆಯಲ್ಲಿ ಊಟೋಪಚಾರಗಳು ನಡೆಯುತ್ತವೆ."

"ಸದ್ಯಕ್ಕಾಗಲಿ – ಆದರೆ ಮುಂದಕ್ಕೆ ಬೇರೆ ವ್ಯವಸ್ಥೆ ಮಾಡಿಕೊಳ್ಳಬೇಕಾಗುತ್ತದೆ. ನಿಮ್ಮ ಶ್ರೀಮತಿಯವರಿಗೆ ಹಿಂಸೆಕೊಡಲು ನಾನು ಒಪ್ಪುವುದಿಲ್ಲ."

"ಹಿಂಸೆಯೇನು ಬಂತು ಮಿ. ಸ್ವಾಮಿ. ನಾನು ಉಣ್ಣುತ್ತಿರುವುದೇ ಮಂಗಳದಾಸರ ಅನ್ನ. ಅವರ ಅಳಿಯ, ಮಗಳ ಸೇವೆ ಮಾಡುವ ಅವಕಾಶ ಸಿಕ್ಕಿರುವುದು ನನ್ನ ಭಾಗ್ಯವೆಂದು ಭಾವಿಸುತ್ತೇನೆ. – ನಾನೊಂದು ಮುಖ್ಯ ವಿಷಯ ಪ್ರಸ್ತಾಪಿಸಬೇಕಾಗಿದೆ."

"ಹೇಳಿ – ಸಂಕೋಚವೇಕೆ ?"

"ಸೇಠ್‌ಜೀ ಆ ವಿಷಯ ನಿಮಗೆ ಈಗಾಗಲೇ ತಿಳಿಸಿರಬಹುದು."

"ಯಾವ ವಿಷಯ ?"

"ನೀವು ಫರ್ಮಿನ (firm) ವ್ಯವಹಾರ ತಿಳಿದುಕೊಳ್ಳಬೇಕೆಂದು ಸೇಠ್‌ಜೀಯವರ ಇಚ್ಛೆಯಾಗಿದೆ."

"ಏಕೆ ?"

"ಲಂಡನ್ ಕಛೇರಿಯ ಸೂತ್ರಗಳನ್ನು ನೀವೇ ವಹಿಸಿಕೊಳ್ಳಬೇಕೆಂದೂ, ನಾನು ಸ್ಟೇಟ್ಸಿಗೆ ಹೋಗಿ ನ್ಯೂಯಾರ್ಕಿನಲ್ಲಿ ಕಛೇರಿ

ತೆಗೆಯಬೇಕೆಂದೂ ಅವರ ವಿಚಾರ."

"ನಾನೊಬ್ಬ ಲೇಖಕ – ಸಾಹಿತಿ – ನನಗೂ ಆಮದು ರಫ್ತಿನ ವ್ಯಾಪಾರಕ್ಕೂ ಹೇಗೆ ಕೂಡಬೇಕು "

"ನಾಲ್ಕು ದಿವಸ ತಾವು ವಿಶ್ರಾಂತಿ ತೆಗೆದುಕೊಳ್ಳಿ. ಲಂಡನ್ನಿನ ಪ್ರೇಕ್ಷಣೀಯ ನೋಟಗಳನ್ನು ನೋಡಿ ಬನ್ನಿ, ಸಾವಕಾಶವಾಗಿ ಈ ವಿಷಯ ಆಲೋಚಿಸೋಣ "

"ನೀವು ನನಗೊಂದು ಉಪಕಾರಮಾಡಬೇಕು."

"ತಾವು ಆಜ್ಞೆ ಮಾಡಿವರ ಸಾಕು."

"ಇಲ್ಲಿನ ವಿವಿಧ ಜ್ಞಾನರಂಗಗಳಲ್ಲಿ ಕೆಲಸಮಾಡುತ್ತಿರುವ ಹಿರಿಯರ ಪರಿಚಯ ನನಗೆ ಮಾಡಿಸಿಕೊಡಬೇಕು ಸೋಷಿಯಾಲಿಜಿ (Sociology – ಸಮಾಜ ವಿಜ್ಞಾನ) ನನ್ನ ಪ್ರೀತಿಯ ವಿಷಯ. ಅದರಲ್ಲಿ ನಿಷ್ಣಾತರಾದ ಪಂಡಿತರ ಪರಿಚಯ ಮಾಡಿಕೊಳ್ಳಲು ನಾನು ಉತ್ಸುಕನಾಗಿದ್ದೇನೆ "

"ನಾನು ಕೇವಲ ವ್ಯಾಪಾರಿ ನಿಮಗೆ ಬೇಕಾದವರ ಪರಿಚಯ ನನಗಿಲ್ಲ – ಪ್ರಯತ್ನಿಸಿ ನೋಡುತ್ತೇನೆ. ನಿಮ್ಮನ್ನಿಲ್ಲಿಗೆ ಸ್ವಾಗತಿಸಲು ಒಂದು ಪಾರ್ಟಿ ವ್ಯವಸ್ಥೆ ಮಾಡಿ, ಹಲವರ ಪರಿಚಯ ಮಾಡಿಕೊಡಲು ನಿಶ್ಚಯಿಸಿದ್ದೇನೆ. ಆಗಬಹುದಷ್ಟೆ "

"ಆಗಬಹುದು ಆದರೆ ವ್ಯಾಪಾರಿಗಳಿಗೂ ನನಗೂ ಯಾ ಮೈತ್ರಿ ?"

"ಬೆಳಸಿಕೊಳ್ಳಬೇಕು ಅವರ ಮುಖಾಂತರ ನಿಮಗೆ ಬೇಕಾ ದವರ ಪರಿಚಯವಾಗಬಹುದು "

"ಅದೂ ಒಳ್ಳೆಯ ಯೋಚನೆಯೇ"

ಎಂದು ನಾರಾಯಣಸ್ವಾಮಿ ಸಮ್ಮತಿ ವ್ಯಕ್ತ ಮಾಡಿದ.

ನಾಲ್ಕಾರು ದಿನ ಇಂದುಮತಿಗೂ ಸ್ವಲ್ಪವೂ ಬಿಡುವಿಲ್ಲವಾಯಿತು. ಮೃದುಲಾ ಎರಡು ವರ್ಷ ಲಂಡನ್ನಿನಲ್ಲಿ ಕಳೆದಿದ್ದಳು. ಅವಳಿಗೆ ಲಂಡನ್ ನಗರದ ಪರಿಚಯ ಚೆನ್ನಾಗಿದ್ದುದು ಇಂದುಮತಿಗೆ ಬಹಳ ಸಹಾಯ ವಾಯಿತು.

ಇಂದುಮತಿ, ಮೃದುಲಾ ಇವರ ಷಾಪಿಂಗ್ (shopping) ನಿತ್ಯ ವಿಧಿಯಾಯಿತು. ಒಂದು ದಿನ ಅವರ ಜತೆಹೋಗಿ ಅಂಗಡಿ ಅಂಗಡಿ ಅಲೆದು ಬಂದ ನಾರಾಯಣಸ್ವಾಮಿ

"ಇನ್ನುಮೇಲೆ ನಿಮ್ಮ ಷಾಪಿಂಗ್ ನೀವೇ ಮಾಡಿಕೊಳ್ಳಿ – ನಾನು ಬರುವುದಿಲ್ಲ." ಎಂದು ಸ್ಪಷ್ಟವಾಗಿ ಹೇಳಿದ

ಇಂದುಮತಿ ಕಂಡದ್ದನ್ನು ಕೊಳ್ಳುತ್ತಿದ್ದಳು. ಫರ್‌ಕೋಟುಗಳು, ಷೂಗಳು, ಬಾಡಿಸ್‌ಗಳು, ಸಿಲ್ಕ್ ಲಿಂಗರಿಗಳು ರಾಶಿರಾಶಿಯಾಗಿ ಮನೆಯಲ್ಲಿ ಬಂದು ಬಿದ್ದವು. ಅವುಗಳಿಗೆ ಇಂದುಮತಿ ಸುರಿದಿದ್ದ ಅಪಾರ ಹಣವನ್ನು ಲೆಕ್ಕಹಾಕುತ್ತಾ ನಾರಾಯಣಸ್ವಾಮಿ ಸಿಟ್ಟುಸಿರುಬಿಡುತ್ತಿದ್ದ.

ಇಲ್ಲಿ – ಲಂಡನ್ನಿನಲ್ಲಿ – ಇಂದುಮತಿ ಅನವಶ್ಯಕ ಪದಾರ್ಥಗಳನ್ನು ಕೊಳ್ಳಲು ಹೊನ್ನಿನ ಹೊಳೆ ಹರಿಸುತ್ತಿದ್ದಳು.

ಅಲ್ಲಿ – ಬೆಂಗಳೂರಿನಲ್ಲಿ – ಕಮಲ ಅವಶ್ಯಕ ಪದಾರ್ಥಗಳನ್ನು ಕೊಳ್ಳಲು ಕಣ್ಣು ಕಣ್ಣು ಬಿಡುತ್ತಿದ್ದಳು.

—ಅಪ್ಪ ಗಳಿಸಿದ್ದ ಹಣವನ್ನು ಇಂದುಮತಿ ಧಾರಾಳವಾಗಿ ಖರ್ಚು ಮಾಡುತ್ತಿದ್ದಳು.

ತಾನು ಗಳಿಸುತ್ತಿದ್ದ ಹಣದಿಂದ ಕಮಲಾ ಅಪ್ಪನನ್ನು ಸಾಕುತ್ತಿದ್ದಳು.

ಇದು ಲಂಡನ್ !

'ಅದು ಭಾರತ !

ಇಲ್ಲಿ ಹಣಕ್ಕೆ ಬೆಲೆಯಿಲ್ಲ !

ಅಲ್ಲಿ ಕುರುಡು ಕವಡೆಗೂ ಮಹೋನ್ನತ ಬೆಲೆ !

ಎರಡು ಚಿತ್ರಗಳನ್ನು ವಿಶ್ಲೇಷಿಸುತ್ತ ನಾರಾಯಣಸ್ವಾಮಿ ಖಿನ್ನನಾಗುತ್ತಿದ್ದ.

ಕಮಲನಿಗೆ ನಾನು ನೆರವಾಗಬೇಕು. ತಂದೆ, ಅಜ್ಜಿಯ ಜವಾಬ್ದಾರಿಯನ್ನು ಅವಳ ಮೇಲೆ ಹೊರೆಸುವುದು ನ್ಯಾಯವಲ್ಲ.

ನೆರವಾಗುವುದು ಹೇಗೆ? ಇದುವರೆಗಿನ ತನ್ನ ಸಮಸ್ತವನ್ನೂ ಇಂದುಮತಿ ಪೂರೈಸಿದ್ದಳು.

'ಇಂದುಮತಿಯಿಂದ ಹಣ ತೆಗೆದುಕೊಂಡು ಕಮಲನಿಗೆ ಕಳಿಸುವುದೇ ?'

'ಇದು ಹೀನಾಯದ ಕೆಲಸವೆಂದು ನಾರಾಯಣಸ್ವಾಮಿಯ ಮನಸ್ಸಿಗೆ ಜಿಹಾಸೆಯುಂಟಾಯಿತು.

'ಈವರೆಗೆ ಹೆಂಡತಿಯ ಹಣದಿಂದ ನಾನು ಬಾಳಿರುವುದೇ ಸಾಕು. – ಹಣ ಬೇಕೆಂದರೆ ಇಂದು ಕೊಡಬಹುದು ಆದರೆ ಅದನ್ನು ಸ್ವೀಕರಿಸಿ ಮುಖವೆತ್ತಿ ಅವಳನ್ನು ನೋಡುವುದು ಹೇಗೆ ?'

ನಾರಾಯಣಸ್ವಾಮಿಯ ಮನಸ್ಸಿನಲ್ಲಿ ಸುಪ್ತವಾಗಿದ್ದ ಭಾವನೆಗಳು ಕೆರಳಿನಿಂತವು

'ಶೈಶವ್ಯದಲ್ಲಿ ಅಜ್ಜಿ ಗೋದಮ್ಮ ಸಾಕಿದುದು

'ತಾರುಣ್ಯದಲ್ಲಿ ತಂದೆ, ತಾಯಿ ಹಗಲಿರುಳು ತನ್ನ ಹಿತ ಬಯಸಿದುದು

'ತಾನು ಡಿಗ್ರಿ ತೆಗೆದುಕೊಂಡ ದಿನ ತಂದೆ, ತಾಯಿಗಾದ ಸಂತೋಷ. '

**ತಾಯಿ!** ತಾಯಿ ರುಕ್ಮಿಣಿಯಮ್ಮನ ನೆನಪು ಬಂದು ನಾರಾಯಣ ಸ್ವಾಮಿಯ ಹೃದಯ ತಲ್ಲಣಿಸಿತು

'ಲೋಕವೆಲ್ಲಾ ಅಮ್ಮನನ್ನು ದೇವತೆಯೆಂದು ಪೂಜಿಸಿತು !

'ತ್ಯಾಗ ವೈರಾಗ್ಯದ ಮೂರ್ತಿವಂತ ಸ್ವರೂಪಳಾಗಿದ್ದ ರುಕ್ಮಿಣಮ್ಮ, ತನ್ನ ತಾಯಿ – ನಾನು ಅವಳ ಮಗ !

ಆ ತಾಯಿಗೆ ತಕ್ಕ ಮಗನೇ ನಾನು ! ಸ್ವಾಭಿಮಾನಿಯಾದ ಆಕೆ ನಾನು ಪರಾಶ್ರಯದಲ್ಲಿರುವುದನ್ನು ಕೇಳಿ ಸಹಿಸುತ್ತಿದ್ದಳೇ ?'

ಹೆಂಡತಿ ಇಂದುಮತಿ ಅಪಾರ ಸಂಪತ್ತನ್ನು ತಂದಿದ್ದಳು.

ತಾನು ನಿರ್ಗತಿಕನೆನ್ನುವ ಭಾವನೆ ನಾರಾಯಣಸ್ವಾಮಿಯ ಮನಸ್ಸಿನಿಂದ ಅಳಿಸಿಹೋಯಿತು.

'ರುಕ್ಮಿಣಿಯಮ್ಮನ ಮಗ ನಾನು – ನಿರ್ಗತಿಕನೇ ! ಆಕೆ ಸಂಪಾದಿಸಿದ ನಿರ್ಲಿಪ್ತ, ನಿಷ್ಕಳಂಕ, ಸ್ವೈಜ ಜೀವನದ ಉತ್ತರಾಧಿಕಾರಿಯಲ್ಲವೇ ನಾನು.

'ಒಂದು ಜೀವಮಾನದ ತಪಸ್ಸಿನಿಂದ ತಾಯಿ ಸಂಪಾದಿಸಿದ ಸತ್ಯಸಂಪತ್ತು ನನ್ನದಲ್ಲವೇ ?'

ಎಂದು ವಿಚಾರಮಾಡುತ್ತ ಕುಳಿತಿರುವಲ್ಲಿ ಷಾಪಿಂಗ್ ಮುಗಿಸಿಕೊಂಡು ಬಂದ ಇಂದುಮತಿ

"ಮನೆಯಲ್ಲಿಯೇ ಇರುವಿರಾ ? ಎಲ್ಲಿಯೂ ಹೊರಗೆ ಹೋಗಲಿಲ್ಲವೇ ?" ಎಂದು ಕೇಳಿದಳು

ಅವಳು ಕೊಂಡು ತಂದಿದ್ದ ಪ್ಯಾಕೆಟ್‌ಗಳತ್ತ ಗಮನ ಹರಿಸುತ್ತಾ

"ಷಾಪಿಂಗ್ ಮುಗಿಯಿತೇ ಇಂದೂ" ಎಂದು ಕೇಳಿದ

"ಇವತ್ತಿಗೆ ಮುಗಿಯಿತು "

"ನಾಳೆಯೂ ಇದೆಯೇ ?"

"ಲಂಡನ್ನನ್ನೇ ಕೊಂಡು ಮುಂಬಯಿಗೆ ಹೊತ್ತುಕೊಂಡು ಹೋದರೂ ನನಗೆ ತೃಪ್ತಿಯಿಲ್ಲ."

"ಇವುಗಳಿಗಾಗಿ ಬಹಳ ಹಣ ವ್ಯಯವಾಗುತ್ತಿದೆಯಲ್ಲವೇ ?"

"ಆಗುತ್ತಿದೆ – ಹಣ ಯಾವ ಶಾಶ್ವತ ?"

"ಶಾಶ್ವತ ಉಪಯೋಗಕ್ಕೆ ಅದನ್ನು ಬಳಸಿಕೊಳ್ಳಬಹುದು "

"ನಾನು ಷಾಪಿಂಗ್ ಮಾಡುವುದು ನಿಮಗೆ ಬೇಸರವೇ ?"

"ಛೆ ! ಛೆ ! ಹಾಗಲ್ಲ – ನೀನು ಸುಖವಾಗಿದ್ದರೆ ಸಾಕು "

ಎಂದು ಹೇಳಿ ನಿಲ್ಲಿಸಿದ.

ತನ್ನಲ್ಲಿ ಹುಟ್ಟಿದ ಅಧೀರತೆ ಕಂಡು ನಾರಾಯಣಸ್ವಾಮಿಯ ಮನಸ್ಸಿಗೆ ಜಿಗುಪ್ಸೆಯುಂಟಾಯಿತು.

'ನಾನೇಕೆ ಹೇಡಿಯಾದೆ ?'

'ನಿರರ್ಥಕವಾಗಿ ಹಣ ವ್ಯಯಮಾಡುವುದು ತಪ್ಪೆಂದು ನಾನೇಕೆ ಹೇಳಲಿಲ್ಲ.

'ಇಂದುಮತಿಯ ಕೂಳಿನ ಋಣ ನನ್ನನ್ನು ಹೇಡಿ ಮಾಡಿತೇ ?

'ಸ್ವಾಭಿಮಾನಿ ರುಕ್ಮಿಣಮ್ಮನ ಹೊಟ್ಟೆಯಲ್ಲಿ ನನ್ನಂಥ ನಿರಭಿಮಾನಿ ಹುಟ್ಟಬಹುದೇ ?'

ಎಂದು ನಾರಾಯಣಸ್ವಾಮಿ ಮಮ್ಮಲ ಮರುಗಿದ.

೭

ಪದ್ಮನ ಗಂಡ ಏರ್ ಪೈಲಟ್ (Air Pilot) ಸರ್ವೋತ್ತಮ ದಿನ ಬಿಟ್ಟು ದಿನವೇ ಮನೆಯಲ್ಲಿರುತ್ತಿದ್ದುದು. ಅವನು ಊರಿನಲ್ಲಿಲ್ಲದ ದಿನಗಳ ಬಹುಭಾಗವನ್ನು ಪದ್ಮ ಕಮಲಕ್ಕನ ಮನೆಯಲ್ಲಿಯೇ ಕಳೆಯುತ್ತಿದ್ದಳು.

ಪದ್ಮನ ಮನಸ್ಸು ಹಗುರವಾಗಿರಲಿಲ್ಲ. ಸಕಲ ಸೌಭಾಗ್ಯ ಸಂಪನ್ನೆಯಾದ ಪದ್ಮ ಎಲ್ಲರಿಗಿಂತಲೂ ಹೆಚ್ಚು ಸುಖಿಯಾಗಿರಬೇಕಾಗಿತ್ತು. ಸರ್ವೋತ್ತಮ ಅವಳನ್ನು ಅತಿ ಮುಚ್ಚಟೆಯಿಂದ ಕಾಣುತ್ತಿದ್ದ. ಪ್ರತಿಸಲ ಮುಂಬಯಿಯಿಂದ ಹಿಂದಿರುಗಿದಾಗಲೂ ಹೆಂಡತಿಗೆ ಏನಾದರೊಂದು ಉಡುಗೆರೆ ತರದಿರುತ್ತಿರಲಿಲ್ಲ. ಪ್ರಸಿದ್ಧ ಜವಾಹಿರಿವ್ಯಾಪಾರಿ ನರೋತ್ತಮ ಮೊರಾರ್‌ಜಿ ಅಂಗಡಿಯಲ್ಲಿನ ಹಲವು ನವೀನ ಸುವರ್ಣಾಭರಣಗಳು ಪದ್ಮನನ್ನಲಂಕರಿಸಿದ್ದವು.

ಆದರೂ ಪದ್ಮನ ಮನಸ್ಸಿನಲ್ಲಿ ಕೊರಗು!

ಮಕ್ಕಳಾಗಲಿಲ್ಲವೆಂಬ ದುಃಖ!

ಕಷ್ಟ ಕಾರ್ಪಣ್ಯವಿಲ್ಲದ ಸಂಸಾರ ಪ್ರೀತಿಸಿ ಪೂಜಿಸುವ ಪತಿಯಿದ್ದರೂ-ಪದ್ಮ ಬಂಜೆತನ ಸಹಿಸಲಾಗದೆ ದುಃಖಿಸುತ್ತಿದ್ದಳು.

ತನ್ನ ದುಃಖ ಮರೆಯಲು ಪದ್ಮನಿಗಿದ್ದುದು ಒಂದೇ ದಾರಿ. ತನ್ನ ಹೃದಯದಲ್ಲಿ ತುಂಬಿದ್ದ ಸಮಸ್ತ ಅನುರಾಗವನ್ನೂ ಸೌಭಾಗ್ಯನಿಗೆ ಧಾರೆಯೆರೆದು, ಅವಳನ್ನು ಸ್ವಂತ ಮಗುವಿನಂತೆ ಪೋಷಿಸುವುದು. ಸರ್ವೋತ್ತಮನಿಗೆ ಹೇಳಿ ಸೌಭಾಗ್ಯನಿಗೆ ಬಗೆಬಗೆಯ ಬಟ್ಟೆಗಳನ್ನು ಆಟದ ಸಾಮಾನುಗಳನ್ನು ತರಿಸುತ್ತಿದ್ದಳು. ಸೌಭಾಗ್ಯನಿಗೆ ಎಷ್ಟು

ಅಲಂಕಾರ ಮಾಡಿದರೂ ತೃಪ್ತಿಯಿಲ್ಲ-ಅವಳನ್ನು ಎಷ್ಟು ಮುದ್ದಿಸಿದರೂ ಸಾಲದು. ಪದ್ಮನ ಹುಚ್ಚು ಪ್ರೀತಿಯನ್ನು ಕಂಡು ಒಮ್ಮೊಮ್ಮೆ ಕಮಲ

"ಪದ್ಮಾ, ಯಾರು ನೋಡಿದರೂ ಸೌಭಾಗ್ಯ ನಿನ್ನ ಮಗಳೆಂದೇ ಭಾವಿಸುತ್ತಾರೆ. ನನ್ನ ಕೆಲಸಕಾರ್ಯದ ತಾಪತ್ರಯದಲ್ಲಿ ನಾನು ಅವಳನ್ನು ಲಕ್ಷಿಸುವುದಕ್ಕೇ ಆಗುವುದಿಲ್ಲ. ನೀನು ಆ ಕೊರತೆ ತುಂಬಿರುತ್ತೀ!"

"ಈ ಪೋರಿಯನ್ನು ಬಿಟ್ಟಿರುವುದಕ್ಕೆ ಮನಸ್ಸಾಗುವುದಿಲ್ಲಕ್ಕಾ."

"ಕಟ್ಟಿಕೊಂಡು ಹೋಗು ತಾಯಿ – ಇವಳ ಹಾವಳಿ ಪೂರೈಸುವುದು ಬಲು ಕಷ್ಟವಾಗಿದೆ ಮಡಿ ಇಲ್ಲ – ಹುಡಿ ಇಲ್ಲ. ಅಜ್ಜೀನ, ಸಾವಿತ್ರಮ್ಮೋರ್ನ ಒಂದೇ ಸಮನಾಗಿ ಗೋಳು ಹುಯ್ದುಕೊಳ್ಳುತ್ತಾಳೆ ಯಾರಾದರೂ ದಂಡಿಸಿದರೆ 'ನಾನು ಚಿಕ್ಕಮ್ಮನ ಮನೆಗೆ ಹೊರಟು ಹೋಗ್ತೀನಿ' ಎಂತಾ ಹೆದರಿಸುತ್ತಾಳೆ."

ಬಹಳ ದಿನಗಳಿಂದ ಪದ್ಮನ ಮನಸ್ಸಿನಲ್ಲಿ ಹುದುಗಿದ್ದ ಭಾವನೆ ಥಟ್ಟನೆ ಹೊರಬಿತ್ತು.

"ಅಕ್ಕಾ- "

"ಏನು ಪದ್ಮ?"

"ಸೌಭಾಗ್ಯನನ್ನು ನಾನು ಸಾಕಿಕೊಳ್ಳಲೇ?"

"ಈಗವಳನ್ನು ಸಾಕುತ್ತಿರುವವರು ಯಾರು? ನೀನೇ ಅಲ್ಲವೇ?"

"ಹಾಗಲ್ಲ – ಅವಳನ್ನು ನನಗೇ ಕೊಟ್ಟುಬಿಡುತ್ತೀಯಾ?"

ಪದ್ಮನ ಮನೋಗತವನ್ನರಿತ ಕಮಲ ತುಸು ಕಠಿಣವಾಗಿಯೇ

"ಇಲ್ಲ ತಂಗಿ – ಅದು ಸಾಧ್ಯವಿಲ್ಲ" ಎಂದಳು.

ಪದ್ಮ ಅವನತಮುಖಿಯಾದಳು. ಅವಳ ಕಣ್ಣುಗಳಿಂದ ಹನಿಗಳು ತೊಟ್ಟಿಕ್ಕಿದವು.

"ನಾನು ತುಂಬ ಕಠಿಣಚಿತ್ತಳಲ್ಲವೇ ಪದ್ಮಾ?"

". .. ........... ...."

"ಸೌಭಾಗ್ಯನನ್ನು ಕೊಡಲು ನಾನೇಕೆ ನಿರಾಕರಿಸಿದೆ ಗೊತ್ತೇ?"

ಪದ್ಮ ಕತ್ತೆತ್ತಿ ನೋಡಿದಳು.

"ನಿನಗೆ ಮಕ್ಕಳಾಗುವ ವಯಸ್ಸು ಮೀರಿಲ್ಲ. ತಂದೆಯ ಕಡೆ

ಯಿಂದಾಗಲಿ ತಾಯಿಯ ಕಡೆಯಿಂದಾಗಲಿ ನಮ್ಮ ಮನೆಯಲ್ಲಿ ಯಾರೂ ಬಂಜೆಯರಾಗಿಲ್ಲ. ನಿನಗಿನ್ನೂ ಮಕ್ಕಳಾಗದಿರುವುದಕ್ಕೆ ದೇಹರಚನೆಯ ನ್ಯೂನಾತಿರೇಕವೇ ಕಾರಣವಾಗಿರಬಹುದು. 'ನನಗೆ ಮಕ್ಕಳೇ ಆಗುವುದಿಲ್ಲ – ಅದಕ್ಕಾಗಿ ಸೌಭಾಗ್ಯನನ್ನು ಸಾಕಿಕೊಳ್ಳಬೇಕು' ಎನ್ನುವ ಅಭಿಪ್ರಾಯ ದೂರಮಾಡು ತಂಗೀ. ಸೌಭಾಗ್ಯನನ್ನು ಸಾಕುತ್ತಿರುವವಳು ನೀನೇ – ಮುಂದೆಯೂ ನೀನೇ ಅವನ ಜವಾಬ್ದಾರಿ ಹೊರಲು ನಾನು ಬೇಡವೆನ್ನುವುದಿಲ್ಲ. ಮಕ್ಕಳಾಗುವುದಿಲ್ಲ ಎನ್ನುವ ಅಭಿಪ್ರಾಯವನ್ನು ನಿನ್ನ ಮನಸ್ಸಿನಿಂದ ದೂರಮಾಡಲು ನಾನು ಕಠಿಣವಾಗಿ ಮಾತನಾಡಬೇಕಾಯಿತು.'

"ಅಕ್ಕ – ನೀನೆಷ್ಟು ಒಳ್ಳೆಯವಳೇ!'

"ಸರ್ವೋತ್ತಮ ಊರಿಗೆ ಯಾವಾಗ ಬರುತ್ತಾನೆ?"

"ನಾಳೆ ಬರುತ್ತಾರೆ"

"ನಾಳೆಯಿಂದ ಹದಿನೈದು ದಿವಸ ರಜಾ ತೆಗೆದುಕೋ ಎಂದು ಹೇಳು"

"ಅವರಿಗೆ ರಜಾ ಸಿಕ್ಕುವುದೇ ಕಷ್ಟಕಣಕ್ಕ ಈಗೇಕೆ ರಜಾ ತೆಗೆದುಕೊಳ್ಳಬೇಕು"

"ಮೊದಲು ನಿನ್ನ ಕರೆದುಕೊಂಡು ಹೋಗಿ ಡಾ ಶಂಕರಾಂಬಾಳ್ ಅವರಿಗೆ ತೋರಿಸಿಕೊಂಡು ಬರಲಿ. ಔಷಧೋಪಚಾರದಲ್ಲಿ ಸರಿಹೋಗುವುದಾದರೆ ಒಳ್ಳೆಯದೇ ಆಯಿತು – ಆಪರೇಷನ್ ಮಾಡಬೇಕೆಂದರೆ ಅದಕ್ಕೂ ಹೆದರಬೇಡ"

"ಆಪರೇಷನ್ನೇ!"

"ಭಯವಾಗುತ್ತದೆಯೇ?"

"ನೀನು ಜತೆಯಲ್ಲಿದ್ದರೆ ಭಯವಾಗುವುದಿಲ್ಲ.'

"ನಿನಗೆ ಪೂರ್ಣಗುಣವಾಗಿ ನೀನು ಎದ್ದು ಎಂದಿನಂತೆ ಓಡಿಯಾಡುವವರೆಗೆ ನಿನ್ನ ಮಗ್ಗಲು ಬಿಟ್ಟು ಅಲ್ಲಾಡುವುದಿಲ್ಲ – ಸರಿತಾನೇ!"

"ಅಕ್ಕ – ನಿನ್ನನ್ನು ನೋಡಿದರೆ ಅಮ್ಮನ ಜ್ಞಾಪಕ ಬರುತ್ತದೆ."

"ಎಲ್ಲಿ ಅಮ್ಮ – ಎಲ್ಲಿ ನಾನು! ನಾವು ಎಷ್ಟು ಜನ್ಮಗಳಪುಣ್ಯ

ಮಾಡಿದ್ದೆವೋ ಏನೋ ಅವಳ ಮಕ್ಕಳಾಗಿ ಹುಟ್ಟಿದೆವು.. ರಜ ತೆಗೆದುಕೋ ಎಂದು ನಿನ್ನ ಗಂಡನಿಗೆ ಹೇಳುವುದನ್ನು ಮರೆಯಬೇಡ – ನಿನಗೆ ಸಂಕೋಚವಾಗುವ ಹಾಗಿದ್ದರೆ ತಿಳಿಸು, ನಾನೇ ಹೇಳುತ್ತೇನೆ."

"ಖಂಡಿತ ಹೇಳುತ್ತೇನಕ್ಕ"

ಎಂದು ಪದ್ಮ ಭರವಸೆಯಿತ್ತಳು.

ಸೌಭಾಗ್ಯ ಪದ್ಮನ ಹೃದಯ ಗೆದ್ದಿದ್ದಂತೆ ಗೋದಮ್ಮ, ಸಾವಿತ್ರಮ್ಮ, ಮಾಧವರಾಯ ಇವರ ಹೃದಯವನ್ನೂ ಅಪಹರಿಸಿದ್ದಳು.

ಸಾವಿತ್ರಮ್ಮ, ಗೋದಮ್ಮನವರ ಮಡಿ ಕೆಡಿಸಿ ಅವರಿಗೆ ದಿನಕ್ಕೆ ಮೂರು ನಾಲ್ಕು ಬಾರಿ ಸ್ನಾನಮಾಡಿಸಿದ ಹೊರತೂ ಸೌಭಾಗ್ಯನಿಗೆ ತೃಪ್ತಿಯಾಗುತ್ತಿರಲಿಲ್ಲ.

ಸಾವಿತ್ರಮ್ಮ ಅಡಿಗೆಯ ಮನೆಯಲ್ಲಿ ಕಾಯಿ ತುರಿಯುತ್ತ ಕುಳಿತಿದ್ದರೆ ಸೌಭಾಗ್ಯ ಮೆಲ್ಲನೆ ಬಂದು

"ನನಗೆ – ಕಾಯಿ" ಎನ್ನುತ್ತಿದ್ದಳು.

"ಹಾಳು ಹೊಟ್ಟೆಯಲ್ಲಿ ಕಾಯಿ ತಿನ್ನಬಾರದಮ್ಮ – ಮಹಾ ಪಿತ್ಥ–"

"ಕೊಡ್ತೀಯೊ ಇಲ್ಲವೋ ಸಾವಿತ್ರಜ್ಜಿ"

"ನೀನು ಬಹಳ ತುಂಟಿಯಾದೆ ಕಣೇ ಸೌಭಾಗ್ಯ"

"ನಂಗೆ ಕಾಯಿ ಬೇಕು, – ಇಟ್ಕೊಂಡು ಆಟ ಆಡ್ಕೋತೀನಿ ಕೊಡು."

"ನಾಬಲ್ಲೆ ನಿನ್ನಾಟ! ಕಾಯಿ ತಿಂದು ಮುಗಿಸುವುದೇ ಆಟ ಅಲ್ಲವೇ?"

"ಕೊಡ್ತೀಯೋ ಇಲ್ಲವೋ?"

"ಕೊಡಲ್ಲಾಂದ್ರೆ ಏನು ಮಾಡ್ತೀ?"

"ಮುಟ್ಟಿಬಿಡ್ತೀನಿ."

"ಗೋದಜ್ಜೀಗೆ ಹೇಳಿ ನಿನಗೆ ತಕ್ಕದ್ದು ಮಾಡಿಸ್ತೀನಿ"

"ಮಾಡಿಸು ನೋಡೋಣ."

ಎನ್ನುತ್ತಾ ಸಾವಿತ್ರಮ್ಮನನ್ನು ಮುಟ್ಟಿ, ಕಾಯಿ ತುರಿಯನ್ನು

ಬಾಯಿಗೆ ತುಂಬಿಕೊಂಡು,

"ಹಾಗಾಗಬೇಕು – ಹಲ್ಲು ಮುರೀಬೇಕು – ನೀನಳಬೇಕು – ನಾ ನಗಬೇಕು."

ಎಂದು ಚಪ್ಪಾಳೆ ತಟ್ಟಿ ಕುಣಿಯುತ್ತಿದ್ದಳು

ಸಾವಿತ್ರಮ್ಮ ತುಸವೂ ಬೇಸರಪಟ್ಟುಕೊಳ್ಳದೆ ನಸುನಗುತ್ತಾ

"ಸಾಯೋ ಮುದುಕೀನ ಎಷ್ಟು ಗೋಳುಹುಯ್ದುಕೊಳ್ಳು ತ್ತೀಯೆ ಸೌಭಾಗ್ಯ" ಎನ್ನುತ್ತಿದ್ದಳು.

ಸೌಭಾಗ್ಯನ ಉಪಟಳ ಸಹಿಸಲಾಗದೆ ಒಮ್ಮೊಮ್ಮೆ ಗೋದಮ್ಮ ಗದರಿಕೊಳ್ಳುತ್ತಿದ್ದರು. ಸೌಭಾಗ್ಯ ಸಪ್ಪೆಮೋರೆ ಹಾಕಿಕೊಂಡು ನಿಂತು ಕೊಂಡರೆ ಗೋದಮ್ಮನವರ ಕರುಳು ಕಿತ್ತುಬರುತ್ತಿತ್ತು. ತಮ್ಮ ಮಡಿ ಯನ್ನೂ ಮರೆತು, ಮೊಮ್ಮಗಳನ್ನಪ್ಪಿ ಮುದ್ದಿಟ್ಟು

"ಹೋಗಲಿ ಬಿಡು – ಇನ್ನುಮೇಲೆ ಹೀಗೆ ಮಾಡಬೇಡ"

ಎನ್ನುತ್ತಿದ್ದರು ಅಜ್ಜಿಯ ಕೋಪವೆಲ್ಲಾ 'ಇನ್ನುಮೇಲೆ ಹೀಗೆ ಮಾಡಬೇಡ' ಉಪದೇಶದಲ್ಲಿ ಮುಕ್ತಾಯವಾಗುವುದನ್ನು ಕಂಡಿದ್ದ ಸೌಭಾಗ್ಯ ಧಿಟ್ಟಳಾಗಿದ್ದಳು.

ಒಮ್ಮೊಮ್ಮೆ ಕಮಲ ಬೇಸರಪಟ್ಟುಕೊಂಡು

"ಈ ಚೋಟುದ್ದ ಹುಡುಗಿ ಹಾವಳಿ ವಿಪರೀತವಾಯಿತು. ಮನೆಯಲ್ಲಿ ಎಲ್ಲರನ್ನೂ ಹುರಿದು ಮುಕ್ಕುತ್ತಾಳೆ ನೀವು ಮಡಿಯಲ್ಲಿ ರುವಾಗ ಇವಳು ಬಂದು ಮುಟ್ಟಿದರೆ ನಾಲ್ಕು ಬಿಗಿಯಿರಿ ಸಾವಿತ್ರಮ್ಮ" ಎಂದು ಅಲವತ್ತುಕೊಂಡರೆ ಗೋದಮ್ಮನವರ ಮನಸ್ಸು ಕರಗಿ ನೀರಾ ಗುತ್ತಿತ್ತು.

"ಹೋಗಲಿ ಬಿಡೇ ಕಮಲ – ಮಗೂ ಅದಕ್ಕೇನು ತಿಳಿಯತ್ತೆ. ಸೌಭಾಗ್ಯ ತುಂಟತನ ಮಾಡದೆ ನೀನೂ ನಾನೂ ಮಾಡುವುದಕ್ಕಾಗು ತ್ತದೆಯೇ ?"

"ಅತೀ ಮುದ್ದುಮಾಡಿ ನೀನೇ ಎಲ್ಲಾರನ್ನೂ ಕೆಡಿಸುತ್ತೀ ಅಜ್ಜೀ."

ಕಮಲನ ಟೀಕೆ ಗೋದಮ್ಮನವರ ಹಿಂದಿನ ನೆನಹುಗಳನ್ನು

ಕೆರಳಿಸುತ್ತಿತ್ತು.

'ನಾಣಿ ವಿಷಯದಲ್ಲಿ ರುಕ್ಮಿಣಿಯೂ ಹೀಗೇ ಹೇಳುತ್ತಿದ್ದಳು' ಎಂದುಕೊಳ್ಳುತ್ತಿದ್ದರು.

'ಕಮಲನ ಮಾತು ನಿಜವಿರಬಹುದು. ಮಕ್ಕಳನ್ನು ಮುದ್ದಿನಲ್ಲಿ ಬೆಳೆಸಬೇಕು – ಹಾಗೇ ಅವರಿಗೆ ಅಂಕೆ ಶಿಕ್ಷೆಯೂ ಇರಬೇಕು.'

ಎಂದುಕೊಂಡು ಗೋದಮ್ಮ ಒಮ್ಮೊಮ್ಮೆ ಕಮಲ ಸೌಭಾಗ್ಯನನ್ನು ದಂಡಿಸುತ್ತಿದ್ದರೆ ಸುಮ್ಮನಿರುತ್ತಿದ್ದರು.

ಮನೆಯಲ್ಲಿ ತನ್ನ ಪಕ್ಷ ಬಲವಾದುದೆಂದು ಅರಿತಿದ್ದ ಸೌಭಾಗ್ಯ ತಾಯಿ ಸ್ವಲ್ಪ ದನಿಯೆತ್ತರಿಸಿದೊಡನೆಯೇ ದೀರ್ಘವಾಗಿ ರಾಗ ತೆಗೆಯುತ್ತಿದ್ದಳು. ರೂಮಿನಲ್ಲಿ ಕುಳಿತಿರುತ್ತಿದ್ದ ಮಾಧವರಾಯನೇ ಎದ್ದುಬಂದು ಸೌಭಾಗ್ಯನನ್ನೆತ್ತಿಕೊಂಡು ಸಮಾಧಾನ ಹೇಳುತ್ತಿದ್ದ.

ಬಾಳ ಅರುಣೋದಯ ಕಾಣುತ್ತಿದ್ದ ಸೌಭಾಗ್ಯನಿಗೂ, ಬಾಳ ಮುಚ್ಚಂಜೆಯಲ್ಲಿದ್ದ ಮಾಧವರಾಯನಿಗೂ ಆತ್ಮೀಯ ಸ್ನೇಹಾನುಬಂಧ ಬೆಳೆದಿತ್ತು. ಸೌಭಾಗ್ಯನಂತೆ ಅವನೂ ಪರಾವಲಂಬಿ. ಸೌಭಾಗ್ಯ ಶೈಶವ್ಯದ ಸವಿಗನಸುಗಳನ್ನು ಕಾಣುತ್ತಿದ್ದಂತೆ ಮಾಧವರಾಯ ದ್ವಿತೀಯ ಶೈಶವ್ಯದ ಕಟುಕನಸುಗಳನ್ನು ಕಾಣುತ್ತಿದ್ದ. ಮಗುವಿಗೆ ವಿಚಾರಶಕ್ತಿ ಬೆಳೆದಿರಲಿಲ್ಲ, ಮಾಧವರಾಯನ ವಿಚಾರಶಕ್ತಿಗೆ ಧಕ್ಕೆ ತಗುಲಿ ಅದು ಕೇವಲ ಸಹಜಗುಣವನ್ನೇ(instinct) ಅವಲಂಬಿಸಿತ್ತು.

ಈ ಉಭಯ ಶಿಶುಗಳಲ್ಲಿ ಅನ್ಯೋನ್ಯತೆ ನೈಸರ್ಗಿಕವಾಗಿ ಬೆಳೆದಿತ್ತು. ಕಮಲ, ಪದ್ಮ, ಗೋದಜ್ಜಿ, ಸಾವಿತ್ರಮ್ಮ – ನಾಣಿ ಕೂಡ ತನಗಿಂತ ದೊಡ್ಡವರು, ತನ್ನನ್ನು ಪ್ರೀತಿಯಿಂದ ಕಂಡರೂ ಅವರ ಪ್ರೀತಿಯ ಹಿಂದೆ ಹಿರಿಯತನ ಹೆಡೆಯೆತ್ತಿ ನಿಂತಿದೆ ಎಂಬ ಭಾವನೆ ಸೌಭಾಗ್ಯನ ಮನಸ್ಸಿನಿಂದ ಅಳಿಸಿ ಹೋಗಲೊಲ್ಲದು.

ಮಾಧವರಾಯ ಅವಳಿಗೆ ಸಮಾನಸ್ಕಂದನಂತೆ ಕಂಡಿದ್ದ. ಅವನೆದುರು ತನ್ನ ಸುಖದುಃಖಗಳನ್ನು, ಸಮಸ್ಯೆಗಳನ್ನು ನಿರ್ಭೀತಿಯಿಂದ ಹೇಳಿಕೊಳ್ಳಬಹುದು ಎನ್ನುವ ಭಾವನೆ ಅವಳಲ್ಲಿ ಬೆಳೆದಿತ್ತು.

ಸೌಭಾಗ್ಯ ಯಾವ ಸ್ವಾತಂತ್ರ್ಯ ವಹಿಸಿದರೂ ಮಾಧವರಾಯ ಬೇಡ ವೆನ್ನುತ್ತಿರಲಿಲ್ಲ. ತಾತನನ್ನು ಅವಳು ಕುದುರೆ ಮಾಡಿಕೊಂಡು ಮನೆಯಲ್ಲೆಲ್ಲಾ ತಿರುಗಾಡಿಸುವಳು. ಮಾಧವರಾಯ ಕೆಮ್ಮುತ್ತ ಕೂಡುತ್ತಿದ್ದನಲ್ಲದೆ ಮೊಮ್ಮಗಳ ಮೇಲೆ ಮುನಿಯುತ್ತಿರಲಿಲ್ಲ. ಸೌಭಾಗ್ಯ ತಾತನನ್ನು ಹಾಸ್ಯಮಾಡುತ್ತ

"ನನ್ನ ಕುದ್ರೆ ಮುದಿಯಾಯ್ತು" ಎನ್ನುತ್ತಿದ್ದಳು.

ತಾತನನ್ನು ಮಗು ಮಾಡಿಕೊಂಡು ಸೌಭಾಗ್ಯ 'ತಾಯಿ-ಮಗು' ಆಟವಾಡುತ್ತಿದ್ದಳು. ಅವಳು ಹೇಳಿದಂತೆ ಅವಳ ಪುಟ್ಟ ತೊಡೆಯ ಮೇಲೆ ಮಾಧವರಾಯ ಮಲಗಿ ಅವಳು 'ದುದ್ದ'ನೆಂದು ಕುದಿಸುತ್ತಿದ್ದ ನೀರನ್ನು ಸಂತೋಷವಾಗಿ ಕುಡಿಯುತ್ತಿದ್ದ. ತಾಯಂದಿರು ಮಕ್ಕಳ ಮೇಲ ಸಿಡಿಗುಟ್ಟುವಂತೆ ಸೌಭಾಗ್ಯ ಸಿಡಿಗುಟ್ಟುತ್ತಿದ್ದಳು

'ಹಾಳುಮುಂಡೆದೇ - ಅಳಬೇಡ - ದುದ್ದ ಕುಡಿ' ಎನ್ನುತ್ತಿದ್ದಳು.

ಆಗ ಮಾಧವರಾಯ ಅಳಬೇಕಾಗುತ್ತು.

'ಅಳಬೇಡ ನನ್ನಪ್ಪಾ - ನನ್ನ ಚಿನ್ನಾ - ಉಂಗಾಬೇಕೇ - ಹಸಿವಾಗತ್ತ್ಯೆ' ಎಂದು ತನ್ನ ಮಗುವನ್ನು ಸೌಭಾಗ್ಯ ಲಾಲಿಸುತ್ತಿದ್ದಳು. 'ಲೊಳಲೊಳಾಯಿ' ಹೇಳಿ ಮಗುವನ್ನು ಮಲಗಿಸಲೆತ್ನಿಸುತ್ತಿದ್ದಳು.

ಈ ನಾಲ್ಕು ವರ್ಷದ ತಾಯಿ, ಅರವತ್ತು ವರ್ಷದ ಮಗುವಿನ ಆಟವನ್ನು ಗೋದಜ್ಜಿ ಮರೆಯಲ್ಲಿ ನಿಂತು ನೋಡುತ್ತಿದ್ದರು. ಅವರ ಮನಸ್ಸಿನಲ್ಲಿ ದುಃಖ ಸಂತೋಷಗಳೆರಡೂ ಉದ್ರೇಕವಾಗುತ್ತಿದ್ದವು.

ಸರ್ವೋತ್ತಮ ಮುಂಬಯಿಯಿಂದ ಬರುವಾಗಲೆಲ್ಲಾ ತನ್ನ ಪ್ರೀತಿಯ 'ಸೌಭೀ'ಗೆ ಬಣ್ಣಬಣ್ಣದ ಬೊಂಬೆಯ ಪುಸ್ತಕಗಳನ್ನೂ ಆಟದ ಸಾಮಾನುಗಳನ್ನೂ ತಂದುಕೊಡುತ್ತಿದ್ದ. ತಾತನೊಂದಿಗೆ ಆಡುತ್ತ ಸೌಭಾಗ್ಯ ವೈಮರೆಯುತ್ತಿದ್ದಳು. ತನ್ನ ಬೊಂಬೆಯ ಪುಸ್ತಕ ತೆಗೆದಿಟ್ಟುಕೊಂಡು

"ಇದೇನು" ಎಂದು ಕೇಳುತ್ತಿದ್ದಳು.

ಮಾಧವರಾಯ ಉದ್ದೇಶಪೂರ್ವಕವಾಗಿಯೇ

"ಮನೆ" ಎನ್ನುತ್ತಿದ್ದ.

ಸೌಭಾಗ್ಯ ಅವನನ್ನು ದಂಡಿಸಿ

"ದಡ್ಡ - ಮನೆಯಂತೆ ಮನೆ - ನೋಡು" ಎನ್ನುತ್ತಿದ್ದಳು.

"ಇನ್ನೇನಪ್ಪ - ನೀನು ಹೇಳಿಕೊಡು"

"ಇದು ಆನೆ"

'ಆನೆ - ಆನೆ"

ಎಂದು ಪುನಶ್ಚರಣಮಾಡಿ ಮಾಧವರಾಯ ಪಾಠ ಗಟ್ಟಿಮಾಡಿ ಕೊಳ್ಳುತ್ತಿದ್ದ.

ಮಾಧವರಾಯನ ಶುಷ್ಕಜೀವನಕ್ಕೆ ಸೌಭಾಗ್ಯನ ಪ್ರತಿಯೊಂದು ಮಾತು, ಕೃತಿ, ಆಚರಣೆ ಅಮೃತಸೇಚನೆ ಮಾಡಿದಂತಾಗುತ್ತಿತ್ತು. ಅವನ ಮೃತಜೀವನ ಆ ಅಮೃತಸ್ಪರ್ಶದಿಂದ ಮೆಲ್ಲಮೆಲ್ಲನೆ ಪಲ್ಲವಿಸಲಾರಂಭಿಸಿತು

೮

ಕಲ್ಯಾಣ್‌ಜೀಯ 'ಪರಿಚಯ ಕೂಟ' (Introduction Party) ಡಾರ್‌ಚೆಸ್ಟರ್ ಹೋಟೇಲಿ(Dorchester Hotel)ನಲ್ಲಿ ನಡೆಯುವ ವ್ಯವಸ್ಥೆಯಾಯಿತು. ಆಯ್ದ ಮೂವತ್ತು ಅತಿಥಿಗಳಿಗೆ ಮಾತ್ರ ಆಮಂತ್ರಣ ಹೋಗಿತ್ತು.

ಲಂಡನ್ನಿನ 'ಡಾರ್‌ಚೆಸ್ಟರ್ ಹೋಟೇಲ್' ಕೆಲವು ವೈಶಿಷ್ಟ್ಯ ಗಳಿಂದ ಕೂಡಿತ್ತು. ಚೇರಿಂಗ್ ಕ್ರಾಸಿಗೆ (Charing Cross) ಎದು ರಾಗಿದ್ದ ಆ ಹೋಟೇಲ್ ಉತ್ತಮ ಶಾಕಾಹಾರ, ಮಾಂಸಾಹಾರ ಗಳೆರಡಕ್ಕೂ ಪ್ರಸಿದ್ಧವಾಗಿತ್ತು. ಲಂಡನ್ನಿನಲ್ಲಿ ಭಾರತೀಯರ ಸಂಖ್ಯೆ ಬೆಳೆದಮೇಲೆ ಚಾಣಾಕ್ಷರಾದ ಹೋಟೇಲ್ ಮಾಲಿಕರು 'ಶಾಕಾಹಾರ ವಿಭಾಗ' ವನ್ನು ತೆಗೆದು ಭಾರತೀಯರನ್ನು ಆಕರ್ಷಿಸಿದ್ದರು. ಈ ವಿಭಾಗದ ಅಡಿಗೆಯ ಮೇಲ್ವಿಚಾರಣೆ ಒಬ್ಬ ಅಯ್ಯರ್‌ಗೆ ಸೇರಿತ್ತು.

ಪಾಲಘಟ ಪರಮಶಿವ ಅಯ್ಯರ್ ಲಂಡನ್ ಸೇರುವುದಕ್ಕೆ ಪ್ರಬಲ ವಾದ ಕಾರಣವಿತ್ತು. ಪಾಲಘಾಟಿನ ಸಾಂಬಶಿವ ಅಯ್ಯರ್ ಹೋಟೇಲ್ ಮಾಣಿಯಾಗಿದ್ದ ಪರಮಶಿವ ಕೈಗೆ ನಾಲ್ಕುಕಾಸು ಮಾಡಿಕೊಂಡು ಬೆಂಗಳೂರು ಸೇರಿ, ಸ್ವತಂತ್ರವಾಗಿ ಹೋಟೇಲ್ ಆರಂಭಿಸಿದ. ಅವನ ಹೋಟೇಲ್ ಇತರ ಹೋಟೇಲ್‌ಗಳಂತೆ ನೂರೆಂಟು ಪದಾರ್ಥಗಳನ್ನು ಮಾಡುತ್ತಿರಲಿಲ್ಲ. ಬೆಳಿಗ್ಗೆ ಏಳರಿಂದ ಹತ್ತರವರೆಗೆ ಇಡ್ಲಿ, ವಡೆ, ಕಾಫಿ; ಸಂಜೆ ನಾಲ್ಕರಿಂದ ಏಳರವರೆಗೆ ಇಡ್ಲಿ ಅಥವಾ ದೋಸೆ ವಡೆ ಕಾಫಿ. ಇಡ್ಲಲಿಗೆ ಮೊಳಗಾಯಿಪುಡಿ (ಮೆಣಸಿನ ಪುಡಿ) ಒಳ್ಳೆಣ್ಣೆ ಅಥವಾ ಕಾಯಿ ಚಟ್ನಣಿ, ತುಪ್ಪ. ಪಲ್ಯ, ಸಾಗು, ಸಾಂಬಾರ್‌ಗಳ

ಗೋಜಿಗೇ ಪರಮಶಿವ ಹೋಗುತ್ತಿರಲಿಲ್ಲ. 'ಪೀಪಿ ಹೊಟೇಲ್' (ಪಾಲಘಾಟ್ ಪರಮಶಿವ ಐಯ್ಯರ್ ಹೊಟೇಲ್) ಆರಂಭವಾದ ಮೂರು ನಾಲ್ಕು ತಿಂಗಳಲ್ಲಿ ಅದರ ಖ್ಯಾತಿ ಸಂಸ್ಥಾನಾದ್ಯಂತ ಹರಡಿತು. ಅರ್ಧಾಣೆ ಬಿಲ್ಲೆಯ ಪ್ರಮಾಣ, ಒಂದು ತೊಲ ತೂಕದ ಮಲ್ಲಿಗೆಯ ಹೂವಿನಂಥ ಅವನ ಇಡ್ಡಲಿಗಳನ್ನು ಡಜನ್‌ಗಟ್ಟಳೆ ಜನ ತಿಂದು ಸಂತೃಪ್ತರಾಗುತ್ತಿದ್ದರು.

ಪರಮಶಿವ ಐಯ್ಯರ್ ಪ್ರತಿಭೆಗೆ ಬೆಂಗಳೂರು ಸಾಲದಾಯಿತು. ಮುಂಬಯಿಯಲ್ಲಿ ಒಳ್ಳೆಯ ಹೊಟೇಲ್ ತೆಗೆದರೆ ಲಕ್ಷಗಟ್ಟಳೆ ಸಂಪಾದಿಸಬಹುದೆಂದು ಅವನ ಅಭಿಮಾನಿಗಳು ಸಲಹೆಯಿತ್ತರು. ಪರಮಶಿವ ಐಯ್ಯರ್ ಬೆಂಗಳೂರು ಹೊಟೇಲ್ ಮುಚ್ಚಿ ಮುಂಬಯಿ ಕೋಟೆಯಲ್ಲಿ ತನ್ನ 'ಪೀಪಿ ಹೊಟೇಲ್' ಆರಂಭಿಸಿದ. ಅವನ ಹೊಟೇಲ್ ಇಡ್ಡಲಿಗಳು ದಾಕ್ಷಿಣಾತ್ಯರಿಗೆ ಪ್ರಿಯವಾಗಿದ್ದಂತೆ ಗುಜರಾತಿಗಳು, ಮಾರವಾಡಿಗಳು, ಮುಲ್ತಾನಿಗಳಿಗೂ ಪ್ರಿಯವಾಗುತ್ತ ಬಂದಿತು. ಹೊಟೇಲಿಗೆ ಬರುತ್ತಿದ್ದವರು ಕ್ಯೂ ನಿಂತು ಇಡ್ಡಲಿ ಕಾಫಿ ದೊರಕಿಸಿಕೊಳ್ಳಬೇಕಾದ ಪರಿಸ್ಥಿತಿಯೊದಗಿತು.

ಅಯ್ಯರ್ ಕೈಗೆ ಹಣ ಕೂಡುವುದಕ್ಕೆ ಆರಂಭವಾದ ಕೂಡಲೆ ಹಲವು ಚಟಗಳು ಅವನಿಗೆ ಗಂಟುಬಿದ್ದವು. ಅವನ ಹೊಟೇಲಿಗೆ ಬರುತ್ತಿದ್ದ ಕೆಲವು ಸಟ್ಟಾ ಭಕ್ತರು ಅವನಿಗೂ ಸಟ್ಟಾ ರುಚಿ ಹತ್ತಿಸಿದರು. 'ಅಜ್ಜ ನೂತದ್ದು ಮೊಮ್ಮಗನ ಉಡಿದಾರಕ್ಕೆ' ಎಂಬ ನಾಣ್ಣುಡಿಯಂತೆ ಅಯ್ಯರ್ ಸಂಪಾದನೆ ಬುಡವಿಲ್ಲದ ಸಟ್ಟಾ ಸಮುದ್ರ ಸೇರಲಾರಂಭಿಸಿತು. 'ಪೀಪಿ ಹೊಟೇಲ್' ಎಷ್ಟು ದುಡಿದು ಕೊಟ್ಟರೂ ಅಯ್ಯರ ಖರ್ಚಿಗೆ ಸಾಲದಾಯಿತು. ಅಯ್ಯರ್ ಮೆಲ್ಲನೆ ದಯಾಭಾಯ್ ಹೀರಾಲಾಲನನ್ನು ತನ್ನ ಪಾಲುಗಾರನನ್ನಾಗಿ ತೆಗೆದುಕೊಂಡು, ಹೊಟೇಲನ್ನು ವಿಸ್ತರಿಸಿ ದೊಡ್ಡಪ್ರಮಾಣದಲ್ಲಿ ನಡೆಸತೊಡಗಿದ.

ಅಯ್ಯರ್ ಶುಕ್ರಮಹಾದೆಶೆಯ ಕಾಲ ಇನ್ನೂ ಉಳಿದಿತ್ತು. 'ಪೀಪಿ ಹೊಟೇಲಿ'ನ ವ್ಯಾಪಾರ ವೈಖರಿ ಕಂಡು ದಯಾಭಾಯ್ ಬೆಕ್ಕಸಬೆರಗಾದ. 'ಗಲ್ಲ'ದಲ್ಲಿ ನಿತ್ಯ ಸಾವಿರಾರು ರೂಪಾಯಿ ಕಾಣು

ತ್ತಿದ್ದ ದಯಾಭಾಯ್‌ಗೆ ಅಮಲೇರಿದಂತಾಯಿತು. ಅಯ್ಯರ್ ಕೇಳಿದಾಗ ಕೇಳಿದಷ್ಟು ಹಣವನ್ನು ಅವನು ನಿಸ್ಸಂಕೋಚದಿಂದ ಒದಗಿಸಲು ಆರಂಭಿಸಿದ

ಮುಂಬಯಿಯಲ್ಲಿ ಹತ್ತಿಯ ಸುಗ್ಗಿ ಆರಂಭವಾಯಿತು ಷೇರ್ ಮಾರ್ಕೆಟ್ಟಿನ ಸುದ್ದಿಗಳು ಎಲ್ಲರ ಕಿವಿಗಳನ್ನೂ ನಿಮಿರಿಸುತ್ತಿದ್ದವು. 'ಇವತ್ತು ಅವನು ಹತ್ತು ಲಕ್ಷ ಮಾಡಿದ, ಇವನು ಹದಿನಾರು ಲಕ್ಷ ಸಂಪಾದಿಸಿದ' ಎನ್ನುವ ವರದಿ ಕೇಳಿ ಕೇಳಿ ಒಂದು ದಿನ ಪರಮಶಿವ ಅಯ್ಯರ್ ತನ್ನ ಬಳಿಯಿದ್ದ ನಗದು ಮೂವತ್ತೆರಡು ಸಾವಿರ ರೂಪಾಯಿಗಳನ್ನು ಸಟ್ಟಾ ಬಜಾರಿಗೆ ಒಪ್ಪಿಸಿ ಬರಿಗೈಯಲ್ಲಿ ಮನೆಗೆ ಹಿಂದಿರುಗಿದ.

'ಇನ್ನು ಮುಂಬೈಯಲ್ಲಿ ಬಾಳುವೆ ಮಾಡುವುದು ದುಸ್ಸಾಧ್ಯವೆಂದರಿತ ಅಯ್ಯರ್ ಸಮಯ ಸಿಕ್ಕಂತೆ ದಯಾಭಾಯ್‌ಯಿಂದ ಹಣ ಸಂಗ್ರಹಿಸಿ, ಗಲ್ಲದ ದುಡ್ಡಿನ ಕೆಲಭಾಗವನ್ನೂ ಲಪ್ಟಾಯಿಸಿ, ಒಂದು ಸಂಜೆ ಹೇಳದೆ ಕೇಳದೆ ಪಿ ಅಂಡ್ ಓ ಸ್ಟೀಮರ್ ಹತ್ತಿ ಲಂಡನ್ನಿಗೆ ಪ್ರಯಾಣ ಬೆಳೆಸಿದ

ಸ್ಟೀಮರಿನಲ್ಲಿ ಪ್ರಯಾಣ ಮಾಡುತ್ತಿದ್ದಾಗಲೇ ಅಯ್ಯರಿಗೆ ಡಾರ್ ಚೆಸ್ಟರ್ ಹೋಟೇಲ್ ಮ್ಯಾನೇಜರ್ ಆಬರಿಸ್ಮಿತ್ ಅವರ ಪರಿಚಯವಾದುದು. ದೈವಾಯತ್ತವಾಗಿ ದೊರೆತಿದ್ದ ಸದವಕಾಶವನ್ನು ಅಯ್ಯರ್ ಕಳೆದುಕೊಳ್ಳಲಿಲ್ಲ. ಸ್ಟೀಮರಿನ ಪಾಕಶಾಲೆಯ ಮುಖ್ಯ ಬಾಣಸಿಗನ ಸ್ನೇಹ ಬೆಳಸಿ ತಾನೇ ಕೆಲವು ಖಾದ್ಯಗಳನ್ನು ತಯಾರಿಸಿ ಆಬರಿಸ್ಮಿತ್ ಅವರಿಗೆ ಕಳಿಸಿಕೊಟ್ಟ. ಆಬರಿಸ್ಮಿತ್‌ರ ಕುತೂಹಲ ಕೆರಳಿತು. ಅಯ್ಯರನ್ನು ಕರೆಸಿಕೊಂಡು,

"ನೀವು ಲಂಡನ್ನಿನಲ್ಲಿ ಏನು ಮಾಡಬೇಕೆಂದಿರುವಿರಿ?" ಎಂದು ಪ್ರಶ್ನಿಸಿದರು.

"ಅಲ್ಲಿ ಒಂದು ಇಂಡಿಯನ್ ಹೋಟೇಲ್ ತೆಗೆಯಬೇಕೆಂದಿದ್ದೇನೆ. ಲಂಡನ್ನಿನಲ್ಲಿ ಬಹಳ ಜನ ಭಾರತೀಯರಿದ್ದಾರೆ. ಅವರಿಗೆ ನಿಮ್ಮ ಅಡಿಗೆ ಊಟ ರುಚಿಸುವುದಿಲ್ಲ."

"ಲಂಡನ್ನಿನಲ್ಲಿ ಹೊಸದಾಗಿ ಹೋಟೇಲ್ ತೆಗೆಯಬೇಕೆಂದರೆ

ಬಹಳ ಖರ್ಚು ಬರುತ್ತದೆ."

"ಮೊದಲು ಸಣ್ಣ ಪ್ರಮಾಣದಲ್ಲಿ ಆರಂಭಿಸುತ್ತೇನೆ."

"ನಾನೊಂದು ಸಲಹೆ ಕೊಡುತ್ತೇನೆ – ವಿಚಾರ ಮಾಡಿನೋಡಿ."

" ಹೇಳಿ. "

" ನಮ್ಮ ಹೊಟೇಲಿನಲ್ಲಿ ಶಾಕಾಹಾರ ಭಾಗ ತೆಗೆಯಬೇಕೆಂದಿದ್ದೇವೆ. ಭಾರತೀಯರಲ್ಲದೆ ಫ್ರೆಂಚರು, ಡಚ್ಚರು, ಸ್ವೀಡರು ಈಗೀಗ ಶಾಕಾಹಾರಿಗಳಾಗುತ್ತಿದ್ದಾರೆ. ಬೆಳೆಯುತ್ತಿರುವ ಈ ವರ್ಗವನ್ನು ಬಿಡಲು ಇಚ್ಛೆಯಿಲ್ಲ. ಭಾರತದ ಶಾಕಾಹಾರಿ ಹೊಟೇಲುಗಳನ್ನು ಪರಿಶೀಲಿಸಲೆಂದೇ ನಾನು ಭಾರತಕ್ಕೆ ಬಂದಿದ್ದುದು. ನೀವು ನಮ್ಮ ಹೊಟೇಲಿನ ಚೆಫ್ (Chef- ಮುಖ್ಯ ಬಾಣಸಿಗ) ಆಗಿ ಬಂದುಬಿಡಿ. ನಿಮ್ಮ ವಾಸಕ್ಕೆ ಮನೆ, ಸಂಬಳಸಾರಿಗೆಗಳೆಲ್ಲವನ್ನೂ ವ್ಯವಸ್ಥೆ ಮಾಡಲಾಗುತ್ತದೆ. "

" ನಾನು ಸ್ವತಂತ್ರವಾಗಿ ಬಾಳಿದವನು. ಪರರ ಸೇವೆ ಮಾಡಿ ನನಗೆ ಅಭ್ಯಾಸವಿಲ್ಲ ಸ್ವದೇಶ ಬಿಟ್ಟು ನಾನು ಹೊರಗೆ ಕಾಲಿಡುತ್ತಿರುವುದು ಇದೇ ಮೊದಲು—ವಿದೇಶೀಯರಲ್ಲಿ ಊಳಿಗ ಮಾಡುವ ಬಗೆ ನನಗೆ ಗೊತ್ತಿಲ್ಲ. ತಮ್ಮ ಸಲಹೆ ಅಂಗೀಕರಿಸಲು ಹೇಗೆ ಸಾಧ್ಯ ? "

" ನಿಮ್ಮ ಶಾಖೆಯ ಬಗ್ಗೆ ನೀವೇ ಸರ್ವಾಧಿಕಾರಿಗಳು. ನಿಮ್ಮ ಸಹಾಯಕರನ್ನು (Assistants) ನೀವೇ ಆರಿಸಿಕೊಳ್ಳಬಹುದು. ಗಿರಾಕಿಗಳಿಂದ ಆಕ್ಷೇಪಣೆ ಬರದಂತೆ ನೋಡಿಕೊಂಡರಾಯಿತು. ನಿಮ್ಮ ಶಾಖೆಯ ಆಡಳಿತದಲ್ಲಿ ನಾವು ಕೈಹಾಕುವುದಿಲ್ಲ. ಎಲ್ಲಾ ವಿಷಯದಲ್ಲಿಯೂ ನೀವು ಸ್ವತಂತ್ರರಾಗಿಯೇ ಇರುತ್ತೀರಿ."

" ಸಂಬಳ ಎಷ್ಟು ಕೊಡುವಿರಿ ? "

" ವರ್ಷಕ್ಕೆ ಸಾವಿರ ಪೌಂಡು ಕೊಡಬಹುದು."

" ಅಂದರೆ – ರೂಪಾಯಿ ಲೆಕ್ಕದಲ್ಲಿ ...?

" ಸುಮಾರು ಹದಿಮೂರು ಸಾವಿರ."

"ತಿಂಗಳಿಗೆ ಸಾವಿರವೆನ್ನಿ ?"

"ಹೌದು."

"ನನ್ನ ಮುಂಬಯಿ ಹೋಟೇಲಿನಲ್ಲಿ ಪ್ರತಿದಿವಸ ಸಾವಿರ ಸಂಪಾದಿಸುತ್ತಿದ್ದೆನಲ್ಲಾ ಸಾರ್."

"ಆಗಲಿ. ಸದ್ಯಕ್ಕೆ ಈ ಸಲಹೆ ಒಪ್ಪಿಕೊಳ್ಳಿ. ಮುಂದಕ್ಕೆ ಲಾಭದಲ್ಲಿ ಒಂದಂಶ ಕೊಡುವ ವ್ಯವಸ್ಥೆ ಮಾಡುತ್ತೇನೆ."

ಪರಮಶಿವ ಐಯ್ಯರ್ ಮೀನಮೇಷ ಎಣಿಸಲಾರಂಭಿಸಲು ಸ್ಮಿತ್ ಥಟ್ಟನೆ

"ನಮ್ಮ ಫ್ರೆಂಚ್ ಚೆಫ್‌ಗೆ ವರ್ಷಕ್ಕೆ ಸಾವಿರದೈನೂರು ಪೌಂಡು ಕೊಡುತ್ತಿದ್ದೇವೆ – ನಿಮಗೂ ಅಷ್ಟೇ ಕೊಡಿಸುತ್ತೇನೆ. ಏನು ಹೇಳುವಿರಿ ?"

ಪರಮಶಿವ ಅಯ್ಯರ್ ಗುಣಿಸಿಕೊಂಡು

'ವರ್ಷಕ್ಕೆ ಸುಮಾರು ಇಪ್ಪತ್ತು ಸಾವಿರವಾಯಿತು ಬಿಡಿಗಾಸು ಖರ್ಚಿಲ್ಲ. ವಸತಿ, ಊಟ ಎಲ್ಲಾ ಕಳೆದುಹೋಗುತ್ತದೆ. ಕಾಣದ ದೇಶದಲ್ಲಿ ನಾನೇಕೆ ಹಣ ಚೆಲ್ಲಿ ಸ್ವತಂತ್ರ ವ್ಯವಹಾರ ಆರಂಭಿಸಲಿ ? ಒಂದು ವರ್ಷ ಈ ಹೋಟೇಲಿನಲ್ಲಿ ಕಾಲ ತಳ್ಳುವುದರಿಂದ ಸ್ಥಿತಿಗತಿಗಳ ಅರಿವೂ ಆಗುತ್ತದೆ. ಗಿರಾಕಿಗಳ ಪರಿಚಯವೂ ಆಗುತ್ತದೆ. ಮುಂದೆ ನಾನೇ ಸ್ವತಂತ್ರ ಹೋಟೇಲ್ ತೆಗೆದರಾಯಿತು. ಆ ವೇಳೆಗೆ ನನ್ನ ಹೆಸರಿಗೂ ಬೆಲೆ ಬಂದಿರುತ್ತದೆ'

ಎಂದು ಯೋಚಿಸಿ

"ಆಗಲಿ ಸಾರ್" ಎಂದ.

ಸ್ಮಿತ್ ಸಾಹೇಬರು ಸಂತೋಷದಿಂದ ಪರಮಶಿವ ಅಯ್ಯರ್ ಕೈಕುಲುಕಿ

"ಥ್ಯಾಂಕ್ಯೂ – ಥ್ಯಾಂಕ್ಯೂ – ಮಿ. ಅಯ್ಯರ್ (Thank you Thank you Mr. Aiyar)" ಎಂದರು.

ಪರಮಶಿವ ಅಯ್ಯರ ಪ್ರತಿಭೆಯ ಪ್ರಭಾವದಿಂದ ಡಾರ್‌ಚೆಸ್ಟರ್ ಹೋಟೇಲ್ ಖ್ಯಾತಿ ಹರಡಲು ವಿಳಂಬವಾಗಲಿಲ್ಲ. ಉಪಾಹಾರದ ಪಟ್ಟಿಯಲ್ಲಿ (menu card) ದಾಕ್ಷಿಣಾತ್ಯ ಖಾದ್ಯಗಳಾದ ಪೊಂಗಲು, ಪುಳಿಯೋಗರೆ, ಕ್ಷೈರೊಡೆ, ಮೆಣಸಿನಕಾಳಿನ ಕಲಸನ್ನ, ತೇಂಗೊಳಲು,

ಬೆಣ್ಣೆಮುತ್ತ್ಸೋರೆ ಇತ್ಯಾದಿಗಳು ಕಾಣಿಸಿಕೊಂಡವು. ಹೊಟೇಲಿನ ಅಧಿಕಾರಿಗಳೂ ವಿಶ್ವವಿಖ್ಯಾತ ಸಾಹಿತಿಗಳೂ ಶಾಕಾಹಾರದ ಪ್ರಸಾರಕರೂ ಆದ ಜಾರ್ಜ್ ಬರ್ನಾರ್ಡ್ ಷಾ ಅವರನ್ನು ಬರಮಾಡಿಕೊಂಡು ಅವರ ಮೆಚ್ಚುಗೆ ಪತ್ರ ದೊರಕಿಸಿಕೊಂಡರು. ಅಯ್ಯರ್ ಖ್ಯಾತಿ ಗಗನ ಮುಟ್ಟಿತು.

ಪರಮಶಿವ ಅಯ್ಯರ್ ತನ್ನ ಗೆಳೆಯರಿಗೆ ಒಮ್ಮೆ

"ನೀವು ಬೈಬಲ್ ಹಿಡಿದು ಜಗತ್ತು ಜಯಿಸಿದರೆ ನಾವು ಇಡ್ಲಿ ಹಿಡಿದು ಜಗತ್ತು ಜಯಿಸುತ್ತೇವೆ" ಎಂದು ಹೇಳಿದ.

ಡಾರ್‌ಚೆಸ್ಟರ್ ಹೊಟೇಲಿನ ಶಾಕಾಹಾರಿ ಭಾಗಕ್ಕೆ ಲಂಡನ್ನಿನ ಹೈಕಮಿಷನರ್, ಟ್ರೇಡ್ ಕಮಿಷನರ್ ಕಛೇರಿಯವರೂ, ವ್ಯಾಪಾರಿಗಳೂ, ವಿದ್ಯಾರ್ಥಿಗಳೂ, ಪ್ರವಾಸಿಗರೂ ಪೋಷಕರಾದರು. ಕಲ್ಯಾಣ್‌ಜೀ ಮತ್ತು ಮೃದುಲಾಬಾಯಿಯೂ ಈ ಪೋಷಕವರ್ಗಕ್ಕೆ ಸೇರಿದ್ದರು.

ಡಾರ್‌ಚೆಸ್ಟರ್ ಹೊಟೇಲಿನಲ್ಲಿ ವ್ಯವಸ್ಥೆಯಾಗಿದ್ದ ಸಮಾರಂಭಕ್ಕೆ ಮ್ಯಾನೇಜರ್ ಆಬರಿಸ್ಮಿತ್ತರೇ ಮೇಲ್ವಿಚಾರಕರಾಗಿದ್ದರು. ಎಂಟು ಗಂಟೆಗೆ ಸರಿಯಾಗಿ ಆಮಂತ್ರಿತರು ಸೇರಿದ್ದರು. ಕಲ್ಯಾಣ್‌ಜಿ ಮೃದುಲಾ ಆಮಂತ್ರಿತರ ಪರಿಚಯವನ್ನು ಇಂದುಮತಿಗೂ ನಾರಾಯಣ ಸ್ವಾಮಿಗೂ ಮಾಡಿಕೊಡಲಾರಂಭಿಸಿದರು.

"**ಮಿ. ಫರ್ಗ್ಯುಸನ್** — ಬ್ರಿಟನ್ನಿನ ವ್ಯಾಪಾರ, ವಾಣಿಜ್ಯ ಮಂತ್ರಿಗಳ ಕಛೇರಿಯಲ್ಲಿದ್ದಾರೆ.

"**ಕ್ಯಾಪ್ಟನ್ ಗಿಲೆಸ್ಪಿ** — ಭಾರತದ ಗೌರ್ನರ್ ಜನರಲ್ ಅವರ ಆಪ್ತ ಕಾರ್ಯದರ್ಶಿಗಳಾಗಿದ್ದರು.

"**ಮಿ. ಹಾಫ್‌ಮನ್** — ಹಂಗೆರಿ ದೇಶದವರು, ಬ್ರಿಟನ್ನಿನಲ್ಲಿ ನೆಲಸಿದ್ದಾರೆ. ಪ್ರಸಿದ್ಧ ಪಿಟೀಲು ವಾದ್ಯಗಾರರು ಮತ್ತು ಗೀತಗೋಯ ರಚಕರು.

"**ಮಿ. ದೊರಾಬ್ ಮಿಸ್ತ್ರಿ** — ಆಮದು, ರಫ್ತು ವ್ಯಾಪಾರಿಗಳು.

"**ಮಿ. ಜಾನ್ ಫಾರೆಸ್ಟರ್** — ಅಮೇರಿಕಾ ದೇಶೀಯರು, ಇಲ್ಲಿರುವ ಅಮೆರಿಕನ್ ಫರ್ಮಿನ ಪ್ರಧಾನ ಕಾರ್ಯದರ್ಶಿಗಳು.

"**ಮಿಸಸ್ ಮತ್ತು ಮಿಸ್ಟರ್ ಮಾರಿಸನ್**—ಯಂತ್ರ ಸಾಮಗ್ರಿಗಳ ವ್ಯಾಪಾರಿಗಳು.

"**ಮಿಸಸ್ ಮತ್ತು ಮಿಸ್ಟರ್ ಸ್ಟುವರ್ಟ್ ಚೇಸ್**—ಹಲವು ಜಾಯಿಂಟ್ ಸ್ಟಾಕ್ ಕಂಪೆನಿಗಳ ಡೈರೆಕ್ಟರು, ಅಧ್ಯಕ್ಷರು

"**ಮಿ. ರಿಚರ್ಡ್ ಬರೋಸ್** — 'ಕಮರ್ಷಿಯಲ್ ರಿವ್ಯೂ' ಪತ್ರಿಕೆಯ ಸಂಪಾದಕರು.

"**ಮಿಸಸ್ ಮತ್ತು ಡಾಕ್ಟರ್ ಚಂದ್ರಶೇಖರ್**—ಸಾಹಿತಿಗಳು, 'ಈಸ್ಟ್ ಅಂಡ್ ವೆಸ್ಟ್ ಸೊಸೈಟಿ'ಯ ಚಾಲಕರು

ಎಲ್ಲರೂ ಕುಳಿತಮೇಲೆ ಭೋಜನ ಪೂರ್ವ ಪಾನೀಯ ವಿನಿಯೋಗವಾರಂಭವಾಯಿತು. ಮೃದುಲಾ, ಮಿಸಸ್ ಮತ್ತು ಡಾಕ್ಟರ್ ಚಂದ್ರಶೇಖರ್, ಇಂದುಮತಿ, ನಾರಾಯಣಸ್ವಾಮಿ ಪಾನೀಯವನ್ನು ನಿರಾಕರಿಸಿದರು. ಕಲ್ಯಾಣ್‌ಜೀ ಪಾನಪಾತ್ರೆ ಹಿಡಿದು

"ಇಲ್ಲಿಯ ಶಿಷ್ಟಸಂಪ್ರದಾಯ. ಅತಿಥಿಗಳೊಂದಿಗೆ ನಾನು ಕುಡಿಯಲೇ ಬೇಕಾಗಿದೆ"

ಎಂದು ನಾರಾಯಣಸ್ವಾಮಿಯ ಕ್ಷಮೆಕೋರಿ

"ಪ್ರಧಾನ ಅತಿಥಿಗಳಾದ ಶ್ರೀಮತಿ ಇಂದುಮತಿ ಮತ್ತು ಶ್ರೀ ನಾರಾಯಣ ಸ್ವಾಮಿಯವರ ಆರೋಗ್ಯಭಾಗ್ಯಕ್ಕೆ"

ಎಂದ. ಅವನ ಜತೆ ಅತಿಥಿಗಳು ಪಾನೀಯ ಸ್ವೀಕರಿಸಿದರು. ಮೂರು ಆವರ್ತಿ ಪಾನೀಯ ಸಮಾರಾಧನೆಯಾದ ಮೇಲೆ ಎಲ್ಲರೂ ಊಟದ ಮೇಜಿನ ಮುಂದೆ ಕುಳಿತರು. ಅಗ್ರಪೀಠಗಳಲ್ಲಿ ಇಂದುಮತಿ, ನಾರಾಯಣಸ್ವಾಮಿ, ನಾರಾಯಣಸ್ವಾಮಿಯ ಎಡಬದಿಗೆ ಮಿಸಸ್. ಚಂದ್ರಶೇಖರ್, ಇಂದುಮತಿಯ ಬಲಗಡೆಗೆ ಹಾಫ್‌ಮನ್. ಎದುರು ಸಾಲಿನಲ್ಲಿ ಅಭ್ಯಾಗತರಾದ ಕಲ್ಯಾಣ್‌ಜೀ ಮತ್ತು ಮೃದುಲಾ; ಎಡಬಲ ಸಾಲುಗಳಲ್ಲಿ ಉಳಿದ ಅತಿಥಿಗಳು. ಇಂಗ್ಲಿಷ್ ಪದ್ಧತಿಯಂತೆ ಗಂಡಸರ ಮಗ್ಗುಲಲ್ಲಿ ಹೆಂಗಸರನ್ನು ಕೂಡಿಸಲಾಗಿತ್ತು.

ಟೊಮಾಟೋ ಸಾರು, ಬ್ರೆಡ್ಡಿನಿಂದ (Tomato Soup and Bread) ಭೋಜನ ಆರಂಭವಾಯಿತು.

ಲಂಡನ್ನಿನ ಹವಾಮಾನದಿಂದ ಆರಂಭವಾದ ಸಂಭಾಷಣೆ ವಿವಿಧ ವಿಷಯರಂಗಗಳನ್ನು ಪ್ರವೇಶಿಸಿತು. ಒಮ್ಮೊಮ್ಮೆ ಎಲ್ಲರೂ ಸಂಭಾಷಣೆಯಲ್ಲಿ ಭಾಗವಹಿಸುತ್ತಿದ್ದರು ; ಒಮ್ಮೊಮ್ಮೆ ಇಬ್ಬಿಬ್ಬರೇ ಮಾತುಕತೆಗೆ ತೊಡಗುತ್ತಿದ್ದರು.

ಪಕ್ಕದಲ್ಲಿ ಕುಳಿತಿದ್ದ ಮಿಸೆಸ್ ಚಂದ್ರಶೇಖರ್ ಅವರಿಗೆ ನಾರಾಯಣಸ್ವಾಮಿ.

"ನೀವು ನಡೆಸುತ್ತಿರುವ 'ಈಸ್ಟ್ ಅಂಡ್ ವೆಸ್ಟ್ ಸೊಸೈಟಿ*ಯ' ವಿಷಯ ಹೆಚ್ಚು ತಿಳಿಯಲು ನಾನು ಕುತೂಹಲಿಯಾಗಿದ್ದೇನೆ" ಎಂದ.

"ಪ್ರಾಚ್ಯ ಪಾಶ್ಚಾತ್ಯದೇಶಗಳಿಗೆ ಸಾಂಸ್ಕೃತಿಕ ಸೌಹಾರ್ದ ಕಲ್ಪಿಸುವುದೇ ನಮ್ಮ ಉದ್ದೇಶ. ನಮ್ಮದು ಎಲ್ಲ ವಿಧದಿಂದಲೂ ಬಡಸಂಸ್ಥೆ. ಬಡವರಿಗಾಗಿ ಬಡವರಿಂದ ನಡೆಸಲ್ಪಡುತ್ತಿರುವ ಸಂಸ್ಥೆ. ಮನೆ ಮಾರಿಲ್ಲದೆ ತೊಳಲಾಡುವ ನಿರ್ಗತಿಕರಿಗೆ ಊಟ, ವಸತಿ ಏರ್ಪಡಿಸಲೂ ನಾವು ಪ್ರಯತ್ನಿಸುತ್ತಿದ್ದೇವೆ. ನೀವೂ ನಿಮ್ಮ ಶ್ರೀಮತಿಯವರೂ ನಮ್ಮ ಸೊಸೈಟಿಗೆ ಬನ್ನಿ."

"ಅಗತ್ಯವಾಗಿ ಆಗಲಿ  ಡಾಕ್ಟರ್ ಚಂದ್ರಶೇಖರ್ ವೈದ್ಯಕೀಯ ವೃತ್ತಿಯಲ್ಲಿರುವರೇ ? "

"ಇಲ್ಲ. ಅವರು ಸಾಹಿತಿಗಳು. ಇಂಗ್ಲಿಷ್ ಮತ್ತು ಭಾರತೀಯ ಪತ್ರಿಕೆಗಳಿಗೆ ಲೇಖನಗಳನ್ನು ಬರೆಯುತ್ತಿರುತ್ತಾರೆ. 'ಅಧ್ಯಾತ್ಮವಾದಿ ಷೆಲ್ಲಿ'—'ಪೂರ್ವ - ಪಶ್ಚಿಮ'—'ಇಬ್ಸನ್ನನ ಸಮಸ್ಯೆ'—'ಹಸಿವಿನ ಯಾತ್ರೆ' ಇವು ಅವರ ಗ್ರಂಥಗಳು."

"ನಿಮ್ಮನ್ನು ನೋಡಿದರೆ ಇಂಗ್ಲಿಷಿನವರೆಂದು ಹೇಳುವುದಕ್ಕೇ ಸಾಧ್ಯವಿಲ್ಲ !"

"ನಾನು ಐರಿಷ್. ಡಾಕ್ಟರು ನನ್ನನ್ನು ಭಾರತೀಯಳನ್ನಾಗಿ ಮಾರ್ಪಡಿಸಿದ್ದಾರೆ."

* ಮಿಸೆಸ್ ಮತ್ತು ಡಾಕ್ಟರ್ ಚಂದ್ರಶೇಖರ್ ಲಂಡನ್ನಿನಲ್ಲಿ ನಡೆಸುತ್ತಿದ್ದ **'ಈಸ್ಟ್ ಅಂಡ್ ವೆಸ್ಟ್ ಸೊಸೈಟಿ'**ಯ ಇತಿಹಾಸವನ್ನು ನಾನು **'ಅಗ್ನಿಕನ್ಯೆ'** ಕತಾಸಂಗ್ರಹದಲ್ಲಿರುವ **'ಪೂರ್ವ ಪಶ್ಚಿಮ'** ಕತೆಯಲ್ಲಿ ವಿವರಿಸಿದ್ದೇನೆ.

"ನಾನೂ ನನ್ನ ಪತ್ನಿ ಇನ್ನೂ ಕೆಲವುಕಾಲ ಇಲ್ಲೇ ಇರುತ್ತೇವೆ. ನಮಗೆ ನಿಜವಾದ ಇಂಗ್ಲಿಷ್ ಜನ, ಅವರ ಸಂಸ್ಕೃತಿಯ ಪರಿಚಯ ನೀವು ಮಾಡಿಕೊಡಬೇಕು"

"ಆಗಬಹುದು – ನೀವಿಲ್ಲಿ ವ್ಯಾಪಾರಮಾಡಲು ಬಂದಿರುವಿರಾ?"

"ಇಲ್ಲ – ನನ್ನ ಮಾವ ವ್ಯಾಪಾರಿಗಳು – ನಾನು ಸಾಹಿತಿ – ಸಮಾಜವಿಜ್ಞಾನ ನನ್ನ ಮೆಚ್ಚಿನ ವಿಷಯ."

"ನನ್ನ ಯಜಮಾನರಿಗೆ ನಿಮ್ಮ ಹೆಚ್ಚಿನ ಪರಿಚಯವಾಗಬೇಕು."

ಎಂದು ಪತಿಯ ಗಮನ ಸೆಳೆದು ಮಿಸೆಸ್ ಚಂದ್ರಶೇಖರ್ ನಾರಾಯಣಸ್ವಾಮಿಯೂ ಗ್ರಂಥಕರ್ತನೆಂದು ತಿಳಿಸಿದರು

ನಾರಾಯಣಸ್ವಾಮಿಯನ್ನು ದಿಟ್ಟಿಸಿ ನೋಡಿದ ಡಾ. ಚಂದ್ರ ಶೇಖರ್

"ನೀವು ಮೈಸೂರಿನವರೇ ?" ಎಂದು ಕೇಳಿದರು.

"ಹೌದು – ನೀವು ?"

"ನಾನೂ ಮೈಸೂರಿನವನೇ – ಇಲ್ಲಿಗೆ ವಿದ್ಯಾಭ್ಯಾಸಕ್ಕೆ ಬಂದೆ. ಮಿಸ್. ಓಷೀಯವರ ಪರಿಚಯವಾಯಿತು ಅವರನ್ನೇ ಲಗ್ನವಾದೆ"

ನಾರಾಯಣಸ್ವಾಮಿಯ ಸಂತೋಷಕ್ಕೆ ಪಾರವಿಲ್ಲದಂತಾಯಿತು. ಸ್ವಜನಾಭಿಮಾನವುಕ್ಕಿ ಅವನು ಕನ್ನಡದಲ್ಲಿಯೇ

"ಇದೇ ನಾಡಿನ ಡಾಕ್ಟರೇ" ಎಂದು ಹೇಳಿದ

"ನನ್ನ ಮಿತ್ರ ಹಾಫ್‌ಮನ್ನನ ಪರಿಚಯಮಾಡಿಕೊಳ್ಳಿ. ಈತ ಅಸ್ವಾದೃಶ ಪ್ರತಿಭಾಶಾಲಿ – ಭಾರತೀಯ ಸಂಗೀತದ ಬಗ್ಗೆ ಸಂಶೋಧನೆ ನಡೆಸಿದ್ದಾನೆ. ಶ್ಲೋಕಗಳನ್ನೂ ಕೀರ್ತನೆಗಳನ್ನೂ ಪಿಟೀಲಿನಲ್ಲಿ ಲೀಲಾಜಾಲವಾಗಿ ನುಡಿಸುತ್ತಾನೆ."

ನಾರಾಯಣಸ್ವಾಮಿ ಹಾಫ್‌ಮನ್ ಕಡೆ ತಿರುಗಿ

"ತಮ್ಮ ಪರಿಚಯವಾದುದು ಹೆಮ್ಮೆಯ ವಿಷಯ ತಾವು ಯಾವಾಗಲಾದರೂ ಭಾರತಕ್ಕೆ ಬಂದಿರುವಿರಾ ?"

"ಇಲ್ಲ – ಭಾರತಪ್ರವಾಸ ಕೈಗೊಳ್ಳಬೇಕೆಂಬ ನನ್ನ ಆಸೆ ಇನ್ನೂ ಈಡೇರಿಲ್ಲ. ಸಾಯುವ ಮುನ್ನ ಭಾರತಕ್ಕೆ ಹೋಗಿ ಬರಲೇಬೇಕೆಂದು

ನಿರ್ಧರಿಸಿದ್ದೇನೆ."

"ಬನ್ನಿ – ಬನ್ನಿ – ನಿಮ್ಮಂಥವರು ಭಾರತಕ್ಕೆ ಬರಬೇಕು. ವಿಶ್ವಶಾಂತಿಗೆ ನಿಮ್ಮಂಥವರ ಮೈತ್ರಿಯೇ ಬುನಾದಿಯಾಗುತ್ತದೆ."

"ನಿಮಗೆ ಸಂಗೀತ ಬರುತ್ತದೆಯೇ, ಮಿ. ಸ್ವಾಮಿ."

"ಇಲ್ಲ – ನನ್ನ ತಾಯಿ ಹೇಳುತ್ತಿದ್ದ ಹಾಡುಗಳ ಕೆಲಭಾಗ ಮಾತ್ರ ಗೊತ್ತಿದೆ. ಅವರೂ ಸಂಗೀತ ಕಲಿತವರಲ್ಲ – ಜನಪದದ ಧಾಟಿಯಲ್ಲಿ ಸ್ತೋತ್ರಗಳನ್ನು ಹೇಳುತ್ತಿದ್ದರು."

"ನಿಮ್ಮ ಶ್ರೀಮತಿಯವರಿಗೆ ಸಂಗೀತ ಬರುತ್ತದೆಯೇ ?"

"ಇಲ್ಲ – ಅವರಿಗೂ ಬರುವುದಿಲ್ಲ. ಅವರು ಗುಜರಾತಿ ಗರ್ಭಾಗಳನ್ನು ಮಾತ್ರ ಹಾಡುತ್ತಾರೆ."

"ನಿಮ್ಮ ತಾಯಿಯವರು ಹೇಳುತ್ತಿದ್ದ ಹಾಡುಗಳನ್ನೊಮ್ಮೆ ನನಗೆ ಹಾಡಿತೋರಿಸಿ – ಭಾರತೀಯ ಸಂಗೀತದ ಹಳೆಯ ಧಾಟಿಗಳನ್ನು ಕೇಳಲು ನಾನು ಇಚ್ಛೆಪಡುತ್ತೇನೆ."

"ನೀವು ಪಾಶ್ಚಾತ್ಯರಾಗಿ ಭಾರತೀಯ ಸಂಗೀತದ ಮೇಲೆ ಇಷ್ಟು ಅಭಿಮಾನ ಹೇಗೆ ಹುಟ್ಟಿತು."

"ಲಲಿತಕಲೆಗಳ ವಿಷಯದಲ್ಲಿ ನಾವು ಪ್ರಾಚ್ಯ, ಪಾಶ್ಚಾತ್ಯ ಎಂದು ಭೇದವೆಣಿಸಲು ಸಾಧ್ಯವಿಲ್ಲ. ನೀವೊಮ್ಮೆ ನನ್ನ ರೂಮಿಗೆ ಬನ್ನಿ – ನಾನು ಮೊಜಾರ್ಟ್, ತ್ಯಾಗರಾಜ, ಬೀಥೋವನ್, ದೀಕ್ಷಿತರ ಕೃತಿಗಳನ್ನು ನುಡಿಸಿ ತೋರಿಸುತ್ತೇನೆ. ಅವುಗಳಲ್ಲಿರುವ ಸಾಮ್ಯ ನಿಮಗೆ ಆಶ್ಚರ್ಯವನ್ನುಂಟುಮಾಡದಿರದು. ಭಾರತವನ್ನರಿಯಲಿಚ್ಛಿಸುವವರು ಅದರ ಸಂಗೀತದ ಬಗ್ಗೆ ತಿಳಿದಿರುವುದು ಅತ್ಯಗತ್ಯ."

"ಭಾರತೀಯ ಸಂಗೀತದ ವೈಶಿಷ್ಟ್ಯವೇನು ?"

"ಸಂಗೀತ, ಸಾಹಿತ್ಯ, ಚಿತ್ರಕಲೆ, ರಾಜಕಾರ್ಯ ಎಲ್ಲವುಗಳ ಗುರಿ ಶಾಂತಿಸಾಧನೆಯೆಂದು ನಾವು ಒಪ್ಪಿಕೊಂಡರೆ, ಈ ಗುರಿ ಮುಟ್ಟುವುದಕ್ಕೆ ಭಾರತೀಯ ಸಂಗೀತ ಬಹಳ ನೆರವಾಗುತ್ತದೆ. ಪಾಶ್ಚಾತ್ಯ ಸಂಗೀತ ಚೇತನಗಳನ್ನು ಕೆರಳಿಸುತ್ತದೆ. ಭಾರತೀಯ

ಸಂಗೀತ ಚೇತನಗಳನ್ನು ಅರಳಿಸುತ್ತದೆ

"ಈ ವಿಷಯ ನೀವು ಸ್ವಲ್ಪ ಉತ್ಪ್ರೇಕ್ಷೆ ಮಾಡುತ್ತಿಲ್ಲವೆ ಮಿ. ಹಾಫ್‌ಮನ್" ಎಂದು ಫಾರೆಸ್ಟರ್ ಕೇಳಿದ

"ಉತ್ಪ್ರೇಕ್ಷೆ ಎಲ್ಲಿಂದ ಬಂತು ?"

"ಭಾರತೀಯ ಸಂಗೀತಕ್ಕೆ ನೀವು ವಿಶ್ವಗುರು ಸ್ಥಾನ ಕೊಡುತ್ತಿರುವಿರಿ"!

"ವಿಶ್ವಗುರುವಾಗಲು ಭಾರತೀಯ ಸಂಗೀತ ಅರ್ಹತೆ ಪಡೆದಿದೆ ಎನ್ನುವುದು ನನ್ನ ಅಭಿಮತ."

"ಮಿ. ಸ್ವಾಮಿ, ನಾನೊಂದು ನೇರವಾದ ಪ್ರಶ್ನೆ ಕೇಳುತ್ತೇನೆ. ಮನಸ್ಸಿಗೆ ಬೇಸರವನ್ನುಂಟುಮಾಡಿಕೊಳ್ಳಬೇಡಿ."

"ಇಲ್ಲ – ಕೇಳಿ, ಮಿ. ಫಾರೆಸ್ಟರ್."

"ಯಾವ ಕಾರಣಕ್ಕೋ ಏನೋ ಇಂದು ಭಾರತದ ಹೆಸರು ಮೆರೆದಾಡುತ್ತಿದೆ. ಭಾರತಕ್ಕೆ ಹೊಸದಾಗಿ ಸ್ವಾತಂತ್ರ್ಯ ಲಭಿಸಿರುವುದೂ ಒಂದು ಕಾರಣವಾಗಿರಬಹುದು ನೆಹ್ರೂ ಅವರಂಥ ಮಹಾವ್ಯಕ್ತಿ ಭಾರತದ ನಾಯಕನಾಗಿರುವುದೂ ಒಂದು ಕಾರಣವಾಗಿರಬಹುದು. ಆದರೆ ಭಾರತವಿಂದು ಸತ್ತ್ವವಿಹೀನವಾಗಿಲ್ಲವೇ ? ನಿಮ್ಮ ದೇಶದ ಇತಿಹಾಸವನ್ನೇ ಪರೀಕ್ಷಿಸಿ ನೋಡಿ ಯಾವ ಕಾಲದಲ್ಲಿಯೂ ಭಾರತ ಒಂದು ರಾಷ್ಟ್ರವಾಗಿರಲಿಲ್ಲ. ಇಂಗ್ಲಿಷರು ಭಾರತವನ್ನು ವಶಪಡಿಸಿಕೊಂಡ ಮೇಲೆ ತಮ್ಮ ಆಡಳಿತ ಸೌಕರ್ಯಕ್ಕಾಗಿ ಅದಕ್ಕೆ ಕೃತಕ ರಾಷ್ಟ್ರೀಯತೆಯನ್ನು ಕರುಣಿಸಿದರು. ಬಡತನ, ರೋಗ, ಸಾಮಾಜಿಕ ಅಧಿವ್ಯಾಧಿಗಳು, ಜಾತಿಮತಗಳ ಗೊಂದಲ, ಸ್ವೇಚ್ಛಾನುಸಂಧಾನದ ಮನೋಭಾವಗಳಿಂದ ಭಾರತ ದುರ್ಬಲವಾಗಿದೆ. ಅಮೇರಿಕಾ ಹಣ ಸಹಾಯವನ್ನೊದಗಿಸದಿದ್ದರೆ ಭಾರತ ತನ್ನ ಸ್ವಾತಂತ್ರ್ಯವನ್ನುಳಿಸಿಕೊಳ್ಳುವುದೂ ಕಷ್ಟವಾಗಿದೆ * ಕಲೆ ಸಾಹಿತ್ಯ ರಾಷ್ಟ್ರದ

*"American prestige is at an all time low in Asia. We are losing the battle of ideas in one defeat after another. Certain of our well-intentioned

ಪ್ರತೀಕ. ಇಂಥ ದುರ್ಬಲ ಭಾರತದ ಸಂಗೀತ, ಸಾಹಿತ್ಯ ವಿಶ್ವಗುರುವಾಗಬಲ್ಲುದೆಂಬ ಹಾಫ್‌ಮನ್ ವಾದ ಅಭಿಮಾನಾತಿರೇಕದ ಮಾತಲ್ಲವೇ ?"

"ಅಮೆರಿಕಾ ನಮಗೆ ನೀಡಿರುವ ನೆರವಿಗಾಗಿ ನಾವು ಕೃತಜ್ಞರಾಗಿದ್ದೇವೆ. ಆದರೆ ಅಮೇರಿಕಾ ಹಣ ಸಹಾಯ ಮಾಡದಿದ್ದರೆ ಭಾರತ ತನ್ನ ಸ್ವಾತಂತ್ರ್ಯ ನೀಗಿಕೊಳ್ಳುತ್ತಿತ್ತು ಎಂಬ ಭಾವನೆ ನ್ಯಾಯವಾದುದಲ್ಲ. ನೀವು ಮೆಕಾರ್ತಿ ಪಕ್ಷದ ಅಮೆರಿಕನ್ ರಾಜಕಾರಣಿಗಳಂತೆ ಮಾತನಾಡುತ್ತಿರುವಿರಿ."

"ನಿಮ್ಮ ವಾದ ಸ್ವಾಭಿಮಾನದ ಸಮರ್ಥನೆಯಾಯಿತೇ ವಿನಾ ನನ್ನ ಆಕ್ಷೇಪಕ್ಕೆ ಉತ್ತರವಾಗಲಿಲ್ಲ."

"ಈ ವಾದದಲ್ಲಿ ನಾನು ಬೆರೆಯಬಹುದೇ ?"

policies have opened ancient wounds. In Asia, all too often, it is our own efforts which most impede us

"But even economic aid – on however vast a scale is not enough. We cannot 'buy' the co-operation and friendship of neighbours anywhere Human confidence is never paid for it must be won. In recent years we have tended to throw our economic weight around. We have let paying take the place of winning. . .India is now an independent nation, but the individual Indian will not feel free until his brother human beings in Indo-china, Africa, and every other colonial area are also free and have been accepted for full membership in the family of nations

"If goodwill and confidence cannot be bought with money, neither can they be won with words. To have meaning, the words must be accompanied by action – meaningful action."

— Dr Robert C. North

*The Pacific Spectator. (Vol ix, No. 1-Winter 1955)* (Editorial)

ಎಂದು ಡಾ. ಚಂದ್ರಶೇಖರ್ ವಿನಯಪೂರ್ವಕವಾಗಿ ಪ್ರಾರ್ಥಿಸಿದರು. ಫಾರೆಸ್ಟರ್ 'ಅಗತ್ಯವಾಗಿ' ಎಂದು ಹೇಳಿದ.

"ನೀವು ಅಮೆರಿಕಾ ದೇಶೀಯರು ಸ್ಪಷ್ಟವಾದಿಗಳು. ನಿಮ್ಮ ಅಭಿಪ್ರಾಯಗಳನ್ನು ನಿರ್ಭೀತಿಯಿಂದ ವ್ಯಕ್ತಮಾಡುತ್ತೀರಿ. ಈ ಗುಣಕ್ಕಾಗಿ ನಾನು ನಿಮ್ಮನ್ನು ಬಹಳ ಮೆಚ್ಚಿಕೊಳ್ಳುತ್ತೇನೆ. ನಿಮ್ಮಂತೆ ನಾನೂ ಸ್ಪಷ್ಟವಾಗಿ ಮಾತನಾಡಿದರೆ ನೀವು ತಪ್ಪು ತಿಳಿದುಕೊಳ್ಳುವುದಿಲ್ಲವಷ್ಟೆ!"

"ಇಲ್ಲ ಡಾ. ಚಂದ್ರಶೇಖರ್ – ಹೇಳಿ"

"ಭಾರತೀಯ ಇತಿಹಾಸವನ್ನು ಆಧಾರವಾಗಿಟ್ಟುಕೊಂಡು, ನೀವು ಭಾರತ ಸತ್ವಹೀನವಾಗಿದೆಯೆಂದು ಅಭಿಪ್ರಾಯಪಟ್ಟಿರಿ ಅಮೇರಿಕಾಕ್ಕೆ ಜೋತುಕೊಂಡೇ ಭಾರತ ಬದುಕಬೇಕೆಂದು ತಿಳಿಸಿದಿರಿ. ಭಾರತ ಹುಟ್ಟಿ ಆರೇಳು ಸಾವಿರ ವರ್ಷಗಳಾದವು, ಅಮೆರಿಕಾ ಜನ್ಮ ತಳೆದು ಐದು ಶತಮಾನಗಳಾಗಿರಬಹುದಷ್ಟೆ! ಅಮೇರಿಕಾ ಸಹಾಯ ನೀಡುತ್ತಿರುವುದು ಈಗ ತಾನೇ – ಇಷ್ಟು ದಿನಗಳವರೆಗೆ ಕ್ಷಾಮಡಾಮರ, ರೋಗರುಜಿನಾದಿಗಳು, ಅಂತಃಕಲಹ, ಜಾತಿವಿದ್ವೇಷಗಳೆಲ್ಲವನ್ನೂ ಅನುಭವಿಸುತ್ತಾ ಭಾರತ ಹೇಗೆ ಬದುಕಿತು ಎಂಬುದನ್ನು ನೀವು ಪರ್ಯಾಲೋಚಿಸಬೇಕು. ಅಮೇರಿಕಾ ಜನ್ಮತಳೆಯುವುದಕ್ಕೆ ಸಹಸ್ರಾರು ವರ್ಷಗಳ ಪೂರ್ವದಲ್ಲಿ ವೇದೋಪನಿಷತ್ತುಗಳು, ರಾಮಾಯಣ, ಭಾರತಗಳು ಭಾರತದಲ್ಲಿ ಹುಟ್ಟಿಕೊಂಡವು, ಯಾಜ್ಞವಲ್ಕ್ಯ, ಬುದ್ಧ, ಶಂಕರ, ರಾಮಾನುಜರಂಥ ಸತ್ಪುರುಷರೂ, ಅಶೋಕ, ಚಂದ್ರಗುಪ್ತ, ವಿಕ್ರಮಾದಿತ್ಯ, ಶ್ರೀಹರ್ಷನಂಥ ಆದರ್ಶ ಚಕ್ರವರ್ತಿಗಳೂ ಭಾರತದಲ್ಲಿ ಬೆಳಗಿದರು. ಭಾರತ ಬದುಕಿರುವುದಕ್ಕೆ ಮೂಲಾಧಾರವಾದ ಕ್ರತುಶಕ್ತಿ ಯಾವುದೆಂದು ನೀವು ವಿವೇಚಿಸಿರುವಿರಾ?"

"ಯಾವದು?"

"ಭಾರತದ ಅಧ್ಯಾತ್ಮ ಸಂಪತ್ತು. ಪರಾಕ್ರಮಗಳ ಮೇಲೆ ರಚಿತವಾದ ಗ್ರೀಸ್, ರೋಮ್, ಅಸ್ಸಿರಿಯಾ, ಈಜಿಪ್ಟ್ ಸಾಮ್ರಾಜ್ಯಗಳು ನಾಮಾವಶೇಷವಾದರೂ ಭಾರತ ಬದುಕಿರುವುದೇಕೆ? ಕೇವಲ

ಸಂಪತ್ತು ಪಾಶವೀಬಲಗಳ ಮೇಲೆ ರಾಷ್ಟ್ರಗಳನ್ನಾಳಿಸಿಕೊಳ್ಳುವುದು ಸಾಧ್ಯವಿಲ್ಲವೆಂದು ಇತಿಹಾಸ ಸ್ಪಷ್ಟಪಡಿಸಿಲ್ಲವೇ? ಇತ್ತೀಚಿನ ಮುಸೋಲಿನಿ, ಹಿಟ್ಲರ್ ಇವರಿಗಾದ ಗತಿಯನ್ನೇ ಜ್ಞಾಪಿಸಿಕೊಳ್ಳಿ. ಭಾರತ ಬೋಧಿಸಿ ಆಚರಿಸಿದ ವಿಶ್ವಕುಟುಂಬ ಭಾವನೆ, ಸರ್ವಮಾನವ್ಯಕ್ಕೂ ಅನ್ವಯಿಸುವ ದೈವಿಕತೆ, ಆತ್ಮನ ಅವಿನಾಶಿತ್ವಗಳಿಂದಲೇ ಅಲ್ಲವೇ ಅದು ಇನ್ನೂ ತಲೆಯೆತ್ತಿ ನಿಂತಿರುವುದು - ಅಮೆರಿಕಾ ಕೇವಲ ಧನ ಬಲದಿಂದ ಬಾಳಬಹುದೆಂದು ನೀವು ಭಾವಿಸಿದ್ದರೆ ಅದು ತಪ್ಪಾಗುತ್ತದೆ. ಶ್ರೀಮಂತಿಕೆಯ ತುತ್ತತುದಿಯನ್ನು ಮುಟ್ಟಿದ್ದ ಗ್ರೀಸ್, ರೋಮ್‌ಗಳ ಪಾಡೇನಾಯಿತು ಸ್ಮರಿಸಿಕೊಳ್ಳಿ. ಭಾರತ ಯಾವ ತ್ಯಾಗ ಮಾರ್ಗವನ್ನುಪದೇಶಿಸಿ ಆಚರಿಸಿದೆಯೊ ಆ ದಾರಿಯಲ್ಲಿ ನಡೆದರೇ ವಿಶ್ವದ ಇತರ ರಾಷ್ಟ್ರಗಳು ಬದುಕಲು ಸಾಧ್ಯ - ಅಮೇರಿಕಾ ಬದುಕಬೇಕಾದರೂ ಇದೇ ಮಾರ್ಗ "

" ಅಮೇರಿಕಾದ ಜೀವನ ಮಾರ್ಗದಿಂದ ಭಾರತ ಕಲಿಯಬೇಕಾದುದು ಏನೂ ಇಲ್ಲ ಎಂದು ನಿಮ್ಮ ಅಭಿಪ್ರಾಯವೇ ? "

" ಅಮೇರಿಕಾದಿಂದ ಭಾರತ ಕಲಿಯಬೇಕಾದುದು ಬಹಳವಾಗಿದೆ ಎಂದು ನಾನು ಧಾರಾಳವಾಗಿ ಒಪ್ಪಿಕೊಳ್ಳುತ್ತೇನೆ. ನಿಮ್ಮ ಸಿಸ್ತು, ಹಾರ್ದಿಕತೆ, ಸಾಹಸಪ್ರಿಯತೆ, ರಾಷ್ಟ್ರಾಭಿಮಾನ ಎಲ್ಲವೂ ಅನುಕರಣೀಯ. ಅಮೇರಿಕಾ ಅಮೇರಿಕಾ ಆಗಿ, ಭಾರತ ಭಾರತವಾಗಿ ಉಳಿಯಲು ಇನ್ನು ಸಾಧ್ಯವಿಲ್ಲ. ವೈಜ್ಞಾನಿಕ ಸಂಶೋಧನೆಗಳು ನಮ್ಮ ಪ್ರತ್ಯೇಕ ಪ್ರತ್ಯೇಕ ಬಾಳುಗಳನ್ನು ಒಂದುಗೂಡಿಸಿದೆ. ಎಲ್ಲ ಸಮಸ್ಯೆಗಳನ್ನೂ ನಾವಿಂದು ವಿಶ್ವದ ದೃಷ್ಟಿಯಲ್ಲಿಯೇ ವೀಕ್ಷಿಸಬೇಕು. ಈ ಬಗ್ಗೆ ಅಮೆರಿಕನ್ನರಾದ ವೆಂಡಲ್ ವಿಲ್ಕಿಯವರು ಪ್ರತಿಪಾದಿಸಿದುದನ್ನು ಪರೀಕ್ಷಿಸಿ ನೋಡಿ."

ಫಾರೆಸ್ಟರ್ ಮಾತು ಮುಂದುವರಿಸುವಷ್ಟರಲ್ಲಿ ಕಲ್ಯಾಣ್‌ಜೀ ಎದ್ದು ಬಂದು ಅತಿಥಿಗಳ ಆವಶ್ಯಕತೆಗಳನ್ನು ವಿಚಾರಿಸಿದ. ಮಾತಿನ ಸರಣಿಗೆ ತಡೆ ಉಂಟಾಯಿತು. ಫಾರೆಸ್ಟರ್ ನಸುನಗುತ್ತಾ

"ಡಾಕ್ಟರ್, ನಿಮ್ಮ ದೇಶದ ಪ್ರಗತಿಯನ್ನು ಕುತೂಹಲ, ಅಭಿ

ಮಾನದಿಂದ ನಾನು ನೋಡುತ್ತಿದ್ದೇನೆ. ನಾನು ಭಾರತದ ವೈರಿಯಲ್ಲ – ಬಹಳ ಜನ ಅಮೆರಿಕನ್ನರ ಮನಸ್ಸಿನಲ್ಲಿ ಭಾರತದ ಬಗ್ಗೆಯಿರುವ ತಪ್ಪು ಅಭಿಪ್ರಾಯ ನಿಮಗೆ ತಿಳಿಯಲೆಂದು ವಾದಮಾಡಿದೆ – ಬನ್ನಿ – ನಾವೇಕೆ ಮನಸ್ಸು ಕೆಡಿಸಿಕೊಳ್ಳಬೇಕು – ಸ್ನೇಹಿತರಾಗಿರೋಣ."

ಎಂದು ಡಾ ಚಂದ್ರಶೇಖರ್ ಮತ್ತು ನಾರಾಯಣಸ್ವಾಮಿಯ ಕೈಕುಲುಕಿದ

ಫ್ರೂಟ್ ಸ್ಯಾಲಾಡ್ ಹಂಚಿಕೆಯಾದ ಮೇಲೆ ಎಲ್ಲರೂ ಮೇಲ ಕ್ಕೆದ್ದರು ಗಂಡಸರೆಲ್ಲರೂ ಧೂಮ್ರಪಾನಕ್ಕಾಗಿ ಪ್ರತ್ಯೇಕ ಕೋಣೆಗೆ ತೆರಳಿದರು. ಹೆಣ್ಣು ಮಕ್ಕಳು ಬೇರೆ ಕೋಣೆಗೆ ಹೋದರು.

ಮಿಸಸ್ ಮಾರಿಸನ್, ಮಿಸಸ್ ಜೇಸ್ ಹಾರ್ದಿಕವಾಗಿ ಇಂದು ಮತಿಗೆ ತಮ್ಮ ಮನೆಗೆ ಬರಲು ಆಮಂತ್ರಣ ನೀಡಿದರು. ಇಂದು ಮತಿಯ ಸೀರೆ ಕುಪ್ಪಸ ಮೆಚ್ಚಿಕೊಂಡ ಮಿಸೆಸ್ ಜೇಸ್ ತಮಗೂ ಸೀರೆಯುಡುವುದನ್ನು ಕಲಿಸಿಕೊಡಬೇಕೆಂದರು.

ಹೆಣ್ಣುಮಕ್ಕಳು ತಮಗೆ ಪ್ರಿಯವಾದ ಒಡವೆ, ವಸ್ತ್ರಗಳನ್ನೇ ಕುರಿತು ಬಹಳ ಹೊತ್ತು, ಮಾತನಾಡುತ್ತ ಕುಳಿತರು.

ಇಂದುಮತಿ ಮಿಸಸ್ ಚಂದ್ರಶೇಖರ್ ಕಡೆ ತಿರುಗಿ

"ನೀವು ಭಾರತೀಯರನ್ನು ವಿವಾಹವಾಗಿರುವುದು ನನಗೆ ಸೋಜಿಗವೆನಿಸುತ್ತದೆ" ಎಂದಳು.

"ಸೋಜಿಗವೇಕೆ ?"

"ನಿಮ್ಮ ಜನ ನುಮ್ಮನಿರುವರೇ ?"

"ನಮ್ಮ ಹಾಗೆ ವಿಚಾರಮಾಡಿ, ನಮ್ಮ ಕಷ್ಟಸುಖಗಳನ್ನರಿತು ಸಹಾನುಭೂತಿ ತೋರಿಸುವವರೇ ನಮ್ಮ ಜನರಲ್ಲವೇ ? ವಿಚಾರಸಾಮ ರಸ್ಯವಿಲ್ಲದಿದ್ದರೆ ನಮ್ಮ ದೇಶ ವಿದೇಶವಾಗುತ್ತದೆ, ನಮ್ಮ ಜನ ವಿಜನ ರಾಗುತ್ತಾರೆ."

"ಸತ್ಯ – ಸತ್ಯ."

ಗಂಡಸರ ಕೋಣೆಯಲ್ಲಿ ಲೋಕಾಭಿರಾಮವಾಗಿ ಮಾತು ನಡೆದಿತ್ತು. ವ್ಯಾಪಾರಿಗಳೇ ಹೆಚ್ಚು ಜನರಿದ್ದರೂ ಅವರು ವ್ಯಾಪಾರದ

ಮಾತುಕತೆಯಲ್ಲಿ ಲೀನವಾಗದಿರುವುದನ್ನು ಕಂಡು ನಾರಾಯಣಸ್ವಾಮಿ 'ಸಾಂಘಿಕಜೀವನ ಈ ಜನಗಳಿಂದ ನಾವು ಕಲಿಯಬೇಕು' ಎಂದು ಕೊಂಡ

ಕಾಫಿ ವಿನಿಯೋಗವಾದ ಮೇಲೆ ಅತಿಥಿಗಳು ಗೃಹಾಭಿಮುಖ ರಾದರು. ಡಾ. ಮತ್ತು ಮಿಸಸ್ ಚಂದ್ರಶೇಖರ್ ಹೊರಡುವ ಮುನ್ನ

"ಯಾವಾಗ ನಮ್ಮ ಮನೆಗೆ ಬರುವಿರಿ ?" ಎಂದು ನಾರಾಯಣ ಸ್ವಾಮಿಯನ್ನು ಕೇಳಿದರು

"ನಿಮಗೆ ಯಾವಾಗ ಪುರಸತ್ತು ?"

"ನಾಳೆ ಸಂಜೆಗೆ ಬರುವಿರಾ ?"

"ಆಗಬಹುದು."

"ನೀವು ಮನೆಯಲ್ಲಿಯೇ ಇರಿ – ನಾನೇ ಬಂದು ಕರೆದು ಕೊಂಡು ಹೋಗುತ್ತೇನೆ."

ಎಂದು ಚಂದ್ರಶೇಖರ್ ಆಶ್ವಾಸನವಿತ್ತರು

ಅತಿಥಿಗಳೆಲ್ಲರೂ ತೆರಳಿದಮೇಲೆ ಮೃದುಲಾ, ಇಂದುಮತಿ, ನಾರಾಯಣಸ್ವಾಮಿಯೊಂದಿಗೆ ಕಲ್ಯಾಣ್‌ಜೀ ಮನೆ ತಲುಪಿದ.

## ೯

ಏರೋಡ್ರೋಮಿನಲ್ಲಿ (Aerodrome) ಸರ್ವೋತ್ತಮ ನಾಲ್ಕು ಗಂಟೆಗೆ ಬಂದಿಳಿದರೆ ಮನೆ ಸೇರಲು ಆರು ಗಂಟೆಯಾಗುತ್ತಿತ್ತು.

ಅವನು ಮನೆ ತಲುಪುವ ವೇಳೆಗೆ ಪದ್ಮ ಸ್ನಾನಕ್ಕೆ ಬಿಸಿನೀರು ಸಿದ್ಧಪಡಿಸಿರುತ್ತಿದ್ದಳು. ಸರ್ವೋತ್ತಮ ಸ್ನಾನಮಾಡಿ ಆಯಾಸ ಪರಿಹಾರಮಾಡಿಕೊಂಡು ಅಲ್ಪೋಪಹಾರ ಸ್ವೀಕರಿಸಿ ಪದ್ಮನೊಂದಿಗೆ ನೇರವಾಗಿ ಕಮಲನ ಮನೆಗೆ ಬರುತ್ತಿದ್ದ.

ಸೌಭಾಗ್ಯನನ್ನು ನೋಡಿ, ಅವಳನ್ನೆತ್ತಿಕೊಂಡು, ಅಪ್ಪಿ ಮುದ್ದಾಡಿ, ಅವಳ ಕೈಯಲ್ಲಿ ಒಂದು ಬೊಂಬೆಯೋ, ಚಾಕಲೇಟ್ ಡಬ್ಬವೋ ಇಟ್ಟ ಹೊರತೂ ಅವನ ಮನಸ್ಸಿಗೆ ಸಮಾಧಾನವಿರಲಿಲ್ಲ.

ಒಂದೊಂದು ದಿನ ಕಮಲ ಬಲವಂತ ಮಾಡಿ ತಂಗಿಯನ್ನೂ ತಂಗಿ ಗಂಡನನ್ನೂ ಅಲ್ಲೇ ಊಟಕ್ಕೆಬ್ಬಿಸುತ್ತಿದ್ದಳು.

ಸೌಭಾಗ್ಯನನ್ನೂ ಕರೆದುಕೊಂಡು ಸರ್ವೋತ್ತಮ ಪದ್ಮ ಹೊರ ಬೀಳುತ್ತಿದ್ದರು. ಲಾಲ್‌ಬಾಗ್ ಅಥವಾ ಕಬ್ಬನ್‌ಪಾರ್ಕಿನಲ್ಲಿ ಸ್ವಲ್ಪ ಕಾಲ ಕಳೆದು ಎಲ್ಲರೂ ಚಾಮುಂಡಿ ಅಥವಾ ತಾಜ್ ಹೋಟೆಲಿನಲ್ಲಿ ಊಟ ಮುಗಿಸಿ ಮನೆ ಸೇರುತ್ತಿದ್ದರು.

ಒಂದು ದಿನ ಪದ್ಮಾ, ಸರ್ವೋತ್ತಮ ಸೌಭಾಗ್ಯನೊಂದಿಗೆ ಮನೆ ಸೇರಿದರು. ದಾರಿಯಲ್ಲೇ ಸೌಭಾಗ್ಯನಿಗೆ ನಿದ್ರೆ ಬಂದುದರಿಂದ ಸರ್ವೋತ್ತಮ ಹೆಗಲಮೇಲೆ ಮಗುವನ್ನು ಹೊತ್ತುಕೊಂಡು ಬರಬೇಕಾಯಿತು.

ಸೌಭಾಗ್ಯನನ್ನು ತಮ್ಮ ಹಾಸಿಗೆಯ ಮೇಲೇ ಮಲಗಿಸಿ ಗಂಡ

ಹೆಂಡತಿ ಮಾತಾಡುತ್ತ ಕುಳಿತರು. ಪದ್ಮ ಮೆಲ್ಲನೆ

" ಸೌಭಾಗ್ಯನನ್ನು ಕಂಡರೆ ನಿಮಗೆಷ್ಟು ಪ್ರೀತಿ " ಎಂದಳು.

" ಚೆಲುವಾಗಿರುವ ಮಕ್ಕಳನ್ನು ಕಂಡರೆ ಯಾರಿಗಾದರೂ ಪ್ರೀತಿ ಯಾಗುತ್ತದೆ. "

" ಕಂಡವರ ಮಕ್ಕಳನ್ನೇ ಇಷ್ಟು ಪ್ರೀತಿಸುವ ನೀವು – ನಿಮ್ಮ ಮಗುವನ್ನು. . ... "

ಪದ್ಮನ ಮುಖ ಇಳಿಮುಖವಾಗಿತ್ತು. ಕಣ್ಣಂಚಿನಲ್ಲಿ ಹನಿ ಗೂಡಿತ್ತು. ಮುಖದ ಮೇಲೆ ರಾಗಲೇಪನವಾಗಿ ಮನಸ್ಸಿನ ಆವೇಗಕ್ಕೆ ಕನ್ನಡಿ ಹಿಡಿದಂತಾಗಿತ್ತು.

ಸರ್ವೋತ್ತಮ ನಲ್ಮೆಯಿಂದ ಹೆಂಡತಿಯನ್ನು ಹತ್ತಿರ ಬರಮಾಡಿ ಕೊಂಡು, ಅವಳ ಗಲ್ಲ ಹಿಡಿದೆತ್ತಿ

" ನೀನು ಜಾಣೆಯಲ್ಲ ಪದ್ದೂ " ಎಂದ.

" ಏಕೆ ? "

" ಇಲ್ಲದ ಕೊರಗು ಏಕೆ ಹಚ್ಚಿಕೊಳ್ಳುವೆ. "

" ನಿಮ್ಮ ಮನಸ್ಸಿನ ದುಃಖ ನನಗರ್ಥವಾಗುವುದಿಲ್ಲವೆಂದು ತಿಳಿದಿರಾ ? "

" ನಿನ್ನನ್ನು ನೋಡಿದರೆ ನನ್ನ ದುಃಖ ಮರೆತುಹೋಗುತ್ತದೆ – ಸೌಭಿಯನ್ನಪ್ಪಿ ಮುದ್ದಾಡಿದರೆ ಮನಸ್ಸಿಗೆ ತೃಪ್ತಿಯಾಗುತ್ತದೆ. ಸೌಭಿ ನಮ್ಮ ಮಗಳೇ ಅಲ್ಲವೇ ? "

" ಅವಳನ್ನು ನಮಗೇ ಕೊಟ್ಟುಬಿಡು ಎಂದು ಅಕ್ಕನನ್ನು ಕೇಳಿದೆ."

" ಅದಕ್ಕೆ ಅವರು ಏನಂದರು ? "

" ಆಗುವುದಿಲ್ಲ–ನಿನ್ನ ಮಗುವನ್ನು ನೀನು ಎತ್ತಿಕೋ ಎಂದಳು."

" ಕಮಲಕ್ಕನೂ ಹೀಗೆ ಭೇದವೆಣಿಸುವರೇ ? "

" ಆ ಅರ್ಥದಲ್ಲಲ್ಲ ಅವಳು ಅಂದದ್ದು ! "

" ಓಹೋ ! ಸರಿಸರಿ ಈಗ ತಿಳಿಯಿತು. ನನ್ನ ಮಂಕುಬುದ್ಧಿಗೆ ಕಮಲಕ್ಕನ ಮಾತಿನ ರಹಸ್ಯ ಅರ್ಥವಾಗಲಿಲ್ಲ. "

" ನನಗೆ.... ನನಗೆ.... "

" ಹೇಳು – ಸಂಕೋಚವೇಕೆ ? "

" ನೀವು ನಗುತ್ತೀರಿ "

" ಇಲ್ಲ ಬಾಯಿಮುಚ್ಚಿಕೊಳ್ಳಲೇ ? "

" ನನಗೆ ಮಕ್ಕಳಾಗುವುದಂತೆ ! "

" ಯಾರನ್ನಾದರೂ ಶಾಸ್ತ್ರ – ಕಣಿ ಕೇಳಿದೆಯಾ ? "

" ಇಲ್ಲ – ಕಮಲಕ್ಕ ಹೇಳಿದಳು. "

" ಶಂಖದಿಂದ ಬಿದ್ದರೇ ತೀರ್ಥ. "

" ಮುಂದೆ ಒಂದು ಮಾತು ಹೇಳಿದಳು "

" ಯಾವದದು ? "

" ನೀವು ಹದಿನೈದು ದಿವಸ ರಜಾ ತೆಗೆದುಕೊಳ್ಳಲು ಸಾಧ್ಯವೇ?"

" ಏಕೆ ? "

" ಏಕೆ ಏನು ಎಂತಾ ಕೇಳಬೇಡಿ – ಹೇಳಿ. "

" ಅಗತ್ಯಬಿದ್ದರೆ ತೆಗೆದುಕೊಳ್ಳಬಹುದು. ಹೊಸ ಪ್ಲೇನುಗಳು ಬಂದಿವೆ. ಕೂಡಲೆ ರಜಾ ಸಿಕ್ಕುವುದು ದುಸ್ತರ "

" ನಾನೊಂದು ಸಣ್ಣ ಆಪರೇಷನ್ ಮಾಡಿಸಿಕೊಂಡರೆ ಎಲ್ಲವೂ ಸರಿಹೋಗುವುದಂತೆ "

" ಆಪರೇಷನ್ !!! "

" ಆಪರೇಷನ್ನಿನಿಂದ ಹಿಂಸೆಯಾಗುವುದಿಲ್ಲವಂತೆ ! "

" ಮಕ್ಕಳಾಗದಿದ್ದರೂ ಚಿಂತೆಯಿಲ್ಲ–ಆಪರೇಷನ್ ಬೇಕಾಗಿಲ್ಲ. "

" ನೀವು ಬಲು ಮೊಂಡರು ಕಣ್ರೀ !"

" ಯಾವದಕ್ಕಾಗಿಯೂ ನಿನ್ನ ಪ್ರಾಣ ಪಣವಿಡಲು ನಾನು ಸಿದ್ಧವಾಗಿಲ್ಲ. "

" ಕಮಲಕ್ಕ ನನಗೆ ಕೇಡು ಬಯಸುತ್ತಾಳೆಯೇ ?"

" ಛೆ ! ಛೆ ! ಎಲ್ಲಿಯಾದರೂ ಉಂಟೇ ?"

" ಡಾ. ಶಂಕರಾಂಬಾಳ್ ತುಂಬ ದಕ್ಷರಾದ ಡಾಕ್ಟರು. ಸ್ವಲ್ಪವೂ ಹಿಂಸೆಯಾಗದಂತೆ ಅವರು ಆಪರೇಷನ್ ಮಾಡುತ್ತಾರೆ – ಹೆದರುವ ಕಾರಣವಿಲ್ಲ ಎಂದು ಅಕ್ಕ ಹೇಳಿದಳು. "

" ನಿನಗೆ ಭಯವಾಗುವುದಿಲ್ಲವೇ ಪದ್ದು. "

" ಇಲ್ಲ ದೊರೆ – ನೀವಿರುವಾಗ ನನಗೇತರ ಭಯ. "

ಪತಿಯ ಸಂತೋಷಾರ್ಥವಾಗಿ ಅಬಲೆ ಸಬಲೆಯಾದುದನ್ನು ಸರ್ವೋತ್ತಮ ಕಣ್ಣಾರೆ ಕಂಡ.

ಸಂತಾನೇಚ್ಛೆ ಪದ್ಮನಿಗೆ ಅಸೀಮ ಬಲವನ್ನೊದಗಿಸಿತ್ತು – ಆ ಇಚ್ಛೆಯ ಜತೆಗೆ ಪತಿಯ ಮನಸ್ಸಿಗೆ ತೃಪ್ತಿಯನ್ನುಂಟುಮಾಡಬೇಕೆನ್ನುವ ಆಕಾಂಕ್ಷೆ.

ಹೆಣ್ತನದ ಸಚೇತನಸ್ವರೂಪ ತಳೆದು ಎದುರಿಗೆ ನಿಂತಿದ್ದ ಹೆಂಡತಿಯನ್ನು ಅಭಿಮಾನಗೌರವಪೂರ್ವಕವಾಗಿ ಸರ್ವೋತ್ತಮ ನೋಡಿ

" ಆಪರೇಷನ್ ಮಾಡಿಸುವುದಕ್ಕೆ ನಾನು ಕೂಡಲೆ ಒಪ್ಪಲಾರೆ ಪದ್ದೂ – ನಾಳೆ ಡಾ. ಶಂಕರಾಂಬಾಳ್ ಅವರನ್ನು ಕಂಡು ಬರೋಣ. ಅವರ ಸಲಹೆ ನನ್ನ ಮನಸ್ಸಿಗೆ ಒಪ್ಪಿಗೆಯಾದರೆ ಆಪರೇಷನ್ನಿಗೆ ಸಮ್ಮತಿಸುತ್ತೇನೆ – ರಜಕ್ಕೂ ಬರೆದುಕೊಳ್ಳುತ್ತೇನೆ."

ಸುಪ್ರೀತಳಾದ ಪದ್ಮ ಕೃತಜ್ಞತೆಯಿಂದ ಗಂಡನನ್ನಪ್ಪಿದಳು.

ಮಾರನೆಯ ದಿನ ಸರ್ವೋತ್ತಮ ಡಾ. ಶಂಕರಾಂಬಾಳ್ ಅವರಿಗೆ ಫೋನ್ ಮಾಡಿ ಮಧ್ಯಾಹ್ನಾನಂತರ ಮೂರು ಗಂಟೆಗೆ ಅವರನ್ನು ಭೆಟ್ಟಿಯಾಗುವ ಅವಕಾಶ ಕಲ್ಪಿಸಿಕೊಂಡ.

ಮೂರು ಗಂಟೆಗೆ ಸರಿಯಾಗಿ ಟ್ಯಾಕ್ಸಿಯಲ್ಲಿ ಡಾ.ಶಂಕರಾಂಬಾಳ್ ಅವರ ಮನೆಗೆ ಹೋದ ಸರ್ವೋತ್ತಮ ಪದ್ಮನನ್ನು, ದಾದಿ ಸ್ವಾಗತಿಸಿ,

" ಕುಳಿತುಕೊಳ್ಳಿ. ಡಾಕ್ಟರು ಸ್ವಲ್ಪ ಹೊತ್ತಿನಲ್ಲಿ ಬಿಡುವುಮಾಡಿಕೊಳ್ಳುತ್ತಾರೆ " ಎಂದಳು.

ಹಜಾರದಲ್ಲಿ ಕುಳಿತಿದ್ದ ಮೂವರು ರೋಗಿಗಳ ಪರೀಕ್ಷೆಯಾದ ಮೇಲೆ ಡಾಕ್ಟರೇ ಹೊರಗೆ ಬಂದು

" ಪದ್ಮಮ್ಮ " ಎಂದರು.

ಪದ್ಮ ಎದ್ದು ನಿಂತುಕೊಂಡು ಡಾಕ್ಟರಿಗೆ ಕೈ ಮುಗಿದಳು.

ಡಾಕ್ಟರು ನಸುನಗುತ್ತಾ

" ಒಳಗೆ ಬಾಮ್ಮ "

ಎಂದು ಪದ್ಮನನ್ನು ಒಳಕ್ಕೆ ಕರೆದುಕೊಂಡು ಹೋದರು.

ಪದ್ಮನ ವಿವಾಹ, ದಾಂಪತ್ಯಜೀವನದ ಬಗ್ಗೆ ಕೆಲವು ಅವಶ್ಯ ಸಂಗತಿಗಳನ್ನು ತಿಳಿದುಕೊಂಡಮೇಲೆ ಡಾ. ಶಂಕರಾಂಬಾಳ್ ಅವರು ಅವಳ ದೇಹೇಂದ್ರಿಯಗಳನ್ನು ಸೂಕ್ಷ್ಮವಾಗಿ ಪರೀಕ್ಷಿಸಿ

"ಮಕ್ಕಳಾಗಬೇಕೇಮ್ಮ. " ಎಂದರು.

" ಹೌದು ಡಾಕ್ಟರೇ "

" ಆಪರೇಷನ್ನಿನಿಂದ ಓಂಸೆಯಾದರೆ ! "

" ಆದರೆ ಆಗಲಿ ಡಾಕ್ಟರೆ–ನಾನು ಹೆದರುವುದಿಲ್ಲ. ತುಂಬ ಹಿಂಸೆಯಾಗುತ್ತದೆಯೇ ? "

" ಇಲ್ಲ ಮಗೂ–ನಿನಗೆ ಸ್ವಲ್ಪವೂ ನೋವಾಗದಂತೆ ನಾನು ನೋಡಿಕೊಳ್ಳುತ್ತೇನೆ. "

" ನನಗೊಂದು ಉಪಕಾರ ಮಾಡುವಿರಾ ಡಾಕ್ಟರೆ. "

" ಹೇಳು ಪದ್ಮಾ. "

" ನನ್ನ ಯಜಮಾನರು ಬಂದಿದ್ದಾರೆ. ಅವರಿಗೊಂದು ಧೈರ್ಯದ ಮಾತು ಹೇಳಬೇಕು. "

" ಆಗಬಹುದು. ಅವರು ಏನು ಕೆಲಸ ಮಾಡುತ್ತಿದ್ದಾರೆ."

" ಏರ್ ಪೈಲಟ್. "

" ಏರ್ ಪೈಲಟ್ ಆಗಿ ಒಂದು ಸಣ್ಣ ಆಪರೇಷನ್ನಿಗೆ ಅವರು ಹೆದರುತ್ತಾರೆಯೇ ? "

ಪದ್ಮ ನಸುನಾಚಿ ಕತ್ತು ತಗ್ಗಿಸಿದಳು. ಡಾಕ್ಟರು ಮುಗುಳ್ನಗೆ ಬೀರಿ

" ತಿಳಿಯಿತು–ತಿಳಿಯಿತು. "

ಎಂದು ತಮ್ಮ ದಾದಿಯನ್ನು ಕರೆದು ಸರ್ವೋತ್ತಮನನ್ನು ಒಳಕ್ಕೆ ಬರಮಾಡೆಂದರು.

ನಿಂತಿದ್ದ ಸರ್ವೋತ್ತಮನನ್ನು ಕೂಡಲು ಹೇಳಿ

" ನಿಮ್ಮ ಪತ್ನಿ ಆಪರೇಷನ್ ಮಾಡಿಸಿಕೊಳ್ಳಲು ನಿಮ್ಮ ಒಪ್ಪಿಗೆ ಯಿದೆಯೇ ? " ಎಂದು ಕೇಳಿದರು.

" ಆಪರೇಷನ್ನಿನಿಂದ ಅಪಾಯವಿಲ್ಲವೇ ? "

"ಸ್ವಲ್ಪವೂ ಭಯವಿಲ್ಲ. ಗರ್ಭಾಶಯ ಸ್ವಲ್ಪ ಅಸ್ತವ್ಯಸ್ತವಾಗಿದೆ. ಇದು ಬಹಳ ಸಣ್ಣ ಆಪರೇರ್ಷ–ನಿಮ್ಮ ಪತ್ನಿ ಕೆಲವು ದಿನ ಆಸ್ಪತ್ರೆಯಲ್ಲಿ ಇರಬೇಕಾಗುತ್ತದೆ. ಆಪರೇರ್ಷ ಆದಮೇಲೆ ಒಂದೆರಡು ತಿಂಗಳು ವಿಶ್ರಾಂತಿ ಪಡೆಯಬೇಕಾಗುತ್ತದೆ. "

" ನೀವು ಧೈರ್ಯ ಹೇಳುವಾಗ ಯೋಚನೆಯಿಲ್ಲ. ಆಗಬಹುದು. ನನಗೆ ರಜಾ ಸಿಕ್ಕುವುದಕ್ಕೆ ಇನ್ನೂ ಒಂದು ವಾರವಾಗುತ್ತದೆ. ಅನಂತರ ಆಗಬಹುದು. "

" ಅನುಕೂಲ ಮಾಡಿಕೊಂಡು ಬನ್ನಿ. ನಿಮ್ಮ ಪತ್ನಿಯ ಯೋಗಕ್ಷೇಮ ನೋಡಿಕೊಳ್ಳುವ ಜವಾಬ್ದಾರಿ ನನಗಿರಲಿ " ಎಂದರು.

ಸರ್ವೋತ್ತಮ ತನ್ನ ಕಿಸೆಯಿಂದ ಹಣ ತೆಗೆದು

" ಫೀಸ್ ಎಷ್ಟು ?" ಎಂದು ಕೇಳಿದ.

" ನಿಮ್ಮ ಪತ್ನಿ ತಾಯಿಯಾಗುವುದನ್ನು ನೋಡಿದರೆ ನನ್ನ ಫೀಸು ಮುಟ್ಟುತ್ತದೆ. "

" ಹಾಗೆಂದರಾಗುತ್ತದೆಯೇ, ನೀವು ನಮಗಾಗಿ ತುಂಬ ಶ್ರಮ ವಹಿಸಿರುವಿರಿ ; ಕಾಲ ವ್ಯಯಮಾಡಿರುವಿರಿ. "

"ಡಾಕ್ಟರುಗಳು ಕೇವಲ ಹಣಮಾಡುವ ಯಂತ್ರಗಳಲ್ಲ, ಮಿ. ಸರ್ವೋತ್ತಮ. ತರುಣದಂಪತಿಗಳಾದ ನೀವು ಸುಖವಾಗಿದ್ದರೆ ಸಾಕು. ತಾಯಿತಂದೆ ಸಂತೋಷವಾಗಿದ್ದರೇ ಸತ್ಸಂತಾನ ಲಭಿಸುವುದು. ಡಾಕ್ಟರುಗಳಾದ ನಾವು ಸತ್ಪ್ರಜೆಗಳನ್ನು ಸ್ವಾಗತಿಸುವ ಹರಿಕಾರರೂ ಆಗಿದ್ದೇವೆ."

ಎಂದು ಹೇಳಿ ಪದ್ಮನ ಭುಜ ಹಿಡಿದು

" ಬೇಗ ಬಾ ಮಗು. ನಿನಗೆ ಸ್ವಲ್ಪವೂ ಕಷ್ಟವಾಗದಂತೆ ನಾನು ನೋಡಿಕೊಳ್ಳುತ್ತೇನೆ " ಎಂದರು.

ಟ್ಯಾಕ್ಸಿಯಲ್ಲಿ ಕುಳಿತ ಪದ್ಮನ ಕಣ್ಣುಗಳಿಂದ ಧಾರಾವಾಹಿನಿ ಹೊರಟಿತು.

"ಏಕೆ ಪದ್ಮಾ ಅಳುತ್ತಿರುವೆ" ಎಂದು ಸರ್ವೋತ್ತಮ ಕೇಳಿದ.

"ಡಾಕ್ಟರು ಎಷ್ಟು ಒಳ್ಳೆಯವರು. ಹೊಟ್ಟೆಯಲ್ಲಿ ಹುಟ್ಟಿದ ಮಗಳನ್ನು ಕಾಣುವಂತೆ ನನ್ನನ್ನು ಕಂಡರು"

"ನಿಜ ಪದ್ಮ–ನಿನ್ನ ಡಾಕ್ಟರು ಅಂತಃಕರಣಜೀವಿ. ಸವಿ ಮಾತಿನಿಂದಲೇ ರೋಗಿಗಳ ಕಾಹಿಲೆಗಳನ್ನು ಗುಣಪಡಿಸುವ ಶಕ್ತಿ ದೇವರು ಅವರಿಗೆ ಅನುಗ್ರಹಿಸಿದ್ದಾನೆ" ಎಂದ.

## ೧೦

ಸಮಾನಧರ್ಮ, ಸಮಾನ ಅಭಿರುಚಿ, ಸಮಾನವ್ಯಸನಗಳು, ಇಂದುಮತಿ,* ಮೃದುಲಾಬಾಯಿಯ ಸ್ನೇಹಕ್ಕೆ ಬಲವಾದ ಬೆಸುಗೆ ಹಾಕಿದ್ದವು ಕೆಲಕಾಲದಿಂದ ಲಂಡನ್ನಿನಲ್ಲಿ ವಾಸವಾಗಿದ್ದ ಮೃದುಲ ನಿಂದ ತಾನು ಕಲಿಯಬೇಕಾದುದು ಬಹಳವಾಗಿದೆಯೆಂಬ ಭಾವನೆ ಇಂದುಮತಿಯ ಮನಸ್ಸಿನಲ್ಲಿ ದೃಢವಾಗಿ ನೆಟ್ಟಿತ್ತು.

ಸಂಜೆ ಹೊರಗೆ ಹೋಗಲು ಅಲಂಕರಿಸಿಕೊಳ್ಳುತ್ತಿದ್ದ ಇಂದು ಮತಿಯ ಬಳಿಗೆ ಮೃದುಲಾ ಬಂದು

" ಎಲ್ಲಿಗೆ ಹೊರಟಿರುವಿರಿ, ಇಂದುಮತಿ ಬಹೆನ್ " ಎಂದು ಕೇಳಿದಳು.

" ಈಸ್ಟ್ ಅಂಡ್ ವೆಸ್ಟ್ ಸೊಸೈಟಿಗೆ ಕರೆದುಕೊಂಡು ಹೋಗಲು ಡಾ. ಚಂದ್ರಶೇಖರ್ ಬರುತ್ತಾರೆ – ಬೇಗ ಸಿದ್ಧವಾಗು ಎಂದು ಯಜಮಾನರು ಹೇಳಿದರು. "

" ನೀವು ಅಲ್ಲಿಗೆಲ್ಲಾ ಏತಕ್ಕೆ ಹೋಗಬೇಕೋ ? "

" ಹೋಗಬಾರದೇ ? "

" ಈಸ್ಟ್ ಅಂಡ್ ವೆಸ್ಟ್ ಸೊಸೈಟಿಯೆಂದರೆ ಕಾಳಿಕಂಗಾಳಿಗಳ ಸಂತೆ. ಪ್ರತಿಷ್ಠಿತ ಜನರು ಯಾರೂ ಅಲ್ಲಿ ಕಾಲಿಡುವುದಿಲ್ಲ. "

" ಡಾ. ಚಂದ್ರಶೇಖರ್ ನಿಮ್ಮ ಯಜಮಾನರ ಸ್ನೇಹಿತರು. "

" ಲಂಡನ್ನಿನಲ್ಲಿರುವ ಭಾರತೀಯರೆಲ್ಲರೂ ನಮ್ಮ ಯಜಮಾನರ ಸ್ನೇಹಿತರೇ. ಈ ಸೊಸೈಟಿಯನ್ನು ನಾವು ಹೆಚ್ಚಾಗಿ ಹಚ್ಚಿಕೊಂಡಿಲ್ಲ. ಈ ಸಂಜೆ ನಿಮ್ಮನ್ನು ಲೇಡಿ ಫಾಕ್ಸ್‌ರ 'ಛಾರಿಟಿ ಬಜಾರಿ'ಗೆ (charity

bazaar) ಕರೆದುಕೊಂಡು ಹೋಗಬೇಕೆಂದಿದ್ದೆ. ಲೇಡಿ ಆಸ್ಟರ್, ಲೇಡಿ ಮೌಂಟ್‌ಬ್ಯಾಟನ್, ಲೇಡಿ ಕ್ವೀನ್ಸ್‌ಬರಿ ಮೊದಲಾದವರೆಲ್ಲಾ ಅಲ್ಲಿಗೆ ಬರುತ್ತಾರೆ. ರಾಣಿ ಎಲಿಜಬತ್ ಬರುವ ನಿರೀಕ್ಷಣೆಯೂ ಇದೆ."

"ನನಗೆ ಆಮಂತ್ರಣವಿಲ್ಲವಲ್ಲಾ !"

"ಆಮಂತ್ರಣ ದೊರಕಿಸುವ ಭಾರ ನನಗಿರಲಿ."

"ಸೊಸೈಟಿಗೆ ನೀವೊಬ್ಬರೇ ಹೋಗಿ ಎಂದು ಯಜಮಾನರಿಗೆ ಹೇಳಿಬಿಡುತ್ತೇನೆ."

ಎಂದವಳೇ ನಾರಾಯಣಸ್ವಾಮಿ ಬಳಿಗೆ ಬಂದು

"ನಾನು ಛಾರಿಟಿ ಬಜಾರಿಗೆ ಹೋಗುತ್ತೇನೆ. ನೀವು ಡಾ. ಚಂದ್ರಶೇಖರ್ ಜತೆಯಲ್ಲಿ ಹೋಗಿ ಬನ್ನಿ" ಎಂದಳು.

ನಾರಾಯಣಸ್ವಾಮಿ ತುಸು ಅಸಮಾಧಾನದಿಂದ

"ನಾವಿಬ್ಬರೂ ಬರುವುದಾಗಿ ಮಾತು ಕೊಟ್ಟಿದ್ದೆವು"

"ಇನ್ನೊಂದು ದಿನ ನಾನು ಬರುತ್ತೇನೆ ಇವತ್ತು ನೀವು ಹೋಗಿ ಬನ್ನಿ"

ನಾರಾಯಣಸ್ವಾಮಿ ಒಪ್ಪಿಕೊಳ್ಳದೆ ನಿರ್ವಾಹವಿರಲಿಲ್ಲ.

ಸಂಜೆ ಆರು ಗಂಟೆಗೆ ಸರಿಯಾಗಿ ಕರೆಯಲು ಬಂದ ಡಾ. ಚಂದ್ರಶೇಖರ್ ಜತೆಯಲ್ಲಿ ನಾರಾಯಣಸ್ವಾಮಿಯೊಬ್ಬನೇ ಹೊರಡಬೇಕಾಯಿತು

"ಶ್ರೀಮತಿಯವರು ಬರಲಿಲ್ಲವೆ?" ಎಂದು ಚಂದ್ರಶೇಖರ್ ಕೇಳಿದರು.

"ಇಲ್ಲ ಅವರಿಗೆ ಬೇರೆ ಕೆಲಸವಿದೆ. ಇನ್ನೊಂದು ದಿನ ಅವರೊಂದಿಗೆ ಬರುತ್ತೇನೆ"

"ಮಿಸಸ್ ಚಂದ್ರಶೇಖರ್ ಅವರಿಗೆ ಆಶಾಭಂಗವಾಗುತ್ತದೆ."

"ನಾನು ಅವರ ಕ್ಷಮೆ ಬೇಡುತ್ತೇನೆ. ಟ್ಯಾಕ್ಸಿಯಲ್ಲಿ ಹೋಗೋಣ."

"ಬೇಡ ಬನ್ನಿ. ನಿಷ್ಕಾರಣವಾಗಿ ಹಣ ಏಕೆ ಖರ್ಚು ಮಾಡಬೇಕು–ಬಸ್ಸಿನಲ್ಲಿ ಹೋಗೋಣ."

ಬಸ್ ಸೋಹೋ ಮಾರ್ಗವಾಗಿ ಹೋಗುತ್ತಿದ್ದಂತೆ ಬದಲಾಗುತ್ತಿದ್ದ ಆರ್ಥಿಕ ಮಟ್ಟವನ್ನು ನಾರಾಯಣಸ್ವಾಮಿ ಗಮನಿಸಿದ. ಸೋಹೋ ರಸ್ತೆಗಳಲ್ಲಿ ತಿರುಗಾಡುತ್ತಿದ್ದ ಜನರ ಮೈ ಮೇಲೆ ಬಾಂಡ್ ಸ್ಟ್ರೀಟ್ (Bond Street) ದರ್ಜಿಗಳು ರಚಿಸಿದ್ದ ಸೂಟುಗಳಿರಲಿಲ್ಲ. ವೃದ್ಧರು, ನಿರಾಶ್ರಿತರು, ನಿರ್ಗತಿಕರು, ದಿಕ್ಕು ದೆಸೆಯಿಲ್ಲದ ಮಕ್ಕಳು ಕಾಲ್ನಡಿಗೆಯ ಹಾದಿಗಳಲ್ಲಿ ತುಂಬಿದ್ದರು.

" ಲಂಡನ್ನಿನ ಈ ಭಾಗ ನೋಡಿದರೆ ನಮ್ಮ ದೇಶದ ಜ್ಞಾಪಕ ಬರುತ್ತದೆ. ಡಾ. ಚಂದ್ರಶೇಖರ್. "

" ನೀವಿರುವುದು ಲಂಡನ್ನಿನ ವೆಸ್ಟ್ ಎಂಡ್ (West End)– ಇದು ಈಸ್ಟ್ ಎಂಡ್ (East End) – ಅದು ಶ್ರೀಮಂತರ ಲೋಕ – ಇದು ಬಡವರ ಭೂಮಿ "

ಸೋಹೋ ಪಾರ್ಕಿನ ಬಳಿ ಇಬ್ಬರೂ ಬಸ್ಸಿನಿಂದಿಳಿದು ಕಾಲ್ನಡಿಗೆಯಲ್ಲಿ ಹೊರಟರು. ದಾರಿಯಲ್ಲಿ ಸಿಕ್ಕಿದ ಹಲವಾರು ಜನ ಡಾ. ಚಂದ್ರಶೇಖರ್ ಅವರಿಗೆ

" ಗುಡ್ ಈವನಿಂಗ್ ಸರ್ (Good Evening Sir)"

ಎನ್ನುತ್ತಿದ್ದರು.

ಡಾಕ್ಟರು ಪ್ರತಿಯೊಬ್ಬರಿಗೂ ' ಗುಡ್ ಈವನಿಂಗ್ ' ಹೇಳುತ್ತಾ ಅಲ್ಲಲ್ಲಿ ಒಬ್ಬ ವೃದ್ಧ, ಒಂದು ಮಗುವನ್ನು ಮಾತನಾಡಿಸುತ್ತ ಮುಂದೆ ನಡೆದರು. ಈ ದೃಶ್ಯ ನೋಡುತ್ತಿದ್ದ ನಾರಾಯಣಸ್ವಾಮಿ

" ಈ ಜನ ನಿಮ್ಮನ್ನೆಷ್ಟು ಪ್ರೀತಿಸುತ್ತಾರೆ ಡಾಕ್ಟರ್" ಎಂದ.

" ಅವರಲ್ಲಿ ನಾನೂ ಒಬ್ಬ – ಅವರಂತೆ ನಾನೂ ಒಬ್ಬ ಬಡವ."

" ಸ್ವಾತಂತ್ರ್ಯ ಬಂದ ಮೇಲೆ ಈ ಜನ ನಮ್ಮನ್ನು ದ್ವೇಷಿಸುವರೆಂದಿದ್ದೆ ! "

" ಏಕೆ ? "

" ಭಾರತ ಸಾಮ್ರಾಜ್ಯದಂಥ ಕರೆಯುವ ಹಸು ಕೈಬಿಟ್ಟು ಹೋಯಿತಲ್ಲಾ ಎಂದು."

" ನಿಜಸ್ಥಿತಿ ಹಾಗಿಲ್ಲ ಮಿ. ಸ್ವಾಮಿ. ಬ್ರಿಟನ್ನಿನ ಕಾರ್ಮಿಕ

ವರ್ಗ ಸತತವಾಗಿ ನಮ್ಮ ಸ್ವಾತಂತ್ರ್ಯಸಂಗ್ರಾಮಕ್ಕೆ ನೆರವು ನೀಡಿದೆ. ಬಂಡವಳಿಗರ ಶೋಷಣೆಗೊಳಗಾಗಿರುವ ಕಾರ್ಮಿಕರು ಜಗತ್ತಿನ ಎಲ್ಲ ಶೋಷಿತವರ್ಗಗಳ ವಿಮುಕ್ತಿಯ ಬಗ್ಗೆ ಆಸಕ್ತರಾಗಿದ್ದಾರೆ ಸ್ವತಂತ್ರ ಭಾರತ ಬಂಡವಳಿಗರ ಶೋಷಣೆಯನ್ನು ಕೊನೆಗಾಣಿಸಬಲ್ಲುದೆಂಬ ನಂಬಿಕೆ ಇಲ್ಲಿನ ಕಾರ್ಮಿಕರಲ್ಲಿ ಬಲವಾಗಿ ಮೂಡಿದೆ. ಶಾಂತಿ ಸಾಧನೆಗಾಗಿ, ಶೋಷಿತ ಜನಾಂಗಗಳ ವಿಮುಕ್ತಿಗಾಗಿ ಭಾರತ ಮಾಡುತ್ತಿರುವ ಪ್ರಯತ್ನವನ್ನು ಇಲ್ಲಿನ ಕಾರ್ಮಿಕರು ಬಹುವಾಗಿ ಮೆಚ್ಚಿಕೊಂಡಿದ್ದಾರೆ."

"ಈ ಮಧುರಮೈತ್ರಿಗೆ ನಿಮ್ಮಂಥವರ ನಿಷ್ಕಾಮಸೇವೆಯೂ ಕಾರಣವಾಗಿವೆ ಡಾ. ಚಂದ್ರಶೇಖರ್"

ಮನೆಯ ಹೆಬ್ಬಾಗಿಲ ಬಳಿ, ಅತಿಥಿಗಳ ಆಗಮನ ನಿರೀಕ್ಷಿಸುತ್ತ ನಿಂತಿದ್ದ ಡಾ. ಚಂದ್ರಶೇಖರರ ಪತ್ನಿ ಫ್ಲೋರಾ ಸ್ವಾಗತ ಬಯಸುತ್ತಾ

"ನಿಮ್ಮ ಶ್ರೀಮತಿಯವರು ಬರಲಿಲ್ಲವೇ ?" ಎಂದು ಕೇಳಿದಳು.

"ಅವಸರದ ಒಂದು ಕೆಲಸದ ಸಲುವಾಗಿ ಅವರು ಹೋಗಬೇಕಾಯಿತು ಇಲ್ಲಿ ಬರಲಾಗಲಿಲ್ಲನೆಂದು ಬಹಳ ವಿಷಾದಪಟ್ಟುಕೊಂಡರು."

"ಬನ್ನಿ - ದಯೆಯಿಟ್ಟು ಒಳಕ್ಕೆ ಬನ್ನಿ."

ಕಟ್ಟಡದ ಒಂದು ಸಣ್ಣಭಾಗ ಮಾತ್ರ ಚಂದ್ರಶೇಖರ್ ತಮ್ಮ ಸಂಸಾರಕ್ಕಿಟ್ಟುಕೊಂಡಿದ್ದರು. ಉಳಿದ ಭಾಗವೆಲ್ಲಾ ಸೊಸೈಟಿಯ ವಿವಿಧ ಚಟುವಟಿಕೆಗಳಿಗೆ ಮೀಸಲಾಗಿತ್ತು.

ಯಾವ ಆಡಂಬರವೂ ಇಲ್ಲದೆ, ಸೌಮ್ಯವಾಗಿ ಅಲಂಕೃತವಾಗಿದ್ದ ಹಜಾರದಲ್ಲಿ ಎಲ್ಲರೂ ಕುಳಿತಮೇಲೆ ಫ್ಲೋರಾ ತನ್ನ ತಾಯಿಯನ್ನು ಕರೆತಂದು ನಾರಾಯಣಸ್ವಾಮಿಗೆ ಪರಿಚಯಮಾಡಿಕೊಟ್ಟಳು.

ಉಪಾಹಾರ, ಚಹಾ ಆದ ಮೇಲೆ ಫ್ಲೋರಾ, ಚಂದ್ರಶೇಖರ್ ನಾರಾಯಣಸ್ವಾಮಿಯನ್ನು ಕರೆದೊಯ್ದು ಸೊಸೈಟಿಯ ಪರಿಚಯ ಮಾಡಿಕೊಟ್ಟರು. ವಾಚನಾಲಯ, ಪುಸ್ತಕ ಭಂಡಾರಕ್ಕೆ ಮೀಸಲಾಗಿದ್ದ

ಹಜಾರದಲ್ಲಿ ಹಲವು ಕಾರ್ಮಿಕರು ಓದುತ್ತ ಕುಳಿತಿದ್ದರು ಇನ್ನೊಂದು ಹಜಾರ ಸಭಾಮಂದಿರವಾಗಿತ್ತು

" ಪ್ರತಿವಾರ ಇಲ್ಲಿ ಸಭೆ ನಡಸುತ್ತೇವೆ ವಿವಿಧ ಧರ್ಮಗಳ ಬಗ್ಗೆ ಪ್ರವಚನಗಳಾಗುತ್ತವೆ. ಗಾಯಕರು, ವಾದ್ಯಗಾರರು ಸಹಕರಿಸಿ, ಕಾರ್ಮಿಕರಿಗೆ ಉಚಿತ ಸಂಗೀತ ಒದಗಿಸುತ್ತಾರೆ "

" ಸಭೆಗೆ ಪ್ರವೇಶ ಉಚಿತವೇ ? "

" ನಾವು ಯಾವದಕ್ಕೂ ಚಿಕ್ಕಾಸನ್ನು ನಿರೀಕ್ಷಿಸುವುದಿಲ್ಲ ."

ಮೇಲಿನ ಅಂತಸ್ತಿನಲ್ಲಿದ್ದ ವಸತಿಗೃಹವನ್ನು ತೋರಿಸುತ್ತಾ ಫ್ಲೋರಾ

" ಇಲ್ಲಿ ವಸತಿ ಬಹು ದೊಡ್ಡ ಸಮಸ್ಯೆಯಾಗಿದೆ. ಬ್ಲಿಟ್ಜ್‌ಕ್ರೀಗ್ ಪ್ರಭಾವದಿಂದ ಸಹಸ್ರಾರು ಮನೆಗಳು ನುಚ್ಚು ನೂರಾದವು ಲಂಡನ್ನಿನ ಚಳಿ ಸಹಿಸಲಾಗದೆ ಜನ ರಸ್ತೆಗಳಲ್ಲಿ ಸತ್ತು ಬೀಳುತ್ತಾರೆ ಅಂಥ ಕೆಲವು ನಿರ್ಗತಿಕರಿಗೆ ನಾವು ಮಲಗಲು ಸ್ಥಳ. ಹಾಸಿಗೆ ಹೊದಿಕೆ ಒದಗಿಸುತ್ತೇವೆ - ಒಂದು ತುಣುಕು ರೊಟ್ಟಿ, ಒಂದು ಕಪ್ ಬಿಸಿ ಚಹಾ ಕೊಡುತ್ತೇವೆ. ಇಂಥವರ ತಂಡ ದಿನೇ ದಿನೇ ಬೆಳೆಯುತ್ತಿದೆ. ಸದ್ಯಕ್ಕೆ ನಮ್ಮಲ್ಲಿರುವುದು ಅರವತ್ತು ಹಾಸಿಗೆಗಳು ಪ್ರತಿನಿತ್ಯ ನೂರಾರು ಜನರನ್ನು ಹಿಂದಕ್ಕೆ ಕಳಿಸಬೇಕಾಗುತ್ತದೆ. ಕೆಲವು ವೃದ್ಧರ ಅವಸ್ಥೆ ನೋಡಲಾರದೆ ಡಾಕ್ಟರು ತಮ್ಮ ಮಲಗುವ ಕೋಣೆಯನ್ನೇ ಬಿಟ್ಟು ಕೊಡುತ್ತಾರೆ. "

ನಾರಾಯಣಸ್ವಾಮಿ ಹೃದಯತುಂಬಿದ ಗೌರವ. ಭಕ್ತಿ ಕಣ್ಣಿನಲ್ಲಿ ಮಿನುಗಿತು.

ಸೊಸೈಟಿಯ ಸಂದರ್ಶನ ಮುಗಿದ ಮೇಲೆ ಎಲ್ಲರೂ ಬಂದು ಹಜಾರದಲ್ಲಿ ಮತ್ತೆ ಕುಳಿತರು. ಓಪೀತಾಯಿ ಹರಕು ಹರಟು, ಕೋಟುಗಳನ್ನು ರಿಪೇರಿ ಮಾಡುತ್ತ ಕುಳಿತಿದ್ದರು.

" ಇದೇನು " ಎಂದು ಕುತೂಹಲದಿಂದ ನಾರಾಯಣಸ್ವಾಮಿ ಕೇಳಿದ.

" ರಾತ್ರಿ ಇಲ್ಲಿ ಮಲಗಲು ಬರುವವರಿಗೆ ಮೈತುಂಬ ಬಟ್ಟೆ

ಯಿರುವುದಿಲ್ಲ. ನಾವು ಮನೆಮನೆಗೆ ಹೋಗಿ ಭಿಕ್ಷೆಬೇಡಿ ಅವರ ಹಳೆಯ ಬಟ್ಟೆಗಳನ್ನು ತರುತ್ತೇವೆ. ಅದನ್ನು ನಾ ಸರಿಪಡಿಸುತ್ತಾರೆ. ”

“ ಖರ್ಚಿಗೇನು ಮಾಡುವಿರಿ ? ”

“ ಡಾಕ್ಟರ ಬರವಣಿಗೆಯಿಂದ ಬಂದ ಹಣವನ್ನೆಲ್ಲಾ ಸೊಸೈಟಿಯ ಕೆಲಸಕ್ಕೆ ಕೊಡುತ್ತಾರೆ ಆಗಾಗ್ಗೆ ಯಾರಾದರೂ ಪುಣ್ಯಾತ್ಮರು ಸ್ವಲ್ಪ ಹಣ ಕಳಿಸಿಕೊಡುತ್ತಾರೆ. ವಾರಾಂತ್ಯದ ಸಭೆಗಳಿಗೆ ಬರುವ ಕಾರ್ಮಿಕರು ತಮ್ಮ ಶಕ್ತ್ಯನುಸಾರ ಕಾಣಿಕೆ ನೀಡುತ್ತಾರೆ. ”

ಭಾವನಾವೇಶಗೊಂಡ ನಾರಾಯಣಸ್ವಾಮಿ ಬಾಯಲ್ಲಿ ಮಾತೇ ಹೊರಡದಂತಾಯಿತು.

ಡಾ. ಚಂದ್ರಶೇಖರ್ ಮೆಲ್ಲನೆ

“ ನಿಮ್ಮ ಕಂಪೆನಿಯ ಕೆಲಸದ ಸಲುವಾಗಿ ಇಲ್ಲಿಗೆ ಬಂದಿರುವಿರಾ ಮಿ. ಸ್ವಾಮಿ ” ಎಂದು ಕೇಳಿದರು.

“ ಇಲ್ಲ ಡಾಕ್ಟರ್ – ನನಗೂ ವ್ಯಾಪಾರಕ್ಕೂ ಬಹಳ ದೂರ. ಮನಸ್ಸಿಗೊದಗಿದ ಒಂದು ಆಘಾತ ಮರೆಯಲು ಲಂಡನ್ನಿಗೆ ಬಂದೆ. ”

“ ಮುಂದೆ ಏನು ಮಾಡಬೇಕೆಂದಿರುವಿರಿ ? ”

“ ಇನ್ನೂ ವಿಚಾರಮಾಡಿಲ್ಲ. ಲಂಡನ್ ಮ್ಯೂಸಿಯಮ್ಮಿನಲ್ಲಿ ಕೆಲವು ದಿನ ವ್ಯಾಸಂಗ ನಡೆಸಿ ‘ ಭಾರತದ ಸಾಮಾಜಿಕ ಜೀವನ ’ದ ಮೇಲೆ ಒಂದು ಥೀಸಿಸ್ (Thesis) ಸಿದ್ಧಗೊಳಿಸಬೇಕೆಂದಿದ್ದೇನೆ. ಈ ವಿಷಯದಲ್ಲಿ ನನಗೆ ಮಾರ್ಗದರ್ಶನ ಮಾಡಬಲ್ಲವರ ಪರಿಚಯ ತಾವು ಮಾಡಿಕೊಡಬೇಕು ”

“ಅಗತ್ಯವಾಗಿ ಆಗಲಿ. ”

ಹಳೆಯ ಅಂಗಿಗಳಿಗೆ ಗುಂಡಿ ಪೋಣಿಸುತ್ತ ಕುಳಿತಿದ್ದ ಓಷೀ ತಾಯಿ ಕತ್ತೆತ್ತಿ ನಾರಾಯಣಸ್ವಾಮಿಯನ್ನು ನೋಡಿ

“ ಮನಸ್ಸಿಗೆ ಆಘಾತವಾಯಿತೆಂದಿರಿ – ಅದೇನೆಂದು ಕೇಳ ಬಹುದೇ ? ”

ಶ್ವೇತಸರಸ್ವತಿಯಂತೆ ಕಾಣುತ್ತಿದ್ದ ಓಷೀತಾಯಿಯ ಮುಖ ದಲ್ಲಿ ಮೂಡಿದ್ದ ಮಾರ್ದವತೆ, ಅನುಕಂಪಪೂರ್ಣವಾಗಿದ್ದ ಆಕೆಯ

ಮೃದುಧ್ವನಿ ನಾರಾಯಣಸ್ವಾಮಿಯ ಹೃದಯವೀಣೆಯನ್ನು ಮಿಡಿಯಿತು. 'ಈ ಜೀವಕ್ಕೂ ತನಗೂ ಯಾವುದೋ ಜನ್ಮದ ಋಣಾನುಬಂಧವಿರಬೇಕು' ಎಂಬ ಭಾವನೆ ಅಂಕುರಿಸಿತು.

"ತಾಯಿ, ಇಂದೇ ನಿಮ್ಮನ್ನು ನಾನು ನೋಡುತ್ತಿರುವುದು. ಆದರೂ ನೀವು ಹೊಸಬರು ಎನಿಸುವುದಿಲ್ಲ ಕೂಲಂಕಷವಾಗಿ ನನ್ನ ಕಥೆ ನಿಮ್ಮಲ್ಲಿ ಹೇಳಬೇಕೆಂದು ಮನಸ್ಸಾಗುತ್ತಿದೆ. ನಿಮಗೆ ಬೇಸರವಾಗದಿದ್ದರೆ ಹೇಳುತ್ತೇನೆ."

"ಹೇಳು ಸನ್ (son)–ಕೇಳುವುದಕ್ಕೆ ನಾನು ಸಿದ್ಧಳಾಗಿದ್ದೇನೆ."

ಎಂದು ಓಷೀತಾಯಿ ಹಳೆಯ ಬಟ್ಟೆಗಳನ್ನತ್ತ ತಳ್ಳಿ ಏಕಾಗ್ರಚಿತ್ತರಾಗಿ ಕುಳಿತರು.

ತಂದೆ, ತಾಯಿಯ ಪೂರ್ವವೃತ್ತಾಂತದಿಂದ ಆರಂಭಿಸಿ ನಾರಾಯಣಸ್ವಾಮಿ ತನ್ನ ಸಂಸಾರದ ಕಥೆಯನ್ನು ವಿವರಿಸಿದ.

ತಾಯಿ ರುಕ್ಮಿಣಮ್ಮನ ದೈವಭಕ್ತಿ – ಮಾನವ ಪ್ರೇಮ – ದೀನ ದಲಿತ ವಾತ್ಸಲ್ಯಗಳನ್ನವನು ವರ್ಣಿಸುತ್ತಿದ್ದಂತೆ ಓಷೀತಾಯಿ ಅವನ ಬಳಿಗೆ ಬಂದು ಕುಳಿತರು.

ತಂದೆ ಮಾಧವರಾಯರು ಕಾಹಿಲೆಬಿದ್ದಾಗ ರುಕ್ಮಿಣಮ್ಮ ಮಾಡಿದ ಸೇವೆ—

ಮುಂಡ್ಯದಲ್ಲಿ ಇನ್‌ಫ್ಲುಯಂಜಾ ಬೇನೆ ವ್ಯಾಪಿಸಿದಾಗ ರುಕ್ಮಿಣಮ್ಮ ಮಾಡಿದ ಮಹಾ ತಪಸ್ಸು—

ಅವಳ ಧರ್ಮಸ್ಥಳ ಯಾತ್ರೆ—

ಕಮಲನ ಪತಿಯ ನಿಧನ—

ರುಕ್ಮಿಣಮ್ಮನ ಕೊನೆಯ ದಿನಗಳು—

ಇಡಿಯ ಊರೇ ಅವಳಿಗಾಗಿ ಕಣ್ಣೀರಿಟ್ಟುದು—

ಎಲ್ಲವನ್ನು ವಿವರಿಸುತ್ತಾ

"ಅಂಥ ತಾಯಿಯ ಹೊಟ್ಟೆಯಲ್ಲಿ ನನ್ನಂಥ ಅಲ್ಪ ಹುಟ್ಟಬಾರದಾಗಿತ್ತು" ಎಂದ.

ಒಂದೇ ಸಮನೆ ತೊಟ್ಟಿಕ್ಕುತ್ತಿದ್ದ ಕಣ್ಣೀರನ್ನೊರೆಸುತ್ತ

ಕುಳಿತಿದ್ದ ಓಷೀತಾಯಿ, ನಾರಾಯಣಸ್ವಾಮಿಯನ್ನು ಮೃದುವಾಗಿ ನೇವರಿಸಿ

"ದುಃಖಿಸಬೇಡ ಸನ್ (son) – ಆ ಮಹಾತಾಯಿಗೆ ಕೀರ್ತಿ ತರುವ ಮಗ ನೀನಾಗುತ್ತೀ ಇದನ್ನು ಹೇಳುತ್ತಿರುವವಳೂ ಒಬ್ಬ ತಾಯಿ ಎಂಬುದನ್ನು ನೆನಪಿನಲ್ಲಿಡು"

ನಾರಾಯಣಸ್ವಾಮಿ ಅಂತಃಕರಣ ಕಲಕಿ ಹೋಯಿತು. ಓಷೀ ತಾಯಿಯ ತೊಡೆಯಮೇಲೆ ಮುಖವಿಟ್ಟು ಮಕ್ಕಳಂತೆ ಅತ್ತುಬಿಟ್ಟ. ಓಷೀತಾಯಿಯ ಅಮೃತಹಸ್ತ ಅವನನ್ನು ನೇವರಿಸಿ ಸಮಾಧಾನ ಪಡಿಸಿತು.

ಫ್ಲೋರಾ ಅಭಿಮಾನಪೂರ್ವಕವಾಗಿ

"ಎಂಥ ದಿವ್ಯಜೀವನ" ಎಂದಳು.

"ಮಿ. ಸ್ವಾಮಿ – ನೀವೂ ಲೇಖಕರೆಂದು ತಿಳಿದುಬಂತು – ಯಾವುದಾದರೂ ಗ್ರಂಥ ಪ್ರಕಟಿಸಿರುವಿರಾ ?"

ಎಂದು ಡಾ. ಚಂದ್ರಶೇಖರ್ ಕೇಳಿದರು

"ಗಾಂಧೀಜಿಯವರ 'ಟ್ರಸ್ಟಿಷಿಪ್ ಥಿಯರಿ' (Trustyship theory) ಮೇಲೆ ನಾನು ಬರೆದ ಗ್ರಂಥವನ್ನು ಮುಂಬಯಿಯ ಆರ್ಯನ್ ಪಬ್ಲಿಕೇಷನ್ಸ್ ಕಂಪೆನಿಯವರು ಪ್ರಕಟಿಸಿದ್ದಾರೆ – ಕೂಲಿಗಾರರು, ಬಂಡವಾಳಗಾರರ ಸಮಸ್ಯೆಯ ಮೇಲೂ ಬರೆದಿದ್ದೇನೆ."

"ನಾನು ಸೂಚಿಸುವ ಒಂದು ವಿಷಯದ ಮೇಲೆ ಗ್ರಂಥ ಬರೆಯುವಿರಾ ?"

"ಯಾವ ವಿಷಯ ?"

"ಇದುವರೆಗೆ ನೀವು ನಿರೂಪಿಸಿದಿರಲ್ಲಾ ಅದೇ ವಿಷಯ – ನಿಮ್ಮ ತಾಯಿಯವರ ದಿವ್ಯಚರಿತ್ರೆಯನ್ನೇ ಜೀವನಚರಿತ್ರೆಯಾಗಿಯೋ ಕಾದಂಬರಿಯಾಗಿಯೋ ಬರೆಯಿರಿ"

"ವೈಜ್ಞಾನಿಕ ಗ್ರಂಥ ಬರೆದು ನನಗೆ ರೂಢಿ. ಕಾದಂಬರಿ ಬರೆಯುವ ಕಲೆ ನನಗೆ ಸಾಧಿಸಿಲ್ಲ."

"ಶ್ರದ್ಧೆಯಿದ್ದ ಕಡೆ ಕಲೆ ತಾನಾಗಿ ಬರುತ್ತದೆ. ನೀವು ಕರಡು

ಪ್ರತಿ ಸಿದ್ಧಗೊಳಿಸಿ - ನಾನು ಬೇಕಾದರೆ ಅದನ್ನೊಮ್ಮೆ ನೋಡಿಕೊಡುತ್ತೇನೆ "

" ನಿಮಗೆ ತುಂಬ ತೊಂದರೆಯಾಗುತ್ತದೆ ಡಾಕ್ಟರ್. "

" ಇಂಥ ತೊಂದರೆ ಅನುಭವಿಸುವುದೂ ಒಂದು ಪುಣ್ಯ ವಿಶೇಷ ಮಿ. ಸ್ವಾಮಿ ನಿಮ್ಮ ತಾಯಿದೇವಿಯ ಚರಿತ್ರೆ ಓದುವ ಎಷ್ಟು ಜನರ ಬಾಳು ದಿವ್ಯವಾಗುವದೆಂಬುದು ನಿಮಗೆ ತಿಳಿಯದು. ಲೋಕೋಪಕಾರ ದೃಷ್ಟಿಯಿಂದಲೇ ಈ ಕೆಲಸ ನಿರ್ವಹಿಸಿ. "

" ಅಗತ್ಯವಾಗಿ ನಿರ್ವಹಿಸುತ್ತೇನೆ ಡಾಕ್ಟರ್. ನನ್ನ ಥೀಸಿಸ್‌ಗೆ ಸಹಾಯಮಾಡುವವರ ಪರಿಚಯಮಾಡಿಸುವುದನ್ನು ಮರೆಯಬೇಡಿ. "

" ಇಲ್ಲಿ ನನ್ನ ಸ್ನೇಹಿತರು ಪ್ರೊ. ಜಾನ್ ಡ್ರೂ ಅವರ ಪರಿಚಯ ಮಾಡಿಸುತ್ತೇನೆ "

" ಯಾವ ಜಾನ್ ಡ್ರೂ–ಹಲವು ಗ್ರಂಥಗಳನ್ನು ಬರೆದಿದ್ದಾರಲ್ಲಾ ಅವರೇ ? "

" ಹೌದು – ಅವರೇ. ಅವರ ಮಾರ್ಗದರ್ಶನ ನಿಮಗೆ ಸಮ್ಮತವಷ್ಟೆ ! "

" ಸಮ್ಮತ – ಅಂಥ ವಿದ್ವಾಂಸರು ನನ್ನನ್ನು ಶಿಷ್ಯನನ್ನಾಗಿ ಪರಿಗ್ರಹಿಸಿದರೆ ನನ್ನ ಪುಣ್ಯವೆಂದು ಭಾವಿಸುತ್ತೇನೆ. ಜಾನ್ ಡ್ರೂ ನಿಮ್ಮ ಸ್ನೇಹಿತರೇ. "

" ನನ್ನನ್ನು ಸ್ನೇಹಿತನನ್ನಾಗಿ ಪರಿಗಣಿಸುವ ಮಹೋಪಕಾರ ಮಾಡಿದ್ದಾರೆ. " ಎಂದರು.

ಮನೆಗೆ ಹೊರಟ ನಾರಾಯಣಸ್ವಾಮಿಯನ್ನು ಬೀಳ್ಕೊಡಲು ಡಾಕ್ಟರು, ಫ್ಲೋರಾ, ಓಷೀತಾಯಿ ಎಲ್ಲರೂ ಎದ್ದು ನಿಂತರು. ಸ್ವಾಮಿಯನ್ನು ಮನೆಮುಟ್ಟಿಸಿ ಬರಲು ಡಾಕ್ಟರು ಜತೆಯಲ್ಲಿ ಹೊರಡಲನುವಾದರು.

ಫ್ಲೋರಾ ಸ್ವಾಮಿಯನ್ನು ಬೀಳ್ಕೊಡುತ್ತ

" ಇನ್ನೊಮ್ಮೆ ಬರುವಾಗ ಮರೆಯದೆ ನಿಮ್ಮ ಶ್ರೀಮತಿಯವರನ್ನೂ ಕರೆದುಕೊಂಡು ಬನ್ನಿ " ಎಂದಳು.

ಓಷೀತಾಯಿ ಸ್ವಾಮಿಯ ಕೈಹಿಡಿದು

" ಇದು ನಿಮ್ಮ ಮನೆ ಎಂದು ತಿಳಿದುಕೊಳ್ಳಿ ಮಿ. ಸ್ವಾಮಿ. ನಿಮಗೂ ನಿಮ್ಮ ಶ್ರೀಮತಿಯವರಿಗೂ ಇಲ್ಲಿಗೆ ಸದಾ ಸ್ವಾಗತವಿದೆ " ಎಂದರು.

ನಾರಾಯಣಸ್ವಾಮಿ ತುಂಬಿದ ಹೃದಯದಿಂದ ಅವರಿಗೆ ನಮಸ್ಕರಿಸಿ ಗೃಹಾಭಿಮುಖನಾದ.

## ೧೧

ಕಾಲೇಜ್ ಕೆಲಸದಿಂದ ಕಮಲನಿಗೆ ಸ್ವಲ್ಪವೂ ಬಿಡುವು ದೊರೆಯುತ್ತಿರಲಿಲ್ಲ ಕಾಲೇಜಿನಲ್ಲಿ ವಾರಕ್ಕೆ ಇಪ್ಪತ್ತು ಪೀರಿಯಡ್ (Period) ಗಳನ್ನು ನಿಭಾಯಿಸಬೇಕಾಗಿತ್ತು. ಇದರ ಜತೆಗೆ ಪಾಠೇತರ ಚಟುವಟಿಕೆಗಳಲ್ಲಿ (Extra-curricular activities) ಭಾಗ ವಹಿಸಬೇಕಾಗುತ್ತಿತ್ತು. ಒಂದು ದಿನ ರಜ ಪಡೆಯುವುದೆಂದರೆ ಭಗವಂತನಿಂದ ವರ ಪಡೆದಂತೆ. ಕಾಲೇಜಿನಲ್ಲಿ ಬರುತ್ತಿದ್ದ ಸಂಬಳಕ್ಕೆ ಪೋಷಕವಾಗಿರಲೆಂದು ಕಮಲ ಎರಡು ಮನೆ ಪಾಠಗಳನ್ನೂ ಒಪ್ಪಿಕೊಂಡಿದ್ದಳು ಬೆಳಿಗ್ಗೆ ಒಂಭತ್ತು ಗಂಟೆಗೆ ಊಟ ಮುಗಿಸಿಕೊಂಡು ಮನೆಬಿಟ್ಟು ಹೊರಟು ಪಾಠಗಳನ್ನು ಮುಗಿಸಿಕೊಂಡು ಅವಳು ಹನ್ನೊಂದು ಗಂಟೆಗೆ ಸರಿಯಾಗಿ ಕಾಲೇಜಿಗೆ ಹೋಗಬೇಕಾಗಿದ್ದಿತು.

ಮನೆಯಲ್ಲಿ ಹೆಚ್ಚು ಕಾಲ ನಿಲ್ಲಲು ಕಮಲನಿಗೆ ವ್ಯವಧಾನವಾಗುತ್ತಿರಲಿಲ್ಲ. ತಂದೆ, ಅಜ್ಜಿಯ ಯೋಗಕ್ಷೇಮ ನೋಡಿಕೊಳ್ಳುವ ಮಾತಂತಿರಲಿ. ಮಕ್ಕಳ ಯೋಗಕ್ಷೇಮವನ್ನು ನೋಡಿಕೊಳ್ಳುವದಕ್ಕೂ ಅವಳಿಗೆ ಸಾಧ್ಯವಾಗುತ್ತಿರಲಿಲ್ಲ. ಮನೆಗೆ ಬರಲಿಲ್ಲವೆಂದು ರಾಮು, ಶ್ರೀದೇವಿ ಆಕ್ಷೇಪಣೆ ಮಾಡುತ್ತಿದ್ದರು. ಪದ್ಮ ಎರಡು ದಿನಕ್ಕೊಮ್ಮೆ ತನ್ನ ಮನೆಗೆ ಬರುತ್ತಿದ್ದರೂ ತಾನು ತಿಂಗಳಿಗೊಮ್ಮೆಯೂ ಅವಳ ಮನೆಗೆ ಹೋಗಿ ಬರಲು ಸಾಧ್ಯವಾಗುತ್ತಿರಲಿಲ್ಲ.

ಕೆಲಸಕ್ಕೆ ರಾಜೀನಾಮೆ ಕೊಡುವ ವಿಚಾರವೂ ಅವಳ ಮನಸ್ಸಿಗೆ ಬರುತ್ತಿತ್ತು. ಮರುಕ್ಷಣವೇ ಕೆಲಸಕ್ಕೆ 'ರಾಜೀನಾಮೆ ಕೊಟ್ಟರೆ ಗತಿ' ಎಂಬ ಭಯ ಆವರಿಸುತ್ತಿತ್ತು.

ಪದ್ಮನ ಆಪರೇಷನ್ ದಿನ ರಜಾ ದೊರಕಿಸಲು ಕಮಲ ಮಾಡಿದ ಪ್ರಯತ್ನ ನಿಸ್ಸಾರ್ಥಕವಾಯಿತು. ಕಾಲೇಜಿನ ಇನ್ನಿಬ್ಬರು ಅಧ್ಯಾಪಿಕೆಯರು ರಜದ ಮೇಲೆ ಹೋಗಿದ್ದುದರಿಂದ ಕಮಲನಿಗೆ ರಜಾ ಕೊಡಲು ಮುಖ್ಯಾಧ್ಯಾಪಿಕೆ ನಿರಾಕರಿಸಿದರು

ಗೋದಮ್ಮನವರು ಕಮಲನಿಗೆ

"ನಾನು ಆಸ್ಪತ್ರೆಯಲ್ಲಿಯೇ ಇರುತ್ತೇನೆ ನೀನು ನಿಶ್ಚಿಂತಳಾಗಿರು" ಎಂದು ಸಮಾಧಾನ ಹೇಳಿದರು.

ಗೋದಮ್ಮನವರಲ್ಲದೆ ಸರ್ವೋತ್ತಮ, ಮಾಧವರಾಯ, ರಾಮು, ಶ್ರೀದೇವಿ, ಸಾವಿತ್ರಮ್ಮ ಎಲ್ಲರೂ ಆಸ್ಪತ್ರೆಯಲ್ಲಿಯೇ ನಿಂತರು

ಡಾ.ಶಂಕರಾಂಬಾಳ್ ಲೀಲಾಜಾಲವಾಗಿ ಪದ್ಮನಿಗೆ ಶಸ್ತ್ರಚಿಕಿತ್ಸೆ ಮಾಡಿದರು

ಸಂಜೆ ಕಾಲೇಜ್ ಮುಗಿದೊಡನೆಯೇ ಕಮಲ ಆಸ್ಪತ್ರೆಗೆ ಬಂದು ತಂಗಿಯ ಬಳಿ ಕುಳಿತು.

"ತುಂಬ ನೋವಾಯಿತೇ ?" ಎಂದು ಕೇಳಿದಳು

"ಇಲ್ಲಾ ಅಕ್ಕ-ಆಪರೇಷನ್ ಮುಗಿದುದೇ ನನಗೆ ತಿಳಿಯಲಿಲ್ಲ." ಎಂದಳು.

ಸಂಜೆ ವಾರ್ಡ್‌ಇನ್ಸ್‌ಪೆಕ್ಷನ್ನಿಗೆ (Ward inspection) ಬಂದ ಡಾ. ಶಂಕರಾಂಬಾಳ್ ತಮ್ಮ ರೋಗಿಗೆ ಬ್ರೆಡ್ಡು, ಹಾಲು ಕೊಡಹೇಳಿ, ಟೆಂಪರೇಚರ್ ಚಾರ್ಟ್ ನೋಡಿ

"ಹೇಗಿದ್ದೀಯಮ್ಮ" ಎಂದು ಕೇಳಿದರು.

"ಚೆನ್ನಾಗಿದ್ದೇನೆ ಡಾಕ್ಟರೇ" ಎಂದು ಪದ್ಮ ಉತ್ತರಿಸಿದಳು.

"ಆಸ್ಪತ್ರೆಯಲ್ಲಿ ಪದ್ಮ ಎಷ್ಟು ದಿವಸ ಇರಬೇಕು ಡಾಕ್ಟರೇ ?" ಎಂದು ಕಮಲಾ ಕೇಳಿದಳು.

"ತಂಗಿಯನ್ನು ಬಿಟ್ಟಿರುವುದು ಅಷ್ಟು ಕಷ್ಟವಾಗಿದೆಯೇನು ? ಎಂಟು ಹತ್ತು ದಿನವಿರಲಿ. ಒಂದೊಂದು ವೇಳೆ ರಕ್ತಸ್ರಾವ ಆರಂಭವಾಗುತ್ತದೆ. ಅದಕ್ಕೆ ಅವಕಾಶಕೊಡದಿರುವುದೇ ಒಳ್ಳೆಯದು." ಎಂದರು.

ಸರದಿಯ ಪ್ರಕಾರ ಯಾರಾದರೂ ಆಸ್ಪತ್ರೆಯಲ್ಲಿರುತ್ತಿದ್ದರು.

ನಾಣಿ, ಸೌಭಾಗ್ಯ ಚಿಕ್ಕಮ್ಮನೆದುರಿನಲ್ಲೇ ಆಡಿಕೊಳ್ಳುತ್ತಿದ್ದರು. ಗೋದಮ್ಮನವರು ರಾತ್ರಿ ಆಸ್ಪತ್ರೆಯಲ್ಲಿಯೇ ಮಲಗಿಕೊಳ್ಳುತ್ತಿದ್ದರು. ಕಮಲಾ ಪ್ರತಿನಿತ್ಯ ಕಾಲೇಜಿಗೆ ಹೋಗುವ ಮುನ್ನ, ಕಾಲೇಜ್ ಮುಗಿದಮೇಲೆ ಬಂದು ತಂಗಿಯನ್ನು ನೋಡಿಕೊಂಡು ಹೋಗುತ್ತಿದ್ದಳು.

ಹನ್ನೆರಡು ದಿನಗಳು ಕಳೆದಮೇಲೆ ರೋಗಿಯನ್ನು ಮನೆಗೆ ಕರೆದುಕೊಂಡು ಹೋಗಲು ಡಾಕ್ಟರು ಅನುಮತಿಯಿತ್ತರು

ಕೆಲವು ದಿನ ಪದ್ಮ ಕಮಲನ ಮನೆಯಲ್ಲಿಯೇ ಇದ್ದು ಆರೈಕೆ ಮಾಡಿಕೊಂಡು ಸ್ವಗೃಹಕ್ಕೆ ಹೋಗಬೇಕೆಂದು ಸರ್ವಾನುಮತವಾಗಿ ನಿರ್ಣಯವಾಯಿತು.

ಸರ್ವೋತ್ತಮನ ರಜಾ ಮುಗಿದಿದ್ದುದರಿಂದ ಅವನು ಡ್ಯೂಟಿಯ ಮೇಲೆ ಹೋಗಲಾರಂಭಿಸಿದ್ದ. ಡ್ಯೂಟಿ ಮುಗಿಸಿಕೊಂಡು ಹಿಂದಿರುಗಿ ದೊಡನೆಯೇ ಕಮಲನ ಮನೆಗೆ ಹೋಗಿ ಹೆಂಡತಿಯನ್ನು ಕಾಣುತ್ತಿದ್ದ.

ಒಂದು ತಿಂಗಳು ಕಳೆಯುವಲ್ಲಿ ಪದ್ಮ ಪೂರ್ವದ ಆರೋಗ್ಯ ಪಡೆದಳು. ಗೋದಮ್ಮನವರು ಬಾಣಂತಿಯನ್ನು ಉಪಚರಿಸುವಂತೆ ಪದ್ಮನನ್ನು ಉಪಚರಿಸಿದ್ದರು.

ಒಂದು ದಿನ ಕಮಲ ಕಾಲೇಜಿನಿಂದ ಹಿಂದಿರುಗಲು ಪದ್ಮ

"ಅಕ್ಕ, ನೀನು ಕೋಪಮಾಡಿಕೊಳ್ಳದಿದ್ದರೆ ನಾನೊಂದು ಮಾತು ಹೇಳುತ್ತೇನೆ" ಎಂದಳು.

"ಹೇಳು ಪದ್ದೂ – ನಾನೇನು ಅಷ್ಟು ಕೋಪಿಷ್ಠಳೇ !"

"ಅಲ್ಲ – ನಾನು ಹೇಳುವ ವಿಷಯ ಕೇಳಿದ ಮೇಲೆ ಕೋಪ ಬರಬಹುದು ಎಂದುಕೊಂಡೆ"

"ಕೋಪಮಾಡಿಕೊಳ್ಳುವುದಿಲ್ಲ–ಹೇಳು."

"ನಾನು ಮನೆಬಿಟ್ಟು ತಿಂಗಳ ಮೇಲೆ ಹನ್ನೆರಡು ದಿವಸಗಳಾದವು. ಈಗ ನನ್ನ ಆರೋಗ್ಯ ಚೆನ್ನಾಗಿದೆ. ನೀನು ಒಪ್ಪಿದರೆ ಮನೆಗೆ ಹೋಗುತ್ತೇನೆ."

"ಇಷ್ಟೇಕೆ ಅವಸರ !"

"ಅವರು ಒಬ್ಬರೇ ಆಗಿದ್ದಾರಕ್ಕ–ಊಟ ತಿಂಡಿ ಏನು ಮಾಡು

ತ್ತಾರೋ ಏನೋ ? ಈಚೆಗೆ ತುಂಬ ಬಡವಾಗಿದ್ದಾರೆ."

"ನೀನು ಹೋಗಲೇಬೇಕೆಂದರೆ ಬೇಡವೆನ್ನಲಾರೆ. ಆದರೆ ನೀನು ಇನ್ನೂ ಒಂದೆರಡು ತಿಂಗಳು ಇಲ್ಲೇ ಇರುವುದು ಉತ್ತಮ."

"ಪ್ರತಿನಿತ್ಯ ಬಂದೇ ಬರುತ್ತೇನಲ್ಲಾ !"

"ಅದು ಸರಿ - ಆದರೆ ... ?"

"ಮನಸ್ಸಿನಲ್ಲೇನಿದೆ ? ಹೇಳಕ್ಕ "

"ನೀನಿನ್ನೂ ಪಥ್ಯಮಾಡಬೇಕು "

"ಆಗಲಿ–ಹುಳಿಯುಪ್ಪುಖಾರ ಮುಟ್ಟುವುದಿಲ್ಲ. ಎಣ್ಣೆಯ ಪದಾರ್ಥ ಸೇವಿಸುವುದಿಲ್ಲ."

ಕಮಲ ನಕ್ಕು

"ಎಂದಿಗೇ ಪದ್ಮ - ನೀನು ಬೆಳೆದು ದೊಡ್ಡವಳಾಗುವುದು "

ಎಂದು ಹಾಸ್ಯಮಾಡಿ ಪದ್ಮನ ಕಿವಿಯಲ್ಲೇನೋ ಉಸುರಿದಳು. ಪದ್ಮ ಹುಸಿಮುನಿಸನ್ನು ತೋರುತ್ತಾ

"ಹೋಗಕ್ಕ - ನೀನೊಬ್ಬಳು" ಎಂದಳು

ಮಾರನೆಯ ದಿನ ಗೋದಮ್ಮನವರು ಪಾಯಸದ ಅಡಿಗೆಮಾಡಿ ಮೊಮ್ಮಗಳಿಗೆ ಉಣಲಿಟ್ಟು ಅವಳನ್ನು ಸ್ವಗೃಹಕ್ಕೆ ಬೀಳ್ಕೊಟ್ಟರು. ಪದ್ಮ ಚೇತರಿಸಿಕೊಳ್ಳುವವರೆಗೆ ಅವಳ ಜತೆಯಲ್ಲಿರಲು ಸಾವಿತ್ರಮ್ಮನನ್ನೂ ಕಳಿಸಿಕೊಟ್ಟರು

ಒಂದೂವರೆ ತಿಂಗಳಲ್ಲಿ ನಾರಾಯಣಸ್ವಾಮಿಯ ಪುಸ್ತಕ **'ಭಾರತೀಯ ತಾಯಿ'** (Indian Mother) ಗ್ರಂಥ ಕಾಲು ಭಾಗ ದಷ್ಟು ಮುಗಿದಿತ್ತು. ಸ್ವಾಮಿಯ ಟೈಪಾದ ಕರಡು ಪ್ರತಿಯನ್ನು ಡಾ. ಚಂದ್ರಶೇಖರ್ ಬೇಸರವಿಲ್ಲದೆ ತಿದ್ದಿ ಕೂಲಂಕಷವಾಗಿ ವಿಮರ್ಶೆ ಮಾಡುತ್ತಿದ್ದರು ವಾರದಲ್ಲಿ ಎರಡು ಮೂರು ನಾರಿ ಇಬ್ಬರೂ ಸೇರಿ ಹಸ್ತಪ್ರತಿಗೆ ಸಾಣೆಹಿಡಿಯುತ್ತಿದ್ದರು.

"ತಾಯಿ ಭಾರತೀಯ ಜೀವನದಲ್ಲಿ ಅತ್ಯಂತ ಶ್ರೇಷ್ಠವಾದ ಪೂಜ್ಯವಾದ ವಸ್ತು ಎಂಬುದನ್ನು ವಿವರಿಸಬೇಕು ಮಿ ಸ್ವಾಮಿ. ವೇದ ಕಾಲದಿಂದಲೂ ತಾಯ್ತನಕ್ಕೆ ಭಾರತೀಯರು ಕೊಟ್ಟಿರುವ ಸ್ಥಾನ ಮಾನವನ್ನು ವರ್ಣಿಸಬೇಕು ಈ ಸ್ಥಾನಕ್ಕೆ ಇಂದಿಗೂ ಚ್ಯುತಿಯಿಲ್ಲ ವೆಂಬ ಅಂಶ ಮಹತ್ತ್ವವಾದುದು ಭಾರತದ ತಾಯಿ ಕೇವಲ ದೇವರ ಮನೆಯ ವಿಗ್ರಹವಲ್ಲ, ಜೀವಂತಶಕ್ತಿ ಎನ್ನುವುದೇ ನಿಮ್ಮ ಕಾದಂಬರಿಯ ಜೀವಸ್ವರವಾಗಿರಬೇಕು"

"ಮನಸ್ಸಿನಲ್ಲಿರುವ ಭಾವನೆಗಳನ್ನು ಸತ್ತ್ವಪೂರ್ಣವಾಗಿ ಬರ ವಣಿಗೆಗಿಳಿಸುವುದು ಬಹಳ ಕಷ್ಟ ಡಾ ಚಂದ್ರಶೇಖರ್."

"ನಿಜ. ಲೇಖಕ ಮುಖ್ಯವಾಗಿ ಸಾಧಿಸಬೇಕಾದುದು ಈ ಕಲೆ ಯನ್ನೇ. ಅಭಿವ್ಯಕ್ತ ಕಲೆಯೇ ಬರವಣಿಗೆಯ ಜೀವಾಳ. ಬರೆಹ ಗಾರನ ರಸಾನುಭವವನ್ನು ಅದೇ ಪ್ರಮಾಣದಲ್ಲಿ ಓದುಗ ಅನುಭವಿಸಿದ ರಲ್ಲವೇ ಅವನ ಕೃತಿ ಸಾರ್ಥಕವಾಗುವುದು."

"ಪ್ರಾಯಶಃ ವಸ್ತುವಿಗೂ ನನಗೂ ಇರುವ ನಿಕಟಸಂಬಂಧವೂ

ನನ್ನ ಪ್ರಗತಿಗೆ ಅಡ್ಡಿಯಾಗಿರಬಹುದು."

"ನಿಮ್ಮ ಪ್ರಗತಿ ಸಾಧಿಸಿಲ್ಲವೆಂದು ಭಾವಿಸಿರುವಿರಾ ? ಈಗ ನೀವು ಬರೆದಿರುವಷ್ಟು ಸುಂದರವಾಗಿಯೇ ಇವೆ. ಗ್ರಂಥ ಸರ್ವಾಂಗ ಸುಂದರವಾಗಿ ಓದುಗರ ಮನಸ್ಸಿನ ಮೇಲೆ ಚಿರಸ್ಥಾಯಿಯಾದ ಪರಿಣಾಮವನ್ನುಂಟುಮಾಡಬೇಕೆಂಬುದೇ ನನ್ನ ಹೆಬ್ಬಯಕೆ. ನಿಮ್ಮ ಗ್ರಂಥದಿಂದ ನಮ್ಮ ರಾಷ್ಟ್ರಗೌರವ ಹೆಚ್ಚುವುದೆಂದು ನನ್ನ ಅಂತರಾತ್ಮ ಹೇಳುತ್ತಿದೆ."

"ನನ್ನ ಗ್ರಂಥದಿಂದ ರಾಷ್ಟ್ರಗೌರವ ಹೆಚ್ಚುವುದೇ ?"

"ಹೌದು - ಹೇಗೆನ್ನುವಿರಾ ? ಇಂಗ್ಲಿಷಿನಲ್ಲಿಂದು ಹಲವು ಭಾರತೀಯರು ಗ್ರಂಥಗಳನ್ನು ಬರೆಯುತ್ತಿದ್ದಾರೆ. ಪಾಶ್ಚಾತ್ಯರಿಗೆ ಭಾರತ ಜೀವನದ ಪರಿಚಯಮಾಡಿಕೊಡಬೇಕೆಂಬುದೇ ಅವರ ಉದ್ದೇಶ. ಈ ಉದ್ದೇಶ ಸಾರ್ಥಕವಾಗಿದೆಯೇ ? ಇಂಗ್ಲಿಷ್, ಅಮೆರಿಕನ್ ಓದುಗರನ್ನು ಅನುಲಕ್ಷಿಸಿಯೇ ನಮ್ಮ ಗ್ರಂಥಕರ್ತರು ಪುಸ್ತಕಗಳನ್ನು ಬರೆಯುತ್ತಿಲ್ಲವೇ ? ಭಾರತೀಯರ ಕೃತಿ ಭಾರತದ ಕೃತಿಯಾಗಿರಬೇಕು. ಅದು ಭಾರತೀಯ ಜೀವನವನ್ನು ಸಹಜವಾಗಿ, ಸತ್ಯವಾಗಿ ನಿರೂಪಿಸಬೇಕು. ನಮ್ಮ ವಸ್ತು ನಿರೂಪಣೆಗೆ ಇಂಗ್ಲಿಷ್ ಭಾಷೆ ಅಷ್ಟಾಗಿ ಅಳವಡುವುದಿಲ್ಲ. ಭಾಷೆ ಒಂದು ಸಂಸ್ಕೃತಿಯ ಪ್ರತೀಕ. ಪಾಶ್ಚಾತ್ಯ ಸಂಸ್ಕೃತಿಯ ಪ್ರತೀಕವಾಗಿರುವ ಭಾಷೆಯಲ್ಲಿ ಪ್ರಾಚ್ಯ ಜೀವನ ನಿರೂಪಿಸುವುದು ಸಾಹಸದ ಕೆಲಸವೇ ಸರಿ - ನೋಡಿ ದೃಷ್ಟಾಂತಕ್ಕೆ ರಾಯರು, ಸ್ವಾಮಿಗಳು, ಅಮ್ಮಾವರು, ಮಡಿ ಹೆಂಗಸು ಮೊದಲಾದ ಶಬ್ದಗಳನ್ನು ಹೇಗೆ ಅನುವಾದ ಮಾಡುವಿರಿ ? ಈ ಶಬ್ದಾರ್ಥ ಕಲ್ಪನೆಯನ್ನು ಇಂಗ್ಲಿಷ್ ಓದುಗರ ಮನಸ್ಸಿನಲ್ಲುಂಟುಮಾಡದಿದ್ದರೆ ನಮ್ಮ ಪ್ರಯತ್ನ ನಿಷ್ಪ್ರಯೋಜಕವಾಗುತ್ತದೆ. ಪ್ರತಿಯೊಬ್ಬ ಲೇಖಕನೂ ಸ್ವಯಂಭೂ. ಅವನಿಗೆ ಅವನೇ ಗುರು - ಅವನೇ ಶಿಷ್ಯ. ಒಬ್ಬ ಲೇಖಕನನ್ನು ಇನ್ನೊಬ್ಬ ಲೇಖಕ ಅನುಕರಿಸಲು ಸಾಧ್ಯವಿಲ್ಲ - ಅನುಕರಿಸಿದರೆ ಅಣಕವಾಗುತ್ತದೆ."

"ನಿಮ್ಮ ಸಲಹೆ, ಸಹಕಾರಕ್ಕೆ ನಾನು ಎಷ್ಟು ಋಣಿಯಾಗಿದ್ದರೂ

ಸಾಲದು ಡಾಕ್ಟರ್."

" ನೀವು ಉಪಚಾರ ಹೇಳುವುದು ನಮ್ಮ ಸ್ನೇಹಕ್ಕೆ ಅಪಚಾರ ವಾಗುತ್ತದೆ. ಸದ್ಯಕ್ಕೆ ಎಲ್ಲವನ್ನೂ ಮರೆತು ನಿಮ್ಮ ಗ್ರಂಥವೊಂದನ್ನು ಮಾತ್ರ ಲಕ್ಷ್ಯದಲ್ಲಿಟ್ಟುಕೊಳ್ಳಿ " ಎಂದರು.

ಪ್ರತಿಸಲ ನಾರಾಯಣಸ್ವಾಮಿ ಬಂದಾಗಲೂ ಫ್ಲೋರಾ ' ನಿಮ್ಮ ಪತ್ನಿ ಏಕೆ ಬರಲಿಲ್ಲ ' ಎಂದು ಕೇಳುತ್ತಿದ್ದಳು. ಫ್ಲೋರಸಿಗೆ ಸುಳ್ಳು ಹೇಳಿ ಹೇಳಿ ನಾರಾಯಣಸ್ವಾಮಿಗೆ ಸಾಕುಸಾಕಾಗಿತ್ತು.

ಒಂದು ದಿನ ಅವನು ಮನೆಗೆ ಬಂದ ಕೂಡಲೆ ಇಂದುಮತಿಯನ್ನು ಕರೆದು

" ಇಂದೂ – ಡಾ ಚಂದ್ರಶೇಖರರ ಪತ್ನಿ ನಿತ್ಯ ನಿನ್ನನ್ನು ಕೇಳು ತ್ತಿದ್ದಾರೆ. ಅವರ ಮನೆಗೇಕೆ ನೀನು ಬರುವುದಿಲ್ಲ " ಎಂದು ಕೇಳಿದ.

" ನನಗಲ್ಲಿ ಏನು ಕೆಲಸ ?"

" ಹಾಗಂದರೇನು ಇಂದೂ - ಒಳ್ಳೆಯ ಜನಗಳ ಪರಿಚಯವಾದರೆ ನಷ್ಟವೇ ?"

" ಅವರ ಮನೆ ದಾರಿಹೋಕರ ಛತ್ರವಾಗಿದೆಯಂತೆ !"

" ಹೌದು - ಡಾಕ್ಟರೂ, ಅವರ ಪತ್ನಿ ಮಾಡುತ್ತಿರುವ ಸೇವೆ ದೈವಿಕವಾದುದು. ಲಂಡನ್ನಿನ ಚಳಿಗೆ ಸಿಕ್ಕಿ ಸಾಯುತ್ತಿದ್ದ ನೂರಾರು ಜನರನ್ನು ಅವರು ಕಾಪಾಡಿದ್ದಾರೆ."

" ಕಾಳಿ ಕಂಗಾಳಿಗಳ ಸಹವಾಸಮಾಡಲು ನನಗೆ ಇಷ್ಟವಿಲ್ಲ."

" ನಿನ್ನ ಮಾತು ಕೇಳಿ ನನಗೆ ಆಶ್ಚರ್ಯವಾಗುತ್ತಿದೆ. ನೀನು ಲಕ್ಷ್ಮೀಪುತ್ರಿಯಾಗಿದ್ದರೂ ಬಡತನವನ್ನೆಂದಿಗೂ ತಿರಸ್ಕಾರದಿಂದ ಕಂಡವಳಲ್ಲ. ಲಂಡನ್ನಿನ ಹವಾಮಾನ ನಿನ್ನ ಮೇಲೆ ವಿಚಿತ್ರ ಪರಿಣಾಮ ವನ್ನುಂಟುಮಾಡಿರಬೇಕು."

"ದಯೆಮಾಡಿ ಈ ವಿಷಯದಲ್ಲಿ ನನ್ನನ್ನು ಒತ್ತಾಯಪಡಿಸಬೇಡಿ."

" ಇಂದೂ – ಸಂಪತ್ತು, ಪದವಿ, ಕೀರ್ತಿ, ಅಧಿಕಾರ ಎಲ್ಲ ವನ್ನೂ ಸಂಪಾದಿಸಬಹುದು. ನಿರ್ಮಲ ಸ್ನೇಹ, ಋಜುಜೀವನ ಕಾಣು ವುದು ದುಸ್ತರ. ಡಾಕ್ಟರ್ ಮತ್ತು ಮಿಸಸ್ ಚಂದ್ರಶೇಖರರ ಬಗ್ಗೆ

ನೀನು ತಳೆದಿರುವ ಅಭಿಪ್ರಾಯ ನನ್ನ ಮನಸ್ಸಿಗೆ ತುಂಬ ವ್ಯಥೆಯನ್ನುಂಟುಮಾಡಿದೆ."

"ನನಗೆ ವಿಚಾರ ಸ್ವಾತಂತ್ರ್ಯವಿಲ್ಲವೇ ?"

"ಇಲ್ಲವೆಂದವರು ಯಾರು ?"

"ಹಾಗಾದರೆ ಈ ವಿಷಯ ಇಲ್ಲಿಗೇ ಬಿಟ್ಟುಬಿಡಿ" ಎಂದಳು

ನಾರಾಯಣಸ್ವಾಮಿಯ ಮನಸ್ಸಿಗೆ ಅಪಾರ ವೇದನೆಯಾಯಿತು. ಇಂದುಮತಿಯ ಆರ್ಥಿಕ ಋಣದಿಂದ ಬೇಗ ಮುಕ್ತನಾಗದೆ ಆತ್ಮ ಗೌರವ ಉಳಿಸಿಕೊಳ್ಳುವುದೂ ಸಾಧ್ಯವಾಗುವುದಿಲ್ಲವೆಂದು ಅವನ ಮನಸ್ಸಿಗೆ ಭಾಸವಾಯಿತು

ಯಾವುದೋ ದುರ್ದಮನೀಯ ಶಕ್ತಿಗೆ ಸಿಕ್ಕಿ ನಾರಾಯಣಸ್ವಾಮಿ ತನ್ನ ಗ್ರಂಥ ಮುಂದುವರಿಸಿದ. ರಾತ್ರಿ ಎರಡಾಗಲಿ, ಮೂರಾಗಲಿ ಅವನ ಕೋಣೆಯ ದೀಪವಾರುತ್ತಿರಲಿಲ್ಲ ಒಂದೊಂದು ರಾತ್ರಿ ಕಳೆದು ಹಗಲು ಹರಿದುದೇ ಅವನಿಗೆ ತಿಳಿಯುತ್ತಿರಲಿಲ್ಲ

ಕುಂಟುತ್ತ ಎಡವುತ್ತ ಸಾಗಿದ್ದ ಅವನ ಕೃತಿ ನಾಗಾಲೋಟದಲ್ಲಿ ಓಡಲಾರಂಭಿಸಿತು. ಮೂವತ್ತು ನಲವತ್ತು ಟೈಪಾದ ಹಾಳೆಗಳನ್ನು ದಿನವೂ ಕಾಣುತ್ತಿದ್ದ ಡಾ. ಚಂದ್ರಶೇಖರ್ ಬೆಕ್ಕಸಬೆರಗಾದರು.

ಗ್ರಂಥ ಮುನ್ನಡೆದಂತೆ ನಾರಾಯಣಸ್ವಾಮಿಯ ಶೈಲಿ, ಕಥಾ ನಿರೂಪಣೆ, ಅಧ್ಯಾಯ ವಿಂಗಡನೆ, ಪಾತ್ರೀಕರಣಗಳೂ ಸುಧಾರಿಸುತ್ತ ಬಂದವು

ಮೂರು ತಿಂಗಳು ಕಳೆಯುವಲ್ಲಿ ನಾರಾಯಣಸ್ವಾಮಿ ತನ್ನ ಗ್ರಂಥದ ಕೊನೆಯ ಅಧ್ಯಾಯವನ್ನು ಡಾಕ್ಟರ್ ಚಂದ್ರಶೇಖರರ ಕೈಯಲ್ಲಿಟ್ಟು

"ನನ್ನ ಕೆಲಸ ಮುಗಿಯಿತು - ಇನ್ನು ಉಳಿದಿರುವುದು ನಿಮ್ಮ ಕೆಲಸ" ಎಂದು ಹೇಳಿದ.

ರಾತ್ರಿಯೆಲ್ಲಾ ಕುಳಿತು ಡಾ. ಚಂದ್ರಶೇಖರ್ ಗ್ರಂಥವನ್ನು ಓದಿ ನೋಡಿದರು. ಅವರ ಆನಂದಕ್ಕೆ ಎಲ್ಲೆಯಿಲ್ಲದಂತಾಯಿತು. ನಿರಾಶ್ರಿತರಿಗೆ ಚಹಾ ಒದಗಿಸುತ್ತಿದ್ದ ಫ್ಲೋರನ ಬಳಿಗೆ ಹೋಗಿ ಅವಳಿಗೆ ಗ್ರಂಥ

ವನ್ನು ಓದಲಾರಂಭಿಸಿದರು.

ಗ್ರಂಥಪಠನೆ ಕೇಳಿದ ಫ್ಲೋರಾ, ಉಕ್ಕಿ ಹರಿಯುತ್ತಿದ್ದ ಕಣ್ಣೀರನ್ನು ಒರಸಿಕೊಳ್ಳುತ್ತಾ

" ನಿಮ್ಮ ಸ್ನೇಹಿತರು ಅಸಾಮಾನ್ಯ ಪ್ರತಿಭಾಶಾಲಿಗಳು (Your friend is a great genius) " ಎಂದಳು.

ತಮ್ಮ ಕರ್ತವ್ಯಭಾಗಕ್ಕೆ ಲೋಪ ಬರದಂತೆ ಡಾ. ಚಂದ್ರಶೇಖರ್ ಹಸ್ತಪ್ರತಿಯನ್ನು ಪೂರ್ಣವಾಗಿ ತಿದ್ದಿ, ಅಚ್ಚುಕಟ್ಟಾಗಿ ಟೈಪುಮಾಡಿಸಿ ತಮ್ಮ ಪ್ರಕಾಶಕರಾದ ಸಿಲ್ವಿನ್, ಬ್ಲಾಂಟ್ ಕಂಪೆನಿಗೆ ಒಪ್ಪಿಸಿದರು.

ಗ್ರಂಥರಚನೆಯ ಕೆಲಸ ಮುಗಿಯಿತೆಂದು ನಾರಾಯಣಸ್ವಾಮಿ ಕಾಲಹರಣ ಮಾಡಲಿಚ್ಛಿಸಲಿಲ್ಲ

" ನಾನು ನಿಮ್ಮನ್ನು ಪದೇಪದೇ ಪೀಡಿಸಬೇಕಾಗಿದೆ." ಎಂದ.

" ಏಕೆ ? ಮಿ. ಸ್ವಾಮಿ "

" ನನ್ನ ಥೀಸಿಸ್‌ಗೆ ವ್ಯಾಸಂಗ ಆರಂಭಿಸಬೇಕು. ಪ್ರೊ. ಜಾನ್ ಡ್ರೂ ಅವರ ಪರಿಚಯ ಮಾಡಿಕೊಡುವಿರಾ ?"

" ಸ್ವಲ್ಪ ಕುಳಿತುಕೊಳ್ಳಿ. ಈಗಲೇ ಡ್ರೂಗೆ ಫೋನ್ ಮಾಡಿ ಅವರೆಲ್ಲಿದ್ದಾರ ತಿಳಿಯುತ್ತೇನೆ. ಅವರಿಗೆ ಪುರಸತ್ತಿದ್ದರೆ ಈಗಲೇ ಹೋಗೋಣ "

ಎಂದು ಲಂಡನ್ ಕಾಲೇಜಿಗೆ, ಮ್ಯುಸಿಯಮ್ಮಿಗೆ ಫೋನ್‌ಮಾಡಿ

" ಡ್ರೂ -ಮ್ಯುಸಿಯಂನಲ್ಲಿದ್ದಾರೆ. ಬನ್ನಿ ಅಲ್ಲಿಗೇ ಹೋಗೋಣ " ಎಂದರು.

ಬಸ್ಸಿನಿಂದ ಬಸ್ಸಿಗೆ ಹಾರಿ ಚಂದ್ರಶೇಖರ್, ನಾರಾಯಣಸ್ವಾಮಿ ಮ್ಯುಸಿಯಂ ಮುಟ್ಟಬೇಕಾದರೆ ಅರ್ಧಗಂಟೆಯಾಯಿತು.

ಪ್ರೊ. ಡ್ರೂ ಸಿಗಾರ್ ಸೇವಿಸುತ್ತ ಮ್ಯುಸಿಯಂ ಗೇಟಿನ ಬಳಿ ಕಾದು ನಿಂತಿದ್ದರು.

ಬಸ್ಸಿನಿಂದಿಳಿದು ಬಂದ ಚಂದ್ರಶೇಖರ್ ಡ್ರೂ ಕೈಕುಲುಕಿ, ನಾರಾಯಣಸ್ವಾಮಿಯ ಪರಿಚಯ ಮಾಡಿಕೊಟ್ಟರು.

ಈಸ್ಟ್ ಅಂಡ್ ವೆಸ್ಟ್ ಸೊಸೈಟಿಯ ರಕ್ಷಣೆಗೊಳಗಾಗಿದ್ದ ನಿರಾಶ್ರಿ

ತರಿಗೂ ಡ್ರ್ಯೂ ಅವರಿಗೂ ಯಾವ ವ್ಯತ್ಯಾಸವೂ ಇರಲಿಲ್ಲ. ಓಷೀ ತಾಯಿ ರಿಪೇರಿಮಾಡಿಕೊಡುತ್ತಿದ್ದ ಕೋಟಿನ ಮಾದರಿ ಕೋಟನ್ನು ಪ್ರೊಫೆಸರು ಧರಿಸಿದ್ದರು ತಲೆಯ ಮೇಲೆ ಹಲವು ಆಕಾರ ತಳೆದಿದ್ದ ಹ್ಯಾಟು ಮಧ್ಯಮ ಪ್ರಮಾಣದ, ಕುರುಚಲು ಗಡ್ಡದ ಆ ಪ್ರಾಣಿಯನ್ನು ಯಾರಾದರೂ ಭಿಕ್ಷುಕನೆಂದು ಭಾವಿಸಬಹುದಾಗಿತ್ತು.

ಪರಿಚಯ ಮುಗಿದ ಮೇಲೆ ಪ್ರೊಫೆಸರು

"ಬನ್ನಿ - ಮೊದಲು ಸ್ವಲ್ಪ ಚಹಾ ತೆಗೆದುಕೊಳ್ಳೋಣ. ಸ್ವಲ್ಪವೂ ಗಲಭೆಯಿಲ್ಲದ ಒಂದು ಚಹಾ ಅಂಗಡಿ ಪತ್ತೆ ಮಾಡಿದ್ದೀನಿ ಚಂದ್ರ - ಆ ಸ್ಥಳ ನೋಡಿ ನೀನು ಮೆಚ್ಚಿಕೊಳ್ಳುತ್ತೀ ?"

"ಬರಬರುತ್ತ ನೀನು ಬಲು ಕೃಪಣನಾಗುತ್ತಿದ್ದೀ ಜಾನ್"

ಎಂದು ಚಂದ್ರಶೇಖರ್ ಹಾಸ್ಯಮಾಡಿದರು.

ಡ್ರ್ಯೂ ಮೆಚ್ಚಿನ ಚಹಾ ಅಂಗಡಿ ಮ್ಯೂಸಿಯಮ್ಮಿಗೆ ಒಂದೆರಡು ಫರ್ಲಾಂಗು ದೂರದಲ್ಲಿತ್ತು. ಅದನ್ನು ನಡೆಸುತ್ತಿದ್ದ ಕ್ಯಾಪ್ಟನ್ ಮ್ಯಾಕೇ (Mackay) ಯುದ್ಧದಲ್ಲಿ ಹೋರಾಡಿ ಕಾಲು ಕಳದುಕೊಂಡಿದ್ದ. ಎರಡನೆಯ ಮಹಾ ಯುದ್ಧ ಅವನ ಮಗನನ್ನೂ ಮನೆಯನ್ನೂ ಆಹುತಿ ತೆಗೆದುಕೊಂಡಿತ್ತು. ಮ್ಯಾಕೆ ಮತ್ತು ಅವನ ಸೊಸೆ ನೀನಾ (Nina) ಹೊಟ್ಟೆಯಪಾಡಿಗಾಗಿ ಒಂದು ಸಣ್ಣ ಚಹಾ ಅಂಗಡಿ ನಡೆಸುತ್ತಿದ್ದರು.

ಡ್ರ್ಯೂ, ಚಂದ್ರಶೇಖರ್, ಸ್ವಾಮಿ ಮೇಜಿನ ಮುಂದೆ ಕುಳಿತ ಕೂಡಲೆ ನೀನಾ ಬಂದು

"ಗುಡ್ ಮಾರ್ನಿಂಗ್ ಪ್ರೊಫೆಸರ್" ಎಂದಳು.

"ವೆರಿ ಗುಡ್ ಮಾರ್ನಿಂಗ್ ಮೈ ಡಿಯರ್ (Very good morning, my dear) - ಇವತ್ತು ಅತಿಥಿಗಳನ್ನು ಕರೆದುಕೊಂಡು ಬಂದಿದ್ದೀನೆ - ತಿನ್ನಲೇನು ಕೊಡುತ್ತೀ."

"ಚೆನ್ನಾಗಿ ಮಟನ್ ಸ್ಯಾಂಡ್‌ವಿಚಸ್ (Mutton Sandwiches) ಮಾಡಿಕೊಡುತ್ತೇನೆ."

"ಬೇಡ - ಈ ನನ್ನ ಸ್ನೇಹಿತರಿಬ್ಬರೂ ಶಾಕಾಹಾರಿಗಳು. ಎಲ್ಲರಿಗೂ ವೆಜಿಟಬಲ್ ಸ್ಯಾಂಡ್‌ವಿಚಸ್ ಮಾಡಿಕೊಡು - ಎರಡು

ಪಾರ್ಟಿ - ಯಾವುದಾದರೂ ಸ್ವೀಟ್."

ಮುಗುಳ್ನಗೆ ಬೀರುತ್ತ ಸೀನಾ ತಿಂಡಿತೀರ್ಥ ತರಲು ಹೋದಳು. ಚಂದ್ರಶೇಖರ್ ಸ್ವಾಮಿಯ ಕಡೆ ತಿರುಗಿ

"ಮಿ ಸ್ವಾಮಿ, ನನ್ನ ಮಿತ್ರನ ನಡವಳಿಕೆ ಕಂಡು ಗಾಬರಿಯಾಗಬೇಡಿ. ಹುಚ್ಚನಂತೆ ಕಾಣುವ ಈ ಜಾನ್ ಇಂಗ್ಲೆಂಡಿನ ಅತಿ ಶ್ರೇಷ್ಠ ಸಮಾಜವಿಜ್ಞಾನಿ ಇವನ ಗ್ರಂಥಗಳನ್ನು ನೀವು ಓದಿದ್ದೀರಲ್ಲಾ!"

"ಸರ್, ನಿಮ್ಮ ಪರಿಚಯವಾದ ಈ ದಿನ ನನ್ನ ಜೀವನದ ಸುವರ್ಣದಿನ."

"ಚಂದ್ರನ ಮಾತು ನಂಬಬೇಡಿ ಮಿ. ಸ್ವಾಮಿ. ಸ್ನೇಹಾಭಿಮಾನದಿಂದ ಇವನು ವಿವೇಚನೆಯನ್ನೇ ಕಳದುಕೊಂಡಿದ್ದಾನೆ?"

ಸೀನಾ ತಿಂಡಿತೀರ್ಥ ತಂದು ಮೇಜಿನ ಮೇಲಿಟ್ಟು

"ಇನ್ನೇನಾದರೂ ಬೇಕೇ ಪ್ರೊಫೆಸರ್" ಎಂದು ಕೇಳಿದಳು.

"ಪಾಪಾ ಹೇಗಿದ್ದಾರೆ ಸೀನಾ?" ಎಂದು ಡ್ರೂ ಕೇಳಿದರು.

"ಸ್ವಲ್ಪ ವಾಸಿ."

"ಜ್ವರ ನಿಂತಿದೆಯೇ?"

"ಪೂರ್ತಿ ನಿಂತಿಲ್ಲ. ಕಡಿಮೆಯಾಗುತ್ತಿದೆ"

"ಡಾಕ್ಟರು ಬರುತ್ತಿದ್ದಾರೆಯೇ?"

"ಬರುತ್ತಿದ್ದಾರೆ."

"ಕಾಫಿಲೆ ಬೇಗ ಗುಣಪಡಿಸಿಕೊಂಡು, ಕೆಳಗಿಳಿದು ಬರುವಂತೆ ಡ್ಯಾಡೀಗೆ (Daddy) ತಿಳಿಸು."

"ತಿಳಿಸುತ್ತೇನೆ ಸರ್."

"ನನ್ನ ಫೋನ್ ನಂಬರು ಗೊತ್ತಿದೆಯಲ್ಲವೇ?"

"ಗೊತ್ತಿದೆ."

"ಯಾವಾಗ ನನ್ನ ಸಹಾಯ ಬೇಕಾದರೂ ಫೋನ್ ಮಾಡು."

"ಥ್ಯಾಂಕ್ಯೂ ಸರ್ - ಥ್ಯಾಂಕ್ ಯು (Thank you Sir, thank you)"

ನೀನಾ ಹೋದ ಮೇಲೆ ಪ್ರೊಫೆಸರು

"ಬಡಪಾಯಿ ನೀನಾ (Poor Nina)"

ಎಂದು ನಿಟ್ಟುಸಿರುಬಿಟ್ಟು

"ಸಾಮಾನ್ಯ ಜೀವನದಲ್ಲಿರುವ ಧೀರಮನೋಭಾವಕ್ಕೆ ನೀನಾ ದೃಷ್ಟಾಂತವೇ ಸಾಕು ಗಂಡನನ್ನು ಕಳೆದುಕೊಂಡ ಈ ಹೆಣ್ಣು, ಮಗನನ್ನು ಕಳೆದುಕೊಂಡ ತಂದೆಯನ್ನು ಸಾಕುತ್ತಿದ್ದಾಳೆ. .ಬನ್ನಿ, ತಿಂಡಿ ಮುಗಿಸೋಣ" ಎಂದರು

ಉಪಾಹಾರ ಸಾಗಿದ್ದಂತೆ ಚಂದ್ರಶೇಖರ್

"ಜಾನ್, ನಾನೂ ಮಿ. ಸ್ವಾಮಿ ನಿಸ್ಮಲ್ಲಿ ಒಂದು ಕೆಲಸದ ಸಲುವಾಗಿ ಬಂದಿದ್ದೇವೆ"

"ಹೇಳು ಚಂದ್ರಾ."

"ಈ ಮಿತ್ರರು ನಿನ್ನ ನೇತೃತ್ವದಲ್ಲಿ ಸಮಾಜವಿಜ್ಞಾನದ ಮೇಲೆ ಸಂಶೋಧನೆ ನಡೆಸಬೇಕೆಂದಿದ್ದಾರೆ ಅವರಿಗೆ ನೀನು ನೆರವು ನೀಡ ಬೇಕು."

"ಸಮಾಜ ವಿಜ್ಞಾನದ ಪರಿಚಯವಿದೆಯೇ ಮಿ ಸ್ವಾಮಿ"

"ಮುಂಬಯಿಯ ಟಾಟಾ ಸ್ಕೂಲ್ ಆಫ್ ಸೋಷಿಯಾಲಜಿ ಯಲ್ಲಿ ವ್ಯಾಸಂಗ ಮಾಡಿದ್ದೇನೆ"

"ಎರಡು ಗ್ರಂಥಗಳನ್ನು ಬರೆದಿದ್ದಾರೆ ಜಾನ್."

"ಹಾಗಾದರೆ ನನಗೆ ಪ್ರಖ್ಯಾತ ಶಿಷ್ಯ ದೊರೆತಂತಾಯಿತು."

"ರಂಗನ ಮುಂದೆ ಸಿಂಗನೇ ಪ್ರೊ ಪ್ರೊ."

"ಹಾಗಲ್ಲ ಮಿ. ಸ್ವಾಮಿ. ಯಾರು ಯಾರಲ್ಲಿ ಯಾವ ಪ್ರತಿಭೆ ಹುದುಗಿದೆಯೋ ಬಲ್ಲವರು ಯಾರು ? ನಿಮ್ಮ ಸಂಶೋಧನೆಗಳು ನಾಳೆ ಈ ವಿಜ್ಞಾನದ ಸ್ವರೂಪವನ್ನೇ ಬದಲಾಯಿಸಬಹುದು–.ಹಾಗಾಗಲಿ ಎಂದು ನಾನು ಹೃತ್ಪೂರ್ವಕವಾಗಿ ಹಾರೈಸುತ್ತೇನೆ. ಬೇಕಾದಾಗ ಬನ್ನಿ–ನಿಮಗೆ ಎಲ್ಲಾ ಸಹಾಯ ನೀಡಲು ಸಿದ್ಧನಾಗಿದ್ದೇನೆ. ಚಂದ್ರನ ಸ್ನೇಹಿತರು ನನ್ನ ಸ್ನೇಹಿತರು."

ನಾರಾಯಣಸ್ವಾಮಿ ಹೃದಯ ಕೃತಜ್ಞತೆಯಿಂದ ತುಂಬಿತು.

" ಥ್ಯಾಂಕ್ಯೂ ಸರ್–ಥ್ಯಾಂಕ್‌ಯು " ಎಂದ.

ಉಪಾಹಾರ ಮುಗಿದ ಮೇಲೆ ಡ್ರೂ ತಮ್ಮ ಕೈಗಡಿಯಾರ ನೋಡಿಕೊಂಡು

" ಕ್ಷಮಿಸಬೇಕು. ನಾನು ಕಾಲೇಜಿಗೆ ಹೋಗಬೇಕಾಗಿದೆ."

ಎಂದು ಮೇಲಕ್ಕೆದ್ದರು.

ನಾರಾಯಣಸ್ವಾಮಿ ಹೋಟೇಲ್ ಬಿಲ್ ಕೊಡಲು ಪರ್ಸ್ ತೆಗೆದ ಡ್ರೂ ನಗುತ್ತಾ

" ನೀನಾ ನಿಮ್ಮಿಂದ ಹಣ ತೆಗೆದುಕೊಳ್ಳುವುದಿಲ್ಲ. ಏಕೆ ವೃಥಾ ತೊಂದರೆ ತೆಗೆದುಕೊಳ್ಳುವಿರಿ " ಎಂದರು.

ಪ್ರೊಫೆಸರನ್ನು ಕಳುಹಿಸಿಕೊಟ್ಟು ಚಂದ್ರಶೇಖರ್, ನಾರಾಯಣ ಸ್ವಾಮಿ ನಡೆಯುತ್ತಾ ಹೊರಟರು. ನಾರಾಯಣಸ್ವಾಮಿ ಆದರದಿಂದ

" ಎಂಥ ವ್ಯಕ್ತಿ–ಎಷ್ಟು ಸರಳ " ಎಂದ.

" ನೀವಿಂದು ಕಂಡದ್ದು ಒಬ್ಬ ಸಮಾಜವಿಜ್ಞಾನ ಪ್ರೊಫೆಸರನ್ನಲ್ಲ ಮಿ. ಸ್ವಾಮಿ. ಸಾಕ್ಷಾತ್ ಕ್ರಿಸ್ತನನ್ನು ತಮ್ಮ ವರಮಾನದಲ್ಲಿ ಅಹನ್ಯಹನಿ ಕಾಲಕ್ಷೇಪಕ್ಕಾಗುವಷ್ಟು ಹಣ ಉಳಿಸಿಕೊಂಡು ಉಳಿದ ಹಣವನ್ನೆಲ್ಲಾ ನಮ್ಮ ಸೊಸೈಟಿಗೆ ಜಾನ್ ಕೊಡುತ್ತಿದ್ದಾನೆ. ' ಬೆಚ್ಚನೆಯ ಕೋಟು ಹೊಲಸಿಕೊಳ್ಳಯ್ಯ ' ಎಂದರೆ–' ಚಂದ್ರಾ, ನಿನ್ನ ಮನೆಗೆ ಬರುವವರಿಗೆಷ್ಟು ಮಂದಿಗೆ ಬೆಚ್ಚನೆಯ ಬಟ್ಟೆಗಳಿವೆ ' ಎನ್ನುತ್ತಾನೆ. ಜಾನ್ ನೋಡಿದರೆ ನನಗೆ ನಮ್ಮ ಋಷಿಗಳ ನೆನಪು ಬರುತ್ತದೆ."

ನಾರಾಯಣಸ್ವಾಮಿ ಮೂಕನಂತೆ ಜಾನ್ ಡ್ರೂ ಅವರ ತೇಜಃಪುಂಜ ಮುಖಮುದ್ರೆಯನ್ನೇ ಸ್ಮರಿಸಿಕೊಳ್ಳುತ್ತಾ ನಡೆದ

೧೩

ಇಳಿವಯಸ್ಸಿನ ಅಜ್ಜಿಯಮೇಲೆ ಮನೆಗೆಲಸದ ಹೊರೆ ಬಿದ್ದುದಕ್ಕೆ ಕಮಲ ವಿಷಾದಿಸಿದಳು. ಹೊತ್ತು ಹೊತ್ತಿಗೆ ಅಡಿಗೆಮಾಡಿ, ಮಕ್ಕಳು ಮರಿ, ಮಾಧವರಾಯನ ಯೋಗಕ್ಷೇಮ ನೋಡಿಕೊಳ್ಳುವುದು ಗೋದಮ್ಮನವರಿಗೆ ಪ್ರಯಾಸವಾಗುತ್ತಿತ್ತು. ಈಚೆಗೆ ಅವರಿಗೆ ದೃಷ್ಟಿ ಮಾಂದ್ಯವೂ ಆಗಿತ್ತು.

" ನಿನ್ನನ್ನು ಕೂಡಿಸಿ ಸೇವೆಮಾಡಬೇಕಾದ ಈ ಕಾಲದಲ್ಲಿಯೂ ನಿನ್ನ ಕೈಯಲ್ಲೇ ದುಡಿಸುತ್ತಿದ್ದೇನಲ್ಲಾ ಗೋದಜ್ಜಿ "

ಎಂದು ಕಮಲ ಹೇಳಿದರೆ ಗೋದಮ್ಮನವರು

" ನನ್ನ ಮಕ್ಕಳು - ಮೊಮ್ಮಕ್ಕಳ ಯೋಗಕ್ಷೇಮ ನೋಡಿಕೊಳ್ಳುವುದು ದುಡಿಮೆಯೇ ಕಮಲಾ - ಸದ್ಯ ಮಾಧೂ ಮನೋರೋಗ ಹತೋಟಿಗೆ ಬಂತಲ್ಲಾ, ಅದೇ ಒಂದು ಸಂತೋಷ."

" ಇಲ್ಲಿಗೆ ಬನ್ನಿ ಎಂದು ನಾನು ನಿಮ್ಮನ್ನು ಒತ್ತಾಯ ಮಾಡ ಬಾರದಾಗಿತ್ತು ?"

" ಏಕೆ ?"

" ನೀರಿನಿಂದ ಹೊರಬಿದ್ದ ಮೀನಿನಂತಾಗಿದೆ ಅಣ್ಣನಿಗೆ - ಊರಿನಲ್ಲಿದ್ದಿದ್ದರೆ ಜವರೇಗೌಡರು, ಷರೀಫ್‌ಸಾಹೇಬರು ಜತೆಯಲ್ಲಿದ್ದು ದುಃಖೋಪಶಮನ ಮಾಡುತ್ತಿದ್ದರು."

" ಅಂದ ಹಾಗೆ - ಗೌಡರೂ, ಸಾಹೇಬರೂ ಮಾಧೂನ ಮರತೇ ಬಿಟ್ಟಿದ್ದಾರಲ್ಲೇ ಕಮಲಾ."

" ಎಂದಿಗೆ ಮರೆತಾರು ಅಜ್ಜಿ - ಏನೋ ಅನಿವಾರ್ಯವಾಗಿರಬೇಕು."

ಕಮಲನ್ನೊಮ್ಮೆ ದಿಟ್ಟಿಸಿ ನೋಡಿ ಗೋದಮ್ಮನವರು ನಿಡು ಸುಯ್ದು

"ನಿನ್ನ ನೋಡಿದರೆ ಕರುಳು ಕಿತ್ತು ಬರುತ್ತದೆ ಕಮಲಾ" ಎಂದರು.

"ನನ್ನ ಕರ್ಮಕ್ಕೆ ಯಾರು ಹೊಣೆ ಅಜ್ಜಿ. ಯಾವ ಮಹಾ ತಾಯಿಗೆ ಹಿಂದಿನ ಜನ್ಮದಲ್ಲಿ ನಾನು ಅನ್ಯಾಯ ಮಾಡಿದ್ದೆನೋ ಈ ಜನ್ಮದಲ್ಲಿ ನನ್ನ ಬಾಳು ಮಣ್ಣುಗೂಡಿ ಹೋಯಿತು"

"ಯೋಚನೆ ಮಾಡುತ್ತಾ ಮಾಡುತ್ತಾ ಒಂದೊಂದು ಸಲ ಹೆಣ್ಣು ಬಾಳು ಪಾಪಿಬಾಳು ಎನ್ನಿಸುತ್ತೆ. ಸ್ವಲ್ಪ ಆಳವಾಗಿ ವಿಚಾರ ಮಾಡಿದಾಗ ಹೆಣ್ಣು ಬಾಳೇ ಬಾಳು - ಹೆಣ್ಣು ಬಾಳಿನಲ್ಲಿ ಜೀವ ಪಕ್ವವಾಗುವಷ್ಟು ಬೇಗ ಗಂಡು ಬಾಳಿನಲ್ಲಿ ಆಗುವುದಿಲ್ಲ ಎನ್ನಿಸುತ್ತದೆ. ತಾರುಣ್ಯದಲ್ಲಿಯೇ ವಿಧಿ ನಿನ್ನ ತಲೆಯಮೇಲೆ ವೈರಾಗ್ಯ ಹೇರಿತು. ಅದನ್ನು ನೀನು ಅರ್ಥಮಾಡಿಕೊಂಡು, ಜೀವನದಲ್ಲಿ ರೂಢಿಸಿಕೊಂಡಿರುವ ಹಾಗೆ ಯಾವ ಗಂಡಸು ಮಾಡಲು ಸಾಧ್ಯ ?"

"ಅಮ್ಮನ ಮಗಳಾಗಿ - ನಿನ್ನ ಮೊಮ್ಮಗಳಾಗಿ ನಾನು ಇಷ್ಟೂ ಮಾಡಬೇಡವೇ ?"

ಮನೆಯ ಮುಂದೆ ಜಟಕಾ ಬಂದು ನಿಂತುದನ್ನು ಕಂಡ ಕಮಲಾ

"ಯಾರೋ ಬಂದರು ಅಜ್ಜಿ" ಎಂದಳು.

ರಾಮಣ್ಣಾಚಾರ್ಯರು ಗಾಡಿಯಿಂದಿಳಿದು, ತಮ್ಮ ಮಡಿಪೆಟ್ಟಿಗೆ ಹೊತ್ತುಕೊಂಡು ಒಳಕ್ಕೆ ಬಂದರು.

"ಬನ್ನಿ – ಬನ್ನಿ ಆಚಾರ್ರೇ" ಎಂದು ಗೋದಮ್ಮ ಸ್ವಾಗತ ಬಯಸಿದರು

ಕಮಲಾ ಹಾಸಿದ ಮಂದಲಿಗೆಯ ಮೇಲೆ ಕುಳಿತ ಆಚಾರ್ಯರು ಗಂಭೀರವಾಗಿ

"ನಿಮ್ಮ ಜತೆ ವ್ಯಾಜ್ಯಕಾಯುವುದಕ್ಕೆ ಬಂದೆ ತಾಯಿ" ಎಂದರು.

"ನೀವು ಕಾಯದೆ ಇನ್ನು ಯಾರು ಕಾಯಬೇಕು - ವೆಂಕಮ್ಮನವರು ಕ್ಷೇಮವೇ ?"

" ಕ್ಷೇಮ ; ಮನೆಯಲ್ಲಿ ಎಲ್ಲರೂ ಆರೋಗ್ಯವೇ ? ರಾಯರೆಲ್ಲಿ ?"

" ರಾಮರಾಯರ ಮಕ್ಕಳು ಕೇಶವಮೂರ್ತಿ ಆಫೀಸಿಗೆ ಹೋಗಿದ್ದಾನೆ."

" ರಾಯರು ಪುನಃ ವಕೀಲಿ ಆರಂಭಿಸಿರುವರೇ ?"

" ಇಲ್ಲ - ಮನೆಯಲ್ಲಿ ಕುಳಿತೇನು ಮಾಡುವುದೆಂದು ಕೇಶವ ಮೂರ್ತಿ ಆಫೀಸಿಗೆ ಹೋಗುತ್ತಿದ್ದಾನೆ."

" ನಮ್ಮ ಭಾಗದ ಮಹಾಲಕ್ಷ್ಮಿ ರುಕ್ಮಿಣಮ್ಮನವರು ಹೊರಟೇ ಹೋದ್ರು - ನೀವೆಲ್ಲಾ ನಮ್ಮನ್ನು ಮರೆತುಬಿಡುವುದೇ ?"

" ಮರೆತಿಲ್ಲ ಆಚಾರ್ರೇ - ಯಾವ ಸಂತೋಷಕ್ಕೆ ನಿಮ್ಮನ್ನು ಬರ ಮಾಡಿಕೊಳ್ಳಬೇಕಾಗಿತ್ತು ಹೇಳಿ. ರುಕ್ಕು ಹೋದಮೇಲೆ ಮನೆಯಲ್ಲಿ ಕತ್ತಲೆ ಕವಿದುಬಿಟ್ಟಿದೆ."

" ಗೋದಮ್ಮನವರೇ - ನಂದಾದೀಪದಲ್ಲಿ ಎಣ್ಣೆ ಮುಗಿದರೆ ನಾವು ದೀಪ ಆರಿಸುತ್ತೇವೆಯೇ ? ಮತ್ತಷ್ಟು ಎಣ್ಣೆ ಹುಯ್ದು ದೀಪ ಆರದಂತೆ ನೋಡಿಕೊಳ್ಳುವುದಿಲ್ಲವೇ ?"

" ನಿಜ ಆಚಾರ್ರೇ - ನಿಜ ಆದರೆ. "

" ರಾಯರು ಬೇಗ ಬರುತ್ತಾರೆಯೇ ?"

" ಇನ್ನೇನು ಬರುವ ಹೊತ್ತು. ಏಳಿ - ಸ್ನಾನಮಾಡಿ, ದೇವರ ಪೂಜೆ ಮಾಡಿ - ಮಾಧು ಬಂದಕೂಡಲೆ ಊಟಕ್ಕೇಳುವಿರಂತೆ. ಅವನ ಹತ್ತಿರ ಏನಾದರೂ ಕೆಲಸವಿತ್ತೇ ?"

" ನನ್ನ ಜಮೀನಿನ ವಿಷಯ ಮಾತನಾಡಬೇಕಾಗಿತ್ತು."

" ಆಚಾರ್ರೇ - ಬಹಳ ದಿವಸಗಳ ಮೇಲೆ ಬಂದಿರಿ. ' ಹರಿಕಥಾ ಮೃತಸಾರ ' ಪಾರಾಯಣಮಾಡಿ ನೀವು ಊರಿಗೆ ಪ್ರಯಾಣಮಾಡ ಬೇಕು."

" ಊರಿನಲ್ಲಿ ನಾನು ಭಾಗವತ ಪುರಾಣ ಹೇಳುತ್ತಿದ್ದೇನೆ. ಅದನ್ನು ಮುಗಿಸಿಕೊಂಡು ಬಂದು ಅವಶ್ಯಕವಾಗಿ 'ಹರಿಕಥಾಮೃತ ಸಾರ' ಪಾರಾಯಣ ಮಾಡುತ್ತೇನೆ. ರಾಯರನ್ನು ಕಂಡುಹೋಗೋಣ ಎಂದು ಬಂದೆ."

ಮಾಧವರಾಯ ಮನೆಗೆ ಬರುವ ಹೊತ್ತಿಗೆ ರಾಮಣ್ಣಾಚಾರ್ಯರು ಸ್ನಾನ, ಪೂಜೆ ಮುಗಿಸಿ 'ರಾಘವೇಂದ್ರ ಸ್ತೋತ್ರ' ಹೇಳಿಕೊಳ್ಳುತ್ತ ಕುಳಿತಿದ್ದರು.

ಆಚಾರ್ಯರನ್ನು ಕಂಡು ಮಾಧವರಾಯನಿಗೆ ಪರಮಾನಂದವಾಯಿತು. ಕುಶಲಪ್ರಶ್ನೆಗಳಾದ ಮೇಲೆ ಆಚಾರ್ಯರನ್ನು ಊಟಕ್ಕೆ ಎಬ್ಬಿಸಿ ತಾನೂ ಜತೆಯಲ್ಲಿ ಕುಳಿತುಕೊಂಡ.

ಆಚಾರ್ಯರು ತಾಂಬೂಲ ಸ್ವೀಕರಿಸುತ್ತಾ

"ಅಮ್ಮಾವರು ಹೋದ ಮೇಲೆ ನೀವು ನಮ್ಮ ಕೈಬಿಟ್ಟುಬಿಟ್ಟಿರಿ" ಎಂದರು.

"ಇಲ್ಲ ಆಚಾರ್ರೇ - ನನ್ನ ಬುದ್ಧಿಗೇ ಮಂಕು ಕವಿಯಿತು. ರುಕ್ಕೂ ತನ್ನೊಂದಿಗೆ ನಮ್ಮೆಲ್ಲರ ಜೀವಶಕ್ತಿಯನ್ನು ಸೆಳೆದುಕೊಂಡು ಹೋಗಿದ್ದಾಳೆ."

"ಇಲ್ಲ ಸ್ವಾಮಿ - ನಿತ್ಯಚೇತನೆಯಾದ ಆ ತಾಯಿ ನಿಮಗೆ ಹೊಸ ಶಕ್ತಿ ತುಂಬುತ್ತಿದ್ದಾರೆ. ತಾತ್ಕಾಲಿಕ ಆಲಸ್ಯ ತಲೆದೋರುವುದು ಸಹಜ."

"ತಮ್ಮದೇನೋ ಕೆಲಸವಿದೆಯೆಂದು ಅಮ್ಮ ಹೇಳಿದಳು."

"ಬನ್ನೂರಿನ ಹತ್ತಿರ ನನ್ನದೊಂದು ಚೂರು ಗದ್ದೆಯಿದೆಯಲ್ಲಾ - ಅದರ ವಿಷಯ ರಾಮಾಯಣವಾಗಿದೆ."

"ಏನಾಗಿದೆ ?"

"ತಿಮ್ಮೇಗೌಡನಿಗೆ ಗುತ್ತಿಗೆಗೆ ಕೊಟ್ಟಿದ್ದೆ. ಎರಡು ವರ್ಷದಿಂದ ಅವನು ಗುತ್ತಿಗೆ ಹಣ ಬಿಡಿಕಾಸೂ ಕೊಟ್ಟಿಲ್ಲ. ಕೈಗೇ ಸಿಕ್ಕದೆ ತಪ್ಪಿಸಿಕೊಳ್ಳುತ್ತಿದ್ದಾನೆ. ಅವನ ಗುತ್ತಿಗೆ ಕರಾರು ತಪ್ಪಿಸಿ ಬೇರೆಯವರಿಗೆ ಮಾಡಿಸಬೇಕು. ಹಳೇಬಾಕಿ ಆದಷ್ಟು ವಸೂಲ್ಮಾಡಿಕೊಳ್ಳಬೇಕು. ತಮ್ಮನ್ನು ಕೇಳಿ ದಾವಾ ಹಾಕೋಣ ಎಂದು ಬಂದೆ."

"ಕೋರ್ಟು ಕಛೇರಿ ವ್ಯವಹಾರಕ್ಕೆ ನೀವೇಕೆ ಸಿಕ್ಕಿಕೊಳ್ಳುತ್ತೀರಿ ಆಚಾರ್ರೇ ?"

"ತಾವೇನು ಹೇಳಿದರೂ ಮಾಡುತ್ತೇನೆ."

" ತಿಮ್ಮೇಗೌಡ ಪುಂಡನೇ ?"

" ಪುಂಡ ಅಲ್ಲ - ಜೀನಕುಳ ಎಂದು ಕಾಣುತ್ತದೆ."

" ನೀವು ಒಪ್ಪುವ ಹಾಗಿದ್ದರೆ ನಾನು ಜವರೇಗೌಡರಿಗೆ ಕಾಗದ ಬರೆದು ರಾಜಿಮಾಡಿಸುತ್ತೇನೆ."

" ಅಷ್ಟು ಮಾಡಿದರೆ ಉಪಕಾರವಾಗುತ್ತದೆ "

" ಮುಂದೆಯೂ ತಿಮ್ಮೇಗೌಡ ಗುತ್ತಿಗೇದಾರನಾಗಿರಲು ನಿಮ್ಮ ಅಭ್ಯಂತರವಿಲ್ಲಸಷ್ಟೆ !"

" ಗುತ್ತಿಗೆ ಹಣ ಸರಿಯಾಗಿ ಕೊಡುವ ಹಾಗಿದ್ದರೆ ಅವನೇ ಇರಲಿ."

" ನೀವು ಕೂಡಲೆ ಪ್ರಯಾಣ ಮಾಡುವುದಾಗಿ ಅಮ್ಮನಿಗೆ ಹೇಳಿದರಂತೆ !"

" ಹೌದು ಸ್ವಾಮಿ - ಹೋಗಬೇಕಾಗಿದೆ. ಅಪ್ಪಣೆಯಾದರೆ ಮುಂದಿನ ತಿಂಗಳು ಬಂದು ಒಂದು ವಾರ ನಿಲ್ಲುತ್ತೇನೆ ನಾಣಿಯಿಂದ ಈಚೆಗೆ ಕಾಗದ ಬಂದಿತ್ತೇ ?"

" ಅವನು ಇಂಗ್ಲೆಂಡಿಗೆ ಹೋಗುವ ಮುನ್ನ ಒಂದು ಕಾಗದ ಬರೆದಿದ್ದ - ಈಚೆಗೆ ಕಾಗದವೂ ಇಲ್ಲ, ಪತ್ರವೂ ಇಲ್ಲ. ಈ ಹುಡುಗರಿಂದ ನಾನೇನು ನಿರೀಕ್ಷಿಸುವುದಿಲ್ಲ ಆಚಾರ್ರೇ - ಅವರು ಆರೋಗ್ಯವಾಗಿರುವುದನ್ನು ತಿಳಿಸಿದರೆ ಸಾಕು, ಅದೇ ಮಹೋಪಕಾರ."

" ನಾಣಿ ವಿಷಯ ಬೇಸರಪಟ್ಟುಕೊಳ್ಳಬೇಡಿ - ಸ್ವಾಮಿ."

" ಕಾಲಧರ್ಮಕ್ಕೆ ಹೊಂದಿಕೊಳ್ಳುವ ಶಕ್ತಿ ನನ್ನಲ್ಲಿಲ್ಲದಿರುವುದೇ ಇಷ್ಟೆಲ್ಲಾ ವ್ಯಥೆಗೆ ಕಾರಣ."

" ಕಾಲಧರ್ಮ ಬದಲಾದರೇನು ಋಜುಭಾವನೆ ಅಳಿಸಿ ಹೋಗುವುದೇ ?"

" ಬಲ್ಲವರು ಯಾರು ? ಅಳಿಸಿಯೂ ಹೋಗಬಹುದು."

" ರಕ್ತಗುಣ ತನ್ನ ಪ್ರಭಾವ ತೋರಿಸದೆ ಬಿಡುವುದಿಲ್ಲ. ರುಕ್ಮಿಣಮ್ಮನವರ ಮಗ ಉತ್ತಮ ವ್ಯಕ್ತಿಯಾಗದೆ ನಿರ್ವಾಹವೇ ಇಲ್ಲವಲ್ಲ. ಭಗವಂತನ ಸನ್ನಿಧಿಯಲ್ಲಿದ್ದ ಅರ್ಜುನನಿಗೇ ತಾತ್ಕಾಲಿಕ

ಅಜ್ಞಾನ ಮುಸುಕಿದಾಗ, ಉಳಿದವರ ಪಾಡೇನು ?"

"ಕಮಲಮ್ಮ ಶಾಲೆಗೆ ಹೋಗುತ್ತಿದ್ದಾಳೆಯೇ ?"

"ಹೋಗುತ್ತಿದ್ದಾಳೆ. ಆ ಮಗೂ ಸಂಪಾದನೆಯಲ್ಲಿ ನಾವು ಕಾಲ ತಳ್ಳಬೇಕಾಗಿದೆ."

"ರಾಮು, ಶ್ರೀದೇವಿ ಇಲ್ಲಿಗೆ ಬರುತ್ತಿರುತ್ತಾರೆಯೇ ?"

"ಬರುತ್ತಿರುತ್ತಾರೆ ಅವರಿಗೂ ಅವರ ಸಂಸಾರದ ಚಿಂತೆ. ಕಾಲ ಬಹಳ ನಾಜೂಕಾಯಿತು ಆಚಾರ್ರೇ. ಎಷ್ಟು ಸಂಪಾದಿಸಿದರೂ ಎರಡು ಹೊತ್ತು ಉಣ್ಣುವುದಕ್ಕೇ ನಾಲುವುದಿಲ್ಲ."

"ನಮ್ಮ ಕಾಲವೂ ಮುಗಿಯಿತು ರಾಯರೇ. ವೈದಿಕವೃತ್ತಿಯಲ್ಲಿ ವೈದಿಕರಿಗೇ ಗೌರವವಿಲ್ಲವಾಗಿದೆ. ನಿಮ್ಮ ಹಾಗೆ ಕೊಡುವ ಧಣಿಗಳನ್ನು ಇನ್ನು ಎಲ್ಲಿಂದ ತರಬೇಕು. ರುಕ್ಮಿಣಮ್ಮನವರು ಕಣ್ಣು ಮುಚ್ಚಿದ್ದೇ ಮುಚ್ಚಿದ್ದು - ನಮ್ಮ ಮನೆಯಿಂದಲೂ ಲಕ್ಷ್ಮಿ ಹೊರಟುಹೋದಳು."

ರುಕ್ಮಿಣಿಯ ಗುಣಕಥನದಲ್ಲಿ ಆಚಾರ್ಯರು ಮೈಮರೆತರು. ಮಾಧವರಾಯನಿಗೆ ಹೊತ್ತಿನ ಪರಿವೆಯೇ ಆಗಲಿಲ್ಲ.

## ೧೪

ನಾರಾಯಣಸ್ವಾಮಿಯನ್ನು ಸಂತೋಷವಾಗಿ ಪ್ರೊ. ಡ್ರೂ. ಶಿಷ್ಯನನ್ನಾಗಿ ಅಂಗೀಕರಿಸಿದರು. ವ್ಯಾಸಂಗ ಆರಂಭಿಸುವ ಮುನ್ನ ಪ್ರೊ. ಡ್ರೂ

" ಮಿ. ಸ್ವಾಮಿ ನಿಮ್ಮ ಥೀಸಿಸಿಗೆ ಯಾವ ವಿಷಯವನ್ನಾರಿಸಿ ಕೊಂಡಿರುವಿರಿ " ಎಂದು ಕೇಳಿದರು

" ಹಿಂದುಗಳು ಕೇವಲ ವ್ಯಕ್ತಿವಾದಿಗಳು (Individualists), ಅವರಲ್ಲಿ ಸಮಾಜ ಕಲ್ಪನೆ, ರಾಷ್ಟ್ರಕಲ್ಪನೆ ಬೆಳೆಯಲಿಲ್ಲ ಎಂಬ ಅಭಿಪ್ರಾಯ ಪಾಶ್ಚಾತ್ಯರಲ್ಲಿ ಹರಡಿದೆ. ಈ ತಪ್ಪುಕಲ್ಪನೆ ಹೋಗಲಾಡಿಸಲು **'ಹಿಂದುಗಳ ಸಾಮಾಜಿಕ ಕಲ್ಪನೆಯ ವಿಕಾಸ'** ದ ಮೇಲೆ ಸಂಶೋಧನೆ ನಡಸಬೇಕೆಂದಿದ್ದೇನೆ. ತಮಗೆ ತಿಳಿದಿರುವಂತೆ ಹಿಂದುಗಳು ಸಮಾಜ, ರಾಷ್ಟ್ರಕ್ಕೆ ಪಾಶ್ಚಾತ್ಯರಂತೆ ವಿಭೇದ ಕಲ್ಪಿಸುವುದಿಲ್ಲ. ಸಮಾಜಕಲ್ಪನೆಯನ್ನು ನಾನು ವರ್ಣಿಸುವಾಗ ಪರ್ಯಾಯವಾಗಿಯಾದರೂ ರಾಷ್ಟ್ರಕಲ್ಪನೆಯನ್ನೂ ವಿವೇಚಿಸಬೇಕಾಗಿದೆ."

" ವಿಷಯ ಚೆನ್ನಾಗಿದೆ - ಅದನ್ನೇ ತೆಗೆದುಕೊಳ್ಳಿ."

ಎಂದು ಸ್ಥೂಲವಾಗಿ ವಿಷಯಗಳನ್ನು ಸಂಗ್ರಹಿಸುವ ಬಗೆ, ಪೃಥಕ್ಕರಿಸುವ ಬಗೆಯನ್ನು ವರ್ಣಿಸಿದರು.

ಡ್ರೂ ಒದಗಿಸುತ್ತಿದ್ದ ಪುಸ್ತಕಗಳನ್ನು ಓದಿ ಟಿಪ್ಪಣಿ ಸಿದ್ಧಗೊಳಿಸುವುದು, ಬ್ರಿಟಿಷ್ ಮ್ಯೂಸಿಯಂ ಲೈಬ್ರರಿಯಲ್ಲಿದ್ದ ತನ್ನ ವಿಷಯಕ್ಕೆ ಸಂಬಂಧಪಟ್ಟ ಗ್ರಂಥಗಳನ್ನೋದುವುದಕ್ಕೇ ನಾರಾಯಣಸ್ವಾಮಿಯ ಕಾಲ ವಿನಿಯೋಗವಾಗುತ್ತಿತ್ತು.

ನಾರಾಯಣಸ್ವಾಮಿಯ ಶ್ರದ್ಧೆ ಕಂಡು ಮೆಚ್ಚಿಗೊಂಡ ಗ್ರಂಥ-ಭಂಡಾರಿ ಪಿಯರ್‌ಸನ್

"ಮಿ. ಸ್ವಾಮಿ, ಪಿ.ಎಚ್‌ಡಿ ಥೀಸಿಸ್ ಪಡೆಯಲು ಇಷ್ಟು ಕಷ್ಟ ಪಡಬೇಕಾಗಿಲ್ಲ" ಎಂದರು

"ಡಿಗ್ರಿ ತೆಗೆದುಕೊಳ್ಳುವುದು ಗೌಣವಿಷಯ ಮಿ. ಪಿಯರ್‌ಸನ್. ಈ ವ್ಯಾಜದಲ್ಲಿ ವಿಷಯವನ್ನು ಕೂಲಂಕಷವಾಗಿ ಅಭ್ಯಾಸಮಾಡಿ ಒಳ್ಳೆಯ ಗ್ರಂಥ ಬರೆಯಬೇಕೆಂದು ಆಸೆಪಡುತ್ತಿದ್ದೇನೆ."

"ಇದೇ ಸರಿಯಾದ ಮನೋಭಾವ ಮಿ. ಸ್ವಾಮಿ. ನೀವು ಪ್ರೊ. ಹ್ಯೂ. ಅವರ ಶಿಷ್ಯರಾದುದಕ್ಕೆ ಸಾರ್ಥಕವಾಯಿತು" ಎಂದರು.

ಒಂದು ದಿನ ನಾರಾಯಣಸ್ವಾಮಿ ಲೈಬ್ರರಿಯಲ್ಲಿ ತಲ್ಲೀನನಾಗಿ ಕುಳಿತಿದ್ದಾಗ ಪಿಯರ್‌ಸನ್ ಬಂದು

"ಮಿ ಸ್ವಾಮಿ. ನಿಮಗೆ ಫೋನ್ ಕಾಲ್ ಬಂದಿದೆ" ಎಂದು ತಿಳಿಸಿದರು.

ನಾರಾಯಣಸ್ವಾಮಿ ಫೋನನ್ನು ಕೈಗೆತ್ತಿಕೊಂಡು

"ಹೆಲೋ–ನಾನು ಸ್ವಾಮಿ ಮಾತನಾಡುತ್ತಿರುವುದು. ಯಾರು ನೀವು?" ಎಂದು ಕೇಳಿದ.

"ನಾನು ಡಾ. ಚಂದ್ರಶೇಖರ್. ನಿಮ್ಮ ಕೆಲಸಕ್ಕೆ ವಿಘ್ನವಾಯಿತೇ ಮಿ. ಸ್ವಾಮಿ."

"ಚಿಂತೆಯಿಲ್ಲ. ಏನು ಸಮಾಚಾರ ಡಾಕ್ಟರ್?"

"ನಿಮ್ಮನ್ನ ಇಂದೇ ಕರೆತರುವಂತೆ ನನ್ನ ಪ್ರಕಾಶಕರು ಸಿಲ್ವಿನ್ ಮತ್ತು ಬ್ಲಾಂಟ್ ಕಾಗದ ಬರೆದಿದ್ದಾರೆ. ನಿಮಗೆ ಪುರಸತ್ತಿದ್ದರೆ ನಾನೇ ಅಲ್ಲಿಗೆ ಬರುತ್ತೇನೆ–ಪ್ರಕಾಶಕರಲ್ಲಿ ಹೋಗೋಣ."

"ಆಗಬಹುದು–ನಾನು ಸಿದ್ಧವಾಗಿರುತ್ತೇನೆ."

"ಈಗಲೇ ನಾನು ಪ್ರಕಾಶಕರಿಗೆ ಫೋನ್‌ಮಾಡಿ ತಿಳಿಸುತ್ತೇನೆ. ಗುಡ್‌ಲಕ್ ಮಿ. ಸ್ವಾಮಿ (Good Luck, Mr. Swami)"

"ಥ್ಯಾಂಕ್ಯು ಡಾಕ್. (Thank you, Doc.)"

ಅರ್ಧ ಗಂಟೆಯೊಳಗಾಗಿ ಡಾ. ಚಂದ್ರಶೇಖರ್ ಟ್ಯಾಕ್ಸಿಯಲ್ಲಿ

ಮ್ಯೂಸಿಯಂ ತಲುಪಿದರು ನಾರಾಯಣಸ್ವಾಮಿ ಟ್ಯಾಕ್ಸಿ ಒಳಗೆ ಕುಳಿತಮೇಲೆ

" ಇದೇನು ಡಾಕ್, ಇವತ್ತು ನಿಮ್ಮ ನಿಯಮವ ಉಲ್ಲಂಘಿಸಿದ್ದೀರಿ ?" ಎಂದು ಕೇಳಿದ.

" ಹನ್ನೆರಡಕ್ಕೆ ಸರಿಯಾಗಿ ನಾವು ಪ್ರಕಾಶಕರ ಆಫೀಸಿನಲ್ಲಿರಬೇಕು ಕಾಲಾವಕಾಶವಿಲ್ಲದಿರಲು ಟ್ಯಾಕ್ಸಿಮಾಡಿಕೊಂಡು ಬಂದೆ "

" ಬಸ್ಸಿ-ಮ್ಯಾಕೇಯಲ್ಲಿ ಚಹಾ ತೆಗೆದುಕೊಂಡು ಹೋಗೋಣ."

" ಮೊದಲು ಕೆಲಸವಾಗಲಿ ಸ್ವಾಮಿ. ಚಹಾ ತರುವಾಯ."

' ಸಿಲ್ವಿನ್ ಮತ್ತು ಬ್ಲಾಂಟ್ ' ಕಂಪೆನಿಯ ಕಛೇರಿ ಜೇನುಗೂಡಿನಂತಿತ್ತು ಒಂದೇ ಸಮನೆ ನಾಲ್ಕಾರು ಫೋನುಗಳು ಹತ್ತಿಪ್ಪತ್ತು ಟೈಪ್‌ರೈಟರುಗಳು ಶಬ್ದಮಾಡುತ್ತಿದ್ದವು. ಸ್ಪ್ರಿಂಗ್ ಬಾಗಿಲು (Spring door) ಉಯ್ಯಾಲೆಯಂತೆ ಸದಾ ತೂಗುತ್ತಿತ್ತು. ಜನ ಬಂದೇ ಬರುತ್ತಿದ್ದರು - ಹೋಗೇ ಹೋಗುತ್ತಿದ್ದರು

ಡಾ. ಚಂದ್ರಶೇಖರ್ ಕಂಪೆನಿಯ ಕಛೇರಿಗೆ ಚಿರಪರಿಚಿತರಾಗಿದ್ದರು. ಅತಿಥಿ ಕೋಣೆಯ ಕಾಪಿನವಳು

" ಗುಡ್ ಮಾರ್ನಿಂಗ್ ಡಾಕ್ಟರ್ " ಎಂದು ಸ್ವಾಗತಿಸಿದಳು.

ಡಾ ಚಂದ್ರಶೇಖರ್ ತಮ್ಮ ವಿಸಿಟಿಂಗ್ ಕಾರ್ಡ್ ತೆಗೆದು ಅದರಲ್ಲಿಯೇ ನಾರಾಯಣಸ್ವಾಮಿಯ ಹೆಸರು ಬರೆದು

" ಇದನ್ನು ಕೂಡಲೆ ಮಿ. ಹ್ಯಾರಿಸ್ ಅವರಿಗೆ ಕೊಡುವಿರಾ ಮಿಸ್." ಎಂದರು

ಭಟ್ಟಿಯ ಚೀಟಿಯನ್ನು ಮಿಸ್ ತೆಗೆದುಕೊಂಡು ನಸುನಗುತ್ತಾ ಹೋದಳು.

" ಇಲ್ಲಿ ಒಂದೆರಡು ಗಂಟೆ ಕುಳಿತರೆ ಲಂಡನ್ನಿನ ಸುಪ್ರಸಿದ್ಧ ಕವಿಗಳು, ಗ್ರಂಥಕರ್ತರನ್ನೆಲ್ಲಾ ನೋಡಬಹುದು ಮಿ. ಸ್ವಾಮಿ."

" ಮಿ. ಹ್ಯಾರಿಸ್ ಯಾರು ? "

" ಅವರೇ ಪಬ್ಲಿಕೇಷನ್ ಡಿಪಾರ್ಟಮೆಂಟಿನ ಮ್ಯಾನೇಜರು. ಗ್ರಂಥಕರ್ತರ ಭವಿಷ್ಯ ನಿರ್ಧಾರಕರು. ಹ್ಯಾರಿಸ್ ನಿರಾಕರಿಸಿದ

ಹಸ್ತಪ್ರತಿಯನ್ನು ಮಾಲೀಕರು ಅಂಗೀಕರಿಸುವುದಿಲ್ಲ."

" ಹ್ಯಾರಿಸ್ ಹೇಗೆ – ಒಳ್ಳೆಯವರೇ ? "

" ಮಾದರಿ ಇಂಗ್ಲಿಷ್‌ಮನ್ (Typical Englishman)– ಚಕಮಕಿ ಹೊಡೆದಂತೆ ಮಾತು, ಕೆಲಸದಲ್ಲಿಯೂ ಅಷ್ಟೇ ಚುರುಕು, ಗುಣಗ್ರಾಹಿ, ಯಾವ ದಾಕ್ಷಿಣ್ಯಕ್ಕೂ ಒಳಗಾಗುವವರಲ್ಲ."

" ನನ್ನ ಭವಿಷ್ಯ ಹೇಗಿದೆಯೋ ? "

ಮಿಸ್ ಬಂದು ' ಮಿ ಹ್ಯಾರಿಸ್ ನಿಮ್ಮನ್ನು ಕರೆಯುತ್ತಾರೆ ' ಎಂದಳು.

ಡಾ ಚಂದ್ರಶೇಖರ್ ಸಂತಸದಿಂದ

" ನೋಡಿ – ಇದೇ ಶುಭ ಸೂಚನೆ. ಹ್ಯಾರಿಸ್ಸರ ದರ್ಶನ ವಾಗುವುದಕ್ಕೆ ಕೆಲವು ಸಲ ಗಂಟೆಗಟ್ಟಳೆ ಕಾಯಬೇಕಾಗುತ್ತದೆ " ಎಂದರು.

ಡಾ. ಚಂದ್ರಶೇಖರ್, ನಾರಾಯಣಸ್ವಾಮಿ ಪ್ರವೇಶಿಸಿ ದೊಡನೆಯೇ ಹ್ಯಾರಿಸ್ ತಮ್ಮ ಭವ್ಯ ಮೇಜಿನ ಮುಂದೆ ನಿಂತುಕೊಂಡು ಅವರನ್ನು ಸ್ವಾಗತಿಸಿ, ಕೈ ಕುಲುಕಿ, ಎದುರಿಗಿದ್ದ ಆಸನಗಳನ್ನು ತೋರಿಸಿ

" ಕ್ಷಮಿಸಿ – ಒಂದೇ ನಿಮಿಷ "

ಎಂದು ಹೇಳಿ ಮೇಜಿನ ಮೇಲಿದ್ದ ಕಾಗದವನ್ನು ಪಕ್ಕದಲ್ಲಿದ್ದ ಟ್ರೇಯಲ್ಲಿ ಹಾಕಿ, ಬೇರೆ ಕಾಗದವೆತ್ತಿಕೊಂಡು, ತಮ್ಮ ಮುಂದಿಟ್ಟು ಕೊಂಡು ಕುಳಿತರು

ಡಾ. ಚಂದ್ರಶೇಖರ್

" ಮಿ. ಹ್ಯಾರಿಸ್. ಇವರೇ ನನ್ನ ಮಿತ್ರರು ಮಿ. ಸ್ವಾಮಿ."

" ಗ್ಲಾಡ್ ಟು ಮೀಟ್ ಯು ಸರ್ (Glad to meet you Sir) "

" ದಿ ಪ್ಲೆಷರ್ ಈಸ್ ಈಕ್ವಲಿ ಮೈನ್ ಮಿ. ಹ್ಯಾರಿಸ್ (The pleasure is equally mine Mr. Harris) "

ಎಂದು ನಾರಾಯಣಸ್ವಾಮಿ ಹೇಳಿದ.

ಶಿಷ್ಟಾಚಾರ ಮುಗಿಯಲು ಹ್ಯಾರಿಸ್

"ಮಿ ಸ್ವಾಮಿ. ನಮ್ಮ ರೀಡರ್ಸ್* ನಿಮ್ಮ ಕಾದಂಬರಿ ಓದಿ ಅಭಿಪ್ರಾಯ ತಿಳಿಸಿದ್ದಾರೆ ಇಲ್ಲಿ ನೋಡಿ ಅವರ ರಿಪೋರ್ಟು"

ಎಂದು ಸ್ವಾಮಿಯ ಕೈಗೆ ಟೈಪಾದ ಹಾಳೆಗಳನ್ನಿತ್ತರು.

ರೀಡರ್ಸ್ ಅಭಿಪ್ರಾಯ ಓದುತ್ತಾ ಓದುತ್ತಾ ಸ್ವಾಮಿಯ ಸಂತೋಷ ಉಕ್ಕಿಹರಿಯಿತು. ಹಾಳೆಗಳನ್ನು ಡಾ. ಚಂದ್ರಶೇಖರ ಕೈಗಿತ್ತ. ಅವರು ಓದಿಕೊಂಡು ಹ್ಯಾರಿಸ್‌ಗೆ ಹಾಳೆಗಳನ್ನು ಹಿಂದಿರುಗಿಸಿದರು

"ನಿಮ್ಮ ಹಸ್ತಪ್ರತಿಯ ಮೇಲೆ ಅಭಿಪ್ರಾಯ ಸೂಚಿಸಲು ಮೂವರು ತಜ್ಞರ ಒಂದು ಸಮಿತಿ ನಿಯಾಮಕಮಾಡಿ ಅವರಿಗೆ ಹಸ್ತಪ್ರತಿ ಒಪ್ಪಿಸಿದೆವು ಅವರಲ್ಲಿ ಒಬ್ಬರು ಭಾರತದ ಬಗ್ಗೆ ವಿಶೇಷ ಜ್ಞಾನವುಳ್ಳ ಸಂಶೋಧಕರು, ಇನ್ನೊಬ್ಬರು ಇಲ್ಲಿಯ ಪ್ರಸಿದ್ಧ ಕಾದಂಬರಿಕಾರರು, ಮೂರನೆಯವರು ನಿರ್ದಾಕ್ಷಿಣ್ಯ ವಿಮರ್ಶಕರು. ನಿಮ್ಮ ಕಾದಂಬರಿಯ ಬಗ್ಗೆ ಮೂವರ ಅಭಿಪ್ರಾಯವೂ ಏಕಮುಖವಾಗಿತ್ತು ಭಾರತೀಯ ಸಾಮಾಜಿಕ ಜೀವನವನ್ನು ಯಥಾರ್ಥವಾಗಿ ಪ್ರತಿಬಿಂಬಿಸುವ ಉತ್ತಮ ಕಾದಂಬರಿಯೆಂದು ಮೂವರೂ ಅಭಿಪ್ರಾಯಪಟ್ಟಿದ್ದಾರೆ"

"ಅವರಿಗೂ ತಮಗೂ ನಾನು ತುಂಬ ಋಣಿಯಾಗಿದ್ದೇನೆ ಮಿ. ಹ್ಯಾರಿಸ್."

"ನಾನು ಡಾ. ಚಂದ್ರಶೇಖರ್ ಅವರಿಗೆ ಋಣಿಯಾಗಿದ್ದೇನೆ.

* ವಿಲಾಯತಿ ಪ್ರಕಾಶಕರು ಸುಪ್ರಸಿದ್ಧ ಸಾಹಿತಿಗಳನ್ನು ತಮ್ಮ ಕಂಪೆನಿಯ ರೀಡರ್ಸ್ (ಓದುಗ) ಆಗಿ ನೇಮಕ ಮಾಡಿಕೊಂಡಿರುತ್ತಾರೆ. ಕಂಪೆನಿಗೆ ಬರುವ ಹಸ್ತಪ್ರತಿಗಳನ್ನು ಓದಿ ವಿಮರ್ಶೆ ಬರೆದು ಒಪ್ಪಿಸುವುದೇ ರೀಡರ್ಸ್ ಕೆಲಸ. ಗ್ರಂಥಪ್ರಕಾಶನ ರೀಡರ್ಸ್ ಅಭಿಪ್ರಾಯವನ್ನೇ ಅವಲಂಬಿಸುತ್ತದೆ. ಗ್ರಂಥಕರ್ತ ಪ್ರಸಿದ್ಧನಾಗಿದ್ದಲ್ಲಿ ಅವನ ಹಸ್ತಪ್ರತಿಗಳು ರೀಡರ್ಸ್‌ಗೆ ಒಪ್ಪಿಸಲ್ಪಡುವುದಿಲ್ಲ. ಪ್ರಾಜ್ಞರಾದ ಕೆಲವು ಪ್ರಕಾಶಕರೇ ರೀಡರ್ಸ್ ಕೆಲಸ ನಿರ್ವಹಿಸುವುದೂ ಉಂಟು; ಆದರೆ ಇಂಥ ದೃಷ್ಟಾಂತಗಳು ವಿರಳ.

ನಿಮ್ಮಂಥ ಉತ್ತಮ ಕಾದಂಬರಿಕಾರರು ನಮ್ಮ ಕೈಬಿಟ್ಟು ಹೋಗದಂತೆ ಅವರು ಉಪಕಾರ ಮಾಡಿದ್ದಾರೆ – ಇನ್ನು ವ್ಯವಹಾರ ಭಾಗಕ್ಕೆ ಬರೋಣವೇ ? "

" ಆಗಬಹುದು."

" ನಿಮ್ಮ ಕೈಗೆ ಎರಡು ಕರಾರುಗಳ ಕರಡು ಪ್ರತಿಯನ್ನು ಕೊಡುತ್ತೇನೆ. ಒಂದು ಮೊದಲನೆಯ ಆವೃತ್ತಿಗೆ ಮಾತ್ರ ಸಂಬಂಧಿಸಿದ್ದು ; ಇನ್ನೊಂದು ಗ್ರಂಥದ ಪೂರ್ಣ ಹಕ್ಕನ್ನು ನಮಗೆ ಕೊಡುವ ವಿಷಯ ಸಂಬಂಧಿಸಿದ್ದು. ನಮಗೆ ಪೂರ್ಣಹಕ್ಕು ನೀವು ಕೊಟ್ಟರೆ ಗೌರವ ಧನವ ಮೊತ್ತದ ಮೂರರಷ್ಟು ಹಣ ಕೊಡುತ್ತೇನೆ."

ಎಂದು ಕರಾರಿನ ನಕಲುಗಳನ್ನು ಸ್ವಾಮಿಯ ಕೈಗಿತ್ತರು ಸ್ವಾಮಿ ನಕಲುಗಳ ಸಿಂಹಾವಲೋಕನಮಾಡಿ

" ಪುಸ್ತಕಕ್ಕೆ ಹದಿನೆಂಟು ಷಿಲ್ಲಿಂಗ್ ಬೆಲೆಯಿಡುವಿರಾ ? "

" ಹೌದು. ಮೊದಲನೆಯ ಆವೃತ್ತಿಗೆ ನಾವು ಬೆಲೆ ಇಡುವುದೇ ಹಾಗೆ."

" ಹದಿನೆಂಟು ಷಿಲ್ಲಿಂಗ್‌ಕೊಟ್ಟು ನನ್ನ ಗ್ರಂಥ ಕೊಳ್ಳುವುದು ಭಾರತೀಯರಿಗೆ ಕಷ್ಟಸಾಧ್ಯವಾಗುತ್ತದೆ "

" ಮೊದಲನೆಯ ಆವೃತ್ತಿ ಹತ್ತುಸಾವಿರ ಪ್ರತಿ ಮುದ್ರಿಸುತ್ತೇವೆ. ನಿಮ್ಮ ಗ್ರಂಥ ಮೂರು ತಿಂಗಳಲ್ಲಿ ಮೂರು ಆವೃತ್ತಿಯಾಗುವುದೆಂಬ ನಿರೀಕ್ಷೆಯಿದೆ. ತರುವಾಯ ಕೈ ಹೊತ್ತಿಗೆಯಾಗಿ ಪ್ರಕಟಿಸಿ ಒಂದೇ ಷಿಲ್ಲಿಂಗಿಗೆ ಮಾರಾಟ ಮಾಡಬೇಕೆಂದಿದ್ದೇವೆ."

" ಆಗಬಹುದು."

" ಈ ಎರಡು ಕರಾರುಗಳಲ್ಲಿ ಯಾವದನ್ನು ಸ್ವೀಕರಿಸುವಿರಿ ? "

"ಪೂರ್ಣ ಹಕ್ಕನ್ನು ನಿಮಗೆ ಕೊಡಲು ನಾನು ಸಿದ್ಧವಾಗಿದ್ದೇನೆ."

" ಬಹಳ ಸಂತೋಷ. ಯಾವ ಕಾರಣಕ್ಕೂ ನಮ್ಮ ಗ್ರಂಥ ಕರ್ತರು ಹೊರಗೆ ಹೋಗುವುದಕ್ಕೆ ನಾವು ಬಿಡುವುದಿಲ್ಲ. ಕರಾರನ್ನು ಟೈಪು ಮಾಡಿಸಲೇ ? "

" ಮಾಡಿಸಬಹುದು."

ಹ್ಯಾರಿಸ್ ತಮ್ಮ ಕಾರ್ಯದರ್ಶಿಯನ್ನು ಕರೆದು ಟೈಪುಮಾಡಿ ತರಲು ಕರಾರಿನ ಕರಡು ಪ್ರತಿಯನ್ನಿತ್ತು ಒಂದು ಸಿಗಾರ್ ಹಚ್ಚಿ

" ಸ್ವಲ್ಪ ಟೀ ತೆಗೆದುಕೊಳ್ಳುವಿರಾ ? " ಎಂದರು.

" ಆಗಬಹುದು " ಎಂದು ಡಾ ಚಂದ್ರಶೇಖರ ಹೇಳಲು ಹ್ಯಾರಿಸ್ ಬೆಲ್ ಮಾಡಿ ಆಳನ್ನು ಬರಮಾಡಿಕೊಂಡು ಟೀಗೆ ಆರ್ಡರ್ ಮಾಡಿ

" ಮತ್ತೆ ಯಾವದಾದರೂ ಕಾದಂಬರಿ ಆರಂಭಿಸಿರುವಿರಾ ? "

" ಇಲ್ಲ ಮಿ. ಹ್ಯಾರಿಸ್ ಸದ್ಯಕ್ಕೆ ನಾನು ಪ್ರೊ. ಡ್ರೂ ಅವರ ನೇತೃತ್ವದಲ್ಲಿ ಒಂದು ಪಿ ಎಚ್ ಡಿ ಥೀಸಿಸ್ ಸಿದ್ಧಗೊಳಿಸುತ್ತಿದ್ದೇನೆ. ಈ ಕಾದಂಬರಿ ನಾನು ಬರೆದುದೂ ಡಾ ಚಂದ್ರಶೇಖರರ ಪ್ರೇರಣೆ ಯಿಂದಲೇ. ಇದರ ಸಮಸ್ತ ಕೀರ್ತಿ ಅವರಿಗೇ ಸಲ್ಲಬೇಕು."

" ನಿಮ್ಮ ಥೀಸಿಸ್ ವಿಷಯುಯಾವದು ? "

" ಹಿಂದುಗಳ ಸಾಮಾಜಿಕ ಕಲ್ಪನೆಯ ವಿಕಾಸ."

" ಅದನ್ನೂ ನಾವು ಪ್ರಕಟಿಸಲು ಸಿದ್ಧವಾಗಿದ್ದೇವೆ."

" ಬಹಳ ಸಂತೋಷ. ಪರೀಕ್ಷಕರ ಸಮಿತಿಯಿಂದ ನನ್ನ ಹಸ್ತ ಪ್ರತಿ ಬಂದಕೂಡಲೆ ನಿಮಗೆ ಕಳಿಸಿಕೊಡುತ್ತೇನೆ "

ಆಳುಮಗ ಚಹಾ ತಂದು, ಎಲ್ಲರಿಗೂ ಸುರುವಿ ಕೊಟ್ಟ. ಚಹಾ ಮುಗಿಸಿ ಅವನೊಂದಿಗೇ ಕಪ್ಪು ಬಸಿ ಕಳಿಸಿ ಹ್ಯಾರಿಸ್

" ನಿಮ್ಮ ಈ ಕಾದಂಬರಿ ಲೋಕಪ್ರಿಯವಾಗುವುದರಲ್ಲಿ ಸಂದೇಹ ವಿಲ್ಲ. ಇದರ ಬಗ್ಗೆ ಜನ ಮಾತನಾಡಿಕೊಳ್ಳುತ್ತಿರುವಾಗಲೇ ನೀವು ಇನ್ನೊಂದು ಕಾದಂಬರಿ ಬರೆಯುವುದು ಒಳ್ಳೆಯದು."

" ಪ್ರಯತ್ನಮಾಡಿ ನೋಡುತ್ತೇನೆ."

" ನಾನೊಂದು ವಿಷಯ ಸೂಚಿಸಬಹುದೇ ? "

" ಅವಶ್ಯಕವಾಗಿ ಸೂಚಿಸಿ."

" ಭಾರತದ ಅಸ್ಪೃಶ್ಯತಾ ಸಮಸ್ಯೆಯ ಬಗ್ಗೆ ಸರಿಯಾದ ಕಲ್ಪನೆ ಯನ್ನುಂಟುಮಾಡುವ ಕಾದಂಬರಿ ಬರೆಯಬಲ್ಲಿರಾ ? "

" ಆ ವಿಷಯ ಪ್ರಾಸಂಗಿಕವಾಗಿ ನನ್ನ ಥೀಸಿಸ್‌ನಲ್ಲಿ ಪ್ರಸ್ತಾಪಿ

ಸಲ್ಪಡುತ್ತದೆ ಕಾದಂಬರಿ ಬರೆಯುವುದು ನನಗೆ ಕಷ್ಟವಾಗುವುದಿಲ್ಲ."

"ಈ ಕಾದಂಬರಿಯ ರಕ್ಷಾಪುಟದ ಮೇಲೆ ಅದರ ಪ್ರಕಟನೆ ಕೊಡಬಹುದಷ್ಟೆ."

"ಆಗಬಹುದು ನನ್ನ ಕಾದಂಬರಿ ಪ್ರೊ ಡ್ರೂ ಅವರ ಮುನ್ನುಡಿ, ಡಾ ಚಂದ್ರಶೇಖರ್ ಅವರ ಪ್ರಸ್ತಾವನೆಯಿಂದ ಕೂಡಿರಬೇಕೆಂದು ನನ್ನ ಆಸೆ – ತಮ್ಮ ಅಭಿಪ್ರಾಯವೇನು ?"

"ಪ್ರೊ. ಡ್ರೂ, ಡಾ ಚಂದ್ರಶೇಖರ್ ಒಪ್ಪಿರುವರೇ ?"

"ಚಂದ್ರಶೇಖರರ ಒಪ್ಪಿಗೆ ಇಲ್ಲೇ ಪಡೆಯುತ್ತೇನೆ."

"ಡ್ರೂ."

"ಅವರನ್ನು ಒಪ್ಪಿಸುತ್ತೇನೆ."

"ಈಗಲೇ ಫೋನ್ ಮಾಡಿ ಕೇಳಿಬಿಡಿ"

ನಾರಾಯಣಸ್ವಾಮಿ ಫೋನ್ ಕೈಗೆತ್ತಿಕೊಂಡು ಪ್ರೊಫೆಸರಿಗೆ ಫೋನ್ ಮಾಡಿದ ಮೊದಲು ಒಲ್ಲೆನೆಂದ ಪ್ರೊಫೆಸರು ನಾರಾಯಣ ಸ್ವಾಮಿಯ ಬೇಡಿಕೆಗೆ ಒಪ್ಪಿಗೆ ಸೂಚಿಸಿದರು.

"ಸರ್ವಾಂಗಸುಂದರವಾದ ನಿಮ್ಮ ಕೃತಿಗೆ ನಮ್ಮ ಕುಂಕುಮದ ಬೊಟ್ಟೇಕೆ ಮಿ. ಸ್ವಾಮಿ" ಎಂದು ಚಂದ್ರಶೇಖರ್ ಕೇಳಿದರು.

"ನೀವು ಒಪ್ಪದಿದ್ದರೆ ನಾನು ಸೋದರಿ ಫ್ಲೋರಾ ಕೈಯಲ್ಲಿ ಪ್ರಸ್ತಾವನೆ ಬರೆಸಿ ನಿಮ್ಮ ಹೆಸರು ಹಾಕಿ ಪ್ರಕಟಿಸಿಬಿಡುತ್ತೇನೆ."

"ಸಂತೋಷ. ನಿಮ್ಮ ಗ್ರಂಥಕ್ಕೆ ಪ್ರಸ್ತಾವನೆ ಬರೆಯುವುದು ಹಿರಿಯ ಗೌರವ ಮಿ. ಸ್ವಾಮಿ. ಅಪ್ರಾರ್ಥಿತವಾಗಿ ಒದಗಿರುವ ಈ ಗೌರವ ನಾನೇಕೆ ಬೇಡವೆನ್ನಲಿ."

ಹ್ಯಾರಿಸ್ಸರ ಕಾರ್ಯದರ್ಶಿ ಟೈಪಾದ ಕರಾರು ಪತ್ರಗಳನ್ನು ತಂದು ಅವರ ಮೇಜಿನ ಮೇಲಿಟ್ಟ. ಹ್ಯಾರಿಸ್ ಒಮ್ಮೆ ಅವುಗಳನ್ನು ಪರಾಮರ್ಶಿಸಿ, ಪ್ರತಿಗಳನ್ನು ನಾರಾಯಣಸ್ವಾಮಿಯ ಕೈಯಲ್ಲಿಟ್ಟರು. 'ಗ್ರಂಥಕರ್ತ' ಎಂದಿದ್ದ ಕಡೆ ಸಹಿ ಮಾಡಿ, ನಾರಾಯಣಸ್ವಾಮಿ ಪ್ರತಿಗಳನ್ನು ಹಿಂದಿರುಗಿಸಿದ.

ಸ್ವಾಮಿಯ ಕೈಗೆ ಚೆಕ್ಕು, ರಶೀತಿ ಕೊಡುತ್ತಾ ಹ್ಯಾರಿಸ್

" ಈ ಗೌರವಧನ ಕೈಪೊತ್ತಿಗೆಗಳಿಗನ್ವಯಿಸುವುದಿಲ್ಲ ಅದಕ್ಕೆ ಪ್ರತ್ಯೇಕ ಗೌರವಧನ ಸಲ್ಲಿಸಲಾಗುತ್ತದೆ " ಎಂದರು.

ಸ್ವಾಮಿ ಚೆಕ್ಕನ್ನು ನೋಡಿಕೊಂಡ – ಮೂರು ಸಾವಿರದ ಆರು ನೂರು ಮೂವತ್ತನಾಲ್ಕು ಪೌಂಡು - ಸ್ವಾಮಿ ಮನಸ್ಸಿನಲ್ಲಿಯೇ ಗುಣಿಸಿಕೊಂಡ - ಸುಮಾರು ನಲವತ್ತೇಳು ಸಾವಿರದ ಇನ್ನೂರೈವತ್ತು ರೂಪಾಯಿಗಳು - ಇದು ಕನಸೋ ಸತ್ಯವೋ ಎಂಬುದೇ ಅವನ ಮನಸ್ಸಿಗೆ ಸ್ಥಿರವಾಗಲಿಲ್ಲ

ಹ್ಯಾರಿಸ್ ತುಂಬಿ ತುಳುಕುತ್ತಿದ್ದ ಸಂತೋಷ ವ್ಯಕ್ತಮಾಡುತ್ತಾ

" ನಿಮ್ಮ ಗ್ರಂಥ ಪ್ರಕಟವಾದ ದಿನ ಇಲ್ಲಿರುವ ಪ್ರಸಿದ್ಧ ಸಾಹಿತಿಗಳು, ಪಂಡಿತರು, ದಾರ್ಶನಿಕರನ್ನು ಆಹ್ವಾನಿಸಿ ಒಂದು ಪಾರ್ಟಿ ಕೊಡಬೇಕೆಂದಿದ್ದೇನೆ. ನಮ್ಮ ಇಂಗ್ಲಿಷ್ ಎಡಿಷನ್ನಿಗೆ ಬರುವ ಸ್ವಾಗತ ನೋಡಿಕೊಂಡು ಫ್ರೆಂಚ್, ಜರ್ಮನ್ ಎಡಿಷನ್‌ಗಳನ್ನೂ ತರಬೇಕೆಂದಿದ್ದೇನೆ."

" ಗ್ರಂಥ ಯಾವಾಗ ಪ್ರಕಟವಾಗುತ್ತದೆ."

" ಇನ್ನು ಒಂದು ತಿಂಗಳಲ್ಲಿ ಸಂಪೂರ್ಣ ಗ್ರಂಥದ ಪ್ರೂಫುಗಳನ್ನು ನಿಮ್ಮ ಕೈಯಲ್ಲಿಡುತ್ತೇನೆ. ಪ್ರೂಫುಗಳನ್ನು ನೀವು ಹಿಂದಿರುಗಿಸಿದ ಒಂದೇ ತಿಂಗಳಲ್ಲಿ ಗ್ರಂಥ ಹೊರಬೀಳುತ್ತದೆ. ಈ ಮಧ್ಯೆ ಒಮ್ಮೆ ಇಲ್ಲಿಗೆ ಬನ್ನಿ - ಪ್ರಚಾರಕಾರ್ಯಕ್ಕೆ ನಿಮ್ಮ ಫೋಟೋ ಬೇಕಾಗುತ್ತದೆ."

" ನನ್ನ ಕೀರ್ತಿ, ಅಭ್ಯುದಯಕ್ಕೆ ಡಾ. ಚಂದ್ರಶೇಖರ್, ನೀವು ಕಾರಣರಾಗಿದ್ದೀರಿ. ನಿಮ್ಮ ಉಪಕಾರ ನಾನು ಎಂದಿಗೂ ಮರೆಯುವುದಿಲ್ಲ ಮಿ. ಹ್ಯಾರಿಸ್."

ಎಂದು ನಾರಾಯಣಸ್ವಾಮಿ ನಿವೇದಿಸಿದ.

ಹ್ಯಾರಿಸ್ ಇಬ್ಬರ ಕೈಕುಲುಕಿ

" ಥ್ಯಾಂಕ್‌ಯು ಡಾಕ್ಟರ್ – ಥ್ಯಾಂಕ್ ಯು ಸರ್ " ಎಂದರು.

ಇಬ್ಬರೂ ಹೊರಗೆ ಬಂದು ಟ್ಯಾಕ್ಸಿ ಗೊತ್ತುಮಾಡಿಕೊಂಡರು.

ಸೊಸೈಟಿಯ ಬಳಿ ಇಳಿದ ಡಾ. ಚಂದ್ರಶೇಖರ್

" ಒಳಗೆ ಬರುವುದಿಲ್ಲವೇ '' ಎಂದು ಕೇಳಿದರು.

" ಡಾಕ್, ಈಗ ಮನೆಗೆ ಹೋಗಲು ಅನುಮತಿ ಕೊಡಿ. ಭಾವ ಪರವಶತೆಯಿಂದ ನಾನು ಉದ್ವೇಗಗೊಂಡಿದ್ದೇನೆ. ಮಾತನಾಡಲು ಪ್ರಯತ್ನಿಸಿದರೆ ನನ್ನ ಕಣ್ಣುಗಳಿಂದ ಕೋಡಿ ಹರಿಯುತ್ತದೆ " ಎಂದ.

ಡಾಕ್ಟರು ನಸುನಗುತ್ತಾ " ಹಾಗೆಯೇ ಮಾಡಿ " ಎಂದರು.

ಮನೆಗೆ ಬಂದು ಆರಾಮಾಸನದ ಮೇಲೆ ಮಲಗಿದ ನಾರಾಯಣ ಸ್ವಾಮಿಯ ಬಳಿ ಬಂದ ಇಂದು

" ಆಯಾಸವಾಗಿದೆಯೇ ?" ಎಂದು ಕೇಳಿದಳು.

" ಇಲ್ಲ ಇಂದೂ-ನೂರೆಂಟು ಭಾವನೆಗಳ ಹೊಡೆತಕ್ಕೆ ಸಿಕ್ಕಿ ನಾನು ಜರ್ಝರಿಸಿ ಹೋಗಿದ್ದೇನೆ."

" ಅಂತಹದೇನಾಯಿತು ?"

ನಾರಾಯಣಸ್ವಾಮಿ ಉತ್ತರವೀಯದೆ ಕಿಸೆಯಲ್ಲಿದ್ದ ಕರಾರು ಪತ್ರದ ಪ್ರತಿ, ಚೆಕ್ಕನ್ನು ಇಂದುಮತಿಯ ಕೈಯಲ್ಲಿಟ್ಟ.

ಇಂದುಮತಿ ಅವುಗಳನ್ನು ಸಾವಕಾಶವಾಗಿ ಓದಿಕೊಂಡು

" ನೀವು ವಿಶ್ವವಿಖ್ಯಾತರಾಗುವಿರೆಂದು ನನ್ನ ಅಂತಃಕರಣ ಹೇಳುತ್ತಿತ್ತು. ಇಂದೇ ಕೇಬಲ್‌ಗ್ರಾಮ್ ಮಾಡಿ ತಂದೆಯವರಿಗೆ ಈ ಸಂತೋಷದ ಸುದ್ದಿ ತಿಳಿಸುತ್ತೇನೆ "

" ಈಗ ಬೇಡ ಇಂದೂ - ನನ್ನ ಗ್ರಂಥ ಹೊರಬರಲಿ."

ಇಂದುಮತಿ ಹಿಂದಿರುಗಿಸಿದ ಕರಾರುಪತ್ರ, ಚೆಕ್ಕನ್ನು ಕೈಯಲ್ಲಿ ಹಿಡಿದು

" ಇದು ನಿನಗೆ ಸೇರಿದ್ದು ಇಂದೂ - ನನ್ನ ಮೊದಲನೆಯ ಉಡುಗೆರೆ."

" ನನಗೆ ಹಣದ ಅಗತ್ಯವೇನಿದೆ ? ಚೆಕ್ ನಿಮ್ಮಲ್ಲಿಯೇ ಇರಲಿ– ನಿಮಗೆ ಹೇಗೆ ಬೇಕೋ ಹಾಗೆ ಖರ್ಚುಮಾಡಿ."

" ಈ ಹಣದ ಸ್ವಲ್ಪಭಾಗ ಡಾ. ಚಂದ್ರಶೇಖರ್ ಅವರ ಸೊಸೈಟಿಗೆ ಕೊಟ್ಟು ಉಳಿದ ಭಾಗದ ಬಹ್ವಂಶವನ್ನು ನನ್ನ ತಂದೆಯವರಿಗೆ ಕಳಿಸಬೇಕೆಂದಿದ್ದೇನೆ. ನಿನ್ನ ಒಪ್ಪಿಗೆಯಿದೆಯಷ್ಟೆ !"

" ನಿಮ್ಮ ಸಂತೋಷವಿದ್ದಂತೆ ಖರ್ಚುಮಾಡಿ - ನನ್ನದೇನೂ

ಅಭ್ಯಂತರವಿಲ್ಲ "

"ನೀನು ಇಲ್ಲಿಗೆ ನನ್ನನ್ನು ಕರೆದುಕೊಂಡು ಬರದಿದ್ದರೆ ಈ ಅದೃಷ್ಟ ನನಗೆ ಲಭಿಸುತ್ತಿರಲಿಲ್ಲ - ನನಗಾಗಿ ಡಾ. ಚಂದ್ರಶೇಖರ್ ತುಂಬ ಶ್ರಮವಹಿಸಿದ್ದಾರೆ. ಇಂದೂ - ನನಗೊಂದು ಉಪಕಾರ ಮಾಡುವೆಯಾ ?"

"ಏಕೆ ?–ಹೊರಗಿನವರನ್ನು ಮಾತನಾಡಿಸುವಂತೆ ನನ್ನನ್ನು ಮಾತನಾಡಿಸುತ್ತಿರುವಿರಿ ?"

"ನಿನಗೆ ಅಪ್ರಿಯವಾದ ವಿಷಯ ಹೇಳಬೇಕಾಗಿದೆ "

"ಹೇಳಿ."

"ದಯೆಯಿಟ್ಟು ಈ ಸಂಜೆ ನನ್ನ ಜತೆ ಸೊಸೈಟಿಗೆ ಬರುವೆಯಾ ? ಸೋದರಿ ಫ್ಲೋರಳ ಕೈಯಲ್ಲಿ 'ನಮ್ಮ ಅಲ್ಪಕಾಣಿಕೆ'ಯನ್ನು ನೀನೇ ಇಡಬೇಕೆಂದು ನನ್ನ ಆಸೆ."

"ನಾನು ಬರುವುದರಿಂದ ನಿಮಗೆ ಸಂತೋಷವಾಗುವುದಾದರೆ ಖಂಡಿತ ಬರುತ್ತೇನೆ "

"ಥ್ಯಾಂಕ್ ಯು ಮೈ ಡಿಯರ್ (Thank you my dear)" ಎಂದು ನಾರಾಯಣಸ್ವಾಮಿ ಉತ್ಸುಕನಾಗಿ ನುಡಿದ.

೧೫

ಒಂದು ದಿನ ಕಾಲೇಜಿಗೆ ಬಂದು ಕಮಲಾ ಕಾಮನ್ ರೂಮಿನ (Common room) ವಾತಾವರಣದಲ್ಲಿ ಅಹಿತ ನಾವೀನ್ಯ ತಲೆದೋರಿದ್ದುದನ್ನು ಕಂಡಳು. ಮಳೆ ಬೀಳುವ ಮುನ್ನ ದಗೆ ವ್ಯಾಪಿಸುವಂತೆ ರೂಮಿನ ಪರಿಸ್ಥಿತಿಯಾಗಿತ್ತು.

ಕಮಲಾ ತನ್ನ ಮೇಜಿನ ಡ್ರಾಯರ್ ಎಳೆದು ಕ್ಲಾಸ್ ನೋಟ್ಸ್‌ಗಳನ್ನೆತ್ತಿಕೊಂಡು ನೋಡುತ್ತ ಕುಳಿತಳು. ಶಾಮಲಾ ಮೆಲ್ಲನೆ ಅವಳ ಬಳಿ ಬಂದು, ಮೇಜಿನ ತುದಿಯಲ್ಲಿ ಕುಳಿತು

" ಸಮಾಚಾರ ಕೇಳಿದಿರಾ ಕಮಲಮ್ಮ " ಎಂದಳು.

" ಏನು ಸಮಾಚಾರ ?"

ರಾಜಲಕ್ಷ್ಮಿ, ಶಾರದಾಬಾಯಿ, ಕನಕಮ್ಮ ಇವರೂ ಮೆಲ್ಲನೆ ಬಂದು ಕಮಲನ ಮೇಜಿನ ಸುತ್ತ ನಿಂತರು.

" ಪ್ರಿನ್ಸಿಪಾಲ್ ನೀಲಮ್ಮನವರಿಗೆ ಮೈಸೂರಿಗೆ ವರ್ಗವಾಗಿದೆ."

" ವರ್ಗವಾಗಿದೆ !"

" ಹೌದ್ರಿ."

" ಅವರ ಸ್ಥಳಕ್ಕೆ ಯಾರು ಬರುತ್ತಾರೆ ?"

" ಮೈಸೂರು ಕಾಲೇಜಿನ ಫಸ್ಟ್ ಅಸಿಸ್ಟೆಂಟ್ ಮಿಸ್. ಮರಕತಂ."

" ಇಲ್ಲಿ ನೀಲಮ್ಮನವರಿದ್ದುದು ಒಳ್ಳೆಯದಾಗಿತ್ತು. ಅವರು ಖಂಡಿತವಾದಿಯಾಗಿದ್ದರೂ ಯಾರಿಗೂ ಅನ್ಯಾಯಮಾಡುತ್ತಿರಲಿಲ್ಲ-ಮಿಸ್. ಮರಕತಂ ಹೇಗೆ ? ನೀವು ಮೈಸೂರಿನಲ್ಲಿದ್ದಿರಲ್ಲಾ. ನಿಮಗೆ

ಅವರ ವಿಷಯ ಗೊತ್ತಿರಬಹುದು."

"ಚೆನ್ನಾಗಿ ಗೊತ್ತಿದೆ ಕಮಲಮ್ಮ. ಮರಕತಂ ನಮ್ಮನ್ನು ಹುರಿದು ಮುಕ್ಕಿಬಿಡುತ್ತಾರೆ."

"ಏಕೆ ? ಅವರು ಒಳ್ಳೆಯವರಲ್ಲವೇ ?"

"ಅವರು ಹೇಳಿದಂತೆ ಕುಣಿಯುವವರಿಗೆ ಒಳ್ಳೆಯವರೇ ವಿರೋಧಿಸಿದವರನ್ನು ನಿರ್ದಾಕ್ಷಿಣ್ಯವಾಗಿ ಮರಕತಂ ತುಳಿದು ಬಿಡುತ್ತಾರೆ. ಪ್ರಿನ್ಸಿಪಾಲ್ ವಿಷಯ ಮಿಸ್. ಡೈಸಿಯ ಹತ್ತಿರ ಯಾರೂ ಮಾತನಾಡಬೇಡಿ. ಮರಕತಂ ಅವಳೂ ಗಳಸ್ಯ ಕಂಠಸ್ಯ."

"ಈ ಕಾಲೇಜಿಗೆ ಇನ್ನು ಮೇಲೆ ಡೈಸಿಯೇ ಪ್ರಿನ್ಸಿಪಾಲ್."

ಎಂದು ರಾಜಲಕ್ಷ್ಮಿ ಟೀಕಿಸಿದಳು.

"ಮರಕತಂ ಇಲ್ಲಿಗೆ ಬರುವುದು ಈ ಕಪಿಕಪಿ ಡೈಸಿಗೆ ಹೆಂಡ ಕುಡಿಸಿದಂತಾಗುತ್ತದೆ."

ಕಮಲನಿಗೆ ಯೋಚನೆಗಿಟ್ಟುಕೊಂಡಿತು. ಮನೆಯಲ್ಲಿ ಸಾವಿತ್ರಮ್ಮನೂ ಇರಲಿಲ್ಲ. ಗೋದಮ್ಮ ಬೆಳಿಗ್ಗೆಯ ಕೆಲಸಗಳನ್ನೆಲ್ಲಾ ಮುಗಿಸಿಕೊಂಡು ಅಡಿಗೆಮಾಡಿ ಬಡಿಸಲು ವಿಳಂಬವಾಗುತ್ತಿತ್ತು. ಕಮಲ ಒಂದೊಂದು ದಿನ ಕಾಲೇಜಿಗೆ ತಡವಾಗಿ ಬರುವುದು ಅನಿವಾರ್ಯವಾಗಿತ್ತು. ಕಮಲನ ಕಷ್ಟವನ್ನರಿತಿದ್ದ ನೀಲಮ್ಮ ಅವಳು ತಡವಾಗಿ ಬಂದರೂ ಆಕ್ಷೇಪಿಸುತ್ತಿರಲಿಲ್ಲ. 'ಇನ್ನು ಮೇಲೆ ಮರಕತಂ ಕೈಯಲ್ಲಿ ಮಾತು ಕೇಳಬೇಕಲ್ಲಾ' ಎಂದು ಕಮಲನಿಗೆ ಚಿಂತೆಯಾಯಿತು. 'ಒಂದು ಪಾಠ ಬಿಟ್ಟುಬಿಡಬೇಕು. ಮರಕತಂ ಕೈಗೆ ಸಿಕ್ಕಿ ಹಾಕಿಕೊಂಡು ಕೆಟ್ಟ ಹೆಸರು ಪಡೆಯಬಾರದು' ಎಂದು ಕಮಲ ನಿರ್ಧರಿಸಿಕೊಂಡಳು.

ಅದೇ ವಾರ ಹಳೆಯ ಪ್ರಿನ್ಸಿಪಾಲರನ್ನು ಬೀಳ್ಕೊಡುವುದಕ್ಕೂ ಹೊಸ ಪ್ರಿನ್ಸಿಪಾಲರನ್ನು ಸ್ವಾಗತಿಸುವುದಕ್ಕೂ ಒಂದು ಸಮಾರಂಭ ಕಾಲೇಜಿನಲ್ಲಿ ವ್ಯವಸ್ಥೆಯಾಯಿತು. ಊರಿನ ಕೆಲವು ಗಣ್ಯ ಮಹನೀಯರಿಗೂ, ಸೆನೇಟ್, ಯೂನಿವರ್ಸಿಟಿ ಕೌನ್ಸಿಲ್ ಸದಸ್ಯರಿಗೂ, ಶಿಕ್ಷಣ ಖಾತೆಯ ಕೆಲವು ಮುಖ್ಯಾಧಿಕಾರಿಗಳಿಗೂ ಆಮಂತ್ರಣ ಕೊಡ

ಲಾಗಿತ್ತು. ಡೈಸಿಯ ಓಡಾಟ, ಹಾರಾಟ, ಕಂಡವರೆಲ್ಲಾ 'ಇವಳೇ ಇನ್ನು ಮೇಲೆ ಕಾಲೇಜಿನ ಸರ್ವಾಧಿಕಾರಿಣಿ' ಎಂದುಕೊಂಡರು.

ಕಮಲನ ನಿರ್ಧಾರ ಕಾರ್ಯೋನ್ಮುಖವಾಗಲಿಲ್ಲ. ಅವಳು ಎಷ್ಟು ಪ್ರಯತ್ನಿಸಿದರೂ ಒಂದು ದಿನ ಕಾಲೇಜಿಗೆ ತಡವಾಗಿಯೇ ಬರಬೇಕಾಯಿತು. ಪೀರಿಯಡ್ ಮುಗಿದೊಡನೆಯೇ ತಮ್ಮನ್ನು ಬಂದು ಕಾಣಲು ಪ್ರಿನ್ಸಿಪಾಲ್ ಹೇಳಿಕಳಿಸಿದರು.

ಅಂಜುತ್ತ ಅಳುಕುತ್ತ ಪ್ರಿನ್ಸಿಪಾಲ್ ರೂಮ್ ಸೇರಿದ ಕಮಲ ಅವರ ದಿವ್ಯರೂಪ ಕಂಡು ಭಯಗ್ರಸ್ತಳಾದಳು.

ಮರಕತಂ ಅವರ ವಯಸ್ಸು ನಲವತ್ತನಾಲ್ಕು, ನಲವತ್ತೈದು ಇರಬಹುದು. ಇನ್ನೂರ ಹತ್ತು ಪೌಂಡು ತೂಗುತ್ತಿದ್ದ ಆ ಭದ್ರಾಂಗಿಯ ತಲೆಗೂದಲು ಅರ್ಧ ಬೆಳ್ಳಗಾಗಿತ್ತು. ಕಪ್ಪುಮೋರೆಯನ್ನೆತ್ತಿ ಕಾಣಿಸುವಂತೆ ದಪ್ಪ ಕನ್ನಡಕ–ಕೊರಳಲ್ಲಿ ಶಿಲುಬೆಯ ತಾಳಿ ತೂಗಾಡುತ್ತಿತ್ತು.

ಮೇಜಿನ ಮೇಲಿದ್ದ ಕಾಗದಗಳಿಗೆ ಸಹಿ ಮಾಡುತ್ತಿದ್ದ ಮರಕತಂ ಕತ್ತೆತ್ತಿ ನೋಡಿ

"ಕುಳಿತುಕೊಳ್ಳಿ ಕಮಲಮ್ಮ" ಎಂದರು.

ಕಮಲ ಕುಳಿತಮೇಲೆ, ಬಗ್ಗಿಸಿದ ಕತ್ತು ಮೇಲಕ್ಕೆತ್ತದೆ ಮರಕತಂ

"ನೀವು ನಿತ್ಯ ಕಾಲೇಜಿಗೆ ಲೇಟಾಗಿ ಬರುತ್ತಿರುವಿರಿ!"

"ಇಲ್ಲ ಮ್ಯಾಡಂ – ಒಂದೊಂದು ದಿನ ಲೇಟಾಗುತ್ತದೆ. ಮನೆಯಲ್ಲಿ ಸ್ವಲ್ಪ ಅನಾನುಕೂಲವಿದೆ"

"ಅಧ್ಯಾಪಿಕೆಯರೇ ಶಿಸ್ತುಭಂಗ ಮಾಡಿದರೆ ನಾವು ವಿದ್ಯಾರ್ಥಿನಿಯರನ್ನು ಹತೋಟಿಯಲ್ಲಿಡುವುದು ಹೇಗೆ?"

"ಇನ್ನು ಮೇಲೆ ಲೇಟಾಗಿ ಬರುವುದಿಲ್ಲ ಮ್ಯಾಡಂ."

"ನೀವು ಪುನಃ ಲೇಟಾಗಿ ಬಂದರೆ ನಾನು ರಿಜಿಸ್ಟ್ರಾರರಿಗೆ ರಿಪೋರ್ಟ್ ಮಾಡಬೇಕಾಗುತ್ತದೆ."

ಎಂದು ಕತ್ತೆತ್ತಿ ಕಮಲಮ್ಮನನ್ನು ಎವೆಯಿಕ್ಕದೆ ನೋಡಿದರು. ಅವರ ತೀಕ್ಷ್ಣನೋಟಕ್ಕೆ ಸಿಲುಕಿದ ಕಮಲನ ಮನಸ್ಸಿಗೇಕೋ ಭಯವಾಯಿತು.

ಮರಕತಂ ಧ್ವನಿ ಬದಲಾಯಿಸಿ

"ನನ್ನ ನೌಕರರಿಗೆ ಕಿರುಕುಳ ಕೊಡಲು ಇಷ್ಟವಿಲ್ಲ ಕಮಲಮ್ಮ. ನೀವೂ ನಾನೂ ಸಹಕರಿಸಿ ಕೆಲಸಮಾಡಿದರಲ್ಲವೇ ಕಾಲೇಜಿನ ಕೆಲಸ ಯಶಸ್ವಿಯಾಗುವುದು"

"ಹೌದು ಮ್ಯಾಡಂ."

"ಮನೆಯಲ್ಲಿ ಅನಾನುಕೂಲವೆಂದಿರಿ-ಏನು ಅನಾನುಕೂಲ?"

"ನನ್ನ ಅಜ್ಜಿಗೆ ವಯಸ್ಸಾಗಿದೆ. ಒಂದೊಂದು ದಿನ ಹೊತ್ತಿಗೆ ಸರಿಯಾಗಿ ಅಡಿಗೆ ಮಾಡಲು ಅವರಿಗೆ ಸಾಧ್ಯವಾಗುವುದಿಲ್ಲ."

"ಅಡಿಗೆಯವರನ್ನಿಟ್ಟುಕೊಳ್ಳಿ."

"ಅಡಿಗೆಗೆ ಒಬ್ಬರಿದ್ದಾರೆ. ನನ್ನ ತಂಗಿಗೆ ಮೈಯಲ್ಲಿ ಆರೋಗ್ಯ ವಿರಲಿಲ್ಲ. ಅವರ ಮನೆಗೆ ಕಳಿಸಿದ್ದೇವೆ."

"ಹೇಗೋ ನೋಡಿಕೊಳ್ಳಿ. ಇನ್ನು ಮುಂದೆ ನೀವು ಲೇಟಾಗಿ ಬರದಿದ್ದರಾಯಿತು. ಇನ್ನು ನೀವು ಹೋಗಬಹುದು."

ಎಂದು ಹೇಳಿದರು.

ಕಮಲನ ಬಾಯಿಂದ ಈ ಸಂದರ್ಶನದ ವಿವರ ಕೇಳಿದ ಶಾಮಲಾ

"ಮಿಸ್: ಡೈಸಿಗೆ ಯಾವ ಕಾನೂನು ಕಾಯಿದೆಯೂ ಅನ್ವಯಿಸುವುದಿಲ್ಲವೇನೋ? - ನೀವು ಕೇಳಬೇಕಾಗಿತ್ತು."

"ಹೇಗಮ್ಮ ಕೇಳುವುದು. ಕೆಲಸಕ್ಕೆ ರಾಜೀನಾಮೆ ಕೊಡುವ ಸ್ಥಿತಿಯಲ್ಲಿ ನಾನಿಲ್ಲ ಶಾಮಲಮ್ಮ."

"ಈ ಕಿರಾತಳ ವಿಷಯದಲ್ಲಿ ಎಚ್ಚರವಾಗಿರಿ ಕಮಲಮ್ಮ."

"ದೇವರು ಮಾಡಿಸಿದಂತಾಗಲಿ."

ಎರಡು ವಾರಗಳು ಕಳೆಯುವಷ್ಟರಲ್ಲಿ ಕಮಲನ ಕ್ಲಾಸಿನಲ್ಲಿ ಒಂದು ಪ್ರಕರಣವಾಯಿತು.

ಸೀನಿಯರ್ ಇಂಟರ್ ಕ್ಲಾಸಿನಲ್ಲಿ ಓದುತ್ತಿದ್ದ ಹಮೀದಾಬಾನೂ ಕಾಲೇಜಿನ ಸುರೈಯ್ಯಾ ಆಗಿದ್ದಳು. ನಿತ್ಯ ಒಬ್ಬೊಬ್ಬ ಸಿನೀಮಾ ನಟಿಯಂತೆ ಅಲಂಕರಿಸಿಕೊಂಡು ಬಂದು, ವಿದ್ಯಾರ್ಥಿನಿ ವರ್ಗದಲ್ಲಿ ತನ್ನದೇ ಒಂದು ಅಭಿಮಾನಿವರ್ಗವನ್ನು ಹಮೀದಾ ದೊರಕಿಸಿಕೊಂಡಿ

ದ್ದಳು. ಹಮೀದಳ ಪ್ರಭಾವಕ್ಕೆ ಪೂರಾ ಸಿಕ್ಕಿದ್ದವಳು ಜಯಗೌರಿ.

ಹಿಂದಿನ ಬೆಂಚಿನಲ್ಲೇ ಕೂಡುತ್ತಿದ್ದ ಹಮೀದಾ, ಜಯಗೌರಿ ಕ್ಲಾಸಿನಲ್ಲಿ ಪಾಠವಾಗುವುದಕ್ಕೇ ಅವಕಾಶ ಕೊಡುತ್ತಿರಲಿಲ್ಲ. ಅವರ ಕಿಲಕಿಲ ನಗು, ತಡೆಯಿಲ್ಲದ ಹರಟೆ ಎಲ್ಲರ ಚಿತ್ತೈಕಾಗ್ರತೆಗೂ ಭಂಗ ತರುತ್ತಿದ್ದವು.

ಒಂದು ದಿನ ಹಮೀದಾ ತನ್ನಲ್ಲಿದ್ದ ಸಿನೀಮಾ ನಟನಟಿಯರ ಫೋಟೋಗಳನ್ನು ಕ್ಲಾಸಿನಲ್ಲಿ ಚಲಾವಣೆ ಮಾಡುತ್ತಿದ್ದಳು. ಫೋಟೋಗಳು ಕೈಯಿಂದ ಕೈಗೆ ದಾಟುತ್ತಿದ್ದವು.

ಕಮಲ ' ಸೈಲೆನ್ಸ್ (Silence)' ಎಂದು ಕೂಗಿದಾಗ ಅಣಗುತ್ತಿದ್ದ ಸೊಲ್ಲು ಮತ್ತೆ ಮರುಕ್ಷಣವೇ ಆರಂಭವಾಗುತ್ತಿತ್ತು.

ಪಾಠ ಮುಂದುವರಿಸುವುದು ಕಮಲನಿಗೆ ಅಸಾಧ್ಯವಾಯಿತು. ಪಾಠ ನಿಲ್ಲಿಸಿ

" ಅದೇನು ಗಲಭೆ ಹಮೀದಾ " ಎಂದು ಕೇಳಿದಳು.

" ಏನೂ ಇಲ್ಲ ಮ್ಯಾಡಂ."

" ನಿನ್ನ ಕೈಯಲ್ಲೇನಿದೆ ಜಯಗೌರಿ "

" ಪಠ್ಯಪುಸ್ತಕ ಮ್ಯಾಡಂ."

" ಇಬ್ಬರೂ ನಿಂತುಕೊಳ್ಳಿ."

ಇಬ್ಬರೂ ನಿಂತುಕೊಂಡರು.

ಕಮಲ ಅವರಿದ್ದಲ್ಲಿಗೇ ಹೋಗಿ ಅವರ ಪುಸ್ತಕಗಳನ್ನು ಕೈಗೆತ್ತಿಕೊಂಡಳು–ಸಿನೀಮಾ ಫೋಟೋಗಳು ಕೆಳಗುದುರಿದವು.

ಕಮಲ ಕೋಪದಿಂದ

" ನೀವಿಬ್ಬರೂ ಕ್ಲಾಸು ಬಿಟ್ಟು ಹೋಗಿ " ಎಂದಳು.

ಹಮೀದಾ ದಿಟ್ಟಳಾಗಿ

" ಏಕೆ ಮ್ಯಾಡಂ " ಎಂದು ಕೇಳಿದಳು.

" ಕ್ಲಾಸಿನಿಂದ ಹೊರಗೆ ಹೋಗುವಿರೋ ಇಲ್ಲವೋ ?"

" ಹೋಗುವುದಿಲ್ಲಾ ಎಂದರೆ ?"

" ನಾನೇ ಹೊರಟು ಹೋಗುತ್ತೇನೆ."

" ಬೇಡ ನೀವೇ ಕ್ಲಾಸಿನಲ್ಲಿರಿ - ನಾವೇ ಹೋಗುತ್ತೇವೆ."

ಎಂದು ಹಮೀದ ಜಯಗೌರಿಯ ಜತೆಯಲ್ಲಿ ಹೊರಟು ಹೋದಳು.

ಪಾಠ ಮುಂದುವರಿಸಲು ಕಮಲನಿಗೆ ಸ್ವಲ್ಪವೂ ಮನಸ್ಸಿಲ್ಲ ವಾಯಿತು.

ಕಾಲೇಜಿಗೆ ಬರುವ ಹೆಣ್ಣುಮಕ್ಕಳ ಜವಾಬ್ದಾರಿ, ಅವರಲ್ಲಿರ ಬೇಕಾದ ವಿದ್ಯಾಕಾಂಕ್ಷೆ, ಧರ್ಮಶ್ರದ್ಧೆಗಳನ್ನು ಕುರಿತು ಉತ್ಕಂಠಿತಳಾಗಿ ಮಾತನಾಡಿದಳು.

ಬೆಲ್ ಹೊಡೆಯಲು ಕಮಲ ಕ್ಲಾಸುಬಿಟ್ಟು ಹೋದಳು.

ಕಾಮನ್ ರೂಮಿನಲ್ಲಿ ಅವಳು ಕುಳಿತ ಐದೇ ನಿಮಿಷಗಳಲ್ಲಿ ಪ್ರಿನ್ಸಿಪಾಲರಿಂದ ಕರೆಬಂದಿತು.

ಅನಾಸಕ್ತಭಾವ ಪ್ರಕಟಿಸುತ್ತಾ ಮರಕತಂ

" ಅದೇನು ನಿಮ್ಮ ಕ್ಲಾಸಿನಲ್ಲಿ ಗಲಭೆ ಮಿಸಸ್ ಕಮಲಮ್ಮ" ಎಂದು ಕೇಳಿದರು.

" ಹಮೀದಾ, ಜಯಗೌರಿಯ ಅವಾಂತರ ಸಹಿಸಲು ಸಾಧ್ಯ ವಿಲ್ಲ ಮ್ಯಾಡಂ. ಸಿನೀಮಾ ನಟನಟಿಯರ ಭಾವಚಿತ್ರಗಳನ್ನು ಕ್ಲಾಸಿ ನಲ್ಲಿ ಪ್ರಚಾರಮಾಡಿಕೊಂಡು ಅವರು ಕಾಲತಳ್ಳುತ್ತಾರೆ. ಪಾಠ ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲ. ಇಂದು ನಾನು ಅವರಿಬ್ಬ ರನ್ನೂ ಕ್ಲಾಸಿನಿಂದ ಹೊರಗೆ ಕಳಿಸಬೇಕಾಯಿತು."

" ಕಮಲಮ್ಮ - ನಿಮಗೆ ಲೋಕಾನುಭವ ಸಾಲದು. ಹಮೀದ ನಂಥ ಹಮ್ಮಾರಿಯನ್ನು ಎದುರು ಹಾಕಿಕೊಳ್ಳುವುದು ವಿವೇಕವಲ್ಲ. ಅವಳ ತಂದೆ ದೊಡ್ಡ ಅಧಿಕಾರದಲ್ಲಿದ್ದಾರೆ - ಹಮೀದಳನ್ನು ನಾವು ಶಿಕ್ಷಿಸಿದರೆ ನಮ್ಮ ಕೆಲಸಕ್ಕೆ ಅಪಾಯ ಒದಗುತ್ತದೆ."

" ಅವಳಿಗೆ ಕ್ಲಾಸ್ ಒಪ್ಪಿಸಿ ನಾನು ತೆಪ್ಪಗೆ ಕೂಡಲೇನು ?"

" ಹಾಗಲ್ಲ - ಇಂಥ ಪರಿಸ್ಥಿತಿಯನ್ನು ನಯವಾಗಿ ಎದುರಿಸ ಬೇಕು. ಕಂಡರೂ ಕಾಣದಂತಿರುವುದೇ ಜಾಣತನ. ಈ ಹುಡುಗಿ ಯರು ವಿದ್ಯೆ ಕಲಿತರೆಷ್ಟು - ಬಿಟ್ಟರೆಷ್ಟು, ನಮಗಾಗಬೇಕಾದುದೇನು

ಹೇಳಿ. ನಮ್ಮ ಕೆಲಸಕ್ಕೆ ಸಂಚಕಾರ ಒದಗದಿದ್ದರೆ ಸಾಕು."

"ನಾನೇನು ಮಾಡಬೇಕು - ನೀವೇ ಹೇಳಿ ಮ್ಯಾಡಂ."

"ಏನೂ ಮಾಡಬೇಡಿ - ಈ ಘಟನೆ ಮರೆತು ಸುಮ್ಮನಿರಿ ನಾನು ಹಮೀದಳನ್ನು ಕರೆದು ಬುದ್ಧಿ ಹೇಳುತ್ತೇನೆ" ಎಂದರು.

ಪ್ರಿನ್ಸಿಪಾಲರ ತಾಟಸ್ಥ್ಯ ಭಾವ ಕಂಡು ಕಮಲನಿಗೆ ತಲೆ ಬೇಸರವಾಯಿತು

'ಸಂಬಳ ತೆಗೆದುಕೊಳ್ಳುವುದಷ್ಟೇ ಅಧ್ಯಾಪಿಕೆಯರ ಕೆಲಸವೇ ? ಅವರಿಗೆ ಯಾವ ಜವಾಬ್ದಾರಿಯೂ ಇಲ್ಲವೇ ?'

ಎಂದು ದುಃಖಿಸಿದಳು.

"ಪ್ರಿನ್ಸಿಪಾಲರಿಗೇ ಇಲ್ಲದ ಚಿಂತೆ ನಿಮಗೇಕ್ರೀ ಕಮಲಮ್ಮ" ಎಂದು ರಾಜಲಕ್ಷ್ಮಿ ಹೇಳಿದಾಗ ಕಮಲ

"ಮನೆಯಲ್ಲಿ ನನಗೂ ಒಂದು ಹೆಣ್ಣು ಮಗುವಿದೆ ರಾಜಲಕ್ಷ್ಮಿ. ಆ ಮಗು ಸುಶಿಕ್ಷಿತಳಾಗಿ ಉತ್ತಮ ಸತಿ, ಆದರ್ಶ ತಾಯಿಯಾಗಬೇಕೆಂದು ಸಹಜವಾಗಿ ನಾನು ಬಯಸುತ್ತೇನೆ. ನನ್ನ ಹಾಗೇ ಬಯಸುವ ಹಲವಾರು ತಾಯಿತಂದೆ ತಮ್ಮ ಮಕ್ಕಳನ್ನು ಶಾಲೆ, ಕಾಲೇಜುಗಳಿಗೆ ಕಳಿಸಿಕೊಡುತ್ತಾರೆ. ನಮ್ಮ ಮೇಲೆ ಅವರು ಭರವಸೆ ಇಟ್ಟುಕೊಂಡಿರುತ್ತಾರೆ ಈ ಮಕ್ಕಳ ಅಭ್ಯುದಯ ನಿರ್ಲಕ್ಷಿಸಿ ನಮ್ಮ ಸಂಬಳ ಸಾರಿಗೆಯನ್ನಷ್ಟೇ ಎಣಿಸುತ್ತಾ ಕೂಡುವುದು ಧರ್ಮವೇ ?"

"ಕಮಲಮ್ಮ, ನೀವಿನ್ನೂ ಅರುಂಧತಿ, ಲೋಪಾಮುದ್ರೆಯರ ಕಾಲದಲ್ಲಿದ್ದೀರಿ ಕಣ್ರೀ - ಪ್ರಪಂಚದ ಜತೆ ನೀವು ಮುನ್ನಡೆದಿಲ್ಲ."

"ನಾನು ಒಬ್ಬ ಹಳೆಯ ಕಾಲದ ಹೆಂಗಸಿನ ಮಗಳಮ್ಮ. ನಾನು ಕಲಿತಿರುವುದೆಲ್ಲಾ ಅವರು ಹೇಳಿಕೊಟ್ಟದ್ದೇ–ಹೊಸ ಪ್ರಪಂಚದ ಹೊಸ ಪರಿಸ್ಥಿತಿಗೆ ಹೊಂದಿಕೊಳ್ಳುವುದನ್ನು ಅವರು ನನಗೆ ಕಲಿಸಿಕೊಡಲಿಲ್ಲ" ಎಂದಳು.

ಾಯುತ್ತಿದ್ದ ಸಾವಿತ್ರಮ್ಮ

ತಿಂಗಳು ಕಳೆಯುವುದನ್ನೇ ೬ ್ಮನ ಆರೋಗ್ಯ ಪೂರ್ಣ ಕಮಲನ ಮನೆಗೆ ಹಿಂದಿರುಗಿದಳು. ಪಟ ಕ್ಕೆ ಹೋಗಲು ಪದ್ಮನ ಸುಧಾರಿಸಿದ್ದುದರಿಂದ ಸಾವಿತ್ರಮ್ಮ ' ಸ್ವಗೃಹ ಅಭ್ಯಂತರವಿರಲಿಲ್ಲ. ಇದ್ದಿದ್ದರಾಗುತ್ತಿತ್ತು

"ಇನ್ನೂ ನಾಲ್ಕು ದಿನ ಅಲ್ಲೇ ಸಾವಿತ್ರಮ್ಮ."

ಎಂದು ಗೋದಮ್ಮ ಹೇಳಿದರು. ? ನೆಮ್ಮದಿ

ಎಲ್ಲಾ ಕೆಲಸ ನಿಮ್ಮ ಮೇಲೆ ಹಾಕಿ ನಾನು ಹೇ. 'ಕೊಂಡೇ ಯಾಗಿರಲಿ ಗೋದಮ್ಮನವರೇ. ಪದ್ಮಮ್ಮನವರನ್ನು ಕೇಳ ಬಂದೆನಮ್ಮ." ಮಾತಿನ

ಸರ್ವಸಾಮಾನ್ಯವಾಗಿ ಕಾಣಬರುತ್ತಿದ್ದ ಸಾವಿತ್ರಮ್ಮನ ಹಿಂದಿದ್ದ ಆಳವಾದ ಭಾವನೆಯನ್ನು ಗ್ರಹಿಸಿದ ಗೋದಮ್ಮನವರು ನ್ಮ.

"ನೀವೇತಕ್ಕೆ ಇಷ್ಟು ವಿಶ್ವಾಸ ಬೆಳಸಿಕೊಂಡಿರಿ ಸಾವಿತ್ರ ಅತಿಮಮತೆ ಅತಿದುಃಖಕ್ಕೆ ಮೂಲವಾಗುತ್ತದೆ." '.

"ನಿಮ್ಮ ಜತೆಯಲ್ಲಿ ನಾನಿದ್ದರೆ ಸಾಕು ಗೋದಮ್ಮನವರೆ ನನ್ನ ಪೂರ್ವಪುಣ್ಯ ವಿಶೇಷದಿಂದ ನಿಮ್ಮ ಸೊಸೆಯ ಪರಿಚಯ ವಾಯಿತು – ಮಹಾತಾಯಿ ನನ್ನನ್ನು ಉದ್ಧರಿಸಿದರು – ಅವರ ಸೇ ಮಾಡುವ ಪುಣ್ಯ ಕೇಳಿಕೊಂಡು ಬರಲಿಲ್ಲ."

"ರುಕ್ಕೂ ನಿರ್ಮಲಜೀವನ ನಮ್ಮೆಲ್ಲರ ದೊಡ್ಡ ಆಸ್ತಿ - ಕ್ಷಣಕ್ಕೂ ಅದು ತನ್ನ ಪ್ರಭಾವ ಬೀರುತ್ತಲೇ ಇದೆ." ಎಂದರು.

ಸಾವಿತ್ರಮ್ಮ ಹೇಳಿದ ಮಾತು ಅಕ್ಷರಶಃ ದಿಟವಾಗಿತ್ತು. ಕಮಲನ ಮನೆಗೆಲಸಮಾಡಿಕೊಂಡು, ಗೋದಮ್ಮನವರ ನಿಷ್ಕಾಮ ಜೀವನ ನೋಡುವುದರಲ್ಲಿ ಸಾವಿತ್ರಮ್ಮ ದಿವ್ಯಸುಖ ಅನುಭವಿಸು ತ್ತಿದ್ದಳು. ಹಗಲು ರಾತ್ರಿಗಳನ್ನು ಗಮನಿಸದೆ ದುಡಿದರೂ ಅವಳ ದೇಹಕ್ಕೆ ಆಯಾಸವಾಗುತ್ತಿರಲಿಲ್ಲ - ಮನಸ್ಸಿಗೆ ಬೇಸರವಾಗುತ್ತಿರಲಿಲ್ಲ.

ಕಾಲೇಜ್ ಮುಗಿಸಿಕೊಂಡು ಬರುತ್ತಿದ್ದ ಕಮಲ ಮನೆಯ ಚಿಲ್ಲರೆ ಕೆಲಸಗಳನ್ನು ತಾನೇ ನಿರ್ವಹಿಸುತ್ತಿದ್ದಳು.

" ತೆಪ್ಪಗೆ ಒಂದು ಗಳಿಗೆ ಕುಳಿತುಕೋ ಹೋಗಿ ಸಾವಿತ್ರಮ್ಮ - ಉಪಕರಣೆ ನಾನು ತೊಳೆದಿಡುತ್ತೇನೆ."

ಎಂದು ಹೇಳಿ ಪಾತ್ರೆಗಳನ್ನು ಬೆಳಗಿ, ರಾತ್ರಿ ಅಡಿಗೆಗೆ ತರಕಾರಿ ಹೆಚ್ಚಿಟ್ಟು, ಮಕ್ಕಳಿಗೆ ಹಾಸಿಗೆ ಹಾಸಿ, ತನ್ನ ಮಾರನೆಯ ದಿನದ ಪಾಠ ಗಳನ್ನು ಸಿದ್ಧಮಾಡಿಕೊಳ್ಳುತ್ತ ಕೂಡುತ್ತಿದ್ದಳು.

ಸಂಜೆ ದೊರಕುತ್ತಿದ್ದ ವಿರಾಮವನ್ನು ಸಾವಿತ್ರಮ್ಮ ಗೋದಮ್ಮ ನವರ ಜತೆ ಮಾತನಾಡುವುದಕ್ಕೋ, ಹಾಡು ಹೇಳಿಕೊಳ್ಳುವುದಕ್ಕೋ ವಿನಿಯೋಗಿಸುತ್ತಿದ್ದಳು.

ಒಂದು ದಿನ ತುಳಸೀಕಟ್ಟೆಯ ಬಳಿ ಕುಳಿತು ಹೂಬತ್ತಿ ಹೊಸೆ ಯುತ್ತಾ ಸಾವಿತ್ರಮ್ಮ ಹಾಡು ಹೇಳಿಕೊಳ್ಳುತ್ತಿದ್ದಳು. ಸಮೀಪ ದಲ್ಲಿಯೇ ಹೆಸರುಬೇಳೆ ಆರಿಸುತ್ತ ಕುಳಿತಿದ್ದ ಗೋದಮ್ಮನವರು ಆ ಹಾಡನ್ನು ಆಲೈಸಿ ಕೇಳುತ್ತಿದ್ದರು.

ಹಾಡಿನ ಗಹನಾರ್ಥಕ್ಕೆ ಮಾರುವೋದ ಗೋದಮ್ಮ ಸಾವಿತ್ರಮ್ಮನ ಬಳಿ ಬಂದು ಕುಳಿತು

" ಆ ಹಾಡು ಇನ್ನೊಂದು ಸಲ ಹೇಳ್ರೀ " ಎಂದರು.

ಸಾವಿತ್ರಮ್ಮ ಸಾವಕಾಶವಾಗಿ ಪ್ರತಿಶಬ್ದ ಬಿಡಿಸಿ ಹಾಡನ್ನು ಮತ್ತೆ ಹೇಳಿದಳು.

**ಮೂಲಾಧಾರದ ಗಣಪತಿಗೆರಗುವೆ**
**ಸ್ವಾದಿಷ್ಠಾನದ ಸರಸ್ವತಿಗಭಿವಂದಿಸಿ**
**ಶ್ರೀ ಗುರುಕೃಪೆಯಿಂದ ಮೂಲ ಜ್ಯೋತಿಯ ಹೃತ್ಪದ್ಮದಲಿರಿ!**

ಧ್ಯಾನದಿಂದಲೆ ಮೂಲಮಂತ್ರವ ಜಪಿಸಿ
ಜೀವಪರಮಾತ್ಮರನೈಕ್ಯವ ಮಾಡಿ
ಜ್ಞಾನಾಂಗನಾ ಗುರು ಪರಮಾತ್ಮರನು
ಧ್ಯಾನದಲಿರಿಸುವೆನು ಜಯ ಜಯ ಮಂಗಳ ||೧||

ರವಿಶಶಿಗೊಂದಿಸಿ ರಂಗಮಧ್ಯದಲಿ
ಕುಶದರ್ಭೆ ಜಪದಾಸನವಿರಿಸಿ
ಎಸೆವ ಷೋಡಶಕಳೆಯ ಜ್ಯೋತಿಯ ಹೃತ್ಪದ್ಮದಲಿರಿಸಿ
ದಶವಾಯುಗಳನು ಕ್ಲೇಶವಶವನೆ ಮಾಡಿ
ಹಸಿವು ತೃಷೆಗಳ ಬಳಲಿಕೆ
ಬಯಲು ಭಾವನೆ ಮಾಡಿ
ವಶವಲ್ಲದ ಬ್ರಹ್ಮಪದವಿಯ ಪಡೆವೆನು ಶ್ರೀಗುರುಕೃಪೆಯಿಂದಲಿ ||೨||

ಹೃದಯ ಕಮಲದೊಳಗಿಹ ಪರಮಾತ್ಮಗೆ
ಪರಮಶಾಂತಿಯ ಕಮಲಾಸನವಿರಿಸಿ
ಹಲವು ಕಡೆಗೆ ಹರಿದಾಡುವ ಚಿತ್ತ ಅಭಿಷೇಕವನೆರೆದು
ಹರಿಯನೀಕ್ಷಿಸುವ ನೇತ್ರಗಳ ವಸ್ತ್ರವನಿರಿಸಿ
ಸಾಕ್ಷಿ ಪುಣ್ಯಫಲ ಗಂಧಾಕ್ಷತೆಯನಿಟ್ಟು
ಆತ್ಮಾರಾಮಗೆ ಸೋಹಂಭಾವದ
ಪೂಜೆಯ ಸಲಿಸುವೆನು ಜಯ ಜಯ ||೩||

ಸತ್ವರಜೋತಮ ಒಲೆಯನು ಹೂಡಿ
ಹುಟ್ಟಿದ ರಾಗದ್ವೇಷಗಳ ಹುರಿದು
ಅಷ್ಟವಿಷಯ ದೇಹಭಾಂಡವವ ಒಲೆಯಮೇಲಿರಿಸುವೆನು
ತಟ್ಟಿ ಪಂಚಭೂತಗಳನ್ನೆಬ್ಬಿಸಿ
ಕುಟ್ಟಿ ಭಕ್ಷ್ಯಪರಮಾನ್ನವ ಮಾಡಿ
ಷಣ್ಮೋಹರಹಿತ ಆತ್ಮಾರಾಮಗೆ
ಎಡೆಯಮಾಡಿ ಬಡಿಸುವೆನು ಜಯ ಜಯ ||೪||

ಅಗ್ರದ ಗುಗ್ಗುಳ ಧೂಪವ ಹಾಕಿ
ನಿಗ್ರಹದಲಿ ಪಂಚಾರತಿ ಬೆಳಗಿ
ಶೀಘ್ರವಾಗಿ ಭಕ್ಷ್ಯಪರಮಾನ್ನವನು ನೈವೇದ್ಯವನಿರಿಸಿ

ಸಮುದ್ರ ಕಲಶದ ಉದಕವ ತುಂಬಿ
ನಿರ್ಗುಣಾತೀತಗೆ ಆಪ್ರೋಶನವೆರೆದು
ಫಲ್ಗುಣ ಸಾರಥಿ ಕ್ಷೇತ್ರಜ್ಞನೆ ನೀ
ನಾರೋಗಣೆಮಾಡೈ ಜಯ ಜಯ ||೫||

ಸತ್ವದಿ ಉತ್ತರಾಪೋಶನವೆರೆವೆನು
ಹಸ್ತವ ತೊಳೆವೆನು ಗುರು ಪರಮಾತ್ಮಗೆ
ಭಕ್ತಿ ನೇಮ ವೈರಾಗ್ಯಗಳೆಂಬ
ತಾಂಬೂಲವ ತಂದು
ಚಿತ್ತ ಶೋಧಿಸಿ ಕೆನೆಸುಣ್ಣವನಿರಿಸಿ
ತನುವೆತ್ತದಂತೆ ಕರುಣಿಸುವ ಮುನ್ನ
ಕರ್ಪೂರದೊಳಗಗ್ನಿ ಬೆರೆದಂತೆ ಜ್ಯೋತಿಯನೆತ್ತುವೆ ಆರತಿಯ ||೬||

ಮಂಗಳ ಗುರುಪರಮಾತ್ಮಗೆ ಮಂಗಳ
ಮಂಗಳಾತ್ಮಾರಾಮಗೆ ಮಂಗಳ
ಮಂಗಳ ಅಖಂಡರೂಪಿಗೆ ಮಂಗಳ
ಮಂಗಳ ಚಿನ್ಮಯಗೆ ಜಯ ಮಂಗಳ ||

"ಇಷ್ಟು ದಿವಸ ಈ ಹಾಡನ್ನು ಎಲ್ಲಿ ಮುಚ್ಚಿಟ್ಟದ್ದಿರಿ ಸಾವಿತ್ರಮ್ಮ?"

"ಹಾಡು ಅಷ್ಟು ಚೆನ್ನಾಗಿದೆಯೇ?"

"ಚೆನ್ನಾಗಿದೆಯೇ ಎಂದು ಕೇಳುವಿರಾ? ನನಗೂ ಹೇಳಿಕೊಡಿ - ಕಮಲನಿಗೂ ಹೇಳಿಕೊಡಿ."

ಸಾವಿತ್ರಮ್ಮ ಅನುಮಾನಿಸುತ್ತ

"ಇದು ಸ್ಮಾರ್ತರು ಹೇಳಿಕೊಳ್ಳುವ ಹಾಡು" ಎಂದಳು.

ಗೋದಮ್ಮನವರು ನಸುನಕ್ಕು

"ಸ್ಮಾರ್ತರು ಹೇಳಿಕೊಳ್ಳುವ ಹಾಡನ್ನು ಮಾಧ್ವರು ಹೇಳಿಕೊಂಡರೆ ಪಾಪ ಬರುತ್ತದೆಯೇ? ಅನಂತ ನಾಮರೂಪನಾದ ಭಗವಂತನನ್ನು ಯಾರು ಯಾವ ಹೆಸರಿನಲ್ಲಿ ಕರೆದರೇನು? - ಎಲ್ಲವೂ

**ಅವನಿಗೇ** ಅರ್ಪಿತ. ನಾವು ಪಟ್ಟಣದಲ್ಲಿದ್ದಾಗ ಅಕಸ್ಮಾತ್ತಾಗಿ **'ಅನುಭವಾಮೃತ'** ಕೈಗೆ ಸಿಕ್ಕಿತು. ಅದನ್ನು ಓದುತ್ತ ಓದುತ್ತ ನಾನು 'ನಿತ್ಯಾನಂದವನ್ನನುಭವಿಸಿದೆ. ನನ್ನ ಕೈಯಲ್ಲಿ 'ಅನುಭವಾ ಮೃತ'ವಿದ್ದುದನ್ನು ಕಂಡ ಒಬ್ಬರು - ನಮ್ಮವರು - 'ಇದೇನ್ರೀ - ಗೋದಮ್ಮ, ಸ್ಮಾರ್ತರ ಪುಸ್ತಕ ಓದುತ್ತೀರಿ' ಎಂದರು. ಅವರಿಗೆ 'ಅನುಭವಾಮೃತ' 'ಹರಿಕಥಾಮೃತಸಾರ' ಎರಡು ಗ್ರಂಥ ಗಳಿಂದಲೂ ಕೆಲವು ಪದ್ಯಗಳನ್ನು ಹೇಳಿ 'ಇದರಲ್ಲಿ ಯಾವದು ಸ್ಮಾರ್ತ- ಯಾವದು ಮಾಧ್ವ' ಎಂದು ಕೇಳಿದೆ ನನ್ನನ್ನು ಆಕ್ಷೇಪಿಸಿದವರು ಉತ್ತರಿಸಲಾರದೆ ಹೋದರು. ಸೃಷ್ಟಿ, ಸ್ಥಿತಿ, ಲಯ, ತಿರೋಧಾನ ಗಳೆಲ್ಲಾ ಅದೇ ಭಗವಂತನ ನಾಲ್ಕು ಮುಖಗಳೆಂದು ನಾವು ಒಪ್ಪಿ ಕೊಂಡಮೇಲೆ ಅದ್ವೈತ, ದ್ವೈತ, ವಿಶಿಷ್ಟಾದ್ವೈತ ಎಂದು ಹೊಡೆ ದಾಡುವುದು ವಿಹಿತವಲ್ಲ. ನಿಜವಾಗಿ ಭಗವಂತನ ಕಡೆ ದೃಷ್ಟಿಯಿಟ್ಟ ವರು ಹೊಡೆದಾಡುವುದಿಲ್ಲ - ಭಗವಂತನ ಹೆಸರನ್ನು ಸ್ವಪ್ರಯೋಜನ ಕ್ಕಾಗಿ ಬಳಸಿಕೊಳ್ಳುವ ಡಾಂಭಿಕ ಭಕ್ತರಲ್ಲಿ ಮಾತ್ರ ಘರ್ಷಣೆ ಯಿರುವುದು."

ಎಂದು ಕಮಲನನ್ನು ಕೂಗಿ

"ಸಾವಿತ್ರಮ್ಮ ಒಂದು ಹಾಡು ಹೇಳಿಕೊಡುತ್ತಾರೆ – ಕಲಿತುಕೋ ತಾಯಿ" ಎಂದರು.

ಸಾವಿತ್ರಮ್ಮ ಮತ್ತೊಮ್ಮೆ ಕಮಲನಿಗಾಗಿಯೇ ಹಾಡು ಹೇಳಿದಳು. ಅದನ್ನು ಕೇಳಿದ ಕಮಲಾ

"ನಿನ್ನ ಪೂಜೆಯೆಲ್ಲಾ ಇದರಲ್ಲಿ ಅಡಕವಾಗಿದೆಯಲ್ಲಾ ಗೋದಜ್ಜಿ" ಎಂದಳು.

"ಹೌದು ಕಮಲಾ, ಸಂಸ್ಕೃತದಲ್ಲಿರುವ ವೇದ ವೇದಾಂತ ವನ್ನೆಲ್ಲಾ ನಮ್ಮ ಜನಗಳು ಹಾಡಿನ ರೂಪನಲ್ಲಿ ಬರೆದಿದ್ದಾರೆ. ಸಂಸ್ಕೃತ ಬಾರದಿರುವವರಿಗೂ ನಮ್ಮ ಧರ್ಮದ ತಿಳುವಳಿಕೆಯಾಗಲೆಂದು!"

"ಸಾವಿತ್ರಮ್ಮನವರು ಏನೋಂತಿದ್ದೆ! ಪರವಾಗಿಲ್ಲ ಕಣಜ್ಜೀ!"

" ನೊಂದು ಹಣ್ಣಾಗಿರುವ ಜೀವ ಯಾವಾಗಲೂ ಭಗವಂತನಿಗೆ ಸಮೀಪವಾಗಿರುತ್ತದೆ ಕಮಲಾ."

" ಅಜ್ಜೀ, ನಿನ್ನಲ್ಲಿ ನಾನೊಂದು ಆಪ್ತಾಲೋಚನೆ ಮಾಡಬೇಕಾಗಿತ್ತು."

" ಹೇಳು ಕಮಲಾ "

ಕಮಲಾ ಸಾವಿತ್ರಮ್ಮನ ಕಡೆ

" ಅವರಿದ್ದರೇನಮ್ಮ – ಸಾವಿತ್ರಮ್ಮ ನಮ್ಮ ಸಂಸಾರಕ್ಕೆ ಸೇರಿದವರಲ್ಲವೇ ? " ಎಂದರು.

" ಕಾಲೇಜಿಗೆ ಹೊಸ ಪ್ರಿನ್ಸಿಪಾಲರು ಬಂದಿದ್ದಾರೆ. ಈ ಮಹಾತಾಯಿಯ ಕಾಟ ತಡೆಯುವುದಕ್ಕಾಗುವುದಿಲ್ಲ ಕೆಲವು ವಿದ್ಯಾರ್ಥಿನಿಯರಿಗೂ ಈ ಪ್ರಿನ್ಸಿಪಾಲರಿಗೂ ಸ್ನೇಹ ಬೆಳೆದಿದೆ. ಅಧ್ಯಾಪಿಕೆಯರಾದ ನಾವು ಈ ವಿದ್ಯಾರ್ಥಿನಿಯರಿಗೆ ತಲೆಬಾಗಿಸಬೇಕಾಗಿದೆ."

" ನಿನ್ನ ಆತ್ಮಗೌರವಕ್ಕೆ ಬಾಧೆ ಬರುವ ದಿನ ಅಲ್ಲಿ ನಿಲ್ಲಬೇಡ ಕಮಲಾ. ಕೆಲಸಕ್ಕೆ ಕೈಮುಗಿದುಬಿಡು."

" ಅಜ್ಜೀ, ಅದು ಹೇಗೆ ಸಾಧ್ಯ ?

" ಮನೆಯ ಪಾಡೇನು ಎಂದು ಚಿಂತೆಯೇ ? "

" ಅಣ್ಣ ಚೆನ್ನಾಗಿದ್ದರೆ ಚಿಂತೆಯಿರಲಿಲ್ಲ. "

" ರುಕ್ಕೂ ಮನೆಯಲ್ಲಿ ಅನ್ನಕ್ಕೆ ಕ್ಷಾಮವೇ ಅನ್ನಪೂರ್ಣೇಶ್ವರಿಯ ಮಗಳಾಗಿ ಇಂದಿಗೇನು, ನಾಳಿಗೇನು ಎಂದು ಚಿಂತೆಮಾಡುವರೇ ? ಯಾವದು ಧರ್ಮ, ಯಾವದು ಋಜುತ್ವ ಎಂದು ನಾವು ನಂಬಿದ್ದೇವೆಯೋ ಅದಕ್ಕಾಗಿ ಸರ್ವಸ್ವವನ್ನೂ ಅರ್ಪಿಸಲು ನಾವು ಸಿದ್ಧವಾಗಿರಬೇಕು. "

" ನಾನು ನಿಜವಾಗಿ ಹೆದರಿದ್ದೆ ಗೋದಜ್ಜಿ, ಈಗ ನನಗೆ ಧೈರ್ಯ ಬಂದಿತು. "

ಎಂದು ಕಮಲ ಸಂತಸದಿಂದ ನುಡಿದಳು

ಈ ಸಂಭಾಷಣೆ ಕೇಳಿಸಿಕೊಂಡಿದ್ದ ಸಾವಿತ್ರಮ್ಮ

" ಗೋದಕ್ಕ ನಿಮ್ಮಿಂದ ದೂರವಿರಲು ನನಗೇಕೆ ಸಾಧ್ಯವಿಲ್ಲ ವೆಂಬುದು ಈಗ ನನಗೆ ಅರ್ಥವಾಯಿತು "

" ಏಕೆ ಸಾವಿತ್ರಮ್ಮ . "

" ಇಂಥ ಉಪದೇಶ ಕೇಳಿದ ಕಿವಿಗಳು ಪರಿಶುದ್ಧವಾಗುತ್ತವೆ. ಈ ಉಪದೇಶ ಅನುಸರಿಸಿದ ಬಾಳು ಧನ್ಯವಾಗುತ್ತದೆ. "

ಗೋದಮ್ಮ ಮಾತನಾಡದೆ ಕುಳಿತಿದ್ದ ಸ್ಥಳ ಬಿಟ್ಟು ಎದ್ದರು.

ನಾರಾಯಣಸ್ವಾಮಿ, ಡ್ರ್ರ ಅವರ ಸಂಬಂಧ ಕೇವಲ ವ್ಯಾವಹಾರಿಕ ಗುರು – ಶಿಷ್ಯ ಸಂಬಂಧವಾಗಿ ಉಳಿಯಲಿಲ್ಲ. ಒಂದು ತಿಂಗಳಲ್ಲಿ ಅವರ ಪರಿಚಯ ಸ್ನೇಹವಾಗಿ ಮಾರ್ಪಟ್ಟಿತು. ಡ್ರ್ರ ಚಹಾ ಕುಡಿಯುವುದಕ್ಕೆ ಹೋಗುತ್ತಿದ್ದಾಗ ತಪ್ಪದೆ ನಾರಾಯಣಸ್ವಾಮಿಯನ್ನು ಕರೆದುಕೊಂಡು ಹೋಗುತ್ತಿದ್ದರು. ಗುರುಶಿಷ್ಯರ ಅನ್ಯೋನ್ಯತೆ ಕಂಡು ಮ್ಯಾಕೆ, ನೀನಾ ಸಂತೋಷಪಡುತ್ತಿದ್ದರು.

ಒಂದು ದಿನ ಸಂಜೆ ಮ್ಯೂಸಿಯಂ ಲೈಬ್ರರಿ ಬಿಟ್ಟು ಹೊರಗೆ ಬಂದ ಡ್ರ್ರ ಅವರಿಗೆ ನಾರಾಯಣಸ್ವಾಮಿ

" ಚಹಾ ಕುಡಿಯೋಣವೇ ಪ್ರೊಫೆಸರ್ " ಎಂದು ಕೇಳಿದ.

" ಮ್ಯಾಕೆಯಲ್ಲಿ ಹೋಗುವುದು ಬೇಡ – ನಮ್ಮ ಮನೆಗೆ ಹೋಗೋಣ ಬನ್ನಿ " ಎಂದರು.

ಪ್ರೊಫೆಸರು ಅದೇ ಮೊದಲನೆಯ ಬಾರಿಗೆ ನಾರಾಯಣಸ್ವಾಮಿಯನ್ನು ಮನೆಗೆ ಆಹ್ವಾನಿಸುತ್ತಿದ್ದುದರಿಂದ ಅವನು ಒಲ್ಲೆಯೆನ್ನಲಿಲ್ಲ.

ಸೋಹೋ ದಾಟಿ ಎರಡು ಮೈಲಿ ಹೋದಮೇಲೆ ಲಂಡನ್ನಿನ ಈಸ್ಟ್ ಎಂಡ್ ಮುಗಿಯುವಲ್ಲಿ ಹತ್ತಾರು, ಹರಕಲು ಮುರಕಲು ಮನೆಗಳು. ರಸ್ತೆಯಲ್ಲಿ ಹರಿಯುತ್ತಿದ್ದ ಗಟಾರದ ನೀರನ್ನು ದಾಟಿಕೊಂಡು ಡ್ರ್ರ, ನಾರಾಯಣಸ್ವಾಮಿ ಒಂದು ಮನೆ ಮುಟ್ಟಿದರು. ಆ ಮನೆಯ ವಾಮಭಾಗದಲ್ಲಿದ್ದ ಮೂರು ಕೋಣೆಗಳೇ ಡ್ರ್ರ ಅವರ ವಾಸಸ್ಥಾನ.

ಒಂದು ಕೋಣೆಯನ್ನು ಪ್ರೊಫೆಸರು ತಮ್ಮ ಅಡಿಗೆ, ಊಟದ ಮನೆ ಮಾಡಿಕೊಂಡಿದ್ದರು. ಅದರ ಪಕ್ಕದಲ್ಲಿದ್ದುದೇ ಅವರ ಶಯ್ಯಾ

ಗೃಹ – ಅದರ ಬದಿಗಿದ್ದುದು ಅವರ ವ್ಯಾಸಂಗಕೋಣೆ ಮತ್ತು ಡ್ರಾಯಿಂಗ್ ರೂಮ್.

ನಾರಾಯಣಸ್ವಾಮಿಯನ್ನು ವ್ಯಾಸಂಗ ಕೋಣೆಯಲ್ಲಿ ಕುಳ್ಳಿರಿಸಿ ಡ್ರೂ ಒಳಗೆ ಹೋಗಿ ಕೋಟು, ಟೋಪಿ ಒಗೆದು ಬಂದು ಕುಳಿತರು.

ನಾರಾಯಣಸ್ವಾಮಿ ಸುತ್ತ ದೃಷ್ಟಿ ಬೀರುತ್ತಾ

" ಲಂಡನ್ನಿನಲ್ಲಿ ಇದಕ್ಕಿಂತಲೂ ಒಳ್ಳೆಯ ಮನೆ ನಿಮಗೆ ಸಿಕ್ಕಲಿಲ್ಲವೇ ಪ್ರೊಫೆಸರ್ " ಎಂದು ಕೇಳಿದ.

" ಸಿಕ್ಕದೆ ಏನು ? ಬೇಕಾದಷ್ಟು ಸಿಕ್ಕುತ್ತಿದ್ದವು ಆದರೆ ನನಗೆ ಹೃದಯವಿಹೀನ ಶ್ರೀಮಂತರ ಮಧ್ಯೆ ಇರಲು ಇಷ್ಟವಿಲ್ಲ ಸ್ವಾಮಿ. ನಾನೂ ಬಡವ – ಬಡವರೇ ನನ್ನ ಬಂಧುಗಳು."

" ಊಟ ತಿಂಡಿಗೇನು ಮಾಡುವಿರಿ ? "

" ಮನೆಯ ಯಜಮಾನಿತಿ ಮಿಸೆಸ್ ಫ್ಲೆಮಿಂಗ್ ಬೇಕಾದಾಗ ಮಾಡಿಕೊಡುತ್ತಾರೆ ಒಮ್ಮೊಮ್ಮೆ ಪೀಟರ್ – ಒಮ್ಮೊಮ್ಮೆ ನಾನು ಆಮ್ಲೆಟ್ ಮಾಡಿಕೊಳ್ಳುತ್ತೇವೆ – ಚಹಾ ಮಾಡಿಕೊಳ್ಳುತ್ತೇವೆ."

" ಪೀಟರ್ ಯಾರು ? "

" ಪೀಟರ್ ಚಹಾ ಮಾಡುತ್ತಿದ್ದಾನೆ ಅವನು ಬರಲಿ – ಪರಿಚಯ ಮಾಡಿಕೊಡುತ್ತೇನೆ."

ಇಬ್ಬರೂ ಲೋಕಾಭಿರಾಮವಾಗಿ ಮಾತನಾಡುತ್ತಿರುವಲ್ಲಿ ಪೀಟರ್ ಟ್ರೇಯಲ್ಲಿ ಚಹಾ, ಬಿಸ್ಕತ್ತುಗಳನ್ನು ಹೊತ್ತು ತಂದು ಸ್ವಾಮಿಯ ಮುಂದಿದ್ದ ಟೀ-ಪಾಯ್ (Tea-poy) ಮೇಲಿಟ್ಟ. ಪ್ರೊಫೆಸರ್ ಡ್ರೂ

" ಪೀಟರ್, ನನ್ನ ಸ್ನೇಹಿತರು – ಮಿ ಸ್ವಾಮಿಯವರ ಪರಿಚಯ ಮಾಡಿಕೊ."

ಪೀಟರ್ ಹಾರ್ದಿಕವಾಗಿ ನಾರಾಯಣಸ್ವಾಮಿಯ ಕೈಕುಲುಕಿ

" ಪ್ಲೀಸ್ಡ್ ಟು ಮೀಟ್ ಯು ಸರ್ (Pleased to meet you Sir) – ಪ್ರೊಫೆಸರು ನಿಮ್ಮ ವಿಷಯ ಬಹಳ ಹೇಳುತ್ತಿರುತ್ತಾರೆ. "

" ಈ ನನ್ನ ಕಿರಿ ಗೆಳೆಯ ಪೀಟರ್ ಸಿಮ್ಮನ್ಸ್ (Peter

Simmons) ಇಂಗ್ಲೆಂಡಿನ ಉದಯೋನ್ಮುಖ ಕವಿಶ್ರೇಷ್ಠನೆಂದರೆ ನಂಬು ವಿರಾ ಸ್ವಾಮಿ. ? "

" ಇವರು ಕವಿಗಳೇ ? "

" ಹೌದು ಕವಿ, ಕಾರ್ಮಿಕ. ಪೀಟರ್ ಒಂದು ಗಣಿಯಲ್ಲಿ ಕೆಲಸಮಾಡುತ್ತಿದ್ದಾನೆ. ಈವರೆಗೆ ಎರಡು ಕಾವ್ಯಸಂಗ್ರಹಗಳು— 'ಟುವರ್ಡ್ಸ ಡಾನ್'(Towards Dawn) – 'ದಿ ಗೇ ವಿಂಡ್' (The Gay Wind) ಪ್ರಕಟಿಸಿದ್ದಾನೆ. "

ಕಾಲೇಜ್ ವಿದ್ಯಾರ್ಥಿಯಂತೆ ಕಾಣುತ್ತಿದ್ದ ಪೀಟರನನ್ನು ಸ್ವಾಮಿ, ಕೌತುಕದಿಂದ ನೋಡಿ

" ನಿಮ್ಮ ವಯಸ್ಸೆಷ್ಟು ಮಿ. ಪೀಟರ್ " ಎಂದು ಕೇಳಿದ.

" ಇಪ್ಪತ್ತುನಾಲ್ಕು. "

" ನಿಮ್ಮ ಕಾವ್ಯ ಯಾವ ಸಂಪ್ರದಾಯಕ್ಕೆ ಸೇರಿದುದು. "

ಪ್ರೊ. ಡ್ರ್ಯೂ ನಗುತ್ತಾ

" ಪೀಟರ್ ಕಾವ್ಯ ಪೀಟರ್ ಸಂಪ್ರದಾಯಕ್ಕೆ ಸೇರಿದುದು. ಹೃದಯ ಭೇದಿಸಿಕೊಂಡು ಹೊರಬರುವ ಕಾವ್ಯ ಸರ್ವತಂತ್ರ ಸ್ವತಂತ್ರ ವಾಗಿರುತ್ತದಲ್ಲದೆ ಯಾವ ಸಂಪ್ರದಾಯವನ್ನೂ ಅನುಸರಿಸುವುದಿಲ್ಲ. ಇಂದಿನ ಈಲಿಯಟ್ ಯುಗ ಮುಗಿದ ಮೇಲೆ ಪೀಟರ್ ಯುಗ ಆರಂಭ ವಾಗುತ್ತದೆ ಈಲಿಯಟ್ಟರ ಕಾವ್ಯವನ್ನು ' ನಿನ್ನಿನ ಕಾವ್ಯ ' (The Poetry of Yesterday) ಎಂದು ಹೇಳಬಹುದಾದರೆ ಪೀಟರ್ ಕಾವ್ಯವನ್ನು ' ನಾಳಿನ ಕಾವ್ಯ ' ( The Poetry of To-morrow ) ಎಂದು ಕರೆಯಬಹುದು-"

" ಇವುಗಳಿಗಿರುವ ವ್ಯತ್ಯಾಸವೇನು ? "

" ಮೊದಲು ಚಹಾ ತೆಗೆದುಕೊಳ್ಳಿ – ಆರಿಹೋಗುತ್ತಿದೆ. ನನ್ನ ಕಾವ್ಯದ ಮೇಲೆ ಪ್ರೊಫೆಸರು ಮಾತು ಆರಂಭಿಸಿದರೆಂದರೆ ಇಂದು ನಾಳೆಯಾಗುತ್ತದೆ."

ಪೀಟರ್ ಸುರುವಿಕೊಟ್ಟ ಚಹಾದ ಕಪ್ಪು ಬಸಿ ಕೈಯಲ್ಲಿ ಹಿಡಿದು ಪ್ರೊ. ಡ್ರ್ಯೂ

"ಈಲಿಯಟ್ ಕ್ಯಾಥೊಲಿಕ್ ಧರ್ಮಾನುಯಾಯಿ. ಅವರ ಕಾವ್ಯದ ಮೇಲೆ ಕ್ಯಾಥೊಲಿಕ್ಕರ ಮತತತ್ತ್ವಗಳ ಪ್ರಭಾವ ಚೆನ್ನಾಗಿ ಮೂಡಿದೆ. ಕ್ರಿಸ್ಟಿಯನ್, ಬೌದ್ಧ, ಹಿಂದೂ, ಇಸ್ಲಾಂ, ಷಿಂಟೋ, ಯಹೂದಿ ಧರ್ಮಗಳೆಲ್ಲಾ ನಿನ್ನಿನ ಧರ್ಮಗಳು. ಆ ಧರ್ಮಗಳ ಪ್ರಭಾವಕ್ಕೆ ಸಿಕ್ಕಿದವರೆಲ್ಲಾ ಬರೆಯುವುದು ನಿನ್ನಿನ ಕಾವ್ಯವೇ! ಪೀಟರ್ ನಾಳಿನ ಧರ್ಮವನ್ನು ಚಿತ್ರಿಸುತ್ತಿದ್ದಾನೆ. ಈಲಿಯಟ್ಟರ ಹಾಗೆ ಕ್ಯಾಥೊಲಿಕ್ ಧರ್ಮಾನುಸರಣೆಯಿಂದಲೇ ಜಗತ್ತಿನ ಕಲ್ಯಾಣ ಎಂದವನು ಹೇಳುವುದಿಲ್ಲ — ಎಲ್ಲ ಧರ್ಮಗಳೂ ಪ್ರತಿಪಾದಿಸುವ ಕೆಲವು ಋಜುತತ್ತ್ವಗಳ ಮೇಲ ಮುಂದಿನ ಧರ್ಮ ರೂಪುಗೊಳ್ಳುತ್ತದೆ — ಮಾನವ ಆ ಧರ್ಮಾನುಯಾಯಿಯಾಗುತ್ತಾನೆ ಎಂದು ಪೀಟರ್ ಹೇಳುತ್ತಾನೆ. ಈಲಿಯಟ್ ಕಾವ್ಯದಲ್ಲಿ ಕಾಣುವುದು ಏಕ ಪಕ್ಷವಾದ – ಪೀಟರ್ ಕಾವ್ಯದಲ್ಲಿ ಕಾಣುವುದು ಸರ್ವಸಮನ್ವಯ ಸಿದ್ಧಾಂತ."

"ಇಂಥ ಕವಿ ಕಾವ್ಯ ಪರಿಚಯ ಮಾಡಿಕೊಳ್ಳದಿರುವ ಅಪರಾಧಕ್ಕೆ ನಾನು ಗುರಿಯಾಗಿದ್ದೇನೆ."

"ಹಾಗೇನಿಲ್ಲ ಮಿ. ಸ್ವಾಮಿ. ಖ್ಯಾತಿಯೆಂದರೆ ಪೀಟರ್ ಮುಖ ಹುಳಿ ಮಾಡುತ್ತಾನೆ. ಅವನ ಎರಡು ಕಾವ್ಯ ಸಂಗ್ರಹಗಳನ್ನು ಕೂಡ ನಾವು ಬಲವಂತದಿಂದ ಪ್ರಕಟಿಸಬೇಕಾಯಿತು. ಸಂಪ್ರದಾಯವಾದಿ ಪತ್ರಿಕೆಗಳಲ್ಲಿ ಅವನ ಗ್ರಂಥಗಳನ್ನು ವಿಮರ್ಶಿಸಿದ ಮಹನೀಯರು ಪೀಟರನ್ನು ಕಮ್ಯೂನಿಸ್ಟ — ಬೋಲ್‌ಷೆವಿಕ್ ಎಂದು ಕರೆದರು. ಜನತೆಯ ಆಶೋತ್ತರ ಪ್ರತಿಧ್ವನಿಸುವವರೆಲ್ಲರೂ ಕಮ್ಯೂನಿಸ್ಟರೆಂಬ ತಪ್ಪು ಅಭಿಪ್ರಾಯ ನಮ್ಮ ವಿಮರ್ಶಕರಲ್ಲಿ ಮೂಡಿದೆ"

"ಈಗೇನು ಬರೆಯುತ್ತಿರುವಿರಿ ಮಿ. ಪೀಟರ್?"

"ಒಂದು ದೊಡ್ಡ ಕಾವ್ಯ ಆರಂಭಿಸಿದ್ದೇನೆ. ಅದರ ಹೆಸರು 'ಯೂನಿವರ್ಸ್ – ಮೈ ಹೋಮ್' (Unrverse-My home!) ಆ ಪಕ್ಷ ಈ ಪಕ್ಷವೆಂದು ಹರಿದಾಡುವ ಮಾನವ ಜಾಗೃತನಾಗಿ ವಿಶ್ವ ಮಾನವನಾಗುವುದೇ ವಸ್ತು."

" ನಿಮ್ಮ ಮಹಾಕಾವ್ಯ ಬೇಗ ಹೊರಬರಲಿ. ಎರಡು ಪ್ರಬಲ ರಾಜಕೀಯ ವ್ಯೂಹಗಳ ಮಧ್ಯೆ ಸಿಕ್ಕಿ ಜಗತ್ತು ತಳಮಳಿಸುತ್ತಿರುವಾಗ ನಿಮ್ಮ ಸಂದೇಶ ಅದಕ್ಕೆ ವಿವೇಕ, ಶಾಂತಿಯನ್ನು ತರಬಲ್ಲುದು."

" ಬಹಳ ದೊಡ್ಡ ಮಾತಾಯಿತು ಮಿ. ಸ್ವಾಮಿ. ನಿಮ್ಮ ಪ್ರಧಾನಿಗಳು ಪಂಡಿತ ನೆಹ್ರೂ ಈ ಕೆಲಸ ಅನ್ಯಾದೃಶವಾಗಿ ನಿರ್ವಹಿಸುತ್ತಿದ್ದಾರೆ."

ಐರೋಪ್ಯನೊಬ್ಬನ ಬಾಯಲ್ಲಿ ಬಂದ ಈ ಮಾತು ಕೇಳಿ ನಾರಾಯಣಸ್ವಾಮಿಗೆ ಅತ್ಯಾನಂದವಾಯಿತು

" ಕಾವ್ಯರಂಗದಲ್ಲಿ ನಾನು ಮಾಡಿರುವ ಅಲ್ಪಸೇವೆಯ ಸಂಪೂರ್ಣ ಕೀರ್ತಿ ಪ್ರೊ. ಡ್ರೂ ಅವರಿಗೆ ಸೇರಬೇಕು. ನಾನೂ ಒಬ್ಬ ಕವಿ ಎಂಬ ಅರಿವು ತಂದುಕೊಟ್ಟವರೇ ಅವರು."

" ನಿಮಗೆ ಪ್ರೊಫೆಸರರ ಪರಿಚಯ ಹೇಗಾಯಿತು ? "

" ಅದೊಂದು ಸ್ವಾರಸ್ಯವಾದ ಕತೆ – ಕೇಳುವಿರೇನು ? ನಿಮಗೆ ತಡವಾಗುವುದೇನೋ ? "

" ಇಲ್ಲ ಮಿ. ಪೀಟರ್ – ಹೇಳಿ."

" ಗಣಿ ಕೆಲಸ ಮುಗಿದ ಮೇಲೆ ನಾನು ಆಗಾಗ್ಗೆ ಹೋಗಿ ಮ್ಯೂಸಿಯಂ ಲೈಬ್ರರಿಯಲ್ಲಿ ಕುಳಿತು ವ್ಯಾಸಂಗಮಾಡುತ್ತಿದ್ದೆ. ಪ್ರೊಫೆಸರು ನನ್ನನ್ನು ನೋಡುತ್ತಿದ್ದರು ; ನಾನು ಅವರನ್ನು ನೋಡುತ್ತಿದ್ದೆ. ಪರಸ್ಪರ ಪರಿಚಯವಿಲ್ಲದಿದ್ದುದರಿಂದ ಮಾತನಾಡಿರಲಿಲ್ಲ. ಒಂದು ದಿನ ನಾನು ಮ್ಯಾಕೆ ಟೀಷಾಪಿಗೆ ಹೋದಾಗ ಅಲ್ಲಿ ಪ್ರೊಫೆಸರರು ಕುಳಿತಿದ್ದರು. ನಾನು ಅವರನ್ನು ಮಾತನಾಡಿಸದೆ ಒಂದು ಮೂಲೆಯಲ್ಲಿದ್ದ ಮೇಜಿನ ಮುಂದೆ ಕುಳಿತು ನನ್ನ ಕಾವ್ಯಸಂಗ್ರಹ ತಿದ್ದುತ್ತಿದ್ದೆ. ಸ್ವಲ್ಪ ಹೊತ್ತಾದ ಮೇಲೆ ಪ್ರೊಫೆಸರರು ನನ್ನ ಮೇಜಿನ ಬಳಿಗೆ ಬಂದು ' ನನ್ನ ಹೆಸರು ಜಾನ್ ಡ್ರೂ – ಲಂಡನ್ ಕಾಲೇಜಿನಲ್ಲಿ ನಾನು ಸೋಷಿಯಾಲಜಿ ಪಾಠ ಹೇಳುತ್ತೇನೆ. ನಿಮ್ಮ ಪರಿಚಯ ಮಾಡಿಕೊಳ್ಳಲು ಇಷ್ಟಪಡುತ್ತೇನೆ ' ಎಂದರು.

" ನಾನು ಪ್ರೊಫೆಸರರಿಗೆ ಕುರ್ಚಿ ಕೊಟ್ಟು ಕುಳ್ಳಿರಿಸಿ

" 'ನನ್ನ ಹೆಸರು ಪೀಟರ್ ಸಿಮ್ಮನ್ಸ್ — ನಾನೊಬ್ಬ ಸಾಮಾನ್ಯ ಗಣಿ ಕೆಲಸಗಾರ.'

" 'ನೀವು ಕಾವ್ಯ ಬರೆಯುವಿರಾ, ಮಿ. ಸಿಮ್ಮನ್ಸ್. '

" 'ಕೆಲವು ಪದ್ಯಗಳನ್ನು ಬರೆದಿದ್ದೇನೆ, ಅವುಗಳನ್ನು ಕಾವ್ಯವೆಂದು ಕರೆಯಲಾರೆ ಹುಡುಗ ಚಾಪಲ್ಯ.'

" 'ನಿಮ್ಮ ಪದ್ಯಗಳನ್ನು ನಾನು ನೋಡಬಹುದೇ ? '

" ನಾನು ಸಂಕೋಚಪಟ್ಟುಕೊಂಡೇ, ನನ್ನ ಕಾವ್ಯದ ಹಸ್ತಪ್ರತಿಯನ್ನು ಪ್ರೊಫೆಸರ ಕೈಗಿತ್ತೆ.

" ಪ್ರೊಫೆಸರು ತದೇಕಚಿತ್ತರಾಗಿ ಕುಳಿತರು. ಅವರಿಗೆ ಹೊತ್ತಿನ ಪರಿವೆಯೇ ಇಲ್ಲವಾಯಿತು ನೀನಾ ಚಹಾದಂಗಡಿಯಲ್ಲಿದ್ದ ಎಲ್ಲರನ್ನೂ ಹೊರಗೆ ಕಳುಹಿಸಿ ಬಾಗಿಲು ಹಾಕಿದಳು. ನಮ್ಮ ಮೇಜಿನ ಮೇಲಿದ್ದ ಒಂದೇ ದೀಪ ಉರಿಯುತ್ತಿತ್ತು. ಪ್ರೊಫೆಸರು ನನ್ನ ಹಸ್ತಪ್ರತಿ ಪೂರ್ತಿ ಓದಿ ಮುಗಿಸಿ

" 'ಪೀಟರ್, ಯು ಆರ್ ನಾಟ್ ಓನ್ಲಿ ಎ ಪೊಯೆಟ್–ಯು ಆರ್ ಎ ಗ್ರೇಟ್ ಪೊಯೆಟ್ (Peter, you are not only a poet–you are a great poet) ' ಎಂದರು. ಅಂಬೆಗಾಲಿಕುತ್ತ, ಕಾವ್ಯರಂಗ ಪ್ರವೇಶಿಸುತ್ತಿದ್ದ ನನ್ನಂಥವನಿಗೆ ಈ ಮಾತುಗಳಿಂದೇನಾಗಿರಬಹುದೆಂಬುದನ್ನು ನೀವೇ ಊಹಿಸಿಕೊಳ್ಳಬಹುದು. ಅಂದಿನ ಪರಿಚಯು ಸ್ನೇಹವಾಯಿತು. ನನ್ನ ರೂಮು ಬಿಡಿಸಿ ಪ್ರೊಫೆಸರು ತಮ್ಮ ರೂಮಿನಲ್ಲಿ ಸ್ಥಳ ಮಾಡಿಕೊಟ್ಟರು. ನನ್ನ ಕಾವ್ಯ ಸಂಗ್ರಹಗಳನ್ನು ಪರಿಷ್ಕರಿಸಿ, ಪ್ರಕಾಶಕರನ್ನು ಗೊತ್ತು ಮಾಡಿ ಪ್ರಕಟಿಸಿದರು. "

" ಇನ್ನು ಇಬ್ಬರೂ ಸೇರಿಕೊಂಡು ನನ್ನನ್ನು ಹೊಗಳಲಾರಂಭಿಸಬೇಡಿ. "

ಎಂದು ಪ್ರೊಫೆಸರು ಗದರಿಕೊಂಡರು.

" ಮತ್ತೊಮ್ಮೆ ನಾನು ಬರುತ್ತೇನೆ ಮಿ. ಪೀಟರ್–ನಿಮ್ಮ ಕಾವ್ಯ ನೀವೇ ಓದಿ ತೋರಿಸಬೇಕು. "

" ಬೇಕಾದಾಗ ಬನ್ನಿ–ಪ್ರೊಫೆಸರರ ಮಿತ್ರರು ನನ್ನ ಮಿತ್ರರೇ ! "

"ಅವರ ಮಿತ್ರನಾಗುವಷ್ಟು ಯೋಗ್ಯತೆ ನಾನು ಪಡೆದಿಲ್ಲ. ಮಿ. ಪೀಟರ್. ನಾನೊಬ್ಬ ಅವರ ಪಾಮರಶಿಷ್ಯ"

"ಈ ಪಾಮರಶಿಷ್ಯ ಲೋಕೋತ್ತರ ಕಾದಂಬರಿ ಬರೆದಿದ್ದಾರೆ ಪೀಟರ್"

ಎಂದು ಡ್ರೂ ಹೇಳಿದರು. ಪೀಟರ್ ತೃಪ್ತ್ಯರ್ಥವಾಗಿ ನಾರಾಯಣಸ್ವಾಮಿ ತನ್ನ ಕಾದಂಬರಿ ವಿಷಯ ವಿವರಿಸಬೇಕಾಯಿತು.

ಹೊರಟು ನಿಂತ ನಾರಾಯಣ ಸ್ವಾಮಿಯ ಹೆಗಲಮೇಲೆ ಡ್ರೂ ಕೈ ಹಾಕಿ, ಪೀಟರನ್ನು ಹತ್ತಿರ ಕರೆದು, ಇಬ್ಬರ ಕೈ ಕೂಡಿಸಿ,

"ನೀವಿಬ್ಬರೂ ಸಮಾನ ಧರ್ಮಿಗಳು – ನೀವಿಬ್ಬರೂ ನೂತನ ಜಗತ್ತನ್ನು ಕಟ್ಟಲು ಹೊರಟಿರುವಿರಿ ನೀವು ಗೆಳೆಯರಾಗಿರಬೇಕು. ಪೂರ್ವಪಶ್ಚಿಮಗಳ ಸ್ನೇಹ ಸೌಹಾರ್ದದಿಂದ ವಿಶ್ವಶಾಂತಿ ಸ್ಥಾಪನೆಯಾಗುವುದಕ್ಕೆ ನೀವಿಬ್ಬರೂ ದುಡಿಯಬೇಕು." ಎಂದರು.

ಡ್ರೂ, ಪೀಟರ್ ಇಬ್ಬರೂ ಸ್ವಾಮಿಯ ಜತೆ ಸೋಹೋ ಚೌಕದ ವರೆಗೆ ನಡೆದು ಬಂದು ಅವನನ್ನು ಬಸ್ ಹತ್ತಿಸಿ ಕೂಡಿಸಿ ಹಿಂದಿರುಗಿದರು.

ಸ್ವಾಮಿ 'ಸ್ಟ್ರ್ಯಾಂಡ್ ಚೌಕ'(Strand Square)ದಲ್ಲಿಳಿದು ಪಕ್ಕದಲ್ಲಿದ್ದ ಡಬ್ಲ್ಯೂ. ಹೆಚ್. ಸ್ಮಿತ್ತರ (W. H. Smith) ಪುಸ್ತಕದ ಅಂಗಡಿಯಲ್ಲಿ ಪೀಟರ್ ಸಿಮ್ಮನ್ಸನ ಎರಡು ಕಾವ್ಯ ಸಂಗ್ರಹಗಳನ್ನು ಕೊಂಡು ಮನೆಯ ಕಡೆ ಹೊರಟ.

೧೮

ನಾರಾಯಣಸ್ವಾಮಿಗೆ ಕೈತುಂಬಾ ಕೆಲಸವಾಯಿತು

ಥೀಸಿಸ್‌ಗೆ ಹಲವು ಲೇಖನ, ಗ್ರಂಥಗಳನ್ನೋದಿ ಟಿಪ್ಪಣಿ ಸಿದ್ಧಗೊಳಿಸಿ, ಪ್ರೊ ಡ್ರೂ ಅವರೊಂದಿಗೆ ವಿಚಾರ ವಿನಿಮಯ ಮಾಡುವುದು. ಹ್ಯಾರಿಸ್‌ರವರ ಸಲಹೆಯಂತೆ ಅಸ್ಪೃಶ್ಯತೆಯ ಮೇಲಣ ಕಾದಂಬರಿಯ ರೂಪು ರೇಷೆ ಸಿದ್ಧಗೊಳಿಸುವುದು. ಇವುಗಳ ಜತೆಗೆ ತನ್ನ ಭಾರತೀಯ ತಾಯಿಯ ತಪ್ಪೋಲೆಗಳನ್ನು (proofs) ತಿದ್ದುವುದು.

ಈ ಚಕ್ರಗತಿಗೆ ಸಿಕ್ಕಿದ ನಾರಾಯಣಸ್ವಾಮಿಗೆ ಬಿಡುವೇ ದೊರೆಯುತ್ತಿರಲಿಲ್ಲ. ಊರಿಗೆ ಕಾಗದ ಬರೆಯಬೇಕೆಂದುಕೊಂಡು ಅದನ್ನು ಮುಂದಕ್ಕೆ ತಳ್ಳುತ್ತಾ ಬಂದಿದ್ದ

ಊರಿನ ಸ್ಥಿತಿಗತಿಯ ನೆನಪು ಬಂದೊಡನೆಯೇ ನಾರಾಯಣಸ್ವಾಮಿಯ ಮನಸ್ಸು ವ್ಯಥೆಗೀಡಾಗುತ್ತಿತ್ತು.

'ಅಜ್ಜಿ ವಯೋವೃದ್ಧೆ !

ತಂದೆ ದುರ್ಬಲರು !

ಮನೆಯ ಸಮಸ್ತ ಜವಾಬ್ದಾರಿ ಕಮಲನದು ! '

ಊರು ಬಿಟ್ಟು ದೂರ ಸಹಸ್ರಾರು ಮೈಲಿಗಳಾಚೆ ಬಂದಮೇಲೆ ನಾರಾಯಣಸ್ವಾಮಿಯ ದೃಷ್ಟಿ ತಿಳಿಯಾಗುತ್ತಾ ಬಂದಿತ್ತು. ಅವನ ಹೃದಯದಲ್ಲಿ ತಾಯಿ ರುಕ್ಮಿಣಮ್ಮ ನಾಟಿದ್ದ ದಿವ್ಯ ಜೀವನದ ಬೀಜ ಕುಡಿಯೊಡೆದಿತ್ತು. ಅದಕ್ಕೆ ಪರೋಕ್ಷವಾಗಿ ಜಾನ್ ಡ್ರೂ ನೀರೆರೆದು ಪೋಷಿಸಿದ್ದರು.

' ನಾನು ಮನೆಯ ಹಿರಿಯ ಮಗ.

ಮನೆಯ ಜವಾಬ್ದಾರಿ ನಾನು ಹೊರಬೇಕಾಗಿತ್ತು. '

ಎಂಬ ಯೋಚನೆ ಹೊಳೆದೊಡನೆಯೇ ನಾರಾಯಣಸ್ವಾಮಿಯ ಮನಸ್ಸು ಮತ್ತಷ್ಟು ವ್ಯಗ್ರವಾಗುತ್ತಿತ್ತು.

ಹ್ಯಾರಿಸ್ ಕೊಟ್ಟಿದ್ದ ಚೆಕ್ಕಿನ ಹಣ ಬ್ಯಾಂಕಿನಲ್ಲಿ ಬಿದ್ದಿತ್ತು.

ಊರಿಗೆ ಹಣ ಕಳಿಸಬೇಕೆಂದುಕೊಂಡಿದ್ದವನು ಕಾರಣಾಂತರಗಳಿಂದ ಆ ಯೋಚನೆಯನ್ನು ಕಾರ್ಯೋನ್ಮುಖಮಾಡಿರಲಿಲ್ಲ

' ಪುಸ್ತಕದ ಜತೆ ಹಣ ಕಳಿಸಿಕೊಡಬೇಕು.

ಮಗ ತೀರ ನಿಷ್ಪ್ರಯೋಜಕನಲ್ಲವೆಂಬ ಭಾವನೆ ತಂದೆಯವರ ಮನಸ್ಸಿಗೆ ಬರುತ್ತದೆ '

' ಭಾರತೀಯ ತಾಯಿ 'ಯ ಮುದ್ರಣದ ಕೆಲಸ ಭರದಿಂದ ಸಾಗಿದ್ದರೂ ಅದು ಪ್ರಕಟವಾಗಲು ಇನ್ನೂ ಒಂದು ತಿಂಗಳು ಬೇಕಾಗಿತ್ತು.

ಊರಿಗೆ ಹಣ ಕಳಿಸಲು ತಡಮಾಡುವುದು ಯೋಗ್ಯವಲ್ಲವೆಂದುಕೊಂಡು ನಾರಾಯಣಸ್ವಾಮಿ ಡಾ. ಚಂದ್ರಶೇಖರವರನ್ನು ಕಾಣಲು ಹೋದ

ಡಾಕ್ಟರ ವ್ಯಾಸಂಗಕೋಣೆಯಲ್ಲಿಯೇ ಕುಳಿತು ತಂದೆಗೆ ಕಾಗದ ಬರೆದ. ಲಂಡನ್ನಿಗೆ ನಾರಾಯಣಸ್ವಾಮಿ ಬಂದಮೇಲೆ ತಂದೆಗೆ ಬರೆಯುತ್ತಿದ್ದುದು ಇದೇ ಮೊದಲು

ಒಂದು ಗಂಟೆ ಕುಳಿತು ಯೋಚಿಸಿ ನಾಲ್ಕಾರು ಹಾಳೆಗಳನ್ನು ಹರಿದುಹಾಕಿ ಕೊನೆಗೆ ಬಹು ಪ್ರಯಾಸದಿಂದ ಕಾಗದ ಮುಗಿಸಿದ.

**" ತೀರ್ಥರೂಪರವರ ಚರಣ ಸನ್ನಿಧಿಗೆ--ಬಾಲಕ ನಾರಾಯಣಸ್ವಾಮಿಯ ಅನಂತ ನಮಸ್ಕಾರಗಳು ,**

**ಈವರೆಗೆ ನಾನು ನಿಮಗೆ ಕಾಗದ ಬರೆಯದೆ ತಪ್ಪುಮಾಡಿದ್ದೇನೆ. ನನ್ನ ತಪ್ಪುಗಳು ಸಂಖ್ಯೆಗಳವಡುವಂತಿದ್ದರೆ ಕ್ಷಮೆ ಬೇಡಬಹುದಾಗಿತ್ತು.**

**ಕರ್ತವ್ಯವಿಮುಖನಾಗಿ ನಾನು ಊರುಬಿಟ್ಟುಬಂದುದು ಅನುಚಿತವಾಯಿತೆಂಬ ಭಾವನೆ ನನ್ನ ಮನಸ್ಸಿಗೆ ಹಲವು ಬಾರಿ ಹೊಳೆಯಿತು. ಆದರೆ**

ನಾನು ಹಾಗೆ ಮಾಡಿದುದೇ ಒಳ್ಳೆಯದಾಯಿತೇನೋ ಎಂದು ಈಗ ಅನಿಸುತ್ತದೆ.

ಭಾರತದಲ್ಲಿರುವವರೆಗೆ ಭಾರತ ನನಗರ್ಥವಾಗಲಿಲ್ಲ !

ನನ್ನ ತಾಯಿದೇವಿಯು ನಿತ್ಯಚೇತನ ಸದಾ ನನ್ನನ್ನು ಪೋಷಿಸಿ ಕಾಪಾಡುತ್ತಿದೆ. ಕಾರ್ಗತ್ತಲೆ ತುಂಬಿ ಮನಸ್ಸು ಅಶಾಂತವಾದಾಗ ಆ ಬೆಳಕು ಬಿತ್ತರಿಸಿ, ನನಗೆ ಶಾಂತಿ, ತುಷ್ಟಿ, ಪುಷ್ಟಿಗಳನ್ನೊದಗಿಸುತ್ತಿದೆ.

ಮನೆಯಲ್ಲಿರುವವರೆಗೆ ಮನೆ - ಮನೆಯ ಮಂದಿ ಅರ್ಥವಾಗಲಿಲ್ಲ ! ಸಾವಿರಾರು ಮೈಲಿಗಳಾಚೆ ಬಂದಮೇಲೆ ನನ್ನ ಕಣ್ಣು ತೆರೆಯುತ್ತಿದೆ.

ತನ್ನ ಜೀವನ ಸಾರ್ಥಕಪಡಿಸಿಕೊಳ್ಳಲು ನಿಮ್ಮ ಮಗ ಯತ್ನಿಸುತ್ತಿದ್ದಾನೆಂದು ನೀವು ನಂಬಬೇಕು. ಪಿ.ಎಚ್‌ಡಿ ಥೀಸಿಸ್ಸಿಗಾಗಿ ಪ್ರಯತ್ನಿಸುತ್ತಿದ್ದೇನೆ. ಘನ ವಿದ್ವಾಂಸರೂ ಉದಾತ್ತ ಜೀವಿಗಳೂ ಆದ ಪ್ರೊ. ಜಾನ್ ಡ್ರೂ ಅವರೇ ನನ್ನ ಗುರುಗಳು.

ಇಲ್ಲಿಗೆ ಬಂದಮೇಲೆ ನಾನು ಒಂದು ಗ್ರಂಥ ಬರೆದೆ. ಅದರಿಂದ ಬಂದ ಗೌರವಧನವನ್ನು ಇಂದೇ ಕಳಿಸಿದ್ದೇನೆ. ದಯೆಯಿಟ್ಟು ಸ್ವೀಕರಿಸಿ. ಮಾತೃಋಣ, ಪಿತೃಋಣ, ಗುರುಋಣ ತೀರಿಸಲು ಸಾಧ್ಯವಿಲ್ಲ— ಅವರ ದಿವ್ಯಾನುಭೂತಿಗನುಗುಣವಾಗಿ ಜೀವನ ರೂಪಿಸಿಕೊಳ್ಳುವುದೇ ಋಣ ಪರಿಹಾರದ ಮಾರ್ಗವೆಂಬುದು ನನಗ ಮಂದಟ್ಟಾಗಿದೆ.

ಅಜ್ಜಿ, ಕಮಲ, ಪದ್ಮಾ, ಶ್ರೀದೇವಿ ಎಲ್ಲರ ಯೋಗಕ್ಷೇಮಕ್ಕೆ ಬರೆಯಿರಿ. ನಿಮ್ಮ ಆರೋಗ್ಯ ಹೇಗಿದೆ—ಮತ್ತೆ ಪ್ರಾಕ್ಟೀಸ್ ಆರಂಭಿಸಿದಿರಾ ?

ನಿಮ್ಮ ಮಾರುತ್ತರ ಬಂದಮೇಲೆ ನಾನು ಮತ್ತೆ ವಿವರವಾಗಿ ಬರೆದು, ಇಲ್ಲಿನ ಎಲ್ಲ ವಿಷಯಗಳನ್ನು ನಿವೇದಿಸುತ್ತೇನೆ. ”

ಸ್ವಾಮಿ ಕೈಗಿತ್ತ ಕಾಗದ ನೋಡುತ್ತ ನೋಡುತ್ತಾ ಡಾ. ಚಂದ್ರಶೇಖರನವರ ಕಣ್ಣುಗಳಿಂದ ಹನಿಗಳು ಜಾರಿದವು.

“ ತಂದೆಯವರ ಮನಸ್ಸಿಗೆ ಕ್ಲೇಶವನ್ನುಂಟುಮಾಡುವ ಯಾವದಾದರೂ ವಿಷಯ ಸೇರಿಕೊಂಡಿದೆಯೇ ಡಾಕ್ಟರ್ ? ”

“ ಇಲ್ಲ ಸ್ವಾಮಿ - ಅಂತಃಕರಣಪೂರಿತ ನುಡಿಯೇ ಕಾವ್ಯವೆನ್ನುವುದನ್ನು ನಾವು ಒಪ್ಪಿಕೊಂಡರೆ ನಿಮ್ಮ ಕಾಗದ ಒಂದು ಮಹಾಕಾವ್ಯ.”

“ ನಿಮ್ಮನ್ನು ಜತೆ ನಾನು ಸ್ಪರ್ಧೆಗೆ ನಿಲ್ಲುವುದಿಲ್ಲ ಡಾಕ್. ”

“ ಪದ್ಯರೂಪವಾಗಿ ಬರೆದರೆ ಮಾತ್ರವೇ ಕಾವ್ಯವಲ್ಲ – ಗದ್ಯ

ಬರವಣಿಗೆಯೂ ಕಾವ್ಯವಾಗುತ್ತದೆ "

"ನನಗೊಂದು ಉಪಕಾರಮಾಡಿ ಡಾಕ್."

"ಆಗಲಿಹೇಳಿ."

"ಹ್ಯಾರಿಸ್ ಕೊಟ್ಟಿರುವ ಹಣದಲ್ಲಿ ಮೂವತ್ತು ಸಾವಿರ ನನ್ನ ತಂದೆಯವರ ಹೆಸರಿಗೆ ಕಳಿಸಿಕೊಡಿ "

"ಆಗಬಹುದು."

"ಹತ್ತು ಸಾವಿರ ನೀವು ಸೊಸೈಟಿಗಾಗಿ ಸ್ವೀಕರಿಸಬೇಕು."

"ಈಗ ಸೊಸೈಟಿಗೆ ನಿಮ್ಮ ಹಣದ ಅಗತ್ಯವಿಲ್ಲ "

"ಸೊಸೈಟಿಯಲ್ಲಿ ನನ್ನ ತಾಯಿಯ ಸ್ಮಾರಕಾರ್ಥವಾಗಿ ಒಂದು ಬ್ಲಾಕ್ (Block) ಸ್ಥಾಪನೆಯಾಗಬೇಕೆಂದು ನಾನು ಆಶಿಸುತ್ತೇನೆ. ಅದಕ್ಕೆ ಹತ್ತು ಸಾವಿರ ರೂಪಾಯಿ ಮೊದಲನೆಯ ಕಂತು "

"ಹಣದ ವಿನಿಯೋಗದ ಬಗ್ಗೆ ನಿಮ್ಮ ಸೌಭಾಗ್ಯವತಿಯರ ಸಲಹೆ ಕೇಳಿದಿರಾ?"

"ಕೇಳಿದೆ. ಅವರಿಗೆ ಹಣದ ಆವಶ್ಯಕತೆಯಿಲ್ಲ "

"ಉಳಿದ ಏಳುಸಾವಿರದ ಇನ್ನೂರೈವತ್ತು ರೂಪಾಯಿಗಳು..."

"ನನ್ನ ಆಪದ್ಧನ."

"ಹಾಗೆಂದರೇನು ?"

"ಈಗ ನಾನು ನನ್ನ ಹೆಂಡತಿ, ಮಾವನ ಕೃಪಾಶ್ರಯದಲ್ಲಿದ್ದೇನೆ. ಹೀಗೇ ನನ್ನ ಜೀವಮಾನ ನಡೆಸುವುದಕ್ಕೆ ಇಚ್ಛಿಸುವುದಿಲ್ಲ. ಸ್ವತಂತ್ರವಾಗಿ ಜೀವಿಸಬೇಕೆಂಬ ಆಸೆ ನನಗೂ ಇದೆ."

"ನಾನೊಂದು ಸೂಕ್ಷ್ಮವಿಷಯ ಪ್ರಸ್ತಾಪಿಸಲೇ ?"

"ಹೇಳಿ."

"ನಿಮ್ಮ ಸಂಸಾರಕ್ಕೆ ಸಂಬಂಧಪಟ್ಟದ್ದು."

"ನೀವೂ ನನ್ನ ಸಂಸಾರಕ್ಕೆ ಸೇರಿದವರು."

"ನಿಮ್ಮ ಸೌಭಾಗ್ಯವತಿ ಅಸಂತುಷ್ಟರಾಗಿದ್ದಾರೆಯೇ ?"

"ಇಲ್ಲ. ಲಕ್ಷ್ಮೀಪುತ್ರಿಯಾದ ಇಂದುಮತಿ ಬಡವನ ಕೈ ಹಿಡಿದಿದ್ದಾಳೆ. ನನ್ನ ಪರಿಸ್ಥಿತಿಗೆ – ಅಭಿರುಚಿಗೆ ಹೊಂದಿಕೊಳ್ಳುವುದು

ಅವಳಿಗೆ ಪ್ರಯಾಸಕರವಾಗಿದೆ. ಆದರೆ ಇಂದಲ್ಲ – ನಾಳೆ ಇಂದುಮತಿ ತನ್ನ ಪೂರ್ವಗ್ರಹಗಳನ್ನು ಬಿಸುಡಬಲ್ಲಳೆಂಬ ನಂಬಿಕೆ ನನಗಿದೆ. "

"ಬಹಳ ಸಂತೋಷ. ನಿಮ್ಮಿಬ್ಬರ ಜೀವನ ತೊಡಕಾಗಬಾರದೆಂಬುದೇ ನನ್ನ ಆಶಯ."

ಎಂದು ಚಂದ್ರಶೇಖರ್ ಹೇಳಿದರೂ ಅವರ ಮನಸ್ಸಿನ ಅಳುಕು ನಿವಾರಣೆಯಾಗಲಿಲ್ಲ

ಇಂದುಮತಿಯು ಸಹಜ ರಾಗ, ರುಚಿಗೆ ಮೃದುಲಾ ಪೋಷಣೆಯನ್ನಿತ್ತಿದ್ದಳು. ಶ್ರೀಮಂತರ ಕ್ಲಬ್ಬು, ಪಾರ್ಟಿ ಜೀವನದಲ್ಲಿ ಬೆರೆತಿದ್ದ ಮೃದುಲಾ ಇಂದುಮತಿಗೆ ಅದರ ಸಮಗ್ರ ಪರಿಚಯಮಾಡಿಕೊಟ್ಟಿದ್ದಳು. ಲೇಡಿ ಫಾಕ್ಸರ ಸೆಲಾನಿನಲ್ಲಿ (salon) ಅವರಿಗೆ ಲಂಡನ್ನಿನ ಶ್ರೀಮಂತ ಮಹಿಳೆಯರ ಸ್ನೇಹವಾಯಿತು ಅವರ ಆಹ್ವಾನಗಳನ್ನಂಗೀಕರಿಸುವುದು, ಅವರಿಗೆ ಪ್ರತಿ ಆಹ್ವಾನ ನೀಡಿ ಆದರಿಸುವುದರಲ್ಲಿಯೇ ಇಬ್ಬರಿಗೂ, ನಿರರ್ಗಳವಾಗಿ ಹೊತ್ತು ಕಳೆಯುತ್ತಿತ್ತು.

ನಾರಾಯಣಸ್ವಾಮಿಯು ಕಷ್ಟಸುಖ ವಿಚಾರಿಸಿಕೊಳ್ಳುವುದಕ್ಕೂ ಇಂದುಮತಿಗೆ ಪುರಸತ್ತಿರಲಿಲ್ಲ. ಅವಳು ಬೆಳಿಗ್ಗೆ ಏಳುವವೇಳೆಗೆ ಅವನು ಲೈಬ್ರರಿಗೆ ಹೋಗುತ್ತಿದ್ದ. ಅವನು ಹಿಂದಿರುಗುವ ವೇಳೆಗೆ ಅವಳು ಹೊರಗೆ ಹೋಗಿರುತ್ತಿದ್ದಳು ಪತಿಪತ್ನಿಯರ ಭೇಟಿ ದಿನ ಕ್ರೋಸ್ಮ್ರ ಆಗುವುದೇ ಕಷ್ಟವಾಯಿತು

ಒಂದು ದಿನ ಇಂದುಮತಿ ಹೊರಗೆ ಹೊರಡಲನುವಾಗುತ್ತ ಮನೆಯಲ್ಲಿದ್ದ ನಾರಾಯಣಸ್ವಾಮಿಗೆ

"ನಿಮ್ಮ ಥೀಸಿಸ್ ಕೆಲಸ ಹೇಗೆ ಮುಂದುವರಿದಿದೆ"

ಎಂದು ಕೇಳಿದಳು.

"ಕ್ರಮವಾಗಿ ನಡೆದಿದೆ. ಟಿಪ್ಪಣಿಗಳನ್ನು ಸಿದ್ಧಗೊಳಿಸುವ ಕೆಲಸ ಮುಗಿದಿದೆ. ಅವುಗಳನ್ನು ಕ್ರೋಢೀಕರಿಸಬೇಕಾಗಿದೆ."

"ಬಹಳ ಸಂತೋಷ."

"ಹೊರಗೆ ಹೊರಟಿರುವೆಯಾ ಇಂದೂ ?"

"ಹೂ – ಇವತ್ತು ಮಿಸೆಸ್ ಚೇಸ್ ಮನೆಯಲ್ಲಿ ಚಹಾಕ್ಕೆ

ಕರೆದಿದ್ದಾರೆ ”

“ ಹೋಗಲೇಬೇಕೇ ? ”

“ ಅವರ ಮನೆಯ ಆಹ್ವಾನಕ್ಕೆ ಲಂಡನ್ನಿಗೆ ಲಂಡನ್ನೇ ಹಾತೊರೆಯುತ್ತದೆ ”

“ ನಮ್ಮ ಜೀವನ ಹಾಲು ಸಕ್ಕರೆಯಂತೆ ಬೆರೆಯುತ್ತದೆ ಎಂದಿದ್ದೆ.”

“ ಈಗ ಹೇಗೆ ಬೆರೆತಿವೆ ? ”

“ ನೀನೇ ಹೇಳು ”

“ ನಿಮಗೂ ಬಿಡುವಿಲ್ಲ.”

“ ಬೇಕೆಂತಲೇ ಬಿಡುವು ಮಾಡಿಕೊಳ್ಳುವುದಿಲ್ಲ ”

“ ಏಕೆ ? ”

“ ನಾನು ಬಿಡುವು ಮಾಡಿಕೊಂಡರೇನು ಪ್ರಯೋಜನ – ನಿನ್ನ ಚಟುವಟಿಕೆಗಳು ನಿನಗೆ ಬಿಡುವು ಕೊಡಬೇಕಲ್ಲ.”

“ ನೀವು ವ್ಯಂಗ್ಯವಾಗಿ ಮಾತನಾಡುತ್ತಿರುವಿರಿ ? ”

“ ಇಲ್ಲ – ಇದ್ದುದನ್ನು ಇದ್ದಂತೆ ಹೇಳಿದೆ.”

“ ದಯುಯಿಟ್ಟು ನನಗೊಂದು ಉಪಕಾರ ಮಾಡಿ ”

“ ಏನು ಹೇಳು.”

“ ಸಿಕ್ಕಸಿಕ್ಕವರೊಂದಿಗೆ ಸ್ನೇಹ ಬೆಳೆಸಬೇಡಿ. ನಮ್ಮ ಅಂತಸ್ತಿಗಿದು ತಕ್ಕುದಲ್ಲ.”

“ ನನಗೆ ಅಂತಸ್ತೇ ಇಲ್ಲ. ”

“ ನನ್ನ ಅಂತಸ್ತು ನಿಮ್ಮದೂ ಅಲ್ಲವೇ ? ”

“ಅಂತಸ್ತಿಗೆ ನಾವು ಕೊಡುವ ಅರ್ಥಗಳಲ್ಲಿ ವಿಶೇಷ ವ್ಯತ್ಯಾಸ ಇದೆ ”

“ ಏನಿಲ್ಲ-ಅಂತಸ್ತು ಅಂತಸ್ತೇ! ಲೇಡಿ ಫಾಕ್ಸರ ಸ್ಥಾನಮಾನ ಫ್ಲೋರಾಗೆ ಸಿಕ್ಕಬೇಕೆಂದರೆ ಹೇಗೆ ಸಾಧ್ಯ ? ”

“ ನಿಜ. ಫ್ಲೋರಾ ಆ ಸ್ಥಾನಮಾನ ಬಯಸುವುದೂ ಇಲ್ಲ. ನಿನ್ನ ಕಣ್ಣಲ್ಲಿ ಲೇಡಿ ಫಾಕ್ಸ್ ದೊಡ್ಡವರು. ಅವರಲ್ಲಿ ಅಪಾರ ಹಣವಿದೆ-

ಅರಮನೆಯಂಥ ಬಂಗಲೆಯಿದೆ ನೂರಾರು ಸೇವಕರಿದ್ದಾರೆ. ಒಂದು ಅಂಗಡಿ ತೆಗೆಯುವಷ್ಟು ಮೋಟಾರು ಕಾರುಗಳಿವೆ. ಫ್ಲೋರಾ ಅವರಿಗೆ ಒಂದೂ ಇಲ್ಲ. ನಿತ್ಯ ಜೀವನ ನಡೆಯುವುದೇ ಅವರಿಗೊಂದು ಸಮಸ್ಯೆಯಾಗಿದೆ. ಆದರೆ ಇವತ್ತಿನ ಇಂಗ್ಲೆಂಡ್ ಬದುಕಿರುವುದು ಲೇಡಿ ಫಾಕ್ಸರಂಥ ಮಹಿಳೆಯರಿಂದಲ್ಲ, ಫ್ಲೋರಾ ಅವರಂಥ ಸಾಮಾನ್ಯ ವರ್ಗದ ಹೆಣ್ಣುಮಕ್ಕಳಿಂದ!"

ಇಂದುಮತಿ ಮುಖ ಕೆಂಪಗೆ ಮಾಡಿಕೊಂಡು

"ವಾದ ಸಾಕು ಮಾಡೋಣ. ನನಗೂ ಹೊತ್ತಾಯಿತು." ಎಂದವಳೇ ಅಲ್ಲಿ ನಿಲ್ಲದೆ ಹೊರಟು ಹೋದಳು.

ಅಪ್ರತಿಭನಾದ ನಾರಾಯಣಸ್ವಾಮಿ ಕ್ಷಣಕಾಲ ಸುಮ್ಮನೆ ಕುಳಿತ.

ಮುಂಬಯಿಯ ದಿನಗಳು—

ಇಂದುವನ್ನು ಕಂಡದ್ದು—

ಅವಳನ್ನು ಪ್ರೀತಿಸಿ, ಮದುವೆಯಾದುದು—

ಅವಳಿಗಾಗಿ ಎಲ್ಲರನ್ನೂ ತೊರೆದು ಮುಂಬಯಿಯಲ್ಲಿ ನೆಲಸಿದ್ದು-

ರುಗ್ಣಶಯ್ಯೆಯಲ್ಲಿದ್ದ ತಾಯಿಯನ್ನು ನೋಡಲು ಕೂಡ ತಾನು ಹೋಗದಿದ್ದುದು—

ಈಗ ಇಂದುವಿನ ಜತೆಯಲ್ಲಿ ಲಂಡನ್ನಿನಲ್ಲಿರುವುದು - ಎಲ್ಲವನ್ನೂ ಸ್ಮರಿಸಿಕೊಂಡ.

ಅಲ್ಲಕಲ್ಲೋಲವಾಗಿದ್ದ ಮನಸ್ಸನ್ನು ಸ್ಥಿಮಿತಕ್ಕೆ ತಂದುಕೊಳ್ಳಲು ಅವನು ಸಿಮ್ಮನ್ಸನ ಅಪೂರ್ಣ ಮಹಾಕಾವ್ಯ 'ಯೂನಿವರ್ಸ-ವೈಹೋಪ್' ಹಸ್ತಪ್ರತಿಯನ್ನು ತೆಗೆದು ಓದಲಾರಂಭಿಸಿದ.

ಕಾವ್ಯದ ರಸಗಂಗೆಯಲ್ಲಿ ಮಿಂದ ನಾರಾಯಣಸ್ವಾಮಿ ಲೋಕದ ಸಮಸ್ತ ಜಂಜಡವನ್ನು ಮರೆತ - ಸಿಮ್ಮನ್ಸನ ಕಾವ್ಯ ಅವನನ್ನು ಬೇರೊಂದು ಲೋಕಕ್ಕೆ ಕರೆದುಕೊಂಡು ಹೋಯಿತು.

ಮರಕತಂ ಇದ್ದಕ್ಕಿದ್ದಂತೆ ತನ್ನ ಬಗ್ಗೆ ದೃಷ್ಟಿ ಬದಲಾಯಿಸಿ ದುದನ್ನು ಕಂಡು ಕಮಲನಿಗೆ ಆಶ್ಚರ್ಯವಾಯಿತು ಈ ವಿಷಯ ಶಾಮಲಾ, ರಾಜಲಕ್ಷ್ಮಿಯರಲ್ಲಿ ಚರ್ಚಿಸುವುದಕ್ಕೂ ಅವಳ ಮನಸ್ಸು ಒಡಂಬಡಲಿಲ್ಲ ಇವರಿಗೆ ವಿಷಯ ತಿಳಿದರೆ ಮರಕತಂ, ಡೈಸಿಯ ಗುಂಪಿಗೆ ತನ್ನನ್ನೂ ಸೇರಿಸುತ್ತಾರೆಂದು ಕಮಲನಿಗೆ ಚನ್ನಾಗಿ ಗೊತ್ತಿತ್ತು.

ಮರಕತಂ ಅವರಿಂದ ದಿನಕ್ಕೊಮ್ಮೆಯಾದರೂ ಕಮಲಳಿಗೆ ' ಬುಲಾವ್ ' ಬರುತ್ತಿತ್ತು. ಆಫೀಸ್ ರೂಮಿನಲ್ಲಿ ಇತರ ಅತಿಥಿಗಳಿದ್ದರೂ ಲೆಕ್ಕಿಸದೆ ಮರಕತಂ, ಕಮಲನನ್ನು ಒಳಗೆ ಬರಮಾಡಿಕೊಂಡು ಮಾತನಾಡಿಸಿ ಕಳುಹಿಸುತ್ತಿದ್ದಳು. ಈ ಮಾನಸಿಕ ಪರಿವರ್ತನೆಯ ಕಾರಣ ಕಮಲನಿಗೆ ತಿಳಿಯಲಿಲ್ಲ.

ಒಂದು ದಿನ ಪ್ರಿನ್ಸಿಪಾಲರ ಕರೆ ಬರಲು ಕಮಲ ಆಫೀಸ್ ರೂಮಿಗೆ ಬಂದಳು. ಒಬ್ಬ ಅಪರಿಚಿತ ವ್ಯಕ್ತಿ ಕುಳಿತಿದ್ದವನ್ನು ಕಂಡು ಅವಳು ಹಿಮ್ಮೆಟ್ಟಲು ಮರಕತಂ

" ಪರವಾಗಿಲ್ಲ ಒಳಕ್ಕೆ ಬನ್ನಿ ಕಮಲಮ್ಮ – ಇವರು ನಮ್ಮ ಡಿ.ಇ ಓ (D.E O - District Educational Officer) ಸಾಹೇಬರು, ಮಿ. ರಾಬರ್ಟ್ ಮನೋಹರಾಜ್. ಇವರು ಮಿಸಸ್. ಕಮಲಮ್ಮ ಕಾಲೇಜಿನ ಅಧ್ಯಾಪಿಕೆಯರು, ಇವರ ವಿಷಯವೇ ನಾನು ನಿಮಗೆ ಹೇಳಿದ್ದು – ಕಮಲಮ್ಮ ಅತ್ಯಂತ ದಕ್ಷರು. ಕೆಲಸದ ವಿಷಯದಲ್ಲಿ ಇವರಷ್ಟು ಶ್ರದ್ಧೆ ವಹಿಸುವವರು ನಮ್ಮ ಕಾಲೇಜಿನಲ್ಲಿ ಯಾರೂ ಇಲ್ಲ."

ತನ್ನ ವಿಷಯ ಮನೋಹರಾಜರಲ್ಲಿ ಪ್ರಿನ್ಸಿಪಾಲರು ಏನು ಹೇಳಿರ

ಬಹುದೆಂದು ಕಮಲಮ್ಮ ವಿಚಾರಮಾಡುತ್ತಿರುವಲ್ಲಿ

"ನಿಮ್ಮ ವಿಷಯ ನಾನು ವೈಸ್ ಛಾನ್ಸಲರ್ ಸಾಹೇಬರಲ್ಲಿ ಮಾತನಾಡುತ್ತೇನೆ. ನಿಮಗೆ ಆನರ್ಸ್ ಆಗಿದೆಯೇ ?" ಎಂದರು.

"ಇಲ್ಲ ಸಾರ್ – ನಾನು ಬರೀ ಆರ್ಟ್ಸ್ ಗ್ರ್ಯಾಜುಯೇಟ್."

"ಚಿಂತೆಯಿಲ್ಲ – ಪ್ರತಿನಿಯಮಕ್ಕೂ ಪ್ರತಿಷೇಧವಿದ್ದೇ ಇದೆ – ವೈಸ್ ಛಾನ್ಸಲರ್ ಸಾಹೇಬರು ಪ್ರಾಯಶಃ ನನ್ನ ಮಾತು ತೆಗೆದು ಹಾಕುವುದಿಲ್ಲ"

ಮರಕತಂ ಮಂದಹಾಸ ಬೀರುತ್ತ

"ಡಿ ಇ.ಓ ಸಾಹೇಬರಿಗೂ ವೈಸ್ ಛಾನ್ಸಲರಿಗೂ ಪರಮ ಸ್ನೇಹ. ಈಗ ಕೆಲವು ಲೆಕ್ಚರರನ್ನು ಅಸಿಸ್ಟೆಂಟ್ ಪ್ರೊಫೆಸರುಗಳನ್ನಾಗಿ ನಿಯಾಮಕ ಮಾಡುತ್ತಾರಂತೆ. ನಿಮ್ಮ ಹೆಸರು ಸೂಚಿಸಿ ಸಹಾಯಮಾಡಬೇಕೆಂದು ನಾನು ಡಿ.ಇ.ಓ ಸಾಹೇಬರನ್ನು ಕೇಳಿಕೊಂಡೆ. ದೊಡ್ಡ ಮನಸ್ಸುಮಾಡಿ ಅವರೂ ಒಪ್ಪಿಕೊಂಡಿದ್ದಾರೆ"

"ತುಂಬ ವಂದನೆಗಳು ಮ್ಯಾಡಾಂ – ತಮಗೂ ತುಂಬ ಥ್ಯಾಂಕ್ಸ್ ಸರ್"

ಎಂದು ಹೇಳಿ ಕಮಲ ಮೇಲಕ್ಕೆದ್ದಳು.

ಯಾವುದೋ ಅವ್ಯಕ್ತ ಭಯ ಕಮಲನ ಹೃದಯವನ್ನಾಕ್ರಮಿಸಿತು.

'ಮರಕತಂ ಇದ್ದಕ್ಕಿದ್ದಂತೆ ನನಗಿಂಥ ಉಪಕಾರ್ಯಮಾಡಲು ಮನಸ್ಸು ಮಾಡಿರುವುದೇಕೆ' ಎನ್ನುವ ಸಮಸ್ಯೆ ಅವಳನ್ನು ಒಂದೇ ಸಮನಾಗಿ ಕಾಡಲಾರಂಭಿಸಿತು.

ಐದು ದಿನಗಳ ತರುವಾಯ ಕಮಲಳನ್ನು ಆಫೀಸ್ ರೂಮಿಗೆ ಬರಮಾಡಿಕೊಂಡ ಮರಕತಂ

"ನಾಳೆ ಶನಿವಾರ - ಹೇಗೂ ಕಾಲೇಜಿಲ್ಲ – ನಿಮಗೆ ಪುರಸತ್ತಿದೆಯೇ ಕಮಲಮ್ಮ ?"

"ಏಕೆ ಮ್ಯಾಡಾಂ ?"

"ಸಂಜೆ ಐದು ಗಂಟೆಗೆ ನಮ್ಮ ಮನೆಗೆ ಟೀಗೆ ಬರುವುದಕ್ಕಾಗುತ್ತದೆಯೇ ?"

" ಶನಿವಾರ, ಭಾನುವಾರ ಎರಡೇ ದಿನ ನನಗೆ ಸ್ವಲ್ಪ ಬಿಡುವು ದೊರೆಯುವುದು. ಆ ದಿನಗಳಾದರೂ ಮಕ್ಕಳ ಜತೆ ಇರಬೇಕೆಂದು ಆಸೆ."

" ಐದು ಗಂಟೆಗೆ ಬನ್ನಿ – ಬೇಗ ಹೊರಟುಬಿಡುವಿರಂತೆ ! "

" ನಿಮ್ಮ ಮನೆಯಲ್ಲೇನಾದರೂ ವಿಶೇಷವೇ ? "

" ಹೂ – ಬನ್ನಿ, ನಿಮಗೇ ಗೊತ್ತಾಗುತ್ತದೆ."

ಪ್ರಿನ್ಸಿಪಾಲರ ಆಹ್ವಾನ ಅಂಗೀಕರಿಸುವ ಮನಸ್ಸಿಲ್ಲದಿದ್ದರೂ ಕಮಲ ಅಂಗೀಕರಿಸಬೇಕಾಯಿತು.

" ಇನ್ನೊಂದು ವಿಷಯ – ನಿಮ್ಮ ಸಹಾಧ್ಯಾಪಿಕೆಯರ ಹತ್ತಿರ ಈ ವಿಷಯ ಪ್ರಸ್ತಾಪಿಸಬೇಡಿ.'

" ಅವರು ಯಾರೂ ಬರುವುದಿಲ್ಲವೇ ? "

" ಇಲ್ಲ – ಅವರನ್ನು ಮತ್ತೊಂದು ದಿನ ಕರೆಯುತ್ತೇನೆ – ಐದು ಗಂಟೆ ಜ್ಞಾಪಕವಿರಲಿ."

ಕಮಲ ನಿರ್ವಾಹವಿಲ್ಲದೆ ಆಗಲೆಂದು ಒಪ್ಪಿಕೊಂಡಳು.

ಕಮಲನ ಜೀವದಲ್ಲಿ ಜೀವವಿಲ್ಲದಂತಾಯಿತು.

' ನಾನೆಂಥ ಅವಿವೇಕ ಮಾಡಿದೆ. ಬರುವುದಿಲ್ಲವೆಂದಿದ್ದರೆ, ಅವರೇನು ಪ್ರಾಣ ತೆಗೆಯುತ್ತಿದ್ದರ? ಈಗೇನು ಮಾಡುವುದು ' ಎಂದು ಒಂದೇ ಸಮನಾಗಿ ಕೊರಗಿದಳು.

ಗಡಿಯಾರ ಐದರ ಸಮಯಕ್ಕೆ ಬಂದಂತೆಲ್ಲಾ ಕಮಲನ ಎದೆ ಹೊಡೆದುಕೊಳ್ಳಲಾರಂಭಿಸಿತು.

ಕಮಲನಿಗೆ ದಿಕ್ಕೇ ತೋಚದಂತಾಯಿತು. ಕೊನೆಗೆ 'ಗೋದಜ್ಜಿಯನ್ನು ಒಂದು ಮಾತು ಕೇಳುವುದು. ಅವಳು ಹೋಗು ಎಂದರೆ ಹೋಗುವುದು. ಬೇಡ ಎಂದರೆ ಬಿಟ್ಟುಬಿಡುವುದು.', ಎಂದು ನಿರ್ಧರಿಸಿ ಅಜ್ಜಿ ಇದ್ದಲ್ಲಿಗೆ ಬಂದು ಕುಳಿತು

" ಅಜ್ಜೀ ..."

" ಏನು ಕಮಲಾ ? "

" ನಾನೊಂದು ವಿಷಯ ಕೇಳಬೇಕಾಗಿದೆ ಬಂದೆ. "

" ಹೇಳು "

" ಒಂದು ಧರ್ಮಸಂಕಟಕ್ಕೆ ಸಿಕ್ಕುಹಾಕಿಕೊಂಡಿದ್ದೇನೆ ಏನು ಮಾಡಲಿ ? "

ಎಂದು ತನ್ನ ಮನಸ್ಸನ್ನು ಕೊರೆಯುತ್ತಿದ್ದ ಸಂದೇಹವನ್ನು ಹೊರಗೆಡವಿದಳು.

" ಅವರು ನಿನ್ನ ಕಾಲೇಜಿನ ಮುಖ್ಯಸ್ಥೆಯಲ್ಲವೆ ? "

" ಹೌದಜ್ಜಿ – ಅದೇ ಬಂದಿರುವುದು ಗ್ರಹಚಾರ. "

" ನಿನಗವರು ಉಪಕಾರ ಮಾಡಬೇಕೆಂದಿರುವರಲ್ಲವೇ ? "

" ಹಾಗೆ ಹೇಳಿದರು "

" ನಿನಗೆ ಸಹಾಯಮಾಡಲು ಭಗವಂತ ಅವರಿಗೆ ಪ್ರೇರೇಪಣೆಯ ನ್ನುಂಟುಮಾಡಿರಬಹುದು !"

" ಆಕೆಯ ಚಾಳಿ ಚೆನ್ನಿಲ್ಲವೆಂದು ಕೇಳಿದ್ದೇನೆ "

" ಒಪ್ಪಿಕೊಂಡು ನೀನು ಹೋಗದಿರುವುದು ಅಲೌಕಿಕ ಅವರ ನ್ನೇಕೆ ವಿನಾಕಾರಣ ನೀನು ಶತ್ರುಗಳನ್ನಾಗಿ ಮಾಡಿಕೊಳ್ಳಬೇಕು "

" . .... . ..... . . .. "

" ಹಾಗಾದರೆ ಹೋಗಿ ಬಾ. ನೀನು ಧರ್ಮದಲ್ಲಿ ನಂಬಿಕೆಯುಳ್ಳ ವಳು. ಒಳ್ಳೆಯ ತಾಯಿ ಹೆತ್ತ ಮಗಳು – ಯಾವ ಕೀಳು ವಿಲೋಭನೆಯೂ ನಿನ್ನ ಧೃತಿಗೆಡಿಸಲಾರದು–ರುಕ್ಮೋ ಸದಾ ನಿಮ್ಮನ್ನು ಕಾಯುತ್ತಿರುತ್ತಾಳೆಂಬುದನ್ನೇಕೆ ಮರೆಯುವೆ ? "

" ಅಜ್ಜೀ – ನಮ್ಮಲ್ಲಿ ನಿನಗೆಷ್ಟು ನಂಬಿಕೆಯಿದೆ ! "

ಅಜ್ಜಿಯ ಮಾತಿನಿಂದ ಹುರುಪುಗೊಂಡ ಕಮಲ ಪ್ರಿನ್ಸಿಪಾಲರ ಮನೆಗೆ ಹೋಗಲು ನಿರ್ಧರಿಸಿದಳು.

' ಪ್ರಿನ್ಸಿಪಾಲರ ಮನೆಗೆ ಯಾರು ಯಾರು ಬಂದಿರುತ್ತಾರೋ ಏನೊ ' ಎಂದುಕೊಂಡೇ ಅವರ ಮನೆ ಕಾಂಪೌಂಡ್ ಪ್ರವೇಶಿಸಿದ ಕಮಲನಿಗೆ ಆಶ್ಚರ್ಯವಾಯಿತು.

ಕಾಲಿಂಗ್ ಬೆಲ್ (calling bell) ಧ್ವನಿ ಕೇಳಿ ಹೊರಬಂದ ಆಯಾ ಕಮಲನನ್ನು ಒಳಗೆ ಕರೆದೊಯ್ದು ಹಜಾರದಲ್ಲಿ ಕುಳ್ಳಿರಿಸಿದಳು.

ಕಮಲ ಆಯಾನನ್ನು

" ಅಮ್ಮಾನರೆಲ್ಲಿ ? " ಎಂದು ಕೇಳಿದಳು

" ಬರುತ್ತಾರೆ ಡ್ರೆಸ್ ಮಾಡಿಕೊಳ್ಳುತ್ತಿದ್ದಾರೆ." ಎಂದವಳು ಉತ್ತರಿಸಿದಳು.

ಕಮಲ ಸುತ್ತಲೂ ದೃಷ್ಟಿ ಬೀರಿ ಗೋಡೆಗಳ ಮೇಲಿದ್ದ ಚಿತ್ರಗಳನ್ನು ಗಮನಿಸಿದಳು. ಮರಕತಂ ಸೇವೆ ಮಾಡಿದ ಸ್ಕೂಲು ಕಾಲೇಜುಗಳಲ್ಲಿ ನಡೆದ ಸಮಾರಂಭಗಳ ಸಮಗ್ರ ವೃತ್ತಾಂತದ ಕೈಪಿಡಿಯಂತಿದ್ದ ಗ್ರೂಪ್ ಫೋಟೋಗಳು ಭಿತ್ತಿಭೂಷಣವಾಗಿದ್ದವು. ಬಾಗಿಲುವಾಡಗಳ ಮೇಲುಭಾಗವನ್ನು ಯೇಸು ಸ್ವಾಮಿ, ಮೇರಿಯಮ್ಮ ಇವರ ಚಿತ್ರಗಳು ಅಲಂಕರಿಸಿದ್ದವು. ಕಮಲನ ಹಿಂಬದಿಗಿದ್ದ ಬಾಗಿಲುವಾಡದ ಮೇಲೆ ಮರಕತಂ ಅವರ ದೊಡ್ಡ ಭಾವಚಿತ್ರ

ಹಜಾರದಲ್ಲಿದ್ದ ಹಳೆಯ ಸೋಫಾಗಳನ್ನು ನವಿಲು, ಗಿಣಿ, ಬಂಗಲೆ, ಬೈಸಿಕಲ್ಲು, ನಾಯಿ, ಆಕಳುಗಳ ನಕಾಸೆಯನ್ನೊಳಗೊಂಡ ತೆರೆಗಳಲಂಕರಿಸಿದ್ದವು.

ಗೋಡೆಯ ಮೇಲಿದ್ದ ದೊಡ್ಡ ಗಡಿಯಾರ ಸತತವಾಗಿ ಟಿಕ್ – ಟಿಕ್ ಶಬ್ದ ಮಾಡುತ್ತಿತ್ತು. ಅದರ ಶಬ್ದದೊಂದಿಗೆ ಮೇಳವಿಸಿ ಕಮಲನ ಎದೆ ಡವಡವಗುಟ್ಟುತ್ತಿತ್ತು.

ತನ್ನ ಅಧೀರತೆಗೆ ಬೇಸರಪಟ್ಟುಕೊಳ್ಳುತ್ತಾ

' ಏತಕ್ಕೆ ನಾನು ಹೆದರಬೇಕು. ಮರಕತಂ ಪ್ರಿನ್ಸಿಪಾಲರಾಗಿರಬಹುದು. ಅವರೇನು ಕರಡಿಯೇ – ಹುಲಿಯೇ ? ನಾನು ಯಾವ ತಪ್ಪೂ ಮಾಡಿಲ್ಲ – ಯಾರಿಗೂ ಭಯಪಡಬೇಕಾದ ಕಾರಣವಿಲ್ಲ.' ಎಂದುಕೊಂಡಳು.

ಹೃದಯದ ಅಳುಕು ಮಾತ್ರ ಪೂರ್ಣವಾಗಿ ನಿವೃತ್ತಿಯಾಗಲಿಲ್ಲ.

' ಡ್ರೆಸ್ ' ಮಾಡಿಕೊಂಡು, ಮುಖಕ್ಕೆ ಪಾಂಡ್ಸ್ 'ನ್ಯಾಚುರಲ್ ಕಲರ್ (Natural color) ' ಲೇಪಿಸಿಕೊಂಡು, ನಗೆಯ ಹೊನಲನ್ನೇ ಹರಿಸುತ್ತಾ ಮರಕತಂ ಹೊರಬಿದ್ದು

" ಕ್ಷಮಿಸಿ – ನಿಮ್ಮನ್ನು ಕಾಯಿಸಿಬಿಟ್ಟೆ " ಎಂದರು.

" ಚಿಂತೆಯಿಲ್ಲ ಮ್ಯಾಡಾಂ."

" ಬಂದು ಬಹಳ ಹೊತ್ತಾಯಿತೇ ? "

" ಹದಿನೈದು ನಿಮಿಷಗಳಾಗಿರಬಹುದು."

" ಅತಿಥಿಗಳು ಯಾರೂ ಕಾಣಲಿಲ್ಲ ! "

" ನಾನು ಬಹಳ ಜನಗಳನ್ನು ಕರೆದಿಲ್ಲ. ಒಳಕ್ಕೇ ಬನ್ನಿ."

ಎಂದು ಒಳಕ್ಕೆ ತಮ್ಮ ಭೋಜನ ಗೃಹಕ್ಕೆ ಕರೆದೊಯ್ದು ಹೂವು ಹಣ್ಣುಗಳಿಂದ ಅಲಂಕೃತವಾಗಿದ್ದ ಮೇಜಿನ ಮುಂದೆ ಕುಳ್ಳಿರಿಸಿದರು.

ಆಯಾ ತಿಂಡಿಯ ಸಾಮಾನುಗಳ ತಟ್ಟೆಗಳನ್ನು ಒಂದೊಂದಾಗಿ ತಂದಿಟ್ಟಳು.

ಮರಕತಂ ಆಯಾಳನ್ನು ನೋಡಿ

" ಕಸಿನ್ (cousin) ಅವರನ್ನು ಬರಮಾಡು." ಎಂದರು.

ಆಯಾ ಹೊರಗೆ ಹೋದ ಎರಡು ಮೂರು ನಿಮಿಷಗಳಲ್ಲಿ ಮನೋರಾಜ್ ಬಂದು ಕಮಲನಿಗೆ 'ಗುಡ್ ಈವನಿಂಗ್' ಹೇಳಿ, ಅವಳ ಪಕ್ಕದಲ್ಲಿದ್ದ ಕುರ್ಚಿಯ ಮೇಲೆ ಕುಳಿತರು.

" ಮಿ. ಮನೋರಾಜ್ ನಮ್ಮ ಮನೆಯ ಸ್ನೇಹಿತರು. ನನಗೆ ದೂರದ ಕಸಿನ್ನೂ ಆಗಬೇಕು."

ಕತ್ತು ತಗ್ಗಿಸಿ ದಿಙ್ಮೂಢಳಾಗಿ ಕುಳಿತಿದ್ದ ಕಮಲನ ಸಮೀಪಕ್ಕೆ ತಮ್ಮ ಕುರ್ಚಿ ಎಳೆದುಕೊಂಡು ಮರಕತಂ

" ತಿಂಡಿ ತೆಗೆದುಕೊಳ್ಳಿ ಕಮಲಮ್ಮ ."

ಎಂದು ನಸುನಗುತ್ತಾ

" ಹೆದರಬೇಡಿ – ಎಲ್ಲವೂ ಶಾಕಾಹಾರಗಳೇ ! ಗುಂಡಪ್ಪನವರ ಹೋಟೇಲಿನಿಂದಲೇ ತರಿಸಿದ್ದೇನೆ."

ಎಂದು ಖಾರದವಲಕ್ಕಿಯ ತಟ್ಟೆಯನ್ನು ಕಮಲನ ಮುಂದೆ ಹಿಡಿದರು.

ಕಮಲ ಮೂರು ಬೆರಳಲ್ಲಿ ಅವಲಕ್ಕಿ ತೆಗೆದುಕೊಂಡು ಕುರುಕುತ್ತ ಕುಳಿತಳು.

" ಹಮೀದಾ, ಜಯಗೌರಿ ಈಗ ಕ್ಲಾಸಿನಲ್ಲಿ ಗಲಾಟೆ ಮಾಡು

ತ್ತಾರೆಯೋ ? "

" ಇಲ್ಲ ಮ್ಯಾಡಾಂ ನೀವು ಅವರಿಗೆ ಬುದ್ಧಿ ಹೇಳಿದಂತೆ ತೋರುತ್ತದೆ "

" ಕಾಲೇಜಿನಿಂದ ಡಿಸ್‌ಮಿಸ್ ಮಾಡಿಬಿಡುವುದಾಗಿ ಬೆದರಿಸಿದೆ."

ಪಕೋಡಾ ಕಬಳಿಸುತ್ತಾ ಕುಳಿತಿದ್ದ ಮನೋರಾಜ್ ಮೆಲ್ಲನೆ ಕಮಲಳಿಗೆ

' ನಿಮ್ಮ ಯಜಮಾನರೂ ಕಾಲೇಜ್ ಲೆಕ್ಚರರಾಗಿದ್ದರಂತೆ ! " ಎಂದರು.

' ಇವರ ಬಾಯಲ್ಲಿ ಏತಕ್ಕೆ ನನ್ನ ಪತಿಯ ಸುದ್ದಿ ' ಎಂದು ಕೊಂಡು ಕಮಲ

" ಹೌದು " ಎಂದಷ್ಟೇ ಹೇಳಿದಳು

" ನಿಮಗೊದಗಿದ ದುಃಖ ಕೇಳಿ ಬಹಳ ವಿಷಾದವಾಯಿತು."

' .. ... . . . . . . . "

" ಮನೆಯ ಜವಾಬ್ದಾರಿಯೆಲ್ಲಾ ನಿಮ್ಮ ಮೇಲೆ ಬಿದ್ದಿದೆಯಂತೆ ! ವಯೋವೃದ್ಧ ಅಜ್ಜಿಯನ್ನೂ ಅಶಕ್ತ ತಂದೆಯನ್ನೂ ನೀವೇ ನಾಕ ಬೇಕಾಗಿದೆಯಂತೆ ! "

ಕಮಲ ತುಸು ಬೇಸರದಿಂದ

" ನಮ್ಮ ಮನೆಯ ವಿಷಯವೆಲ್ಲಾ ನಿಮಗೆ ತಿಳಿದಿದೆ."

" ಹೌದು. ಮಿಸ್ ಮರಕತಂ ಹೇಳಿದರು. ನೀವು ಯಾವ ಸಮ್ಮೋಹನಾಸ್ತ್ರ ಬೀರುವಿರೋ, ಮಿಸ್ ಮರಕತಂ ಅವರಿಗೆ ನಿಮ್ಮನ್ನು ಕಂಡರೆ ಪಂಚಪ್ರಾಣ."

" ಅವರ ವಿಶ್ವಾಸಕ್ಕೆ ನಾನು ಋಣಿಯಾಗಿದ್ದೇನೆ."

" ತಿಂಡಿ ತೆಗೆದುಕೊಳ್ಳಿ ಕಮಲಾ. ಸುಮ್ಮನೆ ಕುಳಿತುಬಿಟ್ಟಿರಲ್ಲ." ಎಂದು ಮರಕತಂ ಉಪಚರಿಸಿದರು

" ಇವೇ ಊಟ ಮಾಡಿ ಬಂದೆ ಮ್ಯಾಡಾಂ – ಹಸಿವಿಲ್ಲ."

" ಚಿಂತೆಯಿಲ್ಲ. ಸ್ವಲ್ಪ ತೆಗೆದುಕೊಳ್ಳಿ ವಿಮೂರ್ತಿ ಬಹಳ ಚೆನ್ನಾಗಿದೆ – ಒಂದು ಸ್ವೀಕರಿಸಬಹುದಲ್ಲ."

ಮನೋರಾಜ್ ಥಟ್ಟನೆ ವಿಮೂರ್ತಿಯ ಪ್ಲೇಟನ್ನು ಕಮಲನ ಮುಂದೆ ಹಿಡಿದರು

ಕಮಲ ಒಂದು ವಿಮೂರ್ತಿಯನ್ನೆತ್ತಿಕೊಂಡು ಕುರುಕುತ್ತ ಕುಳಿತಳು

ಮನೋರಾಜ್ ಪಿರಮಿಡ್(Pyramid) ಕರವಸ್ತ್ರದಿಂದ ಕೈ ಒರಸಿಕೊಳ್ಳುತ್ತಾ

" ನೀವು ಪುನರ್ವಿವಾಹದ ಬಗ್ಗೆ ಯೋಚಿಸಲಿಲ್ಲವೇ ? "

" ಇಲ್ಲ — ನಮ್ಮ ಜನರಲ್ಲಿ ಪುನರ್ವಿವಾಹವಾಗುವ ಪದ್ಧತಿಯಿಲ್ಲ."

" ಇದು ರೂಕ್ಷ ಸಂಪ್ರದಾಯ."

ಮರಕತಂ ಆಯಾ ಹೆಸರು ಹಿಡಿದು ಕೂಗುತ್ತಾ ಒಳಗೆದ್ದು ಹೋದರು.

" ಮಿಸಸ್ ಕಮಲಾ ನಿಮ್ಮನ್ನು ಅಸಿಸ್ಟೆಂಟ್ ಪ್ರೊಫೆಸರ್ ಮಾಡುವ ಜವಾಬ್ದಾರಿ ನನಗಿರಲಿ. "

"....... . ....... "

" ಈ ವಿಷಯ ನಾನೀಗಾಗಲೇ ವೈಸ್ ಛಾನ್ಸರಲ್ಲಿ ಮಾತನಾಡಿದ್ದೇನೆ. "

" .. .... . . . . . ."

" ಇದಕ್ಕೆ ನೀವು ಸ್ವಲ್ಪ ಪ್ರಯತ್ನಮಾಡಬೇಕು. "

ಕಮಲ ಕತ್ತೆತ್ತಿ ಮನೋರಾಜರನ್ನು ದಿಟ್ಟಿಸಿನೋಡುತ್ತ

" ಏನು ಪ್ರಯತ್ನಮಾಡಬೇಕು. "

" ಉಪಕಾರಮಾಡುವವರಿಗೆ ನೀವು ಕೃತಜ್ಞತೆ ತೋರಿಸಬೇಕು. "

ಮನಸ್ಸಿನಲ್ಲಿ ಆತ್ಮರಕ್ಷಣೆಯ ಸಿದ್ಧತೆಮಾಡಿಕೊಂಡ ಕಮಲ ದಿಟ್ಟತನದಿಂದ

" ನಿಮ್ಮ ಮಾತು ನನಗೆ ಅರ್ಥವಾಗಲಿಲ್ಲ. "

" ಆಗಿದೆ ಮೈ ಡಿಯರ್ (my dear) "

ಎಂದು ಮನೋರಾಜ್ ಕಮಲನ ಕೈಹಿಡಿಯಲೆತ್ನಿಸಲು ಕಮಲ

ತನ್ನ ಕುರ್ಚಿಯನ್ನು ಹಿಂದಕ್ಕೆ ಸರಿಸಿ ಎದ್ದು ನಿಂತಳು.

ಮನೋರಾಜರೂ ಕುರ್ಚಿಯನ್ನು ಸರಿಸಿ ಎದ್ದು ನಿಂತು ಕಮಲನ ಕೈಹಿಡಿಯಲೆತ್ನಿಸಿದರು

ಕಮಲ ಕೈಕೊಸರಿಕೊಂಡು ಫಟೀರನೆ ಮನೋರಾಜರ ಕಪಾಳಕ್ಕೆ ಬಿಗಿದಳು

ಆ ಹೊತ್ತಿಗೆ ಸರಿಯಾಗಿ ಮರಕತಂ ಹೊರಬೀಳಲು ಕಮಲ

"ಬಹಳ ಉಪಕಾರಮಾಡಿದಿರಿ ಮ್ಯಾಡಾಂ - ನಿಮ್ಮ ಪಾರ್ಟಿ ಇಷ್ಟು ಸಂತೋಷಕರವಾಗಿರುತ್ತದೆಂದು ನಾನು ಭಾವಿಸಲಿಲ್ಲ" ಎಂದಳು.

"ಕಮಲಾ - ಮಿಸಸ್ ಕಮಲಾ!"

"ಮ್ಯಾಡಾಂ - ನಾನು ಹೊಟ್ಟೆಯಪಾಡಿಗಾಗಿ, ಅಜ್ಜಿ, ತಂದೆ, ಮಕ್ಕಳಿಗಾಗಿ ಇಂದು ಜೀತಮಾಡುತ್ತಿದ್ದೇನೆ ನನ್ನ ಮಾನ ಮಾರಿಕೊಂಡು ಜೀವನಮಾಡಬೇಕಾದ ಕಾಲ ಬಂದರೆ, ಅವರೆಲ್ಲರಿಗೂ ವಿಷಕೊಟ್ಟು, ನಾನೂ ವಿಷಕುಡಿದು ಸಾಯುತ್ತೇನಲ್ಲದೆ ಕುಲಟೆಯ ಬಾಳು ಬಾಳುವುದಿಲ್ಲ ಕಣ್ಣಿಗೆ ಬಣ್ಣದ ಗಾಜುಗಳನ್ನು ಕಟ್ಟಿಕೊಂಡು ಲೋಕವೆಲ್ಲಾ ನಿಮ್ಮಂತೆಯೇ ಪಾಪದ ಪಂಕದಲ್ಲಿ ಬಿದ್ದಿದೆಯೆಂದೇಕೆ ಭಾವಿಸುವಿರಿ ಜಗತ್ತೆಲ್ಲಾ ನಿಮ್ಮ ಮಾರ್ಗ ಅನುಸರಿಸಿದರೆ ಒಂದೇ ಒಂದು ದಿನ ಉಳಿಯಲು ಶಕ್ಯವೇ?"

ಎಂದು ಹೇಳಿ ಹೊರಟುಬಿಟ್ಟಳು.

ಮರಕತಂ ಅವರ ಉದ್ಗಾರ ಅವಳ ಕಿವಿಗಳನ್ನು ಮುಟ್ಟಲಿಲ್ಲ.

ಕಮಲನ ಗಂಟಲುವರೆಗೆ ದುಃಖ ಉಕ್ಕಿ ಬಂದಿತ್ತು.

ಮನೆಗೆ ಬಂದವಳೇ ಗೋದಮ್ಮನವರಿಗೆ ಎಲ್ಲವನ್ನೂ ನಿರೂಪಿಸಿ ಅವರ ತೊಡೆಯಮೇಲೆ ಮುಖವಿಟ್ಟು ಮಕ್ಕಳಂತೆ ಅತ್ತುಬಿಟ್ಟಳು.

೨೦

‘ ತಂದೆಗೆ ಈ ವಿಷಯ ತಿಳಿಸಬೇಕೇ ಬೇಡವೆ ’ ಎಂದು ಕಮಲ ದೀರ್ಘವಾಗಿ ಯೋಚಿಸಿದಳು. ಈ ಬಗ್ಗೆ ಖಚಿತ ನಿರ್ಧಾರಕ್ಕೆ ಬರುವುದು ಅವಳಿಗೆ ದುಸ್ಸಾಧ್ಯವಾಯಿತು

“ ಮಾಧುಗೆ ಹೇಳುವುದೊಳ್ಳೆಯದು ಕಮಲ. ಎಷ್ಟಾದರೂ ಅವನು ಮನೆಯ ಯಜಮಾನ. ಮುಂದೇನು ಮಾಡಬೇಕೆನ್ನುವುದನ್ನು ಅವನೇ ನಿರ್ಧರಿಸಲಿ. ”

“ ಈ ಹೊಲಸು ಕಥೆಯನ್ನು ಅಣ್ಣನಿಗೆ ನಾನು ಹೇಗೆ ಹೇಳಲಿ ಅಜ್ಜಿ ? ”

“ ಅವನು ನಿನ್ನ ವಿಷಯ ತಪ್ಪು ತಿಳಿದುಕೊಳ್ಳುತ್ತಾನೆಂದು ಭಯವೇ ? ”

“ ಹಾಗೇನಿಲ್ಲ. ಅಣ್ಣ ನನ್ನನ್ನು ತಪ್ಪು ತಿಳಿದುಕೊಂಡರೆ ಈ ಭೂಮಿಯ ಮೇಲೆ ಕ್ಷಣಕಾಲ ನಾನು ಜೀವಿಸಿರುವುದಿಲ್ಲ. ”

“ ನೀನು ಹೇಳಬೇಡ ನಾನೇ ಹೇಳುತ್ತೇನೆ. ” ಎಂದರು.

ಭಾನುವಾರದ ಮಧ್ಯಾಹ್ನದ ಊಟ ಮುಗಿಯಿತು

ಮಕ್ಕಳು ಆಡಿಕೊಳ್ಳುತ್ತಿದ್ದರು.

ಸಾವಿತ್ರಮ್ಮ ಅಡಿಗೆಯ ಮನೆಯ ಹರದ ತೆಗೆದಿಡುತ್ತಿದ್ದಳು.

ಮಾಧವರಾಯ ಊಟಾನಂತರ ವಿಶ್ರಾಂತಿ ಮುಗಿಸಿ, ಎದ್ದು ಕುಳಿತು ‘ ಹಿಂದೂ ’ ಪತ್ರಿಕೆಯ ವಾರಾಂತ್ಯದ ಪುರವಣಿ ಓದುತ್ತ ಕುಳಿತ್ತಿದ್ದ.

ಗೋದಮ್ಮ ಮಾಧವರಾಯನನ್ನು ಹೊರಗೆ ಕರೆದುಕೊಂಡು ಹೋದರು. ಕಮಲನೂ ಅವರನ್ನು ಹಿಂಬಾಲಿಸಿದಳು.

" ಏನಮ್ಮ ? " ಎಂದು ಮಾಧವರಾಯ ಕೇಳಿದ.

" ಕಮಲನ ವಿಷಯ ನಿನ್ನಲ್ಲಿ ಮಾತನಾಡಬೇಕಾಗಿತ್ತು "

" ಹೇಳು "

ಗೋದಮ್ಮನವರು ನಿರೂಪಿಸಿದುದನ್ನು ಕೇಳಿ ಮಾಧವರಾಯ ರೋಷಕಷಾಯಿತನಾಗಿ

" ಆ ಪ್ರಿನ್ಸಿಪಾಲಿಗೆ ಡಿಸ್‌ಮಿಸ್ ಮಾಡಿಸುತ್ತೇನೆ. ಎಲ್ಲಿ ಯಾದರೂ ಇಂಥ ಅನ್ಯಾಯವುಂಟೇ ? ಇವೇನು ಕಾಲೇಜುಗಳೋ ವ್ಯಭಿಚಾರ ಗೃಹಗಳೋ ? "

ಎಂದು ಕೆರಳಿದ.

" ಸುಮ್ಮನೆ ರೇಗಿಬಿದ್ದರೆ ಪ್ರಯೋಜನವಿಲ್ಲ ಮಾಧು. ಮುಂದೆ ಏನು ಮಾಡಬೇಕೆನ್ನುವುದನ್ನು ಶಾಂತವಾಗಿ ಆಲೋಚಿಸಬೇಕು. "

" ಕೆಲಸವೂ ಬೇಡ, ಕಾರ್ಯವೂ ಬೇಡ. ಕಮಲ ಮನೆಯಲ್ಲಿ ಇರಲಮ್ಮ. ನಾನು ಪ್ರ್ಯಾಕ್ಟೀಸ್ ಆರಂಭಿಸುತ್ತೇನೆ. ದೇವರು ಅಷ್ಟೋ ಇಷ್ಟೋ ಕೊಟ್ಟೇ ಕೊಡುತ್ತಾನೆ. ಮರ್ಯಾದೆಯಿಲ್ಲದ ಸ್ಥಳದಲ್ಲಿ ಕಮಲ ಒಂದು ಗಳಿಗೆಯೂ ನಿಲ್ಲುವುದು ಬೇಡ. "

" ನಿಜ, ಆದರೆ ಕಮಲ ಈಗ ಕೆಲಸ ಬಿಡುವುದು ಸೂಕ್ತವಲ್ಲ "

" ಏಕೆ ? "

" ಅವಳ ಮೇಲೆ ತಪ್ಪು ಹೊರಿಸಿ ಮರಕತಂ ಇಲ್ಲಸಲ್ಲದ ಅಪ ಪ್ರಚಾರ ಮಾಡುವುದಕ್ಕೆ ಅವಕಾಶವಾಗುತ್ತದೆ. "

" ಹೌದಮ್ಮ ನೀನು ಹೇಳುವುದು ನ್ಯಾಯ. ಸದ್ಯಕ್ಕೆ ಕಮಲ ರಜಾ ತೆಗೆದುಕೊಳ್ಳಲಿ. ಮುಂದೇನು ಮಾಡಬೇಕೆನ್ನುವುದನ್ನು ಸಾವ ಕಾಶವಾಗಿ ಆಲೋಚಿಸೋಣ. "

" ಈಗ ರಜಾ ಕೊಡುವುದಿಲ್ಲಣ್ಣಾ. "

" ಹೇಗೆ ಕೊಡುವುದಿಲ್ಲ ನಾನು ನೋಡುತ್ತೇನೆ. ನಾಳೆ ನೀನು ರಜಾಕಾಗದ ಬರೆದುಕೊಡು ಕಮಲಾ, ನಾನೇ ಹೋಗಿ ಪ್ರಿನ್ಸಿಪಾಲ್

ಕಂಡು ಬರುತ್ತೇನೆ ”

“ ಅವಳ ಹತ್ತಿರ ನೀನು ವ್ಯಾಜ್ಯ ಕಾಯಬೇಡಪ್ಪಾ ! ”

“ ಇಲ್ಲ ಕಮಲಾ ವ್ಯಾಜ್ಯ ಕಾಯುವುದಿಲ್ಲ. ನೀನು ಧೈರ್ಯ ವಾಗಿರು. ”

ಎಂದು ಮಾಧವರಾಯ ಧೈರ್ಯ ಹೇಳಿದ

ಮಾರನೆಯ ದಿನ ಆಫೀಸ್ ರೂಮಿನಲ್ಲಿ ಟಪಾಲ್ ನೋಡುತ್ತ ಕುಳಿತಿದ್ದ ಮರಕತಂ ಮಾಧವರಾಯನ ಭೆಟ್ಟಿಯ ಚೀಟಿ (Visiting Card) ನೋಡಿ ‘ ಯಾರಿನಿರು ’ ಎಂದುಕೊಂಡು, ಒಳಗೆ ಕರೆಯಲು ಸೇವಕಿಗೆ ಅಪ್ಪಣೆ ಮಾಡಿದರು

ಮಾಧವರಾಯ ಒಳಗೆ ಬಂದು ಕುಳಿತಮೇಲೆ

“ ಐದು ನಿಮಿಷ ಕೂಡಿ ಮಿ ಮಾಧವರಾವ್ ಟಪಾಲ್ ಮುಗಿಸಿಬಿಡುತ್ತೇನೆ. ”

ಮಾಧವರಾಯ ಅವರನ್ನೇ ಎವೆಯಿಕ್ಕದೆ ನೋಡಿ ‘ ಎಷ್ಟು ಇವಳ ದಿಮಾಕು ’ ಎಂದುಕೊಂಡ

ಮರಕತಂ ಟಪಾಲ್ ನೋಡಿದ್ದು ಮುಗಿಸಿ, ಕಾಗದವನ್ನು ಟ್ರೇಯಲ್ಲಿ ಹಾಕಿ, ಬೆಲ್ ಮಾಡಿ ಸೇವಕಿಯನ್ನು ಬರಮಾಡಿಕೊಂಡು

“ ಕ್ಲಾರ್ಕಿಗೆ ಕೊಡು ” ಎಂದು ಮಾಧವರಾಯನ ಕಡೆ ತಿರುಗಿ

“ ನನ್ನಿಂದ ಏನಾಗಬೇಕಾಗಿತ್ತು ” ಎಂದರು.

ಮಾಧವರಾಯ ಮಾತನಾಡದೆ ಕಮಲನ ರಜಾಕಾಗದವನ್ನು ಮರಕತಂ ಕೈಯಲ್ಲಿಟ್ಟ. ಪ್ರಿನ್ಸಿಪಾಲ್ ಅದನ್ನು ಸಾವಕಾಶವಾಗಿ ಓದಿಕೊಂಡು

“ ಇಷ್ಟು ದೀರ್ಘಕಾಲದ ರಜಾ ಏಕೆ ? ಕಮಲಮ್ಮನವರಿಗೆ ಮೈಯಲ್ಲಿ ಆರೋಗ್ಯವಿಲ್ಲವೇ ? ”

“ ನಿನ್ನೆಯಿಂದ ಮನಸ್ಸಿಗೆ ಆರೋಗ್ಯವಿಲ್ಲ. ”

“ ಪಾಪ ಪಾಪ ! ಏನಾಗಿದೆಯೋ ? ”

“ ಈ ನಟನೆಯಿಂದ ಏನೂ ಪ್ರಯೋಜನವಿಲ್ಲ ಮ್ಯಾಡಾಂ. ರಜಾ ಕೊಡುವುದಕ್ಕೆ ಸಮ್ಮತಿಸಿ ನನ್ನನ್ನು ಕಳುಹಿಸಿಕೊಡಿ. ”

" ಕಾಲೇಜಿನ ಯಜಮಾನಿಕೆ ನನಗೆ ಸೇರಿದ್ದು ವಿ. ಮಾಧವ ರಾವ್ – ತಮಗೆ ಸೇರಿದ್ದಲ್ಲ. ರಜಾ ಕೊಡುವುದೂ ಬಿಡುವುದೂ ನನ್ನ ಇಷ್ಟ "

" ಕಾಲೇಜಿನ ಯಜಮಾನಿಕೆ ವಿಶ್ವವಿದ್ಯಾನಿಲಯಕ್ಕೆ ಸೇರಿದ್ದೆಂಬುದನ್ನೂ ಮರೆಯಬೇಡಿ ನೀವು ರಜಾ ನಿರಾಕರಿಸುವುದಾದರೆ ನಾನು ವೈಸ್ ಛಾನ್ಸರಲ್ಲಿಗೆ ಹೋಗಿ ನಿಮ್ಮ ಕಲ್ಯಾಣಗುಣ ಬಣ್ಣಿಸ ಬೇಕಾಗುತ್ತದೆ. "

" ಇದು ಶುದ್ಧ ಮೋಸ – ನೀವು ನನ್ನನ್ನು ಬ್ಲ್ಯಾಕ್‌ಮೇಲ್ (Black-mail) ಮಾಡಲೆತ್ನಿಸುತ್ತಿರುವಿರಾ ? "

' ಬ್ಲ್ಯಾಕ್‌ಮೇಲೂ ಇಲ್ಲ ವೈಟ್‌ಮೇಲೂ ಇಲ್ಲ – ಕಮಲಳಿಗೆ ರಜಾ ಬೇಕು ಕೊಡಿ "

" ಕೊಡುವುದಿಲ್ಲನೆಂದರೆ.. . ? "

' ಸರಿ "

ಎಂದು ಮಾಧವರಾಯ ಮೇಲಕ್ಕೆದ್ದ.

ಮೇಜಿನ ಮೇಲಿದ್ದ ಮಾಧವರಾಯನ ಛತ್ರಿಯು ಚೀಟಿಯು ' ಪ್ಲೀಡರ್ ' ಶಬ್ದ ಪ್ರಿನ್ಸಿಪಾಲರನ್ನು ದಿಟ್ಟಿಸಿ ನೋಡಿತು

ಮರಕತಂ ಎದ್ದು ನಿಂತು ಸುಳ್ಳು ವಿನಯ ಪ್ರಕಟಿಸುತ್ತಾ

" ಕುಳಿತುಕೊಳ್ಳಿ ಸರ್ ಕೋಪಮಾಡಿಕೊಂಡರೇನು ಪ್ರಯೋಜನ. ನಿಮ್ಮ ಮಗಳಿಗೆ ನಾನು ಉಪಕಾರ ಮಾಡಲೆತ್ನಿಸಿದೆನೇ ವಿನಾ ಯಾವ ದ್ರೋಹವನ್ನೂ ಮಾಡಲಿಲ್ಲ. "

" ದ್ರೋಹ ಮಾಡಲಿಲ್ಲವೇ ? – ನಿಮ್ಮನ್ನು ನಂಬಿ ಬಂದ ಮಗುವಿನ ಮರ್ಯಾದೆ ಹಾಳುಮಾಡಲು ನೀವು ಪ್ರಯತ್ನಿಸಲಿಲ್ಲವೇ ? – ಯಾವನೋ ಚಂಡಾಲನಿಗೆ ಅವಳನ್ನೊಪ್ಪಿಸುವ ಸಾಹಸ ಮಾಡಲಿಲ್ಲವೇ ? "

" ಅವರು ಚಂಡಾಲರಲ್ಲ – ದೊಡ್ಡ ಅಧಿಕಾರಿಗಳು. "

" ಅವನ ಅಧಿಕಾರ ಇನ್ನೆಷ್ಟು ದಿವಸ ಇರುತ್ತದೆಂಬುದನ್ನು ವಿಚಾರಿಸಿಕೊಳ್ಳುತ್ತೇನೆ – ಮೊದಲು ರಜಾ ವಿಷಯ ಇತ್ಯರ್ಥವಾಗಲಿ."

" ನಿನ್ನೆ ನಮ್ಮ ಮನೆಯಲ್ಲಿ ನಡೆದುದಕ್ಕೆ ನಾನು ತುಂಬಾ ವಿಷಾದಿಸುತ್ತೇನೆ ಮಿ. ಮಾಧವರಾವ್. ಇದರಲ್ಲಿ ಖಂಡಿತ ನನ್ನ ಕೈವಾಡವಿರಲಿಲ್ಲ. ಮಿ ಮನೋರಾಜ್ ತಪ್ಪಿ ನಡೆದರೆಂಬುವನ್ನು ನಾನು ಒಪ್ಪಿಕೊಳ್ಳುತ್ತೇನೆ. ನೀವು ದೊಡ್ಡಮನಸ್ಸು ಮಾಡಿ ಈ ವಿಷಯ ಮರೆತುಬಿಡಿ. ಕಮಲಮ್ಮನವರಿಗೆ ರಜಾ ಮಂಜೂರು ಮಾಡುತ್ತೇನೆ."

" ನಿಮಗೆ ಮಕ್ಕಳು ಮರಿ ಇಲ್ಲವೇ ಪ್ರಿನ್ಸಿಪಾಲರೇ ? "

" . . . . "

" ಓಹೋ ! ಮರೆತಿದ್ದೆ. ನೀವು ಮಿಸ್ ಅಲ್ಲವೇ ? ನೋಡಿ ಮಿಸ್ ಮರಕತಂ ವಿಶ್ವವಿದ್ಯಾನಿಲಯದವರು ನಿಮ್ಮನ್ನು ಈ ಕಾಲೇಜಿನಲ್ಲಿಟ್ಟಿರುವುದು ಪ್ರಿನ್ಸಿಪಾಲ್ ಕೆಲಸಮಾಡುವುದಕ್ಕೇ ವಿನಾ ಕುಂಟಲಗಿತ್ತಿ ಕೆಲಸಮಾಡುವುದಕ್ಕಲ್ಲ – ಈ ದುಷ್ಟಹವ್ಯಾಸ ಇನ್ನು ಮೇಲಾದರೂ ಬಿಟ್ಟುಬಿಡಿ. ಪ್ರಪಂಚದಲ್ಲಿ ನಾಯಿ ನರಿಗಳು ಕೂಡ ಹೇಗೋ ಹೊಟ್ಟೆ ತುಂಬಿಕೊಳ್ಳುತ್ತವೆ. ಮನುಷ್ಯ ಹೊಟ್ಟೆ ತುಂಬಿಕೊಳ್ಳುವುದಕ್ಕ ಇಂಥ ಅಧೋಗತಿಗಿಳಿಯಬೇಕಾದದ್ದಿಲ್ಲ. "

ಎಂದವನೇ ಎದ್ದು ಹೊರಟು ಹೋದ.

ಕಡೆದ ಕಂಬದಂತೆ ನಿಂತಿದ್ದ ಮರಕತಂ ತುಟಿ, ಬಾಯಿ ಒಣಗಿ ಹೋಗಿತ್ತು !

ಮನೆಗೆ ಬಂದೊಡನೆಯೇ ಮಾಧವರಾಯ ಸಂತೋಷದಿಂದ ಮಗಳನ್ನು ಕರೆದು

" ನಿನಗೆ ರಜಾ ಸಿಕ್ಕಿತು ಕಮಲಾ. ರಜಾ ಮಂಜೂರ್ ಮಾಡುವುದಕ್ಕೆ ನಿನ್ನ ಪ್ರಿನ್ಸಿಪಾಲರು ಒಪ್ಪಿಕೊಂಡರು. "

" ವ್ಯಾಜ್ಯವಾಯಿತೇ ಅಣ್ಣಾ. "

" ವ್ಯಾಜ್ಯವೇಕೆ ? ಇನ್ನುಮೇಲಾದರೂ ಮರ್ಯಾದೆಯಾಗಿರು ಎಂದು ಹೇಳಿ ಬಂದೆ. "

" ರಜಾಕಾಲದಲ್ಲಿ ನನಗೆ ಸಂಬಳ ಬರುವುದಿಲ್ಲ. "

" ಸಂಬಳ ಬರದಿದ್ದರೆ ಪೀಡೆಯೇ ಕಳೆಯಿತು. ನೀನು ನಿಶ್ಚಿಂತಳಾಗಿರು. ಎಲ್ಲಾ ವಿಷಯ ನಾನು ನೋಡಿಕೊಳ್ಳುತ್ತೇನೆ. "

" ಅಣ್ಣಾ ಇನ್ನೊಂದು ಸಂತೋಷದ ಸುದ್ದಿ ? "

" ನಾಣಿ ಕಾಗದ ಬರೆದಿದ್ದಾನೆ ಪೋಸ್ಟ್‌ಮನ್ ನಿನ್ನ ವಿಳಾಸಕ್ಕೆ ದೊಡ್ಡ ರಿಜಿಸ್ಟರ್ ಏರ್‌ಮೇಲ್ ಕಾಗದ ತಂದಿದ್ದ ನೀನೇ ರುಜುಹಾಕಿ ತೆಗೆದುಕೊಳ್ಳೀಕಂತ "

" ನಾನು ಪೋಸ್ಟ್ ಆಫೀಸಿಗೆ ಹೋಗಿ ಬರಬೇಕಾಯಿತು "

" ಬೇಡ, ಪೋಸ್ಟ್‌ಮನ್ ಮತ್ತೆ ಬರುವುದಾಗಿ ಹೇಳಿದ್ದಾನೆ "

" ನಾಣಿ ಕಾಗದವೆಂದು ಹೇಗೆ ಗೊತ್ತು ? "

" ಕವರಿನ ಮೇಲೆ ಅವನ ಹೆಸರಿತ್ತು "

" ನಾಣಿಗೆ ಇನ್ನೂ ನಮ್ಮ ಜ್ಞಾಪಕವಿದೆಯಲ್ಲ ! "

" ಅವನಂದಿಗೂ ಮರೆಯುವುದಿಲ್ಲಣ್ಣ "

" ಎಲ್ಲರೂ ನಿನ್ನ ಹಾಗೇ ಇರುತ್ತಾರೆಯೇ ಕಮಲ "

ಮಾಧವರಾಯನ ಸ್ನಾನ, ಪೂಜೆ, ಊಟ ಮುಗಿಯುವ ವೇಳೆಗೆ ಪೋಸ್ಟ್‌ಮನ್ ರಿಜಿಸ್ಟರ್ ಕಾಗದ ತಂದಿತ್ತು

ಮಾಧವರಾಯ ಕಾಗದವನ್ನು ಒಡೆದು ಓದುತ್ತಾ ತನ್ನ ಕಣ್ಣನ್ನು ತಾನೇ ನಂಬದಾದ – ನಿಜವಾಗಿ ಇದು ನಾಣಿಯ ಕಾಗದವೇ ಎಂದು ಅನುಮಾನಿಸುತ್ತ ಕಮಲನನ್ನು ಕರೆದು ಅವಳ ಕೈಯಲ್ಲಿ ಕಾಗದವಿಟ್ಟು ಓದಿಸಿದ

ಮಾಧವರಾಯನ ಕಣ್ಣುಗಳಿಂದ ಆನಂದಬಾಷ್ಪ ಒಂದೇ ಸಮನಾಗಿ ಹರಿಯಿತು

" ಧರ್ಮಕ್ಕೆ ಯಾವಾಗಲೂ ಜಯವಿದೆ ಕಮಲಾ. ನಿಮ್ಮಜ್ಜಿಯನ್ನು ಕರೆ "

ಕಮಲ ಕರೆದುದಕ್ಕೆ ಅಲ್ಲಿಗೆ ಬಂದ ಗೋದಮ್ಮನವರಿಗೆ ಕಮಲನೇ ನಾರಾಯಣಸ್ವಾಮಿಯ ಕಾಗದ ಓದಿ

" ನಾಣಿ ಮೂವತ್ತು ಸಾವಿರ ರೂಪಾಯಿಗಳ ಡ್ರ್ಯಾಫ್ಟ್ (Draft) ಕಳಿಸಿದ್ದಾನಜ್ಜೀ " ಎಂದಳು.

" ನೋಡಿದೆಯಾ ಮಾಧು. "

" ನಿನ್ನ ಮಾತೇ ನಿಜವಾಯಿತಮ್ಮ "

“ ಈ ಹಣ ಏನುಮಾಡುತ್ತೀ ? ”

“ ನಾಣಿ ಹಣ ಅವನಿಗೆ ಕಾದಿಡುತ್ತೇನೆ ನನಗೆ ಅದರಿಂದ ಚಿಕ್ಕಾಸೂ ಬೇಡ ”

“ ಇದು ನನ್ನ ಹಣ–ಇದು ನಾಣಿ ಹಣ ಎಂದೇಕೆ ವ್ಯತ್ಯಾಸ ಮಾಡುತ್ತೀ. ”

“ ಮಕ್ಕಳಿಗೆ ನಾನಂತೂ ಆಸ್ತಿಮಾಡಲಿಲ್ಲ ಅವರು ಸಂಪಾದಿಸಿದುದನ್ನೂ ತಿಂದು ಮುಗಿಸಲೇ ? ”

“ ಈಗ ಈ ಹಣವನ್ನೇನು ಮಾಡುವೆ ? ”

“ ಏನು ಮಾಡಲಿ ನೀನೇ ಹೇಳು ”

“ ಕೈಯಲ್ಲಿ ಒಂದೆರಡು ಸಾವಿರ ರೂಪಾಯಿ ಇಟ್ಟುಕೊಂಡು, ಉಳಿದ ಹಣಕ್ಕೆ ಒಂದು ಮನೆ ಕೊಂಡುಬಿಡು. ”

“ ಹಾಗೇ ಆಗಲಿ ನಾನು ಸಂಜೆಗೇ ಈ ವಿಷಯ ಕೇಶವಮೂರ್ತಿಯಲ್ಲಿ ಪ್ರಸ್ತಾಪಿಸುತ್ತೇನೆ ” ಎಂದು ಹೇಳಿದ

ಗೋದಮ್ಮನವರು ಕಮಲನ ಕಡೆ ತಿರುಗಿ

“ ನನ್ನ ರುಕ್ಕು ಮಕ್ಕಳ ಯೋಗ್ಯತೆ ಎಷ್ಟು ದೊಡ್ಡದೆನ್ನುವುದು ಇನ್ನೂ ಮಾಧೂಗೆ ಅರ್ಥವಾಗಿಲ್ಲ ” ಎಂದರು.

ನಾರಾಯಣಸ್ವಾಮಿಯ ಕಾದಂಬರಿ **' ಭಾರತೀಯ ತಾಯಿ '** ಪ್ರಕಟವಾಯಿತು. ಗ್ರಂಥದಲ್ಲಿ ಪ್ರೊ. ಜಾನ್ ಡ್ರೊ ಅವರ ಮುನ್ನುಡಿ, ಡಾ. ಚಂದ್ರಶೇಖರರ ಪ್ರಸ್ತಾವನೆಯಿದ್ದುದಲ್ಲದೆ ರಕ್ಷಾಪುಟದ ಮೇಲೆ ನಾರಾಯಣಸ್ವಾಮಿಯ ಭಾವಚಿತ್ರ, ಸಂಕ್ಷೇಪ ಜೀವನಚರಿತ್ರೆಗಳೂ ಇದ್ದವು ಇಂಗ್ಲೆಂಡಿನ ಸುಪ್ರಸಿದ್ಧ ಸಾಹಿತಿಗಳಾದ ಜೆ.ಬಿ ಪ್ರೀಸ್ಟ್ಲೀ, ಮಿಸ್ ಎಥೆಲ್ ಮ್ಯಾನಿನ್, ಆಲ್ಡ್ಯುಅಸ್ ಹಕ್ಸ್ಲಿ, ಎಲ್. ಎ. ಜಿ. ಸ್ಟ್ರಾಂಗ್, ಮಿಸ್ ಕ್ಲಿಮೆಂನ್ಸ್ ಡೇನ್, ಸರ್ ಜಾನ್ ಸ್ಕ್ವೈರ್, ಮಿಡ್ಲ್‌ಟನ್ ಮರ್ರೀ ಮೊದಲಾದವರಿಗೆ ಪ್ರಕಾಶನದ ಪೂರ್ವವೇ ಪ್ರತಿಗಳನ್ನು ಕಳಿಸಿಕೊಟ್ಟು, ಅವರ ಅಭಿಪ್ರಾಯವನ್ನು ಪ್ರಕಾಶಕರು ರಕ್ಷಾಪುಟದ ಒಳಗಡೆ ಸಂಗ್ರಹಿಸಿದ್ದರು ನಾರಾಯಣಸ್ವಾಮಿಯ ಕೋರಿಕೆಯಂತೆ ಮಾಧವರಾಯರಿಗೂ, ನೇತ್ ಮಂಗಲದಾಸರಿಗೂ ಪ್ರತಿಗಳು ಕಳುಹಿಸಲ್ಪಟ್ಟಿದ್ದವು

ಪುಸ್ತಕ ಪ್ರಕಟವಾದ ದಿನ ಹ್ಯಾರಿಸ್‌ರವರನ್ನು ಕಾಣಹೋದ ನಾರಾಯಣಸ್ವಾಮಿಯನ್ನು ಅವರು ಆದರ ಪೂರ್ವಕವಾಗಿ ಸ್ವಾಗತಿಸಿ

" ಮಿ. ಸ್ವಾಮಿ ನಾವು ನಿರೀಕ್ಷಿಸಿದುದಕ್ಕಿಂತಲೂ ಬೇಗ ನಿಮ್ಮ ಪುಸ್ತಕ ಮಾರಾಟವಾಗುವ ಸಂಭವವಿದೆ "

" ಪ್ರತಿಗಳು ಮುಗಿದುಹೋದರೆ ಕೂಡಲೇ ಎರಡನೆಯ ಆವೃತ್ತಿ ಪ್ರಕಟಿಸುವಿರಲ್ಲವೇ ? "

" ನಿಸ್ಸಂದೇಹವಾಗಿ. "

" ಎರಡನೆಯ ಮುದ್ರಣವನ್ನೇ ಸುಲಭ ಬೆಲೆಯ ಕೈಹೊತ್ತಿಗೆ

ಮಾಡುವುದಕ್ಕಾಗುವುದಿಲ್ಲವೇ ? ”

“ ಎರಡನೆಯ ಆವೃತ್ತಿಯನ್ನು ಈಗಿನಂತೆಯೇ ಇದೇ ಬೆಲೆಗೆ ಪ್ರಕಟಿಸುತ್ತೇವೆ ಮೂರನೆಯ ಆವೃತ್ತಿಯನ್ನು ಸುಲಭ ಬೆಲೆಯ ಕೈಹೊತ್ತಿಗೆಯಾಗಿ ಪ್ರಕಟಿಸುತ್ತೇವೆ ”

“ ಸಂತೋಷ ”

“ ಎರಡನೆಯ ಕಾದಂಬರಿ ಯಾವಾಗ ಸಿದ್ಧವಾಗುತ್ತದೆ ”

“ ಅದೇ ಕೆಲಸ ಕೈಕೊಂಡಿದ್ದೇನೆ. ಥೀಸಿಸ್ ಬೇರೆ ನಾನು ಸಿದ್ಧಗೊಳಿಸಬೇಕಾಗಿದೆ. ”

“ ನಮ್ಮ ವಸಂತಪ್ರಾಸದ ಪ್ರಕಟನೆಯ ಪಂಕ್ತಿಗೆ ಅದು ಸೇರಲೇ ಬೇಕು. ‘ ಭಾರತೀಯ ತಾಯಿ ’ಗಳಿಸುವ ವಿಜಯ ನಿರರ್ಥಕವಾಗಬಾರದು ”

“ ಹಾಗೇ ಆಗಲಿ – ನನ್ನ ಪುಸ್ತಕದ ಕೆಲವು ಪ್ರತಿಗಳು ಬೇಕಾಗಿದ್ದವು ”

“ ಮನೆಗೆ ಕಳಿಸಿಕೊಡಲೇ ? ”

“ ಕೆಲವು ಪ್ರತಿಗಳನ್ನು ಈಗಲೇ ಕೊಟ್ಟರಾಗುತ್ತದೆ ”

“ ಆಗಬಹುದು ”

ಎಂದು ‘ ಭಾರತೀಯ ತಾಯಿ ’ ಯ ಆರು ಪ್ರತಿಗಳನ್ನು ಪ್ಯಾಕ್ ಮಾಡಿ ತರಲು ಸೆಕ್ರೆಟರಿಗೆ ತಿಳಿಸಿ

“ ಮುಂದಿನ ಶನಿವಾರ ರಾತ್ರಿ ಸನ್ಮಾನ ಕೂಟ ಇಟ್ಟುಕೊಳ್ಳಬಹುದಷ್ಟೆ ! ”

“ ಇಷ್ಟು ಗೌರವಕ್ಕೆ ನಾನು ಅರ್ಹನಲ್ಲ ”

“ ನಮ್ಮ ಸಂಸ್ಥೆಯ ಹಿತದ ದೃಷ್ಟಿಯಿಂದ ನೀವು ಒಪ್ಪಲೇ ಬೇಕು. ”

“ ಆಗಬಹುದು. ಮಿ. ಹ್ಯಾರಿಸ್, ನಾನೊಂದು ಕೆಲಸದ ಸಲುವಾಗಿ ನಿಮ್ಮಲ್ಲಿ ಬಂದಿದ್ದೇನೆ. ”

“ ಹೇಳಿ ”

“ ಹೆಚ್ಚು ಪ್ರಸಿದ್ಧಿಗೆ ಬರದಿರುವ ಒಬ್ಬ ಕವಿ ಇಂಗ್ಲೆಂಡಿನಲ್ಲಿದ್ದಾರೆ.

ಅವರ ಕಾವ್ಯ ಇಂಗ್ಲಿಷ್ ಸಾಹಿತ್ಯದ ಮೈಲಿಗಲ್ಲಾಗುತ್ತದೆಂದು ನನ್ನ ದೃಢ ವಿಶ್ವಾಸ. ಈಚೆಗವರು ಒಂದು ಮಹಾಕಾವ್ಯ ಬರೆದಿದ್ದಾರೆ. ಅದನ್ನು ನೋಡಲು ಸಾಧ್ಯವೇ ?"

"ಕಾವ್ಯದ ಹೆಸರು ?"

"ಯೂನಿವರ್ಸ್, ಮೈ ಹೋಮ್ (Universe, My Home)"

"ಕವಿ ಯಾರು ?"

"ಪೀಟರ್ ಸಿಮ್ಮನ್ಸ್"

"ಅವರು ಕಮ್ಯೂನಿಸ್ಟರೆಂದು ಕಾಣುತ್ತದೆ."

"ಅವರು ಕಮ್ಯೂನಿಸ್ಟ್ ಅಲ್ಲ ಮಿ. ಹ್ಯಾರಿಸ್, ಹ್ಯೂಮನಿಸ್ಟ್ (Humanist)"

"ನಮ್ಮ ಕಂಪೆನಿಯ ಯಜಮಾನರು ಸಂಪ್ರದಾಯವಾದಿಗಳು. (Conservatives) – ಕಮ್ಯೂನಿಸ್ಟ್ ಕಾವ್ಯ ನಾನು ಪ್ರಕಟಿಸಲು ಸಾಧ್ಯವೇ ಇಲ್ಲ."

"ಕವಿಯನ್ನು ನಾನು ಚೆನ್ನಾಗಿ ಬಲ್ಲೆ – ಅವರ ಕಾವ್ಯಗಳೆಲ್ಲ ವನ್ನೂ ಓದಿದ್ದೇನೆ ಪೀಟರ್ ಕಮ್ಯೂನಿಸ್ಟರಲ್ಲವೆಂದು ನಾನು ಭರವಸೆ ಕೊಡಬಲ್ಲೆ."

"ಹಸ್ತಪ್ರತಿ ಕಳಿಸಿಕೊಡಿ – ವಿಚಾರ ಮಾಡುತ್ತೇನೆ – ನಿಮ್ಮ ಕಾದಂಬರಿ ಮಾತ್ರ ಬೇಗ ಬರಬೇಕು"

"ಆಗಬಹುದು, ಮೆನಿ ಥ್ಯಾಂಕ್ಸ್"

"ಪುಸ್ತಕಗಳ ಕಟ್ಟು ಸಿದ್ಧವಾಗಿದೆ – ತೆಗೆದುಕೊಂಡು ಹೋಗಿ."

ನಾರಾಯಣಸ್ವಾಮಿ ಪುಸ್ತಕದ ಕಟ್ಟು ತೆಗೆದುಕೊಂಡವನೇ ನೇರವಾಗಿ ಮ್ಯೂಸಿಯಮ್ಮಿಗೆ ಬಂದು ಪ್ರೊ. ಡ್ರೂ ಅವರನ್ನು ಕರೆದು ಕೊಂಡು ಮ್ಯಾಕೇ ಟೀಷಾಪಿಗೆ ಬಂದು ಕುಳಿತ.

ನಾರಾಯಣಸ್ವಾಮಿ ಅಂಕಿತ ಹಾಕಿ ಕೊಟ್ಟ ಪುಸ್ತಕನನ್ನು ಸಂತೋಷವಾಗಿ ಸ್ವೀಕರಿಸಿ

"ಪದೇ ಪದೇ ಇಂಥ ಉಡುಗೆರೆ ಕೊಡುತ್ತೀರಿ" ಎಂದರು

ಚಹಾ ತಂದ ನೀನಾ ಮೇಜಿನ ಮೇಲಿದ್ದ ಪುಸ್ತಕ ತೆಗೆದು

ಶೀಯ ತಾಯಿ'ಗೆ ನಸ್ತು ಹೇಗೆ ಸಂಗ್ರಹಿಸಿದಿರಿ – ನಿಮಗೆ ವಿವಾಹ ವಾಗಿದೆಯೇ – ನಿಮ್ಮ ಪತ್ನಿ ಎಲ್ಲಿದ್ದಾರೆ – ಈಗ ಯಾವ ಗ್ರಂಥ ಬರೆದಿರುವಿರಿ – ಅಟ್ಲಿಯವರ ಸರ್ಕಾರದ ಮೇಲೆ ನಿಮ್ಮ ಅಭಿಪ್ರಾಯವೇನು – ಇಂಗ್ಲೀಷಿನವರನ್ನು ನೀವೀಗ ಶತ್ರುಗಳೆಂದು ಪರಿಗಣಿಸುವಿರೋ, ಮಿತ್ರರೆಂದು ಪರಿಗಣಿಸುವಿರೋ ? – ಇಲ್ಲಿ ಇನ್ನೆಷ್ಟು ದಿವಸ ಇರುವಿರಿ ? ಇತ್ಯಾದಿ – ಇತ್ಯಾದಿ.'

ಇದೇ ಶಿಕ್ಷೆಯನ್ನು ಪ್ರೊಫೆಸರ್ ಡ್ರೊ ನೀನಾ ಅನುಭವಿಸ ಬೇಕಾಯಿತು.

ಮುಖದ ಮೇಲೆ ಹರಿಯುತ್ತಿದ್ದ ಬೆವರನ್ನು ಒರಸಿಕೊಳ್ಳುತ್ತಾ ಪ್ರೊ. ಡ್ರೊ

"ಪಾಶ್ಚಾತ್ಯ ಸಂಸ್ಕೃತಿಯ ರುದ್ರ ನಾಟ್ಯ ನೋಡಿದಿರಾ ಮಿ. ಸ್ವಾಮಿ. ನಾಳೆ ಪತ್ರಿಕೆಯಲ್ಲಿ ಇವರು ನಿಮ್ಮ ಕುಲಗೋತ್ರವನ್ನೆಲ್ಲಾ ಬಯಲಿಗೆಳೆದುಬಿಡುತ್ತಾರೆ."

ನಾರಾಯಣಸ್ವಾಮಿ ಮತ್ತೊಂದು ಕಪ್ ಚಹಾ ಸೇವಿಸುತ್ತ

"ಶನಿವಾರ ಜೇರೆ ಇದರ ಪುನರಾವರ್ತನ ಕಾದಿದೆಯೆಂದು ಕಾಣುತ್ತದೆ. ಹ್ಯಾರಿಸ್‌ರ ಪಾರ್ಟಿಗೆ ನಾನು ಒಪ್ಪಲೇ ಬೇಕಾಯಿತು"

"ಒಳ್ಳೆಯ ಕೆಲಸ ಮಾಡಿದಿರಿ ಅಂದು ಇಂಗ್ಲೆಂಡಿನ ಪ್ರಸಿದ್ಧ ಸಾಹಿತಿಗಳೆಲ್ಲಾ ಬರುತ್ತಾರೆ. ಅವರ ಪರಿಚಯ ನೀವು ಮಾಡಿಕೊಳ್ಳುವುದೊಳ್ಳೆಯದು."

"ಪ್ರಸಿದ್ಧಿಗೆ ನಾನು ಅಂಜುತ್ತೇನೆ ಪ್ರೊಫೆಸರ್."

"ನೀವು ಪ್ರಸಿದ್ಧರಾಗುವುದರಿಂದ ಭಾರತದ ಗೌರವ ಬೆಳೆಯುತ್ತದೆ. ನೀವು ಗ್ರಂಥಕರ್ತರಾಗಿರುವಂತೆ ಸಾಂಸ್ಕೃತಿಕ ರಾಯಭಾರಿಗಳೂ ಆಗಿದ್ದೀರೆಂಬುದನ್ನು ಮರೆಯ ಬೇಡಿ."

"ಸಂತೋಷಕೂಟಕ್ಕೆ ನೀವೂ ಪೀಟರ್ ಬರುವಿರಲ್ಲವೇ ?"

"ಆಹ್ವಾನ ಬಂದರೆ ಖಂಡಿತ ಬರುತ್ತೇವೆ."

ನಾರಾಯಣಸ್ವಾಮಿ ಡ್ರೊ ಅವರ ಅಪ್ಪಣೆ ಪಡೆದು, ಚಂದ್ರಶೇಖರ್ ಅವರಲ್ಲಿ ಬಂದು, ಅವರಿಗೆ ಪುಸ್ತಕದ ಪ್ರತಿಯನ್ನಿತ್ತು ಮನೆ

ಸೇರಿದ.

ಇಂದುಮತಿ ಮನೆಯಲ್ಲಿಯೇ ಇದ್ದಳು.

ನಾರಾಯಣಸ್ವಾಮಿ ತನ್ನ ಪುಸ್ತಕದ ಒಂದು ಪ್ರತಿಯನ್ನು ಕೈಗೆ ತೆಗೆದುಕೊಂಡು ಇಂದುಮತಿ,ಇದ್ದಲ್ಲಿಗೆ ಹೋಗಿ

" ಇಂದೂ . ? "

" ಏನು ಡಿಯರ್ (dear) "

" ಇಲ್ಲಿ ನೋಡು "

ಎಂದು ಪುಸ್ತಕವನ್ನು ಅವಳ ಕೈಯಲ್ಲಿಟ್ಟ.

ಇಂದುಮತಿ ಪುಸ್ತಕವನ್ನು ನೋಡಿ, ರಕ್ಷಾಪುಟದ ಒಳ ಹೊರ ಹೊದಿಕೆಗಳ ಮೇಲಿದ್ದ ಅಭಿಪ್ರಾಯಗಳನ್ನೋದಿ, ಸಂತೋಷ ವ್ಯಕ್ತ ಮಾಡುತ್ತಾ

" ನನ್ನ ಹೃದಯ ಹೆಮ್ಮೆಯಿಂದ ತುಂಬಿ ತುಳುಕುತ್ತಿದೆ. "

" ಇದರ ಸಮಸ್ತ ಕೀರ್ತಿಯೂ ನಿನಗೇ ಸೇರಬೇಕು ಇಂದೂ. "

" ಇಲ್ಲ ಡಿಯರ್ (Dear) – ನಿಮ್ಮ ಕೆಲಸದಲ್ಲಿ ನಿಜವಾಗಿ ನೆರವಾದವರು ಡಾ. ಚಂದ್ರಶೇಖರ್ ಮತ್ತು ಫ್ಲೋರಾ. ನಾನೇನೂ ಮಾಡಲಿಲ್ಲ."

" ನೀನು ಇಲ್ಲಿಗೆ ನನ್ನನ್ನು ಕರೆದುಕೊಂಡು ಬಂದಿದ್ದರಿಂದಲ್ಲವೇ ನನಗೆ ಪ್ರೊ. ಡ್ರೊ, ಚಂದ್ರಶೇಖರ್ ಅವರ ಪರಿಚಯವಾದುದು."

" ನಾನು ಕರೆದುಕೊಂಡು ಬರದಿದ್ದರೂ ನೀವು ಬಂದೇ ಬರುತ್ತಿದ್ದಿರಿ. "

" ಹೋಗಲಿ ಆ ಮಾತು ಬೇಡ. ನಿನಗೆ ಸಂತೋಷವಾಗಿದೆಯೇ?"

" ಅದನ್ನು ಮಾತುಗಳಿಂದ ವರ್ಣಿಸಲಾರೆ. "

" ಶನಿವಾರ ಲಂಡನ್ನಿನ ಪ್ರಮುಖ ಗ್ರಂಥಕರ್ತರನ್ನು ಕರೆದು ಮಿ. ಹ್ಯಾರಿಸ್ ನನಗೆ ಔತಣ ಕೊಡುತ್ತಾರೆ. "

" ಬಹಳ ಸಂತೋಷ."

" ಶನಿವಾರ ಯಾವ ಕಾರ್ಯಕ್ರಮವನ್ನೂ ಇಟ್ಟುಕೊಳ್ಳಕೂಡದು."

" ನಾನೂ ಬರಬೇಕೆ ? "

“ ನೀನೇ ಯೋಚನೆ ಮಾಡಿ ನೋಡು. ನನ್ನ ಎಲ್ಲ ಉದ್ಯಮ, ಕೀರ್ತಿ ಚಟುವಟಿಕೆಗಳಲ್ಲಿ ನೀನು ಸಮಭಾಗಿನಿಯಾಗಬೇಕು. ”

“ ಇವತ್ತು ತಂದೆಯವರಿಂದ ಕಾಗದ ಬಂದಿದೆ. ”

“ ಏನು ಬರೆದಿದ್ದಾರೆ. ”

“ ತಾಯಿಯವರಿಗೆ ಮೈಯಲ್ಲಿ ಸರಿಯಾಗಿಲ್ಲವಂತೆ – ಕೂಡಲೆ ಹೊರಟುಬರಬೇಕೆಂದು ತಿಳಿಸಿದ್ದಾರೆ ”

“ ಅವರ ಮೈಗೇನಾಗಿದೆ ? ”

“ ತಾಯಿ ಮೊದಲಿನಿಂದಲೂ ತುಂಬಾ ನಿಶ್ಯಕ್ತರು. ಬ್ಲಡ್ ಪ್ರಷರ್ (Blood pressure) ಇರಬಹುದೆಂದು ನನ್ನ ಊಹೆ. ”

“ ಎಂದು ಹೊರಡೋಣ. ”

“ ನಾನು ಹೋಗುತ್ತೇನೆ ನೀವಿಲ್ಲಿಯೇ ಇದ್ದು ಥೀಸಿಸ್ ಮುಗಿಸಿಕೊಂಡು ಬನ್ನಿ ”

“ ಬೇಡ ಈಗ ನಾನೂ ಊರಿಗೆ ಬರುತ್ತೇನೆ. ನಿಮ್ಮ ತಾಯಿ ಯವರ ಆರೋಗ್ಯ ಸ್ವಲ್ಪ ಸುಧಾರಿಸಿದುದನ್ನು ನೋಡಿಕೊಂಡು ಮತ್ತೆ ಬಂದರಾಯಿತು ಇಂಥ ಸಮಯದಲ್ಲಿ ನಿನ್ನೊಬ್ಬಳನ್ನೇ ಹೇಗೆ ಕಳಿಸಲಿ. ”

ಥೀಸಿಸ್ ಕೆಲಸ ಶನಿವಾರದ ಔತಣ ಎರಡನ್ನೂ ಬಿಟ್ಟುಕೊಟ್ಟು ತನ್ನೊಂದಿಗೆ ಊರಿಗೆ ಹೊರಡಲು ಸಿದ್ಧನಾಗಿದ್ದ ಪತಿಯನ್ನು ಇಂದು ಮತಿ ಪ್ರೀತ್ಯಭಿಮಾನದಿಂದ ನೋಡಿ

“ ನನ್ನನ್ನು ಕ್ಷಮಿಸಿ ” ಎಂದಳು.

“ ಏಕೆ ಮೈ ಡಿಯರ್ (my dear) ”

“ ನಿಮ್ಮನ್ನು ನಾನು ಅರ್ಥಮಾಡಿಕೊಳ್ಳಲಿಲ್ಲ. ”

“ .. .. . ...... ”

“ ಕೃತಕ ನಾಗರಿಕತೆಯ ಮೊಬ್ಬಿಗೆ ಬಿದ್ದು ಋಜುತ್ವವನ್ನೇ ಮರೆತೆ. ”

“ ಪ್ರತಿಯೊಬ್ಬರ ಜೀವನದಲ್ಲಿಯೂ ಇಂಥ ಸಮಸ್ಯೆ ತಲೆದೋರು ತ್ತದೆ. ಲಂಡನ್ನಿಗೆ ಬಂದು ಚಂದ್ರಶೇಖರ್, ಫ್ಲೋರಾ, ಪ್ರೊ. ಡ್ರೂ,

ನೀನಾ ಇವರ ಪರಿಚಯ ಮಾಡಿಕೊಳ್ಳುವವರೆಗೆ ನಾನೂ ಅಂಧನಾಗಿದ್ದೆ. ಕೀರ್ತಿ, ಹಣ ಎರಡೇ ಜೀವನದ ಆದ್ಯ ವಸ್ತುಗಳು – ಅವುಗಳನ್ನು ಹೆಚ್ಚು ಹೆಚ್ಚಾಗಿ ಸಂಗ್ರಹಿಸಿಕೊಳ್ಳಬೇಕು ಎಂಬ ದಾಹಕ್ಕೆ ಈಡಾಗಿದ್ದೆ. ನನ್ನ ತಂದೆ, ತಾಯಿ, ಅಕ್ಕ, ತಂಗಿಯರನ್ನು ನನ್ನವರೆಂದು ಹೇಳಿಕೊಳ್ಳಲು ನಾಚುತ್ತಿದ್ದೆ ಲೋಕಪ್ರಿಯ ರಾಮಾಯಣ ಬರೆದಿರುವ ಕವಿ ತುಳಸಿದಾಸ ಗೋಸ್ವಾಮಿಯ ಬಗ್ಗೆ ಪ್ರಚಾರದಲ್ಲಿರುವ ಒಂದು ದಂತ ಕಥೆ ಜ್ಞಾಪಕಕ್ಕೆ ಬರುತ್ತದೆ ಮೋಹಾಂಧನಾದ ತುಳಸಿದಾಸ ಒಂದು ರಾತ್ರಿ ಹೆಂಡತಿಯನ್ನು ಸ್ಮರಿಸಿಕೊಂಡು ಅವಳ ತೌರುಮನೆಗೆ ಹೊರಟನಂತೆ ಕುಂಭದ್ರೋಣವಾಗಿ ಸುರಿಯುತ್ತಿದ್ದ ಮಳೆಯನ್ನೂ ಲೆಕ್ಕಿಸದೆ ಅವನು ನದಿಯಲ್ಲಿ ಸಿಕ್ಕಿದ ಮರದ ತುಂಡನ್ನು ಆಶ್ರಯಿಸಿ ನದೀ ದಾಟಿ ಹೆಂಡತಿಯ ಮನೆಗೆ ಬಂದನಂತೆ. ಆ ಮಧ್ಯರಾತ್ರಿಯಲ್ಲಿ ಅವಳ ಕೋಣೆಯಿಂದ ಇಳಿಬಿದ್ದಿದ್ದ ಹಗ್ಗವನ್ನು ಹಿಡಿದು ಮೇಲಕ್ಕೇರಿ ಹೋದನಂತೆ. ಪತಿಯ ಆಸನ್ನೆ ಕಂಡ ಕವಿಪತ್ನಿ ಹೇಗೆ ಬಂದಿರಿ ಎಂದು ಕೇಳಿದಳಂತೆ ತುಳಸಿದಾಸ ತನ್ನ ಅನುಭವ ಹೇಳಲು ಇಬ್ಬರೂ ಹೋಗಿ ಪರೀಕ್ಷಿಸಿದರಂತೆ. ಅವಳ ಕೋಣೆಯಿಂದ ಹೊರಗೆ ತೂಗು ಬಿದ್ದಿದ್ದದ್ದು ಹಗ್ಗವಲ್ಲ – ಹಾವು, ನದಿಯಲ್ಲಿ ತೇಲುತ್ತಿದ್ದುದು ಮರದ ತುಂಡಲ್ಲ – ಹೆಣ. ಪತಿಯ ಅಜ್ಞಾನಕ್ಕೆ ಮರುಕಗೊಂಡ ಕವಿಪತ್ನಿ 'ನನ್ನಂಥ ಒಬ್ಬ ಸಾಮಾನ್ಯ ಹೆಂಗಸಿನ ಮೇಲಿನ ವಿಶ್ವಾಸ ನೀವು ಭಗವಂತನ ಬಗ್ಗೆ ತೋರಿಸಿದರೆ ಅವನು ನಿಮ್ಮ ನಿಷ್ಠೆ ಮೆಚ್ಚಿಕೊಂಡು ಮೋಕ್ಷ ಕರುಣಿಸುತ್ತಿದ್ದ' ಎಂದಳಂತೆ. ತುಳಸಿದಾಸನಿಗೆ ಜ್ಞಾನೋದಯವಾಯಿತು. ಹೆಂಡತಿಗೆ ನಮಿಸಿ 'ನೀನೇ ನನ್ನ ಗುರು–ನನ್ನ ಅಜ್ಞಾನಾಂಧಕಾರವನ್ನು ಹೋಗಲಾಡಿಸಿದೆ' ಎಂದು ಹೇಳಿ ತನ್ನ ಆತ್ಮಶ್ರೀಯನ್ನರಸುತ್ತ ಹೋದನಂತೆ! – ನನಗೂ ನನ್ನ ಹೆಂಡತಿಯಿಂದಲೇ ಜ್ಞಾನೋದಯವಾಯಿತು."

ಭಾವನಾವಿಷ್ಟಳಾದ ಇಂದುಮತಿ ಪತಿಯನ್ನಪ್ಪಿ, ಹನಿ ತುಂಬಿದ ಕಣ್ಣುಗಳನ್ನೆತ್ತಿ

"ನನಗಾಗಿ ನಿಮ್ಮ ಕೆಲಸ ಅರ್ಧದಲ್ಲಿ ಕೈಬಿಟ್ಟು ಬರಬೇಡಿ.

ನಾನೊಬ್ಬಳೇ ಊರಿಗೆ ಹೋಗುತ್ತೇನೆ. ತಾಯಿಯವರ ಸ್ಥಿತಿ ಶೀಘ್ರ ಚಿಂತಾಜನಕವಾಗಿ ನೀವು ಅಲ್ಲಿಗೆ ಬರಲೇಬೇಕಾದರೆ ಬರೆಯುತ್ತೇನೆ–ಬರುವಿರಂತೆ. ಈಗ ನಿಮ್ಮ ಕೈಯಲ್ಲಿರುವ ಕಾದಂಬರಿಯನ್ನು ಮುಗಿಸಿ."

"ನಿನ್ನಿಷ್ಟದಂತೇ ಆಗಲಿ. ಇಂದೂ, ನೀನು ಹೊರಡುವ ಮುನ್ನ ನನಗೊಂದು ಉಪಕಾರ ಮಾಡಬೇಕು."

"ಉಪಕಾರ ನಾನು ಮಾಡುವುದಿಲ್ಲ ನಿಮ್ಮಾಜ್ಞೆ ಶಿರಸಾವಹಿಸಿ ಪಾಲಿಸುತ್ತೇನೆ."

"ನನ್ನ ಮಿತ್ರರ ಪರಿಚಯ ಮಾಡಿಕೊಳ್ಳಬೇಕು – ನೀನು ಬರಲಿಲ್ಲವೆಂದು ಫ್ಲೋರಾ ತುಂಬಾ ದುಃಖಪಡುತ್ತಿದ್ದಾರೆ."

"ಬರುತ್ತೇನೆ. ಯಾವಾಗ ಹೋಗೋಣ."

"ಸಂಜೆಗೆ ಮ್ಯೂಸಿಯಮ್ಮಿಗೆ ಹೋಗಿ ಪ್ರೊಫೆಸರನ್ನೂ ಕರೆದುಕೊಂಡು ಹೋಗೋಣ. ಪೀಟರಿಗೆ ಅನುಕೂಲವಿದ್ದರೆ ಅವನನ್ನೂ ಬರಹೇಳುತ್ತೇನೆ."

"ನಿಮ್ಮ ಪೀಟರ್ ಜತ ನಾನು ಜಗಳಕಾಯಬೇಕಾದ ಸಂದರ್ಭ ಒದಗುತ್ತದೋ ಏನೋ?"

"ಏಕೆ"

"ಪೀಟರಿಗೆ ನಿಮ್ಮ ವಿಶ್ವಾಸದ ಬಹು ದೊಡ್ಡ ಪಾಲು ಸೇರಿದೆ"

"ಮಾನವಹೃದಯವನ್ನು ಬ್ಯಾಂಕ್ ಅಕೌಂಟ್ ಮಾಡಿಕೊಂಡರೆ ಕೊಡಿಟ್ಟ ಹಣ ಖರ್ಚಾಗುವುದಲ್ಲಾ ಎಂದು ವ್ಯಸನಪಡಬೇಕಾಗುತ್ತದೆ. ಅದು ಅಕ್ಷಯ ಪಾತ್ರೆಯಾದರೆ ಯಾವ ಭಯವೂ ಇಲ್ಲ"

ಇಂದುಮತಿ ನಸುನಕ್ಕಳು.

೨೨

ಸಂಜೆ ಅಲಂಕಾರಭೂಷಿತೆಯಾಗಿ ಹೊರಗೆ ಹೊರಡಲು ಸಿದ್ಧಳಾದ ಇಂದುಮತಿಯನ್ನು ಮೃದುಲಾ ನೋಡಿ

" ಇಷ್ಟು ಬೇಗ ಎಲ್ಲಿಗೆ ಹೊರಟಿರುವಿರಿ ಬಹೆನ್ "

ಎಂದು ಕೇಳಿದಳು.

" ಸ್ವಲ್ಪ ಕೆಲಸವಿದೆ. ನನ್ನ ಯಜಮಾನರ ಜತೆ ಹೋಗಬೇಕಾಗಿದೆ. "

" ನಾಳೆ ನೀವು ಪ್ರಯಾಣ ಹೊರಟಿರುವಿರಿ ! ಲೇಡಿ ಫಾಕ್ಸರ ಮನೆಗೆ ಹೋಗಿ ಎಲ್ಲರನ್ನೂ ಕಂಡು ಹೇಳಿ ಬರಬೇಕಲ್ಲವೇ ? "

" ಬೆಳಿಗ್ಗೆ ಫೋನ್ ಮಾಡಿ ತಿಳಿಸಿದರಾಯಿತು "

" ಅವರು ತಪ್ಪು ತಿಳಿದುಕೊಳ್ಳಬಹುದು. "

" ತಿಳಿದುಕೊಂಡರೆ ತಿಳಿದುಕೊಳ್ಳಲಿ. "

ಮೃದುಲನಿಗೆ ಅಸಮಾಧಾನವಾದರೂ ಅವಳು ತೋರಗೊಡದೆ

" ನಿಮ್ಮ ಯಜಮಾನರೂ ನಾಳೆ ಪ್ರಯಾಣಮಾಡುತ್ತಾರೆಯೇ?"

" ಇಲ್ಲ-ಅವರು ಇನ್ನೂ ಕೆಲವುದಿನ ಇಲ್ಲೇ ಇರುತ್ತಾರೆ. ನಾನೊಬ್ಬಳೇ ಪ್ರಯಾಣಮಾಡುತ್ತೇನೆ "

" ಲೇಡಿ ಫಾಕ್ಸರನ್ನು ನೋಡಿದ್ದರೆ ಚೆನ್ನಾಗಿತ್ತು."

" ನನಗೆ ಈ ಲೇಡಿಗಳ ಸಹವಾಸ ಸಾಕಾಗಿದೆ ಮೃದುಲಾ. ಅವರ ನೀರಸ ಸಂಭಾಷಣೆ ಕೇಳಿಕೇಳಿ ನನ್ನ ತಲೆ ಚಿಟ್ಟು ಹಿಡಿಸಿದೆ "

ಮಾತು ಬೆಳಸಿದರೆ ಸುಖವಿಲ್ಲವೆಂದುಕೊಂಡು ಮೃದುಲಾ ಸುಮ್ಮನಾದಳು.

ಅವಳ ಹೃದಯದಲ್ಲಿ ಅಸಹನೆ ಹೊಗೆಯಾಡತೊಡಗಿತು.

‘ ಇಂದುಮತಿ ಒಳ್ಳೆಯ ಹುಡುಗಿ. ಈ ಗಂಡ ಅವಳನ್ನು ಅನ್ಯಾಯವಾಗಿ ಕೆಡಿಸಿಬಿಟ್ಟ. ಲೇಡಿ ಫಾಕ್ಸರ ಮನೆಗೆ ಬರುವುದಕ್ಕೆ ಕುಣಿದಾಡುತ್ತಿದ್ದವಳು, ಥಟ್ಟನೆ ಉಪೇಕ್ಷೆ ತೋರುವುದಕ್ಕೆ ನಾರಾಯಣ ಸ್ವಾಮಿಯೇ ಕಾರಣ ’

ಎಂದು ನಿರ್ಧರಿಸಿದಳು.

ಟ್ಯಾಕ್ಸಿಯಲ್ಲಿ ಹೊರಟ ನಾರಾಯಣಸ್ವಾಮಿ, ಇಂದುಮತಿ ನೇರವಾಗಿ ಮ್ಯಾಕೇ ಟೀಷಾಪಿಗೆ ಬಂದಿಳಿದರು

ಸೀನಾ ಅವರಿಗೆ ಸುಸ್ವಾಗತ ಬಯಸಿ ನೇರವಾಗಿ ತನ್ನ ವಾಸಗೃಹದ ಹಜಾರಕ್ಕೆ ಕರೆದೊಯ್ದು ಕುಳ್ಳಿರಿಸಿದಳು

ನಾರಾಯಣಸ್ವಾಮಿ ಮಂದಸ್ಮಿತನಾಗಿ “ ಮಿಸ್ ಸೀನಾ, ಇವರೇ ನನ್ನ ಸಹಧರ್ಮಿಣಿ ಇಂದುಮತಿ. ಇಂದೂ–ಇವರೇ ಮ್ಯಾಕೆ ಟೀಷಾಪಿನ ಯಜಮಾನಿತಿ ಮಿಸ್ ಸೀನಾ ”

ಎಂದು ಪರಿಚಯ ಮಾಡಿಕೊಟ್ಟ.

ಸೀನಾ, ಇಂದು ಪರಸ್ಪರ ಕೈ ಕುಲುಕಿದರು

“ ಇದೇಕೆ, ಮಿಸ್ ಸೀನಾ, ನಮ್ಮನ್ನಿಲ್ಲಿ ಕರೆದುಕೊಂಡು ಬಂದಿರಿ. ನಿಮ್ಮ ಟೀಷಾಪಿನಲ್ಲೇ ಕೊಡುತ್ತಿದ್ದೆವು. ”

“ ಅಲ್ಲಿ ಬೇಡಿ–ಪತ್ರಿಕೋದ್ಯಮಿಗಳು ನಿಮ್ಮ ಮುಖ ಕಂಡ ಕೂಡಲೆ ಮುತ್ತುತ್ತಾರೆ. ಪ್ರತಿನಿತ್ಯ ಯಾರಾದರೂ ಬಂದು ನನ್ನನ್ನು ಪ್ರಶ್ನಿಸುತ್ತಾರೆ. ”

“ ನನ್ನಿಂದ ನಿಮಗೆ ತುಂಬ ತೊಂದರೆಯಾಯಿತು. ”

“ ತೊಂದರೆಯಲ್ಲ–ಉಪಕಾರವಾಯಿತು. ಮೊದಲಿನ ನಾಲ್ಕರಷ್ಟು ಈಗ ವ್ಯಾಪಾರ ಹೆಚ್ಚಿದೆ. ”

“ ಪೀಟರ್ ಬರಲಿಲ್ಲವೇ ? ”

“ಬಂದಿದ್ದರು–ಪ್ರೊಫೆಸರನ್ನು ಕರೆದುಕೊಂಡುಬರಲು ಹೋದರು.”

“ ಇಂದೂ, ನೀನೂ ಸೀನಾ, ಮಾತನಾಡುತ್ತಿರಿ. ನಾನು ಮ್ಯೂಜಿಯಂಮ್ಮಿಗೆ ಹೋಗಿ ಪ್ರೊಫೆಸರನ್ನು ಕರೆದುಕೊಂಡು ಬರುತ್ತೇನೆ ”

ನಾರಾಯಣಸ್ವಾಮಿ ಹೊರಟ ಮೇಲೆ ನೀನಾ ಒಂದು ಕಪ್ ಚಹಾ ಮಾಡಿ ಇಂದುಮತಿಗೆ ತಂದುಕೊಟ್ಟಳು.

"ನೀವು ಬಂದದ್ದು ಬಹಳ ಸಂತೋಷ" ಎಂದಳು.

"ನಿಮ್ಮನ್ನು ನೋಡಲು ನಾನೂ ಕುತೂಹಲಿಯಾಗಿದ್ದೆ. ಇಂದು ಸಮಯ ಸಾಧಿಸಿತು. ನನ್ನ ಯಜಮಾನರು ನಿಮ್ಮ ವಿಷಯ ಬಹಳ ಹೇಳಿದ್ದಾರೆ."

"ಅದು ಅವರ ದೊಡ್ಡತನ-ಲಂಡನ್ನಿನಲ್ಲಿ ನೂರಾರು ಸೊಗಸಾದ ಚಹಾ ಅಂಗಡಿಗಳಿದ್ದರೂ ಅವರೂ, ಪ್ರೊಫೆಸರೂ, ಪೀಟರ್ ಇಲ್ಲೀ ಏಕೆ ಬರುವರು ಗೊತ್ತೇ ಮಿಸ್ ಇಂದುಮತಿ"

"ಏಕೆ?"

"ಈ ಬಡವಾಯಿಯ ಬಾಳನ್ನು ಹಗುರಮಾಡುವುದಕ್ಕೆ"

"ನಿಮಗೊದಗಿದ ಕಷ್ಟ ಕೇಳಿ ನನಗೆ ಬಹಳ ವ್ಯಸನವಾಯಿತು."

"ನಾನು ವ್ಯಸನಪಡುವುದಿಲ್ಲ. ಈ ಇಂಗ್ಲೆಂಡ್ ಬದುಕಲೆಂದು ನನ್ನ ಪತಿ ವೀರರಂತೆ ಪ್ರಾಣ ಒಪ್ಪಿಸಿದರು. ನಾನು ವೀರಪತ್ನಿ ಎಂಬ ಭಾವನೆ ನನ್ನ ಜೀವನಕ್ಕೆ ಕ್ರತುಶಕ್ತಿಯನ್ನೊದಗಿಸಿದೆ"

"ನೀವು ವೀರಪತ್ನಿ ಮಾತ್ರವೇ ಅಲ್ಲ ವೀರಪುತ್ರಿಯೂ ಆಗಿದ್ದೀರಿ"

"ಥ್ಯಾಂಕ್ ಯು ಮೈ ಡಿಯರ್ (Thank you my dear)"

"ಸರ್ಕಾರ ನಿಮಗೇನೂ ಸಹಾಯಮಾಡಲಿಲ್ಲವೇ.?"

"ಮಾಡುವುದಕ್ಕೆ ಸಿದ್ಧವಾಗಿತ್ತು. ನಾವು ಕೆಲವರು ಸರ್ಕಾರದ ಸಹಾಯ ಸ್ವೀಕರಿಸಲಿಲ್ಲ. ಯುದ್ಧಾನಂತರ ನಮ್ಮ ದೇಶ ಬಹಳ ಕಷ್ಟಕ್ಕೆ ಸಿಕ್ಕಿಕೊಂಡಿತು. ನಮ್ಮ ಆರ್ಥಿಕಸ್ಥಿತಿ ಅಲ್ಲಕಲ್ಲೋಲವಾಯಿತು. ರಾಷ್ಟ್ರವನ್ನು ಸುಭದ್ರಮಾಡಲು ಸರ್ಕಾರ ಶಕ್ತಿಮೀರಿ ಪ್ರಯತ್ನಿಸಿತು. ಈ ಸ್ಥಿತಿಯಲ್ಲಿ ಸರ್ಕಾರಕ್ಕೆ ಪೂರ್ಣ ನೆರವು ನೀಡಬೇಕಾದುದು ಪ್ರತಿಯೊಬ್ಬ ಪ್ರಜೆಯ ಕರ್ತವ್ಯವಲ್ಲವೇ? ನಮಗಿಂತಲೂ ದುಸ್ಥಿತಿಯಲ್ಲಿದ್ದ ಸಹಸ್ರಾರು ಜನರ ಸಹಾಯಾರ್ಥವಾಗಿ ನಾವು ಕೆಲವರು ಸಹಾಯ ನಿರಾಕರಿಸಿದೆವು."

" ನಿಮ್ಮ ತ್ಯಾಗಪ್ರದೀಪ್ತ ರಾಷ್ಟ್ರಪ್ರೇಮದಲ್ಲಿ ಇಂಗ್ಲೆಂಡಿನ ಮಹಾ ಶಕ್ತಿ ಇದೆಯೆಂಬುದು ನನಗಿಂದು ಅರ್ಥವಾಯಿತು. "

" ನಿಮ್ಮ ಯಜಮಾನರ ಪುಸ್ತಕ ಓದಿದಮೇಲೆ ನಮ್ಮ ಶಕ್ತಿ ಗಿಂತಲೂ ಮಿಗಿಲಾದ ಶಕ್ತಿಯೊಂದಿದೆ ಎಂಬುದು ಸ್ಥಿರವಾಗುತ್ತದೆ "

" ಯಾವದದು ? "

" ನಿಮ್ಮ ನಾಡಿನ ಅಧ್ಯಾತ್ಮಶಕ್ತಿ. ನಮ್ಮಂತೆಯೇ ಸಾಮಾನ್ಯ ಸ್ತ್ರೀಯಾದ ಕಥಾನಾಯಕಿ ವ್ಯಕ್ತಿತ್ವದ ಆ ಉತ್ತುಂಗ ಶಿಖರಕ್ಕೇರಲು ಕಾರಣ ಯಾವದೆಂದು ನಾನು ಆಲೋಚಿಸಿದೆ "

" ನನ್ನ ಯಜಮಾನರ ಗ್ರಂಥ ನೀವು ಬಹಳ ಆಳವಾಗಿ ಅಭ್ಯಾಸ ಮಾಡಿರುವಿರಿ ? "

" ಅವರು ಕೃಪೆಯಿಟ್ಟು ನನಗೊಂದು ಪ್ರತಿ ಕೊಟ್ಟರು – ಅಂದೇ ರಾತ್ರಿಯೆಲ್ಲಾ ಕುಳಿತು ಓದಿದೆ ರಾತ್ರಿ ಕಳೆದು ಹಗಲಾದುದೇ ಗೊತ್ತಾಗ ಲಿಲ್ಲ. ನನಗಾದ ಆನಂದ ಮಾತುಗಳಿಂದ ವರ್ಣಿಸಲು ಸಾಧ್ಯವಿಲ್ಲ ಈ ಗ್ರಂಥ ಐರೋಪ್ಯರಿಗೆ ಭಾರತದ ಬಗ್ಗೆ ವಿಶೇಷ ವಿಶ್ವಾಸ, ಗೌರವ ಗಳಿಸುವುದರಲ್ಲಿ ಸಂದೇಹವಿಲ್ಲ. "

" ನಿಮ್ಮ ಅಭಿಮಾನಕ್ಕೆ ನಾನು ಋಣಿಯಾಗಿದ್ದೇನೆ. "

ಪ್ರೊ ಡ್ರೂ ಅವರೊಂದಿಗೆ ಹಿಂದಿರುಗಿದ ನಾರಾಯಣಸ್ವಾಮಿ, ಪೀಟರನ್ನು ಒಳಗೆ ನೀನಾ ಕರೆದೊಯ್ದಳು.

ನಾರಾಯಣಸ್ವಾಮಿ ತನ್ನ ಪತ್ನಿಗೆ ಪೀಟರ್ ಪರಿಚಯ ಮಾಡಿಕೊಟ್ಟ.

ಇಂದುಮತಿಯನ್ನುದ್ದೇಶಿಸಿ ಪ್ರೊಫೆಸರು

" ನೀವು ನಾಳೆ ಪ್ರಯಾಣ ಬೆಳಸುವಿರಂತೆ " ಎಂದರು

" ಎಲ್ಲಿಗೆ ? " ಎಂದು ನೀನಾ ಕೇಳಿದಳು.

" ಮಾತೃಭೂಮಿಗೆ "

" ಎಂದಿಗೂ ಸಾಧ್ಯವಿಲ್ಲ. ಪರಿಚಯವಾದ ಕೂಡಲೆ ನೀವು ಊರಿಗೆ ಹೊರಡುವುದು ನ್ಯಾಯವಲ್ಲ ! "

" ಸಂದರ್ಭ ಹಾಗಿದೆ ಮಿಸ್ ನೀನಾ. ನನ್ನ ತಾಯಿಯವರ

ಆರೋಗ್ಯ ಚೆನ್ನಾಗಿಲ್ಲ – ಕೂಡಲೆ ಬರಬೇಕೆಂದು ತಂದೆಯವರು ತಿಳಿಸಿದ್ದಾರೆ "

"ಅವರನ್ನು ಇಲ್ಲಿಗೇ ಬರಮಾಡಿ – ನಾನು ನೋಡಿಕೊಳ್ಳುತ್ತೇನೆ. "

ನೀನಾ ತೋರಿದ ಸರಳ ವಿಶ್ವಾಸ ಇಂದುಮತಿಯ ಹೃದಯ ಸ್ಪರ್ಶಿಸಿತು

"ಹಾಗೆ ಮಾಡುವುದು ಸಾಧ್ಯವಾಗಿದ್ದರೆ ನಾನು ಸಂತೋಷಿಸುತ್ತಿದ್ದೆ ತಾಯಿಯವರು ರಕ್ತದ ಒತ್ತಡದಿಂದ ಬಾಧೆಪಡುತ್ತಿದ್ದಾರೆ. ಅವರು ಪ್ರಯಾಣಮಾಡಲು ಸಾಧ್ಯವಿಲ್ಲ "

"ಭಗವಂತ ಅವರಿಗೆ ಬೇಗ ಆರೋಗ್ಯಭಾಗ್ಯ ಕರುಣಿಸಲಿ."

ಎಂದವಳೇ ನೀನಾ ಒಳಕ್ಕೆ ಹೋದಳು

ಕ್ಷಣಕಾಲ ಸುಮ್ಮನಿದ್ದ ಪ್ರೊಫೆಸರು

"ನಮ್ಮ ಜನಗಳಲ್ಲಿ ಒಂದು ದೊಡ್ಡ ದೋಷವಿದೆ ಮಿಸಸ್. ಸ್ವಾಮಿ" ಎಂದರು

"ಏನದು ಪ್ರೊಫೆಸರ್ ?"

"ಮನಸ್ಸಿನ ದುಃಖ ಸಂತೋಷ ಹೇಳಿಕೊಳ್ಳುವುದಕ್ಕೇ ನಮಗೆ ಬರುವುದಿಲ್ಲ. ಈ ವಿಷಯದಲ್ಲಿ ಫ್ರೆಂಚರು, ಅಮೆರಿಕನ್ನರು ಗಟ್ಟಿಗರು. ನಾವು ಹೃದಯವಿಹೀನರೆಂಬ ಭಾವನೆ ಜನರ ಮನಸ್ಸಿನಲ್ಲಿ ಬರಲು ಈ ಸಂಯಮವೇ ಕಾರಣ. ನಿಮ್ಮನ್ನು ಕಾಣಬೇಕೆಂದು ನೀನಾ ತಪಿಸುತ್ತಿದ್ದಳು – ನೀವು ಹೊರಡುವ ಸುದ್ದಿ ಕೇಳಿ ಅವಳ ಮನಸ್ಸಿಗೆ ತುಂಬ ವ್ಯಥೆಯಾಗಿದೆ."

"ಇಂದಿನ ಅನುಭವ ನನ್ನ ಮನಸ್ಸಿನಲ್ಲಿ ನಾನಾ ಭಾವನೆಗಳನ್ನು ಕೆರಳಿಸಿವೆ ಪ್ರೊಫೆಸರ್. ಇಷ್ಟು ದಿನ ಇಲ್ಲಿದ್ದೂ ನಿಮ್ಮೆಲ್ಲರ ಹೆಚ್ಚಿನ ಪರಿಚಯಮಾಡಿಕೊಳ್ಳದೆ ನಾನು ತಪ್ಪುಮಾಡಿದೆ – ಖಂಡಿತವಾಗಿ ನಾನು ಇಲ್ಲಿಗೆ ಮತ್ತೊಮ್ಮೆ ಬರುತ್ತೇನೆ."

"ಬರಲೇ ಬೇಕು ನೀವೇ ಬಂದು ಮಿ. ಸ್ವಾಮಿಯವರನ್ನು ಕರೆದುಕೊಂಡು ಹೋಗಬೇಕು."

" ನೀವು ಭಾರತಕ್ಕೆ ಬರುವುದಿಲ್ಲವೇ ? "

" ಬರಬೇಕೆಂಬ ಆಸೆ ಅಖಂಡವಾಗಿದೆ. ಆದರೆ "

" ಆದರೆಯೆನ್ನಬೇಡಿ – ಬನ್ನಿ – ನಮ್ಮ ಅತಿಥಿಗಳಾಗಿರಿ "

" ಭಾರತದ ಆದಿವಾಸಿ ಜನಾಂಗಗಳ ಬಗ್ಗೆ ಸಂಶೋಧನೆ ನಡೆಸಲು ಮನಸ್ಸಿದೆ ಇದಕ್ಕೆ ವಿಶ್ವವಿದ್ಯಾನಿಲಯದ ಸಹಾಯವೂ ಸಿಕ್ಕಬಹುದು ಮಿ ಸ್ವಾಮಿ ನಾನೂ ಕೂಡಿಯೇ ಈ ಕೆಲಸಮಾಡಬೇಕೆಂದುಕೊಂಡಿದ್ದೇವೆ. ಅವರು ಪಿ.ಎಚ್‌ಡಿ ತೆಗೆದುಕೊಂಡ ಮೇಲೆ ಮುಂದಿನ ಮಾತು "

ನೀನಾ ಎಲ್ಲ ಅತಿಥಿಗಳಿಗೆ ಉಪಾಹಾರ, ಚಹಾ ಒದಗಿಸಿದಳು. ಮೂರು ಬಗೆ ಹೆಚ್ಚಿನ ತಿನಿಸುಗಳಿದ್ದುದನ್ನು ಕಂಡು ಪ್ರೊಫೆಸರು

" ಇಷ್ಟೆಲ್ಲಾ ಏಕೆ ? " ಎಂದರು

" ಇವತ್ತು ನನ್ನ ಪಾರ್ಟಿ ಪ್ರೊಫೆಸರ್ ಮಿಸಸ್ ಸ್ವಾಮಿ ಇದ್ದಕ್ಕಿದ್ದಂತೆ ಹೊರಡಲು ನಿಶ್ಚಯಿಸದಿದ್ದರೆ ಇದಕ್ಕಿಂತ ಸ್ವಲ್ಪ ಚೆನ್ನಾಗಿ ಪಾರ್ಟಿ ಮಾಡಬಹುದಾಗಿತ್ತು "

" ಒಳ್ಳೆಯದೇ ಆಯಿತು ಪೀಟರ್ ಮನೆಗೆ ಹೋಗಿ ಅಡಿಗೆ ಮಾಡಿಕೊಳ್ಳುವ ಕಷ್ಟವೇ ತಪ್ಪಿತು. ಇಲ್ಲೇ ಕಂಠಪೂರ್ತಿ ಹೊಡೆದು ಬಿಡೋಣ "

ಎಂದು ಪ್ರೊಫೆಸರ್ ಹೇಳಿದರು

ಉಪಾಹಾರ ಸಾಗಿದ್ದಂತೆ ಪೀಟರನ ಕಾವ್ಯದ ವಿಷಯ ಮಾತು ಹೊರಟಿತು. ಇಂದುಮತಿ ಸೌಜನ್ಯದಿಂದ

" ನಿಮ್ಮ ' ಯೂನಿವರ್ಸ್–ಮೈ ಹೋಮ್ ' (Universe–My home) ಓದಿದೆ ಮಿ. ಸಿಮ್ಮನ್ಸ್. ಬಹಳ ಸಂತೋಷವಾಯಿತು. ಗಣಿಯಲ್ಲಿ ದುಡಿಯುವ ನಿಮಗೆ ಕಾವ್ಯ ಬರೆಯಲು ವ್ಯವಧಾನವೆಲ್ಲಿ ಸಿಕ್ಕುತ್ತದೆ."

" ಗಣಿಯೇ ನನ್ನ ಕೃಷೀವಲಯ ಮಿಸಸ್. ಸ್ವಾಮಿ. ಅಲ್ಲಿಯ ಕಾರ್ಮಿಕರಿಂದಲೇ ನಾನು ಸ್ಫೂರ್ತಿಪಡೆದುದು. ಗಣಿಯ ವಿವಿಧ ಕಾರ್ಯಕ್ಷೇತ್ರಗಳ ಬಗೆಬಗೆಯ ಶಬ್ದಗಳನ್ನೇ ನಾನು ಕಾವ್ಯದಲ್ಲಿ ತಂದಿದ್ದೇನೆ.

ಕಾವ್ಯದ ಛಂದಸ್ಸು ಮಾನವನ ವಿವಿಧ ಚಟುವಟಿಕೆಗಳ ಪ್ರತೀಕವೆಂದು ನನ್ನ ಅಭಿಮತ. ಪ್ರತಿಯೊಂದು ವಸ್ತುವನ್ನು ನಾವು ಸ್ಮರಿಸಿಕೊಂಡಾಗಲೂ ಒಂದು ಚಿತ್ರ ನಮ್ಮ ಕಣ್ಮುಂದೆ ಬಂದು ನಿಲ್ಲುತ್ತದೆ. ಆ ವಸ್ತುವಿಗೆ ಹೇಗೆ ಆಕಾರ (Pattern) ಇದೆಯೋ ಹಾಗೆಯೇ ಒಂದು ಗತಿಯೂ (Rhythm) ಇದೆ ಗತಿವೈವಿಧ್ಯವೇ ಕಾವ್ಯಕ್ಕೆ ನಿತ್ಯನೂತನತೆಯನ್ನು ಪ್ರಸಾದಿಸುತ್ತದೆ. "

" ಹೊಸಕವಿ ಹೊಸ ಛಂದಸ್ಸನ್ನೇ ನಿರ್ಮಿಸಿಕೊಳ್ಳಬೇಕೇ ? "

" ಅಗತ್ಯವಿಲ್ಲ. ಅವನ ಭಾವ ಅಭಿವ್ಯಕ್ತಿಗೆ ಹಳೆಯ ಛಂದಸ್ಸು ಅಳವಡುವುದಾದರೆ ಅದನ್ನೇ ಉಪಯೋಗಿಸಿಕೊಳ್ಳಬಹುದು ಕಾವ್ಯದಲ್ಲಿ ಛಂದಸ್ಸಿನ ಸ್ಥಾನ ಗೌಣ. ಭಾವಾನುಭಾವಗಳಿಗೆ ನಾವು ಪ್ರಾಧಾನ್ಯಕೊಡುತ್ತೇವೆ ಅಭಿವ್ಯಕ್ತಿ ಸಶಕ್ತವಾಗಲು ಛಂದಸ್ಸು ನೆರವಾಗುತ್ತದೆ. "

" ನಾನು ಹೆಚ್ಚು ಕಾವ್ಯಗ್ರಂಥಗಳನ್ನೋದಿಲ್ಲ ನನ್ನ ಕಾವ್ಯವ್ಯಾಸಂಗವೆಲ್ಲಾ ಪಾಲ್‌ಗ್ರೇವರ 'ಗೋಲ್ಡನ್ ಟ್ರೆಜರಿ'ಗೆ (Palgrave's 'Golden Treasury') ಮುಗಿದಿದೆ ಎನ್ನಬಹುದು. ಆದರೆ ನಿಮ್ಮ 'ಯೂನಿವರ್ಸ್-ನ್ಯ್ ಹೋಮ್'ಓದಿದಾಗ ವಿಶೇಷಾನುಭವವಾಯಿತು. ನಿತ್ಯದ ನಡೆನುಡಿಯನ್ನೇ ನೀವು ಬಣ್ಣಿಸುತ್ತಿದ್ದರೂ ಅದರಲ್ಲಿ ಏನೋ ವಿಶೇಷವಿದೆ ಎನ್ನಿಸಿತು. "

" ಕೇವಲ ಕೌತುಕ ಹುಟ್ಟಿಸುವುದಷ್ಟೇ ಕವಿಯ ಕೆಲಸವಲ್ಲ. ಅವನು ನಿತ್ಯಜೀವನದ ಅನಂತಾನುಭವಗಳ ವಾಣಿಯಾಗಬೇಕು. ನಿತ್ಯಜೀವನದಲ್ಲಿ ಸಮಾವೇಶವಾಗಿರುವ ಸತ್ಯ, ಸೌಂದರ್ಯ, ಶಕ್ತಿಯು ವ್ಯಾಖ್ಯಾತನಾಗಬೇಕು. ಇದನ್ನು ಸಾಧಿಸಲು ನಾನು ಪ್ರಯತ್ನಿಸುತ್ತಿದ್ದೇನೆ "

" ನಿಮ್ಮ ಪ್ರಯತ್ನ ಬಹುಮಟ್ಟಿಗೆ ಯಶಸ್ವಿಯಾಗಿದೆ "

" ಅದು ನಿಮ್ಮ ಅಭಿಮಾನದ ಮಾತು. ಕವಿಗೆ ತೃಪ್ತಿಯೆಂಬುದಿಲ್ಲ ಮಿಸೆಸ್ ಸ್ವಾಮಿ. ಅತೃಪ್ತಿಯೇ ನಮ್ಮ ಅಭ್ಯುದಯದ ಅಡಿಗಲ್ಲು ಹಾಗೂ – ಸಾವಿನ ಸಂಕೇತ. "

" ಕವಿಗೆ ಸಾವೇ ಇಲ್ಲ ಮಿ. ಪೀಟರ್. "

" ಕಾವ್ಯಕ್ಕೆ ಸಾವಿಲ್ಲ ಮಿಸಸ್ ಸ್ವಾಮಿ – ಅದು ಅಮರ; ಕವಿ ನಿತ್ಯ ಸತ್ತು ಸತ್ತು ಹುಟ್ಟುತ್ತಾನೆ. ಅವನ ಆಂಹತಿಯನ್ನು ಅವನಂತೆಯೇ ಆಂಹತಿಗೊಳಗಾದವನು ಮಾತ್ರ ಅರ್ಥಮಾಡಿಕೊಳ್ಳಬಲ್ಲ. "

ಉಪಹಾರ ಮುಗಿದಮೇಲೆ ಇಂದುಮತಿಯೇ ತನ್ನ ಪತಿಗೆ

" ಡಾಕ್ಟರ್ ಮತ್ತು ಮಿಸಸ್ ಚಂದ್ರಶೇಖರ್‌ರವರನ್ನು ಹೋಗಿ ನೋಡೋಣ " ಎಂದಳು.

ನಾರಾಯಣಸ್ವಾಮಿ ಅವಳ ಮುಖನೋಡಿ ಅರ್ಥಗರ್ಭಿತವಾಗಿ ನಕ್ಕು

" ಎಲ್ಲರೂ ಹೋಗೋಣ " ಎಂದ.

ಪ್ರೊಫೆಸರೂ, ಪೀಟರ್ ಒಪ್ಪಿಕೊಂಡರು.

ಎಲ್ಲರನ್ನೂ ಬೀಳ್ಕೊಡಲು ಟ್ಯಾಕ್ಸಿಯ ಬಳಿ ಬಂದ ನೀನಾ ಇಂದುಮತಿಯನ್ನಪ್ಪಿ

" ಗಾಡ್ ಬ್ಲೆಸ್ ಯು ಮೈ ಡಿಯರ್ " (god bless you my dear)"

ಎಂದಳು.

ಎಲ್ಲರೂ ಒಟ್ಟಿಗೆ ಬಂದುದನ್ನು ಕಂಡು ಚಂದ್ರಶೇಖರ್, ಫ್ಲೋರಾ ಅವರ ಸಂತೋಷಕ್ಕೆ ಪಾರವೇ ಇರಲಿಲ್ಲ ಇಂದುಮತಿ ಬಂದುದು ಅವರ ಸಂತೋಷ ಹೆಚ್ಚಿಸಿತು

ಡಾ ಚಂದ್ರಶೇಖರ್ ಇಂದುಮತಿಯ ಪರಿಚಯವನ್ನು ತನ್ನ ಹೆಂಡತಿ, ಅತ್ತೆಗೆ ಮಾಡಿಕೊಟ್ಟರು

ಓಷೀತಾಯಿ ಇಂದುಮತಿಯನ್ನು ಪಕ್ಕದಲ್ಲಿ ಕೂಡಿಸಿಕೊಂಡು ಅಭಿಮಾನಪೂರ್ವಕವಾಗಿ ನೋಡಿದರು.

ಫ್ಲೋರಾ ಇಂದುಮತಿಯನ್ನು ನೋಡಿ

" ಎಷ್ಟು ಚೆನ್ನಾಗಿದ್ದೀರಿ ನೀವು – ಈ ಸೀರೆ ನಿಮಗೆಷ್ಟು ಒಪ್ಪುತ್ತದೆ. ನಿಮ್ಮನ್ನು ನೋಡಬೇಕೆಂದು ತವಕಪಡುತ್ತಿದ್ದೆ. ಮಿ. ಸ್ವಾಮಿಯವರಿಗೆ ಹಲವು ಬಾರಿ ಹೇಳಿದೆ. ಏಕೋ ಅವರು ನನ್ನ

ಮಾತು ಕಿವಿಯಮೇಲೆ ಹಾಕಿಕೊಳ್ಳಲಿಲ್ಲ ನೀವು ಬಂದದ್ದು ನನಗೂ – ನನ್ನ ತಾಯಿಗೂ ತುಂಬ ಸಂತೋಷವನ್ನುಂಟುಮಾಡಿದೆ."

" ನೋಡಿದಿರಾ ಪ್ರೊಫೆಸರ್. ನಾವು ಬಂದುದಕ್ಕೆ ಸೋದರಿ ಫ್ಲೋರಾ ಸ್ವಲ್ಪವೂ ಸಂತೋಷ ವ್ಯಕ್ತಮಾಡಲಿಲ್ಲ ಮಿಸಸ್ ಸ್ವಾಮಿ ಬಂದುದಕ್ಕೆ ಎಷ್ಟು ಸಂತೋಷಪಡುತ್ತಿದ್ದಾರೆ. "

" ಬನ್ನಿ ಎಂದು ನಿಮ್ಮನ್ನು ನಾನೇಕೆ ಕರೆಯಲಿ ? ತಂಗಿಯ ಮನೆಗೆ ಅಣ್ಣ ಹೇಳಿಸಿಕೊಂಡು ಬರಬೇಕೇ ?"

" ಸಿಸ್ಟರ್ – ಮಿಸಸ್ ಸ್ವಾಮಿಗೆ ನಿಮ್ಮ ಸೊಸೈಟಿಯ ಪರಿಚಯ ಮಾಡಿಕೊಡಿ. "

" ಸ್ವಲ್ಪ ಬಡವರ ಟೀ ತೆಗೆದುಕೊಳ್ಳಿ – ಆಮೇಲೆ ನಾನು ಅವರನ್ನು ಕರೆದುಕೊಂಡು ಹೋಗುತ್ತೇನೆ. "

" ಈಗ ತಾನೇ ಟೀ ಕುಡಿದು ಬಂದಿದ್ದೇವೆ "

ಪ್ರೊಫೆಸರ್ ಪ್ರೂ ನಸುನಗುತ್ತಾ

" ಇಲ್ಲಿ ಫ್ಲೋರಾ ಸರ್ವಾಧಿಕಾರಿಣಿ ಮಿಸಸ್ ಸ್ವಾಮಿ ಅವರ ಮಾತು ತೆಗೆದುಹಾಕುವಂತೆಯೇ ಇಲ್ಲ. ' ಇಡಿಯ ಸೋಹೋವನ್ನು ಕೈಯಲ್ಲಿಟ್ಟುಕೊಂಡು ಈ ಹೆಣ್ಣು ಮಗಳು ನಿಮ್ಮನ್ನು ಬೆದರಿಸುತ್ತಾಳೆ."

ಫ್ಲೋರಾ ಕಿಲಕಿಲನೆ ನಕ್ಕು

" ಡಾಕ್, ಯು ಆರ್ ಗ್ರೋಯಿಂಗ್ ವಿಕೆಡ್ (Doc, you are growing wicked)"

" ನೋಡಿ ನೋಡಿ – ಸತ್ಯ ಹೇಳಿದರೆ ಫ್ಲೋರಾ ಎಷ್ಟು ಕೋಪ ಮಾಡಿಕೊಳ್ಳುತ್ತಾರೆ. "

ಪ್ರೊಫೆಸರ ಮಾತು ಕೇಳಿ ಎಲ್ಲರೂ ನಕ್ಕರು.

ನಿರಾಶ್ರಿತರಿಗೆ ಹಂಚುತ್ತಿದ್ದ ಟೀಯನ್ನೇ ತಂದು ಫ್ಲೋರಾ ಎಲ್ಲರಿಗೂ ಇತ್ತಳು.

" ಟೀ ಸೊಗಸಾಗಿದೆಯಲ್ಲಾ ಮಿಸಸ್ ಚಂದ್ರಶೇಖರ್ – ಬಡವರ ಟೀ ಎಂದಿರಿ. "

" ಯು ಆರ್ ವೆರಿ ಕೈಂಡ್ ಮೈ ಡಿಯರ್ (You are very kind

my dear)"

ಎಂದು ಇಂದುಮತಿಯ ಕೈಹಿಡಿದು ಕರೆದುಕೊಂಡು ಹೋದಳು.

ಪ್ರೊಫೆಸರ್, ಸ್ವಾಮಿ, ಪೀಟರ್, ಚಂದ್ರಶೇಖರ್ ಓಷೀ ತಾಯಿಯ ಜತೆ ಮಾತನಾಡುತ್ತ ಕುಳಿತರು.

ಓಷೀತಾಯಿ ಪಕ್ಕದಲ್ಲಿ ಕುಳಿತಿದ್ದ ಪೀಟರ್ ಮುಖದಮೇಲೆ ಕೈಯಾಡಿಸಿ

" ಏನು ಚಿಂತಿಸುತ್ತಿರುವೆ ಸನ್ " ಎಂದು ಕೇಳಿದರು.

" ಏನೂ ಇಲ್ಲ ಮಾ – ಸುಹಾಸಪೂರ್ಣವಾದ ನಿಮ್ಮ ಮುಖಾರವಿಂದ ನೋಡಿ ಸಂತೋಷಪಡುತ್ತಿದ್ದೆ "

" ನನ್ನ ಮುಖಸ್ತುತಿ ಮಾಡಬೇಡ ಸನ್. ಕ್ಷೀಣಚಂದ್ರನಂತಿರುವ ನನ್ನ ಮುಖದಲ್ಲಿ ಏನಿದೆ ಹೇಳು. ನಿನ್ನಂಥ ತರುಣರನ್ನೂ–ಮಿಸಸ್ ಸ್ವಾಮಿಯಂಥ ಸುಂದರಿಯನ್ನೂ ನೋಡಿದಾಗ ಮನಸ್ಸಿಗೆ ಹರ್ಷವಾಗಿ ನನ್ನ ಮುಖವೂ ಅರಳುತ್ತದೆ "

" ದೀರ್ಘಕಾಲ ಕಷ್ಟ ಅನುಭವಿಸಿ ಅವನ್ನು ದಿಟ್ಟತನದಿಂದ ಎದುರಿಸಿದ ಜೀವದ ಮುಖ ಒಂದು ದೈವಿಕ ಸೌಂದರ್ಯ ತಳೆಯುತ್ತದೆ ಮಾ – ಯೌವ್ವನದ ಸೌಂದರ್ಯ ಅದಕ್ಕೆ ಸಾಟಿಯಲ್ಲ. "

" ನಿನ್ನ ಮಾತೇ ಕಾವ್ಯ ಸನ್. "

ಎಂದು ಪ್ರೊಫೆಸರ್ ಕಡೆ ತಿರುಗಿ

" ಪ್ರೊಫೆಸರ್, ಪೀಟರನ ಹೊಸಕಾವ್ಯದ ಪ್ರಕಟನೆಯ ವಿಷಯವೇನಾಯಿತು ? "

ಎಂದು ಕೇಳಿದರು.

" ಆ ಜವಾಬ್ದಾರಿ ಮಿ. ಸ್ವಾಮಿ ಹೊತ್ತುಕೊಂಡಿದ್ದಾರೆ – ಮಿ. ಸ್ವಾಮಿ ಒಂದು ಸಲಹೆಯಿತ್ತಿದ್ದಾರೆ ಮಾ, ಅದಕ್ಕೆ ನೀವೇನು ಹೇಳುವಿರಿ ? "

" ಏನು ಸಲಹೆ ? "

" ನಾವೆಲ್ಲರೂ ಕೂಡಿ ಪೀಟರ್ ಕಾವ್ಯ ಪ್ರಕಟಿಸುವುದು – ನಿತ್ಯ ಪೀಟರನ್ನು ಕರೆದೊಯ್ದು ಅವನ ಕೈಯಲ್ಲೇ ಅವನ ಕಾವ್ಯವನ್ನು

ಹೈಡ್‌ಪಾರ್ಕಿನಲ್ಲಿ ಓದಿಸುವುದು – ನಾವೆಲ್ಲಾ ಅಲ್ಲೇ ಕಾವ್ಯಗ್ರಂಥದ ಪ್ರತಿಗಳನ್ನೂ ಮಾರುವುದು."

"ಸೊಗಸಾದ ಯೋಚನೆ ಪ್ರೊಫೆಸರ್. ನಿಮ್ಮ ಜತೆ ಬರಲು ನಾನೂ ಸಿದ್ಧಳಾಗಿದ್ದೇನೆ."

ಪೀಟರ್ ಕಣ್ಣುಗಳಿಂದ ಧಾರೆ ಹೊರಟಿತು.

"ದಿಸ್ ಈಸ್ ಟೂ ಮಚ್ ಫಾರ್ ಮಿ (This is too much for me)" ಎಂದ

ನಾರಾಯಣಸ್ವಾಮಿ ಪೀಟರ ಹೆಗಲಮೇಲೆ ಕೈಯಿಟ್ಟು

"ಪೀಟ್, ಯು ಡಿಸರ್ವ್ ಮಚ್ ಮೋರ್ (Pete, you deserve much more)" ಎಂದ

ಫ್ಲೋರಾ ಇಂದುಮತಿಗೆ ಸೊಸೈಟಿಯ ಸಮಗ್ರ ಪರಿಚಯ ಮಾಡಿಕೊಟ್ಟು ಅವಳನ್ನು ತನ್ನ ರೂಮಿಗೆ ಕರೆದೊಯ್ದು ಕುಳ್ಳಿರಿಸಿ ಕೊಂಡು

"ಮಿಸಸ್ ಸ್ವಾಮಿ ನಿಮ್ಮ ಹಾಗೆ ಸೀರೆಯುಡುವುದನ್ನು ನನಗೆ ಕಲಿಸಿಕೊಡುವುದಿಲ್ಲವೇ ?"

"ಅದಕ್ಕೇನು – ನಾನು ನಾಳೆ ಊರಿಗೆ ಹೊರಟಿರುವೆನಲ್ಲಾ ಫ್ಲೋರಾ."

"ನಾಳೆ !"

"ಹೌದು ತಾಯಿಗೆ ಕಾಯಿಲೆ – ಕೂಡಲೇ ಊರಿಗೆ ಹೋಗ ಬೇಕಾಗಿದೆ."

"ಇಷ್ಟು ದಿನ ಇಲ್ಲಿಗೇಕೆ ನೀವು ಬರಲಿಲ್ಲ."

ಆ ಪ್ರಶ್ನೆಗೆ ಉತ್ತರ ಹೇಳುವುದು ಇಂದುಮತಿಗೆ ಸುಲಭಸಾಧ್ಯ ವಾಗಲಿಲ್ಲ.

"ನನ್ನ ಆಹ್ವಾನ ಯಜಮಾನರು ತಿಳಿಸಲಿಲ್ಲವೇ ?"

"ತಿಳಿಸಿದರು."

"ಏಕೆ ಬರಲಿಲ್ಲ ಸೋದರಿ ?"

ಉತ್ಕಂಠಳಾಗಿ ಫ್ಲೋರಾ ಕೇಳಿದ ಪ್ರಶ್ನೆ ಇಂದುಮತಿ ತಲೆ

ತಗ್ಗಿಸುವಂತೆ ಮಾಡಿತು.

" ನಾನು ನಿಮಗೆ ಅನ್ಯಾಯಮಾಡಿದ್ದೇನೆ ಫ್ಲೋರಾ. "

" ನನಗೆ ಅನ್ಯಾಯವೇ ? "

" ಹೌದು – ನೀವು ಮಾಡುತ್ತಿರುವ ದಿವ್ಯಗೆಲಸವನ್ನು ತಾತ್ಸಾರ ದಿಂದ ಕಂಡೆ – ನಿಮ್ಮ ಮನೆ ಕಾಳಿಕಂಗಾಳಿಗಳ ನಿಲ್ದಾಣವೆಂದು ಕರೆಯಲೂ ನಾನು ಹಿಂಜರಿಯಲಿಲ್ಲ."

" . .. . . . . "

" ಲಂಡನ್ನಿನ ಉನ್ನತ ಸಾಮಾಜಿಕರ ಜತೆ ಓಡಿಯಾಡುತ್ತಿದ್ದ ನನ್ನ ತಲೆ ಕೆಟ್ಟುಹೋಗಿತ್ತು ಲೇಡಿ ಫಾಕ್ಸ್, ಮಿಸಸ್ ಚೇಸ್, ಲೇಡಿ ಕ್ವೀನ್ಸ್‌ಬರಿ ಇವರ ಬಣ್ಣಬಣ್ಣದ ಜೀವನಕ್ಕೆ ನಾನೂ ಬೆರಗಾ ಗಿದ್ದೆ. ಪತಿ ಹಲವು ಸಲ ವಿವೇಕ ಹೇಳಿದರು. ಅವರ ಮಬ್ಬಿನಲ್ಲಿದ್ದ ನನಗೆ ತಿಳುವಳಿಕೆ ಬರಲಿಲ್ಲ ಈ ದಿನ. "

" ಈ ದಿನ.. ? "

" ಈ ದಿನವೇ ಸುದಿನ. ನೀನಾ, ಮ್ಯಾಕೆ ಪರಿಚಯವಾಯಿತು – ನಿಮ್ಮ ಪರಿಚಯವಾಯಿತು. "

" ನಿಮ್ಮ ಸಂಸ್ಕೃತಿಯ ಮಟ್ಟವು ಬಹು ದೊಡ್ಡದು ಸೋದರಿ ? "

" ಏಕೆ ಹಾಗೆನ್ನುವಿರಿ ? "

" ತಪ್ಪನ್ನು ಒಪ್ಪಿಕೊಳ್ಳುವ ನಿಮ್ಮ ನಿಷ್ಕಲ್ಮಷತೆ ಕಂಡು ನಾನು ಬೆರಗಾಗಿದ್ದೇನೆ. "

" ನಿಮ್ಮನ್ನೂ ನಿಮ್ಮ ಯಜಮಾನರನ್ನೂ ನನ್ನ ಯಜಮಾನರು ಪೂಜಿಸುವುದು ನ್ಯಾಯವೆಂದೆಣಿಸಿದೆ. "

" ನಿಮ್ಮ ಯಜಮಾನರಿಂದ ನಾವು ಬಹಳ ಸಹಾಯ ಪಡೆದಿ ದ್ದೇವೆ. ಅವರು ಹಣ ಸಹಾಯವನ್ನೂ ಮಾಡಿದರು – ಅದಕ್ಕೂ ಹೆಚ್ಚಿನ ದೆಂದರೆ ಅವರ ನಿರ್ವ್ಯಾಜ ಅಂತಃಕರಣ. "

" ಡಾ. ಚಂದ್ರಶೇಖರ್ ಅವರಿಗೆ ಮಾಡಿರುವ ಉಪಕಾರಕ್ಕೆ ಪ್ರತ್ಯುಪಕ್ಕಾರ ಮಾಡುವುದು ನಮ್ಮಿಂದ ಶಕ್ಯವಿಲ್ಲ. — ನಾನೊಂದು ಪ್ರಶ್ನೆ ಕೇಳುತ್ತೇನೆ, ಬೇಸರಪಟ್ಟುಕೊಳ್ಳಬೇಡಿ. "

" ಇಲ್ಲ – ಕೇಳಿ. "

" ಡಾಕ್ಟರ ಕೈಹಿಡಿದು ನೀವು ಸುಖವಾಗಿರುವಿರಾ ? "

" ನನ್ನ ಅನುಭವವನ್ನು ಸುಖ ಶಬ್ದ ವಿವರಿಸಲಾರದು. ನನ್ನ ಜೀವನ – ನನ್ನಂಥ ನೂರಾರು ಮಂದಿಗಳ ಜೀವನ ಕಟ್ಟಿದ ಮಹಾ ಶಿಲ್ಪಿ ಅವರು. "

" ನಾನು ಕೇಳಿದುದು ಆ ದೃಷ್ಟಿಯಿಂದಲ್ಲ ವರ್ಗ, ವರ್ಣ, ದೇಶ ವಿಭೇದಗಳು ನಿಮ್ಮ ಜೀವನದಲ್ಲಿ ಸಮಸ್ಯೆಗಳನ್ನು ತಂದೊಡ್ಡಿಲ್ಲವೇ ? ಶ್ರೀಮಂತವರ್ಗದಲ್ಲಿ ಈ ಸಮಸ್ಯೆ ತಾಂಡವವಾಡುತ್ತಿರುವುದನ್ನು ಕಂಡೆ – ಅದಕ್ಕಾಗಿ ಕೇಳಿದೆ. "

" ಮೊದಮೊದಲು ಸ್ವಲ್ಪ ಕಷ್ಟವಾಯಿತು ನಮ್ಮ ಮನೆಗೆ ಸಾಮಾನು ಕೊಡುತ್ತಿದ ಒಬ್ಬ ಕಿರಾಣಿ ಅಂಗಡಿಯವನು–ಅವನು ಸ್ಕಾಚ್ (Scotch) – ಸಾಮಾನು ಕೊಡಲು ನಿರಾಕರಿಸಿದ. ಕೆಲವು ಹೋಟಿಲಿನವರು ನನಗೂ ಡಾಕ್ಟರಿಗೂ ಪ್ರವೇಶಕೊಡಲು ನಿರಾಕರಿಸಿದರು. ಇದೇ ಸೋಹೋದಲ್ಲಿಯೇ ಕೆಲವು ತಾಯಂದಿರು ತಮ್ಮ ಮಕ್ಕಳಿಗೆ ಹೇಳಿಕೊಟ್ಟು ನಮ್ಮ ಮನೆಯ ಮೇಲೆ ಕಲ್ಲು ಬೀರಿಸಿದರು ಡಾಕ್ಟರು ಎಲ್ಲವನ್ನೂ ಸಹನೆಯಿಂದ ಅನುಭವಿಸಿದರು ಒಂದು ದಿನವೂ ಅವರ ಬಾಯಲ್ಲಿ ಅಪಶಬ್ದ ಬರಲಿಲ್ಲ ನಾನೊಮ್ಮೊಮ್ಮೆ ಕಣ್ಣೀರು ಹಾಕಿದರೆ, 'ಅಳಬೇಡ ಫ್ಲೋ–ನೂರಾರು ವರ್ಷಗಳಿಂದ ಬೆಳೆದುಬಂದಿರುವ ಪೂರ್ವಗ್ರಹ ದುರಭಿಪ್ರಾಯ ಒಂದು ದಿನದಲ್ಲಿ ಅಳಿಸಿಹೋಗುವುದಿಲ್ಲ. ಇಂಗ್ಲಿಷ್ ಹೃದಯದಲ್ಲಿಯೂ ಮಮತೆ ಇದೆ, ಸಹಾನುಭೂತಿ ಇದೆ. ಇಂದು ನಮ್ಮ ಮೇಲೆ ಕಲ್ಲೊಗೆದಿರುವ ಜನವೇ ನಾಳೆ ಹೂವೆಸೆಯುತ್ತಾರೆ ' ಎಂದು ಸಮಾಧಾನ ಹೇಳುತ್ತಿದ್ದರು ಅವರ ಮಾತೇ ಸತ್ಯವಾಯಿತು. ನಾವು ' ಈಸ್ಟ್ ವೆಸ್ಟ್ ಸೊಸೈಟಿ ' ಸ್ಥಾಪಿಸಿದಮೇಲೆ ಹತ್ತಾರು ತಾಯಂದಿರೇ ಬಂದು, ತಮ್ಮ ತಪ್ಪನ್ನೊಪ್ಪಿಕೊಂಡು ನಮ್ಮ ಕೆಲಸಕ್ಕೆ ಹಲವು ಬಗೆಯಲ್ಲಿ ನೆರವಾದರು ಇದೇ ಕಾಲಕ್ಕೆ ನಮಗೆ ಪ್ರೊ. ಡ್ರೂ ಅವರ ಪರಿಚಯವಾಯಿತು. ತನು, ಮನ, ಧನವನ್ನವರು ಸೊಸೈಟಿಯ ಕೆಲಸಕ್ಕೆ ಧಾರೆಯೆರೆದುದಲ್ಲದೆ, ನನಗೂ ಡಾಕ್ಟರಿಗೂ ರಕ್ಷಣೆಯಿತ್ತರು. ಸಮಾಜದಲ್ಲಿ

ಪ್ರೊಫೆಸರಿಗಿರುವ ಸ್ಥಾನದಿಂದ ನಮ್ಮ ತಂಟೆಗೆ ಬರಲು ಯಾರಿಗೂ ಧೈರ್ಯವಾಗಲಿಲ್ಲ ಶ್ರೀಮಂತವರ್ಗದ ಹಲವರ ಸಹಾಯ ದೊರೆಯು ವಂತೆ ಮಾಡಿದವರೂ ಪ್ರೊ. ಡ್ರೂ ಅವರೇ. ”

“ ಡಾಕ್ಟರನ್ನು ನೀವು ಬಹಳ ಸುಖಿಗಳನ್ನಾಗಿ ಮಾಡಿರುವಿರಿ.”

“ ಅದರಲ್ಲಿ ನನ್ನ ಪ್ರಯತ್ನ ತೀರ ಸ್ವಲ್ಪ. ಡಾಕ್ಟರ್ ಮನಸ್ಸೇ ಆನಂದದ ಕಡಲು (Ocean of bliss) ಅವರ ಸಮೀಪಗತನಾದ ವ್ಯಕ್ತಿ ಸಂತೋಷಿಯಾಗಲೇ ಬೇಕು.”

“ ಸೋದರಿ ಇಂಗ್ಲೆಂಡ್ ಬಿಟ್ಟು ಹೋಗಲು ಈಗ ನಿಜವಾಗಿ ನನ್ನ ಮನಸ್ಸಿಗೆ ವ್ಯಾಕುಲವಾಗುತ್ತಿದೆ ”

“ ಹೋಗಿಬನ್ನಿ – ನಿಮ್ಮ ತಾಯಿಯವರ ಆರೋಗ್ಯ ಸುಧಾರಿ ಸುತ್ತಲೇ ಬರುವಿರಲ್ಲವೆ ? ”

“ ಖಂಡಿತ ಬರುತ್ತೇನೆ. ”

ಫ್ಲೋರಾ ಎದ್ದು ಹೋಗಿ, ತಾನೇ ಕೈಯಲ್ಲಿ ಹೆಣೆದಿದ್ದ ಒಂದು ಉಣ್ಣೆಯ ಶಾಲು ತಂದು, ಇಂದುಮತಿಯ ತಲೆತುಂಬ ಹೊದೆಸಿ

“ ಲಂಡನ್ ಹವ ನಂಬಲು ಸಾಧ್ಯವಿಲ್ಲ. ತಲೆ, ಕುತ್ತಿಗೆ ಗಾಳಿಗೆ ಒಡ್ಡಬೇಡಿ. ” ಎಂದಳು.

ಇಂದುಮತಿ ನಿರುತ್ತರಳಾಗಿ ಫ್ಲೋರಾನನ್ನು ಅಪ್ಪಿ ಅವಳ ಭುಜ ವನ್ನು ಕಂಬನಿಯಿಂದ ತೋಯಿಸಿದಳು.

ಹಜಾರಕ್ಕೆ ಫ್ಲೋರಾ, ಇಂದುಮತಿ ಹಿಂದಿರುಗಲು ಪ್ರೊಫೆಸರು

“ನೀವು ಬರುವ ಆಸೆಯನ್ನೇ ನಾವು ಬಿಟ್ಟುಬಿಟ್ಟಿದ್ದೆವು” ಎಂದರು.

“ನಾವು ನಾವು ಬಹಳ ಮಾತನಾಡಿಕೊಳ್ಳುವುದಿತ್ತು ಪ್ರೊಫೆಸರ್.”

ಎಲ್ಲರೂ ಓಷೀತಾಯಿ, ಫ್ಲೋರಾ, ಡಾ. ಚಂದ್ರಶೇಖರರ ಅಪ್ಪಣೆ ಪಡೆದು ಹೊರಟರು.

೨೩

ಜವರೇಗೌಡರು, ಷರೀಫ್ ಸಾಹೇಬರ ಸಲಹೆ ಪಡೆಯದೆ ಮನೆ ಕೊಳ್ಳುವುದಕ್ಕೆ ಹೋಗಬಾರದೆಂದು ಮಾಧವರಾಯ ನಿರ್ಧರಿಸಿದ.

ಅವರು ಗದ್ದೆ ಕೊಯ್ಲು ಮುಗಿಸಿಕೊಂಡು ಬರಲು ಎರಡು ವಾರ ಗಳಾದವು

ಗೌಡರಿಗೂ, ಷರೀಫ್ ಸಾಹೇಬರಿಗೂ ಮಾಧವರಾಯ ಈಚಿನ ವಿದ್ಯಮಾನಗಳನ್ನು ವಿವರಿಸಿ

" ನಾಣಿ ಮನಸ್ಸಿನಲ್ಲಾಗಿರುವ ಬದಲಾವಣೆ ನನಗೆ ವಿಶೇಷ ತೃಪ್ತಿ ಶಾಂತಿಯನ್ನಿತ್ತಿದೆ. ನಾಣಿ ಇಷ್ಟರಮಟ್ಟಿಗಾಗುತ್ತಾನೆಂದು ಕನಸಿ ನಲ್ಲಿಯೂ ಭಾವಿಸಿರಲಿಲ್ಲ. "

" ತಮಗೆ ಅನುಮಾನವಿದ್ದಿರಬಹುದು. ನನಗೆ ಅನುಮಾನವಿರ ಲಿಲ್ಲ ನಾರಾಯಣಸ್ವಾಮಪ್ಪ ಇಲ್ಲಿಗೆ ಯಾವಾಗ ಬರುತ್ತಾರೆ ? "

" ಆ ವಿಷಯ ಬರೆದಿಲ್ಲ. ಡಾಕ್ಟರೇಟಿಗೆ ಥೀಸಿಸ್ ಬರೆಯುತ್ತಿದ್ದಾ ನಂತೆ ಅದು ಮುಗಿದಮೇಲೆ ಬರಬಹುದು. ಅವನು ಬರುವ ವೇಳೆಗೆ ಸರಿಯಾದ ಮನೆ ಮಾಡಿರಬೇಕೆಂದು ನನ್ನ ಇಚ್ಛೆ. "

" ಆಗಬಹುದು. "

" ನಾಣಿಯೇ ಹಣ ಕಳಿಸಿದ್ದಾನೆ ಗೌಡರೆ–ಮೂವತ್ತು ಸಾವಿರ ರೂಪಾಯಿ ! "

" ಸಂಪಾದನೆ ಚೆನ್ನಾಗಿರಬಹುದು. "

" ಹಣ ಕೈಗೆ ಬಂದಾಗ ನನ್ನ ಕಣ್ಣು ನಾನೇ ನಂಬಲಿಲ್ಲ. ನನ್ನ ಕಣ್ಣುಮುಂದಿನ ಹುಡುಗ ಮೂವತ್ತು ಸಾವಿರ ರೂಪಾಯಿ ಸಂಪಾದಿ

ಸಿದನೇ ಎಂದು ಆಶ್ಚರ್ಯಪಟ್ಟೆ."

"ಮನೆ ಎಷ್ಟರಲ್ಲಿರಬೇಕು ?"

"ಇಪ್ಪತ್ತೈದುಸಾವಿರ. ಉಳಿದದ್ದು ಖರ್ಚಿಗೆ ಬೇಕಾಗುತ್ತದೆ."

"ಸರಿ-ನಡೆಯಿರಿ ಹೋಗೋಣ–ಶುಭಸ್ಯ ಶೀಘ್ರಂ" ಎಂದರು.

ನಾಲ್ಕೈದು ದಿನ ಮಾಧವರಾಯ, ಗೌಡರು, ಸಾಹೇಬರು ಬೆಂಗಳೂರು ಶೋಧಿಸಿ ಕೊನೆಗೆ ಶಂಕರಪುರದಲ್ಲಿ ಹೊಸದಾಗಿ ಕಟ್ಟಲ್ಪಟ್ಟಿದ್ದ ಅಸಿಸ್ಟೆಂಟ್ ಕಮಿಷನರ್ ಸುಬ್ರಹ್ಮಣ್ಯಂ ಅವರ ಮನೆಯನ್ನು ನೋಡಿದರು.

ಶಂಕರಪುರಕ್ಕೆ ಸುಮಾರು ಮೂರು ಫರ್ಲಾಂಗ್ ದೂರದಲ್ಲಿದ್ದ 'ಕುಮಾರ ಭವನ' ಕಟ್ಟುವುದಕ್ಕೆ ಸುಬ್ರಹ್ಮಣ್ಯಂ ಬಹಳ ಪ್ರಯಾಸಪಟ್ಟಿದ್ದರು. ದೊಡ್ಡ ಸಂಸಾರವಂದಿಗರಾದ ಸುಬ್ರಹ್ಮಣ್ಯಂ ಮನೆ ಖರ್ಚು ಪೂರೈಸಿಕೊಂಡು, ನಲವತ್ತು ಸಾವಿರ ರೂಪಾಯಿ ವ್ಯಯ ಮಾಡಿ ಮನೆ ಕಟ್ಟಿಸುವುದು, ಹೇಗೆ ಸಾಧ್ಯ ಎಂಬ ಅನುಮಾನ ಹಲವರ ಮನಸ್ಸಿನಲ್ಲಿ ಹುಟ್ಟಿತ್ತು. 'ಆ್ಯಂಟಿ ಕರಪ್ಷನ್ ಡಿಪಾರ್ಟ್‌ಮೆಂಟ್' ನವರು (Anti-Corruption department) ತನಿಖೆ ಆರಂಭಿಸಿದ್ದರು. ಮನೆ ಮಾರಿ, ಸಾಲ ತೀರಿಸಿದ ನೆಪ ಒಡ್ಡಿ ಈ ಕುತ್ತಿನಿಂದ ಪಾರಾಗುವುದೇ ಸುಬ್ರಹ್ಮಣ್ಯಂ ಅವರ ಮುಂದಿದ್ದ ದಾರಿ.

"ಪಾಪ–ಇಷ್ಟು ಕಷ್ಟಪಟ್ಟು, ಮನೆ ಚೆನ್ನಾಗಿ ಕಟ್ಟಿದ್ದಾರೆ ಅದರಲ್ಲಿ ಅವರು ಒಂದು ದಿನವೂ ವಾಸಮಾಡಲಿಲ್ಲವಲ್ಲಾ !"

ಎಂದು ಜವರೇಗೌಡರು ವಿಷಾದಪಟ್ಟರು.

"ರಾಯರಿಗೋಸ್ಕರವೇ ಸುಬ್ರಹ್ಮಣ್ಯಂ ಮನೆ ಕಟ್ಟಿಸಿದ ಹಾಗೆ ಕಾಣುತ್ತದೆ ಗೌಡರೇ"

ಎಂದು ಷರೀಫ್ ಸಾಹೇಬರು ಸಮಾಧಾನ ಹೇಳಿದರು.

ಮಾಧವರಾಯ ಗೋದಮ್ಮನವರು, ಕಮಲ, ಪದ್ಮ, ಶ್ರೀದೇವಿಯನ್ನು ಕರೆದುಕೊಂಡು ಹೋಗಿ ಮನೆ ತೋರಿಸಿಕೊಂಡು ಬಂದ.

ಅತ್ಯಾಧುನಿಕ ರೀತಿಯಲ್ಲಿ ರೆಯಿನ್‌ಫೋರ್ಸ್ಡ್ ಕಾಂಕ್ರೀಟಿನಲ್ಲಿ (Re-inforced concrete) ಕಟ್ಟಲ್ಪಟ್ಟಿದ್ದ ಮನೆ ನೋಡಿ ಗೋದಮ್ಮ

ನವರು

" ಇದು ಮನೆಯಲ್ಲ—ಅರಮನೆ ಮಾಧೂ " ಎಂದರು.

" ಹೌದಮ್ಮ – ಚೆನ್ನಾಗಿ ಕಟ್ಟಿದ್ದಾರೆ "

" ಬೆಲೆಯೆಷ್ಟು ? "

" ನಲವತ್ತೈದು ಸಾವಿರ ಕೇಳುತ್ತಿದ್ದಾರ ನಲವತ್ತಕ್ಕೆ ಒಪ್ಪಿಸುವುದಾಗಿ ಜವರೇಗೌಡರು ಹೇಳಿದ್ದಾರೆ "

" ನಿನ್ನ ಕೈಯಲ್ಲಿರುವುದು ಮೂವತ್ತೇ—ಉಳಿದ ಹಣಕ್ಕೇನು ಮಾಡುತ್ತೀ ?"

" ಸಾಲ ಮಾಡಬೇಕು. "

" ಸಾಲ ! ತೀರಿಸುವ ಬಗೆ ? "

" ದುಡಿದು ಸಂಪಾದಿಸಬೇಕಮ್ಮ – ಕೈಗೆ ಬಂದಿರುವುದನ್ನು ಬಿಟ್ಟರೆ ಇಂಥ ಅವಕಾಶ ಸಿಕ್ಕುವುದಿಲ್ಲ. "

" ಸಾಲ ಮಾಡಿ ನೀನು ಧಾವಂತಪಟ್ಟುಕೊಳ್ಳಬೇಡಪ್ಪ ! "

" ನಾಣಿ ಗುರುಬಲ ಚೆನ್ನಾಗಿದೆಯಮ್ಮ—ನನಗಿಂತ ಮೊದಲೇ ಅವನು ಸಾಲ ತೀರಿಸಬಹುದು. "

" ಗೌಡರು ಏನಂದರು ?"

" ಯಾವ ಕಾರಣಕ್ಕೂ ಈ ಮನೆ ಬಿಡಕೂಡದೆಂದರು. "

" ನೋಡಪ್ಪ, ನನಗೇನು ತಿಳಿಯುತ್ತೆ – ಅವರು ಹೇಗೆ ಹೇಳಿದರೆ ಹಾಗೆ ಮಾಡು. "

" ಹೊಸಮನೆ 'ಗೃಹಪ್ರವೇಶ' ಇಟ್ಟುಕೊಂಡು, ನಾಲ್ಕು ಜನಕ್ಕೆ ಅನ್ನಹಾಕಬೇಕು ರಾಮಣ್ಣಾಚಾರ್ಯರಿಗೆ ಈಗಲೇ ಒಂದು ಮಾತು ತಿಳಿಸಿದ್ದರಾಗಿತ್ತು. "

" ಕಾಗದ ಪತ್ರ ರಿಜಿಸ್ಟರ್ ಆದಕೂಡಲೆ ರಾಮಣ್ಣಾಚಾರ್ಯರಿಗೆ ಬರೆದು ತಿಳಿಸುತ್ತೇನೆ. "

ಸುಬ್ರಹ್ಮಣ್ಯಂ ನಲವತ್ತೈದು ಸಾವಿರ ಕೇಳಿದ್ದುದರ ಉದ್ದೇಶ ನಲವತ್ತಾದರೂ ಗಿಟ್ಟಲಿ ಎಂಬುದೇ ಆಗಿತ್ತು. ಆ ಗುಟ್ಟು ಕಂಡು ಹಿಡಿದ ಜವರೇಗೌಡರು ಮೂವತ್ತೈದು ಸಾವಿರದಿಂದ ಆರಂಭಿಸಿ,

ನಲವತ್ತಕ್ಕೆ ಮನೆಗೊತ್ತುಮಾಡಿ ಹತ್ತುಸಾವಿರ ರೂಪಾಯಿ ಮುಂಗಡ ವಾಗಿ ಕೊಟ್ಟು, ಮಾಧವರಾಯನ ಹೆಸರಿಗೆ ರಶೀತಿ ಬರಸಿದರು

" ಸುಬ್ರಹ್ಮಣ್ಯಂ ಅವರಿಗೆ ಅನ್ಯಾಯವಾಗುವುದು ಬೇಡ ಗೌಡರೇ. ನಮಗೆ ಮನೆ ಬಿಟ್ಟುಕೊಟ್ಟು, ಆ ಜೀವ ಉಸ್ಸೆನ್ನಬಾರದು."

" ಅವರು ಖರ್ಚುಮಾಡಿರುವುದೆಲ್ಲಾ ಮೂವತ್ತೈದೇ ಸಾವಿರ ಸ್ವಾಮಿ. ಅಲ್ಲಿಗೂ ನಾವು ಅವರಿಗೆ ಐದುಸಾವಿರ ಲಾಭ ಕೊಟ್ಟಂತಾ ಯಿತು. ಇನ್ನೂ ದೀಪ, ನಲ್ಲಿ ಕೆಲಸವಾಗಬೇಕು. ಅದಕ್ಕೆ ಕನಿಷ್ಠಪಕ್ಷ ಸಾವಿರ ಖರ್ಚಾಗುತ್ತದೆ. "

ಮಾಧವರಾಯ ಗೌಡರ ಕೈಗೆ ಮೂವತ್ತು ಸಾವಿರ ರೂಪಾಯಿ ಗಳಿಗೆ ಚೆಕ್ ಬರೆದಿತ್ತು

" ನಿಮಗೆ ನಾನು ಹತ್ತುಸಾವಿರ ಕೊಡಬೇಕು ಗೌಡರೇ !"

" ಇದು ಯಾವ ದೊಡ್ಡ ವಿಷಯವೆಂದು ನೀವು ಯೋಚಿಸ ಬೇಕು "

" ಕಾರಣವಿದೆ. ನೀವು ನನಗೆ ಇನ್ನೂ ಐದುಸಾವಿರ ಕೊಡಲು ಸಾಧ್ಯವೇ ? "

" ತೆಗೆದುಕೊಳ್ಳಿ ಸ್ವಾಮಿ."

" ನಾನು ನಿಮಗೆ ಒಟ್ಟು ಹದಿನೈದು ಸಾವಿರ ಕೊಡಬೇಕಾಗು ತ್ತದೆ. "

" . . . . . . . . . . . . . . . "

" ನೀವೇ ನಿಂತುಕೊಂಡು ದೀಪ, ನಲ್ಲಿ ಕೆಲಸಮುಗಿಸಿ; ನಮ್ಮನ್ನು ಗೃಹಪ್ರವೇಶಮಾಡಿಸಿ ಹೋಗಬೇಕು. "

" ಹೊಸಮನೆಯಲ್ಲಿ ಹೋಳಿಗೆ ತಿನ್ನದೆ ನಾನು ಊರಿಗೆ ಹೋಗು ತ್ತೇನೆಯೇ ? "

" ಕಾಗದ ಪತ್ರ ನಾಣಿ ಹೆಸರಿಗೇ ಮಾಡಿಸಿ. "

" ತಮ್ಮ ಹೆಸರಿನಲ್ಲಿದ್ದರೆ ಏನು ಬಾಧಕ. "

" ಬೇಡ – ಹಣ ಅವನದು – ಅವನ ಹೆಸರಿನಲ್ಲಿಯೇ ಇರಲಿ."

ಕಾಗದ ಪತ್ರ ರಿಜಿಸ್ಟರ್ ಆದೊಡನೆಯೇ ಮಾಧವರಾಯ

ರಾಮಣ್ಣಾಚಾರ್ಯರಿಗೆ ಕಾಗದ ಬರೆದು ಮನೆ ಕೊಂಡಿರುವ ವಿಷಯ ತಿಳಿಸಿ, ಗೃಹಪ್ರವೇಶಕ್ಕೆ ಒಳ್ಳೆಯ ಮುಹೂರ್ತ ಇಟ್ಟುಕೊಡಬೇಕೆಂದೂ, ಮುಹೂರ್ತಕ್ಕೆ ಮೂರು ದಿವಸ ಮುಂಚೆ ಬಂದು ಶುಭಕಾರ್ಯ ಸಾಂಗವಾಗಿ ನೆರವೇರಿಸಿಕೊಡಬೇಕೆಂದೂ ಪ್ರಾರ್ಥಿಸಿದ.

ಅಂದೇ ನಾರಾಯಣಸ್ವಾಮಿಗೂ ಮನೆಕೊಂಡ ವಿಷಯ ತಿಳಿಸಿ ಕಾಗದ ಬರೆದ

ಜವರೇಗೌಡರು ಮಾಧವರಾಯನ ಹೊಸ ಮನೆಯ ಚಿಲ್ಲರ ಕೆಲಸಗಳನ್ನು ನಿರ್ವಹಿಸುವುದರಲ್ಲಿ ಉದ್ಯುಕ್ತರಾದರು.

ದೀಪ, ನಲ್ಲಿಗಳನ್ನಿಡಿಸುವುದಲ್ಲದೆ ಕಾಂಪೌಂಡಿನಲ್ಲಿ ಸಂಗ್ರಹವಾಗಿದ್ದ ಮಣ್ಣು, ಇಟ್ಟಿಗೆಯ ಚೂರುಗಳನ್ನು ಹೊರಗೆ ಸಾಗಿಸಿ ಶುಚಿ ಮಾಡಿಸಿದರು.

'ಕುಮಾರ ಭವನ' ಪ್ರವೇಶಿಸಿದೊಡನೆಯೇ ವೆರಾಂಡ; ವೆರಾಂಡದೊಳಗೆ ಪ್ರವೇಶಿಸಿದೊಡನೆಯೇ ಬಲಗಡೆಗೆ ಹಜಾರ, ಎಡಗಡೆಗೆ ಆಫೀಸ್ ರೂಮ್; ಇವುಗಳ ಮಧ್ಯೆ ಮಹಡಿಯ ಮೇಲೆ ಹೋಗಲು ಮೆಟ್ಟಿಲುಗಳು; ಮೆಟ್ಟಿಲು ಬದಿಗಿದ್ದ ಮಾರ್ಗದತ್ತಿತ್ತ ಎರಡು ರೂಮುಗಳು. ಅವುಗಳನ್ನು ದಾಟಿಹೋದರೆ ಬಲಗಡೆಗೆ ದೇವರಮನೆ, ಅಡಿಗೆಯ ಮನೆ, ಎಡಗಡೆಗೆ ಉಗ್ರಾಣ, ಹಿಂಬದಿಗೆ ಮತ್ತೊಂದು ವೆರಾಂಡ, ಸ್ನಾನಗೃಹ.

ಕೆಳಭಾಗದಲ್ಲಿದ್ದಷ್ಟು ಕಟ್ಟಡ ಮೇಲ್ಭಾಗದಲ್ಲಿರಲಿಲ್ಲ. ಮಹಡಿಯ ಮೇಲೆ ಕೆಳಗಿದ್ದಂತೆ ವೆರಾಂಡ, ಆಫೀಸ್ ರೂಮ್, ಹಜಾರ, ಮತ್ತೆ ಎರಡು ರೂಮುಗಳಿದ್ದವು.

ಗೌಡರೂ, ಷರೀಫ್‌ಸಾಹೇಬರೂ ಮಹಡಿಯ ಮೇಲೆ ನಿಂತು ಅಂದಾಜು ಹಾಕಿದರು.

"ನಾರಾಯಣಸ್ವಾಮಿಯ ಹೆಂಡತಿ ಲಕ್ಷಾಧಿಕಾರಿಯ ಮಗಳು ಎಂದು ಕೇಳಿದ್ದೇನೆ ಗೌಡರೇ"

ಎಂದು ಸಾಹೇಬರು ಸೂಚಿಸಿದರು.

"ಹೌದು. ನಾಳೆ ಆಯಮ್ಮ ಇಲ್ಲಿಗೆಬಂದು ಬೇಸರಪಟ್ಟುಕೊಳ್ಳ

ಬಾರದು ”

“ ರಾಯರೂ, ದೊಡ್ಡಮ್ಮಾವರೂ ಕೆಳಗಡೆ ಇರುತ್ತಾರಲ್ಲವೇ ?”

“ ಹೌದು. ಮಹಡಿ ಹತ್ತಿ ಇಳಿಯುವುದಕ್ಕೆ ಅವರಿಗೆಲ್ಲಿ ಸಾಧ್ಯ?”

“ ನಾರಾಯಣಸ್ವಾಮಿ, ತ ನನ ಹೆಂಡತಿಗೆ ಅನುಕೂಲವಾಗುವಂತೆ ಮಹಡಿ ಅಚ್ಚುಗಟ್ಟುಮಾಡಿ–ಮಹಡಿಯ ಮೇಲೆ ಸ್ನಾನಗೃಹ, ಫ್ಲಷ್ ಕಟ್ಟಿಸಿ ಇದರ ಸಮಸ್ತ ಖರ್ಚು ನನಗಿರಲಿ ಮಹಡಿಗೆ ಬೇಕಾಗುವ ಫರ್ನೀಚರ್ ನಾನು ಒದಗಿಸುತ್ತೇನೆ ?”

“ ರಾಯರೇನನ್ನುವರೋ ? ”

“ ಈ ಬಾರಿ ನಾವು ರಾಯರಮಾತು ಕೇಳುವುದು ಬೇಡ ”

“ ನಿಮ್ಮ ತಲೆಯಮೇಲೆ ತುಂಬ ಖರ್ಚು ಬಿದ್ದಂತಾಗುತ್ತದೆ. ”

“ ನೀವೂ ಹೀಗೇಕ ಮಾತಾಡುವಿರಿ ಗೌಡರೇ – ಆ ಮಹಾತಾಯಿಯ ಆಶೀರ್ವಾದದಿಂದಲ್ಲವೇ ನಾನು ನಾಲ್ಕುಕಾಸು ಕಂಡುದ್ದು ನಮ್ಮ ಮನೆಗೆ ದಯಮಾಡಿಸಿ ಅಮ್ಮಾವರು ಒಂದು ಚಮಚ ಹಾಲು ಕುಡಿದರು, ಅಂದಿನಿಂದಲೇ ನಮ್ಮ ಮನೆಯಲ್ಲಿ ಹಾಲುಕ್ಕಿ ಹರಿಯಿತು. ಅವರ ಮಗನಿಗೆ ನಾನಿಷ್ಟು ಸೇವೆ ಮಾಡದಿದ್ದರೆ ಖುದಾ ಮೆಚ್ಚುವನೇ?”

ಷರೀಫ್ ಸಾಹೇಬರು ಮಹಡಿಯ ಮೇಲಿದ್ದ ಆಫೀಸ್‌ರೂಮಿಗೆ ಕುರ್ಚಿ, ಮೇಜು, ಫ್ಯಾನ್, ಹಜಾರಕ್ಕೆ ಸೋಫಾ ಸೆಟ್ಟುಗಳು, ರೂಮಿಗೆ ಮಂಚಗಳು, ಸ್ಟೀಲ್ ಆಲ್ಮೈರಾ ಒದಗಿಸಿದುದಲ್ಲದೆ ಸ್ನಾನಗೃಹವನ್ನು ಸಜ್ಜುಗೊಳಿಸಿ ಎಲೆಕ್ಟ್ರಿಕ್ ಹೀಟರನ್ನು (Electric heater) ಹಾಕಿಸಿದರು

ಗೃಹಪ್ರವೇಶದ ಲಗ್ನ ಗೊತ್ತುಮಾಡಿ ತಿಳಿಸಿದ್ದ ರಾಮಣ್ಣಾಚಾರ್ಯರು, ವೆಂಕಮ್ಮನವರೊಂದಿಗೆ ಮೂರು ದಿವಸ ಮುಂಚಿತವಾಗಿ ಬಂದರು.

ಶ್ರಾವಣ ಶುಕ್ರವಾರ ಹೊಸಮನೆಯಲ್ಲಿ ಪೂಜೆ ಶಾಂತಿಗಳಾದವು. ಮಂಗಳಕಾರ್ಯ ಮುಗಿದ ಮೇಲೆ ಜವರೇಗೌಡರು ಆಚಾರ್ಯರನ್ನು ಹೊರಗೆ ಕರೆದು

“ ಗೇಟಿನ ಕಂಬಕ್ಕೂ ಪೂಜೆ ಮಾಡಿಸ್ವಾಮಿ ” ಎಂದರು.

ಆಚಾರ್ಯರು ಪೂಜಾ ಸಾಮಗ್ರಿಗಳನ್ನು, ಅಣಿಮಾಡಿಕೊಂಡು ಬರುವಲ್ಲಿ ಜವರೇಗೌಡರು ಗೇಟಿನ ಕಂಬದಮೇಲಿದ್ದ ' ಕುಮಾರ ಭವನ ' ಬೋರ್ಡನ್ನು ಗಾರೆಯವನ ಕೈಯಲ್ಲಿ ತೆಗೆಸಿ, ಅದರ ಸ್ಥಾನದಲ್ಲಿ ಅಮೃತಶಿಲಾಲಿಖಿತ, ' **ರುಕ್ಮಿಣಿ ಕೃಪಾ** ' ಬೋರ್ಡನ್ನಿಡಿಸಿದರು.

ಪೂಜೆಗೆ ನಿಂತ [illegible]ತಮ್ಮ ಆಚಾರ್ಯರ ಕಣ್ಣುಗಳಿಂದ ಅಭಿಷೇಕವೇ ಆಯಿತು

ಗೌಡರೇ ಮೇಲ್ವಿಚಾರಣೆ ನೋಡಿಕೊಂಡು ಮನೆಕಟ್ಟಿದ ಸಮಸ್ತ ಕೂಲಿಗಳು, ಮೇಸ್ತ್ರಿಗಳಿಗೆಲ್ಲಾ ಸುಗ್ರಾಸ ಭೋಜನ ಮಾಡಿಸಿ, ತಾಂಬೂಲ ದಕ್ಷಿಣೆಯಿತ್ತರು

ಅವರೆಲ್ಲರ ಊಟ ಮುಗಿದು ಮಾಧವರಾಯ, ಗೌಡರು, ಷರೀಫ್ ಸಾಹೇಬರು ಊಟಕ್ಕೇಳುವವೇಳೆಗೆ ಸಂಜೆ ಐದು ಗಂಟೆಯಾಯಿತು. ಗೋದಮ್ಮನವರು ತೀರ್ಥ ಪ್ರಸಾದ ಸ್ವೀಕರಿಸಿ ತೃಪ್ತರಾದರು.

ಮಾರನೆಯ ದಿನ ಊರಿಗೆ ಹೊರಟು ನಿಂತ ಗೌಡರು, ಸಾಹೇಬರನ್ನು ಬೀಳ್ಕೊಡುತ್ತಾ ಮಾಧವರಾಯ

" ನಿಮಗೆ ಕೃತಜ್ಞತೆ ಅರ್ಪಿಸಲು ಶಬ್ದಗಳನ್ನು ಜೋಡಿಸುವುದೇ ನನಗೆ ಸಾಧ್ಯವಿಲ್ಲವಾಗಿದೆ. " ಎಂದ.

" ಅಗತ್ಯವಿಲ್ಲಸ್ವಾಮಿ " ಎಂದರು.

" ಈ ಕಡೆ ಪುನಃ ಯಾವಾಗ ಬರುವಿರಿ ? "

" ನಾವು ಬರುತ್ತಲೇ ಇರುತ್ತೇವೆ. ತಾವು ಪಟ್ಟಣ ಮರೆತಂತೆ ಕಾಣುತ್ತದೆ. "

" ತಿರುಗಾಡುವ ಕಾಲ ಮುಗಿಯಿತು ಗೌಡರೇ. ಊಟ ತಿಂಡಿಯಲ್ಲಿ ಸ್ವಲ್ಪ ಹೆಚ್ಚು ಕಡಿಮೆಯಾದರೂ ತುಂಬ ತೊಂದರೆಯಾಗುತ್ತದೆ. ಆ ಪುಣ್ಯಾತ್ಮಗಿತ್ತಿ ಜೀವಿಸಿದ್ದಾಗ ಬರಬಾರದ ಕಾಹಿಲೆಗಳೆಲ್ಲಾ ಬಂದವು. ಒಂದಕ್ಕೂ ನಾನು ಹೆದರಲಿಲ್ಲ. ಈಗ ಕೆಮ್ಮು ನೆಗಡಿಗೆ ಹೆದರಬೇಕಾಗಿದೆ. "

" ನಾರಾಯಣಸ್ವಾಮಪ್ಪನ್ನ ಬೇಗ ಬರಮಾಡಿಕೊಳ್ಳಿ. "

" ಮಗ ಹತ್ತಿರ ಇರಲಿ ಎಂದು ನಾನೂ ಬಯಸುತ್ತೇನೆ. ಆದರೆ

ಅವನ ಭವಿಷ್ಯತ್ತಿಗಡ್ಡಿಯಾಗಿ ನಾನು ಸ್ವಾರ್ಥ ಹೇಗೆ ಸಾಧಿಸಿಕೊಳ್ಳಲಿ. ... ....... . . ರಾಮಣ್ಣಾಚಾರ್ಯರ ಹೊಲದ ವ್ಯಾಜ್ಯ ಪರಿಹರಿಸಿದಿರಂತೆ-ಅವರು ನಿಮ್ಮನ್ನು ಹಾಡಿ ಹಾಡಿ ಹೊಗಳುತ್ತಿದ್ದಾರೆ. "

" ರೈತರಲ್ಲಿಯೂ ದುರಾಶೆ ಹೆಚ್ಚಿದೆ ಸ್ವಾಮಿ ಈ ರಾಜಕೀಯದವರು ಬೇರೆ ಚಿತಾವಣಿ ಮಾಡುತ್ತಾರೆ-ಹಳ್ಳಿಹಳ್ಳಿಗಳಲ್ಲಿ ಕೋಮುವಾರು ಭಾವನೆ ಬೆಳಸುತ್ತಿದ್ದಾರೆ ಎಷ್ಟೇ ಕಷ್ಟದಲ್ಲಿದ್ದರೂ ಧರ್ಮ ಬಿಡದಿದ್ದ ರೈತ ಇಂದು ಧರ್ಮಕ್ಕೆ ತಿಲೋದಕಬಿಡಲು ಸಿದ್ಧನಾಗಿದ್ದಾನೆ"

" ರೈತರೂ ಮುಂದಕ್ಕೆ ಬರಬೇಕು ಗೌಡರೇ-ಎಷ್ಟುದಿನ ಅವರು ಕಂಡವರಿಗೆ ರಕ್ತ ಸುರಿಸಿ ಉಪವಾಸವಿರಬೇಕು. "

" ಉಪವಾಸವಿದ್ದೇವೆಂದು ಕಂಡವರ ರಕ್ತ ಹೀರುವುದಕ್ಕಾಗುತ್ತದೆಯೇ ? ಸರ್ಕಾರ ರೈತನಿಗೆ ವಿದ್ಯೆ ಕೊಡಲಿ, ಹೊಲ ಕೊಡಲಿ, ಗೆಯ್ಮೆ ಮಾಡುವುದಕ್ಕೆ ಬೀಜದ ದವಸ, ಗೊಬ್ಬರ, ಎತ್ತು ಕೊಡಲಿ-ನಾನು ಬೇಡವೆನ್ನುವುದಿಲ್ಲ. ಆದರೆ ಅವನ ತಲೆ ಕೆಡಿಸಿ, ಅದರಲ್ಲಿ ದ್ವೇಷ ಅಸೂಯೆ, ಅಹಂಕಾರ ತುಂಬುವುದರಿಂದ ದೇಶ ಹಾಳಾಗಿಹೋಗುತ್ತದೆ."

" ನೀವೂ ರೈತರಲ್ಲವೇ ಗೌಡರೇ ? "

" ಹೌದು - ನಾನೂ ರೈತನಾದುದರಿಂದಲೇ ಅವರ ವಿಷಯ ಚೆನ್ನಾಗಿ ತಿಳಿದುಕೊಂಡಿದ್ದೇನೆ. "

" ನಮ್ಮ ಕಾಲ ಸುಖವಾಗಿಯೇ ಕಳೆದು ಹೋಯಿತು ಗೌಡರೇ. ನಾವೆಲ್ಲಾ ಒಂದು ಮನೆಯವರ ಹಾಗೆ ಬಾಳ್ವೆ ಮಾಡಿದೆವು. ಇಂದೂ ಕೂಡ ನನ್ನ ಕಷ್ಟಸುಖಕ್ಕಾದವರು ನಮ್ಮ ಜನರಲ್ಲ-ನಮ್ಮ ಮಕ್ಕಳು, ಮೊಮ್ಮಕ್ಕಳ ಕಾಲಕ್ಕೂ ಇದೇ ಭಾವನೆ ಇರಬೇಕೆಂದು ನಾನು ಬಯಸುತ್ತೇನೆ. " ಎಂದ.

ಅಂದೇ ಗೌಡರು, ಷರೀಫ್ ಸಾಹೇಬರು ಊರಿಗೆ ಪ್ರಯಾಣ ಬೆಳಸಿದರು.

ಗೃಹಪ್ರವೇಶದ ಮಂಗಳಕಾರ್ಯ ಮುಗಿಯಲು ರಾಮಣ್ಣಾ ಚಾರ್ಯರು ಊರಿಗೆ ಹೊರಡಲು ಚಡಪಡಿಸಿದರು

ಅವರ ಆತುರ ನೋಡಿ ನಕ್ಕು ಗೋದಮ್ಮನವರು

"ವಯಸ್ಸು ಆಗುತ್ತಾ ಆಗುತ್ತಾ ನನಗೆ ಪ್ರಾಯ ಬರುತ್ತದೆಯೇ ಆಚಾರ್ರೇ" ಎಂದು ಕೇಳಿದರು

" ಏಕೆ ತಾಯಿ ? "

" ಸಾಯುವ ಕಡೆಗಾಲದಲ್ಲಿಯಾದರೂ ಹರಿನಾಮಸ್ಮರಣೆ ಮಾಡ ಬೇಡವೇ ? "

" ನಿಮ್ಮ ಜೀವನವೇ ಅದಕ್ಕೆ ಮೀಸಲಾಗಿದೆಯಲ್ಲ. ಜಗನ್ನಾಥ ದಾಸರಾಯರು ಹೇಳಿದಂತೆ

**ಮಲಗಿ ಪರಮಾದರದಿ ಪಾಡಲು**
**ಕುಳಿತು ಕೇಳುವ ಕುಳಿತು ಪಾಡಲು**
**ನಿಲುವ ನಿಂತರೆ ನಲಿವ ನಲಿದರೆ ಒಲಿವೆ ನಿಮಗೆಂಬ |**
**ಸುಲಭನೋಹರಿ ತನ್ನವರನರ**
**ಘಳಿಗೆ ಬಿಟ್ಟಗಲನು ರಮಾಧವ**
**ನೊಲಿಸಲರಿಯದೆ ಪಾಮರರು ಬಳಲುವರು ಭವದೊಳಗೆ || "**

" ಹರಿಕಥಾಮೃತಸಾರ ಪಾರಾಯಣ ಮಾಡುವುದಾಗಿ ನೀವು ಮಾತು ಕೊಟ್ಟಿದ್ದಿರಿ ಜ್ಞಾಪಕವಿದೆಯೇ ? – ಹೊಸ ಮನೆಯ ಶಾಂತಿ ಗಾಗಿ ಭಗವನ್ನಾಮ ಸಂಕೀರ್ತನೆ ಆಗುವುದು ಅಗತ್ಯ. ನೀವು ಪಾರಾ ಯಣ ಮುಗಿಸಿಕೊಂಡೇ ಊರಿಗೆ ಹೋಗಬೇಕು. "

ಗೋದಮ್ಮನವರ ಆಜ್ಞೆಗೆ ಪ್ರತಿ ಹೇಳುವುದು ರಾಮಣ್ಣಾ ಚಾರ್ಯರಿಗೆ ಸಾಧ್ಯವಾಗಲಿಲ್ಲ.

ಪಾರಾಯಣ ಮುಗಿದು, ಮಂಗಳವಾಗುವವರೆಗೆ ಪದ್ಮನ ಸಂಸಾರ, ಶ್ರೀದೇವಿಯ ಸಂಸಾರ ತಮ್ಮ ಜತೆಯಲ್ಲಿಯೇ ಇರಬೇಕೆಂದು ಗೋದಮ್ಮ ಸೂಚಿಸಿದರು.

ಪದ್ಮ, ಶ್ರೀದೇವಿ ಹೋಗಿ ನೆರಹೊರೆಯವರಿಗೂ ಆಹ್ವಾನವಿತ್ತು ಬಂದರು.

ಆಚಾರ್ಯರು ಸೋಮವಾರ ಸಂಜೆ 'ಹರಿಕಥಾಮೃತಸಾರ' ಪಾರಾಯಣ ಆರಂಭಿಸಿದರು

"ಶ್ರವಣ ಮನಕಾನಂದವೀವುದು
ಭವಜನಿತ ದುಃಖಗಳ ಕಳೆವುದು
ವಿವಿಧ ಭೋಗಗಳಿಹ ಪರಂಗಳಲಿತ್ತು ಸಲಹುವುದು ।
ಭುವನ ಪಾವನವೆನಿಪ ಲಕುಮೀ
ಧವನ ಮಂಗಳ ಕಥೆಯ ಪರವ-
ತ್ಸವದಿ ಕಿವಿಗೊಟ್ಟಾಲಿಪುದು ಭೂಸುರರು ದಿನದಿನದಿ ॥

ಒಬ್ಬನಲಿ ನಿಂತಾಡುವನು ಮ
ತ್ತೊಬ್ಬನಲಿ ನೋಡುವನು ಬೇಡುವ
ನೊಬ್ಬನಲಿ ನೀಡುವನು ಮಾತಾಡುವನು ಬೆರಗಾಗಿ ।
ಅಬ್ಬರದ ಹೆದ್ದೈವನಿವ ಮ
ತ್ತೊಬ್ಬರನು ಲೆಕ್ಕಿಸನು ಲೋಕದೊ
ಳೊಬ್ಬನೇ ತಾ ಬಾಧ್ಯ ಬಾಧಕನಾಹ ನಿರ್ಭೀತ ॥

ಜನನಿಯನು ಕಾಣದಿಹ ಬಾಲಕ
ನೆನೆನೆನೆದು ಹಲಬುತಿರೆ ಕತ್ತಲೆ
ಮನೆಯೊಳಗಡಗಿದ್ದವನ ನೋಡುತ ನಗುತ ಹರುಷದಲಿ ।
ತನಯನಂ ಬಿಗಿದಪ್ಪಿ ದಂಬಿಸಿ
ಕನಲಿಕೆಯ ಕಳೆವಂತೆ ಮಧುಸೂ
ದನನು ತನ್ನವರಿದ್ದೆಡೆಗೆ ಬಂದೊದಗಿ ಸಲಹುವನು ॥

ಚೇತನಾಚೇತನ ವಿಲಕ್ಷಣ
ನೂತನ ಪದಾರ್ಥಗಳೊಳಗೆ ಬಲು
ನೂತನತಿ ಸುಂದರಕೆ ಸುಂದರ ರಸಕೆ ರಸರೂಪ ।
ಜಾತರೂಪೋದದ ಭವಾದ್ಯರೊ
ಳಾತತಪ್ರತಿಮಪ್ರಭಾವ ಧ
ರಾತಳದೊಳೆಮ್ಮೊಡನೆಯಾಡುತಲಿಪ್ಪ ನಮ್ಮಪ್ಪ ॥

ಎಲ್ಲಿ ಕೇಳಿದರಲ್ಲಿ ನೋಡಿದ
ರಲ್ಲಿ ಬೇಡಿದರಲ್ಲಿ ನೀಡಿದ
ರಲ್ಲಿ ಓಡಿದರಲ್ಲಿ ಆಡಿದರಲ್ಲಿ ಇರುತಿಹನು ।
ಬಲ್ಲಿದರಿಗತಿ ಬಲ್ಲಿದನು ಸರಿ
ಯಿಲ್ಲ ಇವಗಾವಲ್ಲಿ ನೋಡಲು
ಖುಲ್ಲ ಮಾನವರೊಲ್ಲನಪ್ರತಿಮ ಜಗಕೆಲ್ಲ ॥

ಪೊಂದಿಕೊಂಡಿಹ ಸರ್ವರೊಳು ಸಂ
ಬಂಧವಾಗದೆ ಸಕಲ ಕರ್ಮವ
ನಂದದಲಿ ತಾ ಮಾಡಿ ಮಾಡಿಸಿ ತತ್ಫಲಗಳುಣದೆ ।
ಕುಂದದಲೆ ಅಣು ಮಹತೆನಿಪ ಘಟ
ಮಂದಿರದಿ ಸರ್ವತ್ರ ತುಂಬಿಹ
ಬಾಂದಳದ ತೆರನಂತೆ ಇರುತಿಪ್ಪನು ರಮಾರಮಣ ॥

ಬಾಂದಳವೆ ಮೊದಲಾದುದರೊಳೊಂ
ದೊಂದರಲಿ ಪೂಜಾ ಸುಸಾಧನ
ವೆಂದೆನಿಸುವ ಪದಾರ್ಥಗಳು ಬಗೆಬಗೆಯು ನೂತನದಿ ।
ಸಂದಣಿಕೊಂಡಿಹವು ಧ್ಯಾನಕೆ
ತಂದಿನಿತು ಚಿಂತಿಸಿ ಸದಾ ಗೋ
ವಿಂದನರ್ಚಿಸಿ ನೋಡು ನಲಿನಲಿದಾಡು ಕೊಂಡಾಡು ॥

ಜಲಜನಾಭನ ಮೂರ್ತಿ ಮನದಲಿ
ನೆಲೆಗೊಳಿಸಿ ನಿಶ್ಚಲ ಭಕುತಿಯಲಿ
ಚಳಿಬಿಸಿಲು ಮಳೆಗಾಳಿಗಳ ನಿಂದಿಸದೆ ನಿತ್ಯದಲಿ ।
ನೆಲದಲಿಹ ಗಂಧವೆ ಸುಗಂಧವು
ಜಲವೆ ರಸ ರೂಪವೆ ಸುದೀಪಗ
ಳೆಲರು ಚಾಮರ ಶಬ್ದ ವಾದ್ಯಗಳರ್ಪಿಸಲು ಒಲಿವ ॥ ”

ಒಂದು ವಾರ ಸತತವಾಗಿ ಪಾರಾಯಣ ನಡೆಯಿತು. ಸ್ವಲ್ಪವೂ ನ್ಯೂನತೆ ಬಾರದಂತೆ ಆಚಾರ್ಯರು ನಿತ್ಯ ಮಾಡುತ್ತಿದ್ದ ಪೂಜೆಯನ್ನು ಕಂಡು ಗೋದಮ್ಮನವರು ಹಿರಿಹಿರಿ ಹಿಗ್ಗಿದರು

ಒಂದು ದಿನ ಟಪಾಲಿನಲ್ಲಿ ಬಂದ ಪ್ಯಾಕೆಟ್ಟನ್ನು ಸ್ವೀಕರಿಸಿದ ಕಮಲ, ಪ್ಯಾಕೆಟ್ ಒಡೆದು ನೋಡಿಕೊಂಡು ತಂದೆಯ ಬಳಿ ಓಡಿ ಬಂದು

" ಅಣ್ಣಾ ಇಲ್ಲಿನೋಡು ನಾಣಿಯ ಪುಸ್ತಕ " ಎಂದಳು.

ನಾರಾಯಣಸ್ವಾಮಿಯ " **ಭಾರತೀಯ ತಾಯಿ** " ಪುಸ್ತಕದ ಒಳಹೊರಗನ್ನು ನೋಡುತ್ತಿದ್ದ ಮಾಧವರಾಯನ ಕಣ್ಣುಗಳಲ್ಲಿ ಘಟ ಘಟನೆ ಹನಿಗಳುದುರಿದವು.

ಮಾಧವರಾಯ ಆಚಾರ್ಯರ ಕೈಗೆ ಪುಸ್ತಕವಿತ್ತು,

" ಇದಕ್ಕೂ ಪೂಜೆ ಮಾಡಿ ಆಚಾರ್ಯರೇ " ಎಂದ.

ಕಮಲ ಎಲ್ಲ ಕೆಲಸಕಾರ್ಯಗಳನ್ನೂ ಬದಿಗಿಟ್ಟು ' ಭಾರತೀಯ ತಾಯಿ ' ಗ್ರಂಥವನ್ನು ಓದಲಾರಂಭಿಸಿ ಎರಡೇ ದಿನಗಳಲ್ಲಿ ಮುಗಿಸಿದಳು. ಉಕ್ಕಿ ಹರಿಯುತ್ತಿದ್ದ ಆನಂದ ವ್ಯಕ್ತಪಡಿಸುತ್ತಾ,

" ಅಣ್ಣಾ ನೀವು ಈ ಪುಸ್ತಕ ಓದಬೇಕು. ನಾಣಿ ನಮ್ಮೆಲ್ಲರನ್ನೂ ತನ್ನ ಗ್ರಂಥದಲ್ಲಿ ತಂದುಬಿಟ್ಟಿದ್ದಾನೆ. ಅಮ್ಮನ ವಿಷಯ ಬಹಳ ಚೆನ್ನಾಗಿ ಬರೆದಿದ್ದಾನೆ " ಎಂದಳು

ಮಧ್ಯಾಹ್ನ ಊಟಾನಂತರ ಕಮಲ ' ಭಾರತೀಯ ತಾಯಿ ' ಓದಿ ಅರ್ಥ ಹೇಳುವುದೆಂದೂ, ಗೋದಮ್ಮ, ಮಾಧವರಾಯ, ಪದ್ಮ, ಆಚಾರ್ಯರು, ವೆಂಕಮ್ಮನವರು, ಸಾವಿತ್ರಮ್ಮ ಎಲ್ಲರೂ ಕುಳಿತು ಕೇಳುವುದೆಂದೂ ನಿರ್ಧಾರವಾಯಿತು. 'ಭಾರತೀಯ ತಾಯಿ'ಯ ಪ್ರವಚನ ಬಹಳ ನಿಧಾನವಾಗಿ ಮುಂದುವರಿಯಿತು. ಗ್ರಂಥವನ್ನು ಓದುತ್ತ ಓದುತ್ತ ಕಮಲ ಗದ್ಗದ ಕಂಠಳಾಗುತ್ತಿದ್ದಳು. ಯಾವುದೋ ಸನ್ನಿವೇಶಕ್ಕೆ, ವಿವರಣೆ ಕೇಳಿ ಮಾಧವರಾಯ ಉತ್ಕಂಠಿತನಾಗುತ್ತಿದ್ದ.

ಆಚಾರ್ಯರ ' ಹರಿಕಥಾಮೃತಸಾರ ' ಪುರಾಣ ಮುಗಿಯುವ ವೇಳೆಗೆ ಕಮಲನ 'ಭಾರತೀಯ ತಾಯಿ'ಯ ಪ್ರವಚನವೂ ಮುಗಿಯಿತು.

ಮಾರನೆಯ ದಿನ ಸಂತರ್ಪಣೆಯಾಯಿತು ಉಡುಗೆರೆ, ಸಂಭಾವನೆ ಸ್ವೀಕರಿಸಿ ರಾಮಣ್ಣಾಚಾರ್ಯರೂ, ವೆಂಕಮ್ಮನವರೂ ಊರಿಗೆ ಪ್ರಯಾಣ ಬೆಳೆಸಿದರು.

## ೨೫

ಇಂದುಮತಿ ಪ್ರಯಾಣ ಮಾಡಿದ ಮೇಲೆ ನಾರಾಯಣಸ್ವಾಮಿ ವೆಸ್ಟ್‌ಎಂಡ್‌ನಲ್ಲಿ ಕಲ್ಯಾಣ್‌ಜೀಯ ಅತಿಥಿಯಾಗಿರಲು ಬಯಸಲಿಲ್ಲ. 'ಪ್ರೊ. ಡ್ರೂ ಅವರ ಜತೆಯಲ್ಲೇಕಿರಬಾರದು' ಎಂಬ ವಿಚಾರವೂ ಅವನಿಗೆ ಹೊಳೆಯಿತು ಸ್ವಸ್ಥಾನಕಾರವಿಲ್ಲದೆ ಡ್ರೂ, ಪೀಟರ್ ಪಡುತ್ತಿದ್ದ ಅವಸ್ಥೆ ಕಣ್ಣಾರೆ ಕಂಡಿದ್ದ ನಾರಾಯಣಸ್ವಾಮಿ ಆ ಯೋಚನೆಯನ್ನು ಮನಸ್ಸಿನಿಂದ ದೂರಮಾಡಿದ.

' ಈಸ್ಟ್ ವೆಸ್ಟ್ ಸೊಸೈಟಿ ' ಯ ಸಮೀಪದಲ್ಲಿದ್ದ ಒಂದು ಹಳೆಯ ಮನೆಯಲ್ಲಿ ಎರಡು ರೂಮುಗಳನ್ನು ಬಾಡಿಗೆಗೆ ತೆಗೆದುಕೊಂಡು ಏಕಾಂಗಿಯಾಗಿ ವಾಸಿಸಲು ನಿರ್ಧರಿಸಿದ

ನಾರಾಯಣಸ್ವಾಮಿ ಹೊರಟುಹೋಗುವ ವಿಷಯ ಕೇಳಿ ಕಲ್ಯಾಣ್‌ಜಿ ಚಿಕ್ಕಸಬೆರಗಾದರು.

' ಇಲ್ಲಿ ನಿಮಗೇನು ತೊಂದರೆಯಾಯಿತು ಮಿ. ಸ್ವಾಮಿ "

" ತೊಂದರೆಯಾಗಲಿಲ್ಲವೆಂದೇ ನನ್ನ ಆಕ್ಷೇಪಣೆ. "

" ಹಾಗೆಂದರೇನು ? "

" ಇಷ್ಟು ಸುಖದಲ್ಲಿದ್ದು ನನಗೆ ಅಭ್ಯಾಸವಿಲ್ಲ ಕಲ್ಯಾಣ್‌ಜೀ. ಲೇಖಕರು, ವಿದ್ವಾಂಸರು, ಕಲಾವಿದರಿಗೆ ಸುಖಜೀವನ ಪರಮಶತ್ರುವಾಗುತ್ತದೆ "

" ನೀವು ಹೊರಟುಹೋದರೆ ಸೇಠ್‌ಜೀಯವರಿಗೆ ಉತ್ತರ ಹೇಳುವುದು ನನಗೆ ಕಷ್ಟವಾಗುತ್ತದೆ. "

" ನಿಮ್ಮನ್ನು ಯಾವ ತೊಂದರೆಗೂ ನಾನು ಸಿಕ್ಕಿಸುವುದಿಲ್ಲ. ಈ

ಗಾಗಲೇ ನಾನು ಇಂದುಮತಿಗೆ ಕಾಗದ ಬರೆದು, ನಿಮ್ಮ ಮನೆ ಬಿಡುವ ವಿಷಯ ತಿಳಿಸಿದ್ದೇನೆ "

" ನೀವು ಇಲ್ಲಿ ಇರುವುದಕ್ಕೆ ಇಚ್ಛೆಪಡದಿದ್ದರೆ, ನಾನು ಬೇರೆ ಫ್ಲ್ಯಾಟ್ ಗೊತ್ತುಮಾಡಿಕೊಡುತ್ತೇನೆ "

" ಸಾಯುವವರೆಗೂ ನಾನು ಮಾವನವರ ಹಂಗಿನಲ್ಲಿರಬೇಕೇ?"

" ನೀವು ಮಾಡುವ ಖರ್ಚಿನಿಂದ ನಿಮ್ಮ ಮಾವನವರಿಗೆ ಬಡತನ ಬರುವುದಿಲ್ಲ. "

" ನನ್ನ ಆತ್ಮಗೌರವಕ್ಕೆ ಬಡತನ ಬರುತ್ತದೆ. "

" ಆತುರಪಡಬೇಡಿ ಮಿ. ಸ್ವಾಮಿ ನೀರು ಚೆಲ್ಲಿದಹಾಗೆ ಹಣ ಚೆಲ್ಲದಿದ್ದರೆ ಲಂಡನ್ನಿನಲ್ಲಿ ವಾಸಮಾಡುವುದು ದುಸ್ಸಾಧ್ಯವಾಗುತ್ತದೆ. "

" ಲಂಡನ್ನಿನಲ್ಲಿ ಸಹಸ್ರಾರು ಬಡಕುಟುಂಬಗಳು ಹಣವನ್ನು ನೀರಿ ನಂತೆ ಚೆಲ್ಲುತ್ತಿದ್ದಾರೆಯೆ ? "

" ಅವರಿಗೇಕೆ ನಿಮ್ಮನ್ನು ಹೋಲಿಸಿಕೊಳ್ಳುತ್ತೀರಿ. "

" ನಮ್ಮ ದೇಶ ಬಡದೇಶವೆಂಬುದನ್ನು ನಾವು ಮರೆಯಬಾರದು ಕಲ್ಯಾಣ್‌ಜೀ. ಹಾಸಿಗೆಯಿದ್ದಷ್ಟು ನಾವು ಕಾಲುಚಾಚಬೇಕು. ನನ್ನ ಗ್ರಂಥಲೇಖನದಿಂದ ದೊರೆಯುವ ವರಮಾನದಲ್ಲಿ ನಾನು ಮರ್ಯಾದೆ ಯಾಗಿ ಜೀವಿಸಬಲ್ಲೆ. "

" ನೀವು ವಿನಾಕಾರಣ ಹಟಮಾಡುತ್ತಿರುವಿರಿ ಮಿ. ಸ್ವಾಮಿ. ಮನೆಗೆ ಬಂದ ಲಕ್ಷ್ಮಿಯನ್ನು ಹೀಗೆ ಹೊರದೂಡುವವರಿಗೆ ಏನನ್ನ ಬೇಕು ? ನೀವು ಕಷ್ಟಪಡಬೇಕಾದ ಅಗತ್ಯವೇನಿದೆ ? "

" ನನ್ನ ಅಗತ್ಯ ನಿಮಗೀಗ ತಿಳಿಯುವುದಿಲ್ಲ ಕಲ್ಯಾಣಜೀ – ದಯೆಯಿಟ್ಟು ನಾನು ಹೋಗಲು ಅಪ್ಪಣೆಕೊಡಿ."

" ನಿಮ್ಮ ಚಿತ್ತ. ಕೊನೆಯದಾಗಿ ಒಂದು ಮಾತು ಹೇಳುತ್ತೇನೆ – ಅದನ್ನಾದರೂ ಮನಸ್ಸಿನಲ್ಲಿಟ್ಟುಕೊಳ್ಳಿ. "

" ಹೇಳಿ."

" ಹಣಕಾಸಿಗೆ ತೊಂದರೆ ಪಟ್ಟುಕೊಳ್ಳಬೇಡಿ. ಹಣ ಬೇಕೆನಿಸಿದಾಗ ನನಗೆ ಫೋನ್ ಮಾಡಿ – ಇಲ್ಲಿಗೆ ಆಗಾಗ್ಗೆ ಬಂದು

ಹೋಗುತ್ತೀರಿ."

"ಹಾಗೇ ಆಗಲಿ ಅವಶ್ಯಬಿದ್ದರೆ ನಿಮ್ಮಿಂದ ಹಣ ತೆಗೆದು ಕೊಳ್ಳುತ್ತೇನೆ"

ಎಂದು ಹೇಳಿ ತನ್ನ ಬಟ್ಟೆಬರೆ, ನಿತ್ಯೋಪಯೋಗಿ ಸಾಮಾನುಗಳು, ಪುಸ್ತಕಗಳನ್ನು ಟ್ಯಾಕ್ಸಿಯಲ್ಲಿ ತುಂಬಿಕೊಂಡು ತನ್ನ ಸೋಹೋ ನಿವಾಸಕ್ಕೆ ಬಂದು ನೆಲಸಿದ.

ಹ್ಯಾರಿಸ್‌ರವರ ಪಾರ್ಟಿಗೆ ಪ್ರಸಿದ್ಧ ಲೇಖಕರು, ವಿಮರ್ಶಕರು, ಸಂಗೀತವಿದ್ವಾಂಸರು, ನಟರು, ಚಿತ್ರಗಾರರು, ಶಿಲ್ಪಿಗಳು, ಪ್ರಕಾಶಕರಿಗೆಲ್ಲಾ ಆಮಂತ್ರಣ ಪತ್ರಗಳು ಹೋಗಿದ್ದವು. ಹ್ಯಾರಿಸ್ ಕೆಲವು ಆಮಂತ್ರಣ ಪತ್ರಗಳನ್ನು ನಾರಾಯಣಸ್ವಾಮಿಗೆ ಕಳಿಸಿಕೊಟ್ಟು 'ನಿಮ್ಮ ಮಿತ್ರರಿಗೆ ಕೊಡಿ' ಎಂದು ತಿಳಿಸಿದ್ದರು. ಕಲ್ಯಾಣಾಜೀ, ಮೃದುಲಾಬರ್ಜ್, ಡಾ. ಚಂದ್ರಶೇಖರ್, ಫ್ಲೋರಾ, ಸಿಮ್ಮನ್ಸ್, ನೀನಾ ಇವರುಗಳಿಗೆ ನಾರಾಯಣಸ್ವಾಮಿ ಆಮಂತ್ರಣ ನೀಡಿದ. ಪ್ರೊ. ಡ್ರೂ ಅವರಿಗೆ ಹ್ಯಾರಿಸ್ಸರೇ ಆಹ್ವಾನ ಪತ್ರ ಕಳಿಸಿದ್ದುದರಿಂದ ನಾರಾಯಣಸ್ವಾಮಿ ಅವರನ್ನು ಕರೆಯಬೇಕಾದ ಅಗತ್ಯವಿರಲಿಲ್ಲ.

ಸುಂದರವಾಗಿ ಅಲಂಕೃತವಾಗಿದ್ದ 'ಡಾರ್‌ಚೆಸ್ಟರ್ ಹೊಟೇಲಿ'ನಲ್ಲಿ ಸತ್ಕಾರಕೂಟ ವ್ಯವಸ್ಥೆಯಾಗಿತ್ತು. ಅಂದಿನ ಸಭೆಯನ್ನಲಂಕರಿಸಿದ ಕವಿ, ಕಲಾವಿದರ ತಂಡ ನೋಡಿ ನಾರಾಯಣಸ್ವಾಮಿಯ ಎದೆ ಡವಗುಟ್ಟಲಾರಂಭಿಸಿತು. ನಾರಾಯಣಸ್ವಾಮಿಯ ಅಧೀರತೆ ಕಂಡ ಪ್ರೊ. ಡ್ರೂ ಮೆಲ್ಲನೆ

"ಇವರೆಲ್ಲರಿಗಿಂತ ನೀವು ಯಾವುದರಲ್ಲಿ ಕಡಿಮೆಯಾಗಿದ್ದೀರಿ – ಹೆದರಬೇಡಿ." ಎಂದು ಧೈರ್ಯ ಹೇಳಿದರು.

ಹ್ಯಾರಿಸ್ ನಾರಾಯಣಸ್ವಾಮಿಯ ಪರಿಚಯಮಾಡಿ ಕೊಟ್ಟು 'ಟೋಸ್ಟ್'(toast) ಸೂಚಿಸಿದ ಮೇಲೆ ಸಾಹಿತಿಗಳ ಪರವಾಗಿ ಎಥೆಲ್ ಮ್ಯಾನಿನ್ (Ethel Mannin), ನಟರ ಪರವಾಗಿ ಸರ್ ಸೆಡ್ರಿಕ್ ಹಾರ್ಡ್‌ವಿಕ್ (Sir Cederic Hardwicke), ಕಲಾವಿದರ ಪರವಾಗಿ ಜೇಕಬ್ ಎಪ್‌ಸ್ಟೀನ್ (Jacob Epstein) ಸ್ವಾಮಿಯ 'ಭಾರತೀಯ

ತಾಯಿ ' ಗ್ರಂಥವನ್ನು ಪ್ರಶಂಸಿಸಿ ಶುಭಾಶಯ ಕೋರಿದರು.

ಅಂಜುತ್ತ ಅಳುಕುತ್ತ ಎದ್ದು ನಿಂತ ನಾರಾಯಣಸ್ವಾಮಿಯ ಜಂಘಾಬಲವೇ ಉಡುಗಿ ಹೋದಂತಾಗಿತ್ತು. ಪ್ರೊ. ಡ್ರೂ, ಚಂದ್ರ ಶೇಖರ್, ಫ್ಲೋರಾ, ಸಿಮ್ಮನ್ಸ್, ನೀನಾ ಅವರ ಸೌಹಾರ್ದಮಯ ನೇತ್ರಗಳು ಅವನನ್ನೇ ದಿಟ್ಟಿಸಿ ನೋಡುತ್ತಿದ್ದವು.

' ಇಂದು ನಾನು ಕುಸಿದು ಬಿದ್ದರೆ ನನ್ನ ಸ್ನೇಹಿತರು, ಹಿತೈಷಿಗಳು, ಉಪಕಾರಿಗಳು ತಲೆತಗ್ಗಿಸುವಂತಾಗುತ್ತದೆ. ನಾಲ್ಕು ಮಾತು ನಾನು ಚೆನ್ನಾಗಿ ಆಡಲೇ ಬೇಕು. ನನ್ನ ಹಿತೈಷಿಗಳು ಮಾಡಿರುವ ಉಪಕಾರಕ್ಕೆ ಕೃತಜ್ಞತೆ ಅರ್ಪಿಸಬೇಕು ' ಎಂದುಕೊಂಡ.

ಎದುರಿಗೆ ತಾಯಿದೇವಿ ರುಕ್ಮಿಣಮ್ಮ ಬಂದು ನಿಂತಂತಾಯಿತು – ಅದೇ ಸುಹಾಸವದನ, ಅದೇ ದಿವ್ಯಕಳೆ, ಅದೇ ಪೂರ್ಣಚಂದ್ರಾ ಕೃತಿಯ ಕುಂಕುಮಾಲಂಕಾರ.

ತಾಯಿ ಮಗನ ಮಸ್ತಿಷ್ಕದಮೇಲೆ ತನ್ನ ವರದ ಹಸ್ತವನ್ನಿಟ್ಟು
' ಹೆದರಬೇಡ ನಾಣಿ – ನಿನ್ನ ನೆರವಿಗೆ ನಾನಿಲ್ಲವೇ ? '
ಎಂದು ಹೇಳಿದಂತಾಯಿತು.

ನಾರಾಯಣಸ್ವಾಮಿ ಗಂಟಲು ಸರಿಪಡಿಸಿಕೊಂಡು ಗಂಭೀರವಾಗಿ
**" ಇಂಗ್ಲೆಂಡಿನ ಸೋದರ ಸೋದರಿಯರೇ "** ಎಂದು ಆರಂಭಿಸಿದ

ಆಮಂತ್ರಿತರು ಕರತಾಡನಮಾಡಿ ತಮ್ಮ ಮೆಚ್ಚುಗೆ ವ್ಯಕ್ತಮಾಡಿದರು. ಪರವಶನಾದವನಂತೆ ನಾರಾಯಣಸ್ವಾಮಿ ತನ್ನ ಭಾಷಣ ಆರಂಭಿಸಿದ.

**" ಪ್ರತಿಯೊಬ್ಬನ ಜೀವನದಲ್ಲಿಯೂ ಕೆಲವು ಮಹತ್ವದ ಘಟನೆಗಳಾಗುತ್ತವೆ. ನಾನು ಲಂಡನ್ನಿಗೆ ಬಂದ ಈ ಒಂದು ವರ್ಷದಲ್ಲಿ ಅಂಥ ಹಲವು ಘಟನೆಗಳಾಗಿವೆ. ಅಪರಿಚಿತನೂ, ಅಪ್ರಸಿದ್ಧನೂ ಆದ ನನ್ನನ್ನು ಆದರಿಸಿ ಎದೆಗಪ್ಪಿಕೊಂಡವರು ಡಾ. ಚಂದ್ರಶೇಖರ್ ಮತ್ತು ನನ್ನ ಪೂಜ್ಯ ಗುರುಗಳಾದ ಡಾ. ಡ್ರೂ. ಅವರ ವಿಶ್ವಾಸಕ್ಕೆ ಮಣಿದೇ ನಾನು ' ಭಾರತೀಯ ತಾಯಿ ' ಕಾದಂಬರಿ ಬರೆದುದು. ಅವರ ಸೂಚನೆಯಂತೆ ನನ್ನ ಗ್ರಂಥವನ್ನು**

ಬರವಮಾಡಿಕೊಂಡು ಪ್ರಕಟಿಸಿ ಉಪಕಾರ ಮಾಡಿದವರು ಮಿ. ಹ್ಯಾರಿಸ್. ಇವರಿಗೂ ನನ್ನ ಗ್ರಂಥದ ಮೇಲೆ ಸದಭಿಪ್ರಾಯಗಳನ್ನು ವ್ಯಕ್ತಮಾಡಿದ ಇಂಗ್ಲೆಂಡಿನ ವಿದ್ವನ್ಮಣಿಗಳಿಗೂ ನಾನು ಋಣಿಯಾಗಿದ್ದೇನೆ.

ಇಂದು ಮೂವರು ದೊಡ್ಡ ವ್ಯಕ್ತಿಗಳು ನನ್ನ ಹಾಗೂ ನನ್ನ ಕಾದಂಬರಿಯ ಬಗ್ಗೆ ಪ್ರಶಂಸೆಮಾಡಿದ್ದಾರೆ. ಈ ಮೂವರೂ ನನ್ನ ಮಾತೃಭೂಮಿಯ ಉತ್ಕಟಾಭಿಮಾನಿಗಳು. ನನ್ನ ನಾಡು ಸ್ವತಂತ್ರವಾಗುವುದಕ್ಕೆ ಪ್ರತ್ಯಕ್ಷವಾಗಿ ಪರೋಕ್ಷವಾಗಿ ಸಹಾಯಮಾಡಿದವರು. ಬ್ರಿಟನ್ - ಭಾರತಗಳ ಬಾಂಧವ್ಯ ಸುಭದ್ರವಾಗಲು ಅಹರ್ನಿಶಿ ದುಡಿಯುತ್ತಿರುವ ಈ ಮಾನ್ಯ ಮಹಿಳೆ, ಮಹನೀಯರಿಗೆ ಹುತ್ಪೂರ್ವಕವಾಗಿ ಧನ್ಯವಾದ ಸಮರ್ಪಿಸುತ್ತೇನೆ.

ಇಲ್ಲಿ ಸೇರಿರುವ ನಾವೆಲ್ಲರೂ ಬ್ರಿಟನ್ - ಭಾರತಗಳ ಸ್ನೇಹ ಚಿರಸ್ಥಾಯಿಯಾಗಿರಲು ಪ್ರಯತ್ನಿಸುತ್ತಿದ್ದೇವೆ. ಈ ಸಂದರ್ಭದಲ್ಲಿ ನಾನು ಭಾರತದ ಪರವಾಗಿ ಒಂದೆರಡು ಮಾತು ಹೇಳಲು ಬಯಸುತ್ತೇನೆ. ಭಾರತಕ್ಕೆ ಸ್ವಾತಂತ್ರ್ಯ ಬಂದರೆ ಅದು ಬ್ರಿಟನ್ನನ್ನು ದ್ವೇಷಿಸಲಾರಂಭಿಸುತ್ತದೆ. ಎಂಬ ಭಾವನೆ ಹಲವರ ಮನಸ್ಸಿನಲ್ಲಿತ್ತು. ಆದರೆ ಅವರ ನಿರೀಕ್ಷಣೆಗೆ ಪ್ರತಿಯಾಗಿ ಭಾರತ ಬ್ರಿಟನ್ನನ್ನು ಸ್ವಾತಂತ್ರ್ಯಾನಂತರ ಹೆಚ್ಚು ಪ್ರೀತಿಸುವುದನ್ನೂ ಗೌರವಿಸುವುದನ್ನೂ ನಾವು ನೋಡುತ್ತಿದೇವೆ ಈಗ್ಗೆ ಸುಮಾರು ಎರಡು ಶತಮಾನಗಳ ಹಿಂದೆ ಬ್ರಿಟನ್ ಭಾರತಕ್ಕೆ ಕ್ಲೈವ್, ವಾರೆನ್ ಹೇಸ್ಟಿಂಗ್ಸ್, ಡಾಲ್‌ಹೌಸಿ ಅವರನ್ನು ಕಳಿಸಿಕೊಟ್ಟಿತು. ಅವರು, ಸಿಪಾಯಿ ದಂಗೆ ಎನಿಸಿಕೊಂಡಿರುವ ಭಾರತದ ದ್ವಿತೀಯ ಸ್ವಾತಂತ್ರ್ಯ ಸಂಗ್ರಾಮ * ಕಾಲದಲ್ಲಿ ಭಾರತಕ್ಕೆ ಬಂದ ಬ್ರಿಟಿಷ್ ಸೈನ್ಯಾಧಿಕಾರಿಗಳೂ, ಜಲಿಯನ್ ವಾಲಾಬಾಗಿನಲ್ಲಿ ನಿರುಪದ್ರವಿ ಜನತೆಯ ಮೇಲೆ ಗುಂಡಿನ ಮಳೆಗರೆದ ಓಡ್ವೈಯ್ಯರ್, ಡೈಯ್ಯರ್ ಪ್ರಭೃತಿಗಳು ಬ್ರಿಟಿಷರೆಂದರೆ ರಾಕ್ಷಸರೆಂಬ ಭಾವನೆ ಭಾರತೀಯರ ಮನಸ್ಸಿನಲ್ಲಿ ಬೆಳೆಯಲು ಕಾರಣರಾದರು.

ಆದರೆ ಭಾರತ ಇವರನ್ನು ಇಂಗ್ಲಿಷ್ ಸಂಸ್ಕೃತಿಯ ಪ್ರತೀಕಗಳೆಂದೂ, ಇಂಗ್ಲಿಷ್ ಜನತೆಯ ಪ್ರತಿನಿಧಿಗಳೆಂದೂ ಎಂದಿಗೂ ಭಾವಿಸಲಿಲ್ಲ. ಇದರ

* ೧೮೫೭ರಲ್ಲಿ ಝಾನ್ಸಿರಾಣಿ ಲಕ್ಷ್ಮೀಬಾಯಿ ನಡೆಸಿದ ಸಮರವೇ ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವೆಂದು ಇತಿಹಾಸಕಾರರು ತಪ್ಪು ಬರೆಯುತ್ತ ಬಂದಿದ್ದಾರೆ. ಇದಕ್ಕೆ ಮೂವತ್ತುನಾಲ್ಕು ವರ್ಷಗಳ ಮುಂಚೆಯೇ ೧೮೨೪ರಲ್ಲಿ ಕಿತ್ತೂರ ರಾಣಿ ಚೆನ್ನಮ್ಮ ಬ್ರಿಟಿಷರ ವಿರುದ್ಧ ಸೆಣಸಿ ಭಾರತ ಸ್ವಾತಂತ್ರ್ಯದ ಕಹಳೆಯೂದಿದಳು. ಈ ಮಹಾಸತಿಯ ದಿವ್ಯ ಚಾರಿತ್ರ್ಯವನ್ನು ನಾನು 'ವೀರರಾಣಿ ಕಿತ್ತೂರ ಚೆನ್ನಮ್ಮ' ಕಾದಂಬರಿಯಲ್ಲಿ ವಿವರಿಸಿದ್ದೇನೆ.

ಕಾರಣವಿಷ್ಟೆ – ಕ್ಲೈವ್, ಡೈಯ್ಯರ್ ಸಂಗ್ರಹಿಸಿದ್ದ ಪಾಪರಾಶಿಯನ್ನು ತೊಳೆಯಲು ಬೇರೊಂದು ಬಗೆಯ ಇಂಗ್ಲಿಷರ ತಂಡ ಭಾರತಕ್ಕೆ ಬಂದಿತು. ಭಾರತದ ಧಾರ್ಮಿಕೋನ್ನತಿಗಾಗಿ ದುಡಿದ ಸೋದರಿ ನಿವೇದಿತಾ, ಆ್ಯನಿ ಬೆಸೆಂಟರು, ಸರ್ ಜಾನ್ ಉಡರಾಫ್, ರಾಜಕೀಯ ಉತ್ಕರ್ಷಕ್ಕಾಗಿ ದುಡಿದ ವಿಲಿಯಂ ಡಿಗ್‌ಬೀ, ಎ. ಓ. ಹ್ಯೂಮ್, ಸರ್ ವೆಡ್ಡರ್‌ಬರ್ನ್, ಲಲಿತ ಕಲೆಗಳ ಪುನರುಜ್ಜೀವನಕ್ಕೆ ಅಡಿಪಾಯ ಹಾಕಿದ ಇ. ಬಿ. ಹ್ಯಾವೆಲ್, ಪರ್ಸಿ ಬ್ರೌನ್, ಕ್ಲೆಮೆಂಟ್ಸ್, ಲೇಡಿ ಹೆರಿಂಗ್ಹಮ್, ಮೊದಲಾದ ಪುಣ್ಯಜೀವಿಗಳು ಭಾರತೀಯರ ಮನಸ್ಸಿನಲ್ಲಿದ್ದ ಕಿನಿಸನ್ನು ಹೋಗಲಾಡಿಸಿದರು.

ಬ್ರಿಟನ್ನಿನಿಂದ ಭಾರತಕ್ಕೆ ಆಗಿರುವ ಅನ್ಯಾಯ ಮರೆತು, ಬ್ರಿಟನ್ ನಮಗೆ ಮಾಡಿರುವ ಮಹೋಪಕಾರವನ್ನೇ ನೆನಪಿನಲ್ಲಿಟ್ಟುಕೊಳ್ಳಲು ನಮ್ಮ ಸ್ವಾತಂತ್ರ್ಯ ನೆರವಾಯಿತು. ೧೯೪೭ರ ತರುವಾಯವೇ ಬ್ರಿಟನ್ – ಭಾರತಗಳ ಬಾಂಧವ್ಯ ಸುಭದ್ರವಾಯಿತೆಂದು ನಾನು ಹೇಳಿದಲ್ಲಿ ಅತಿಶಯೋಕ್ತಿಯಾಗಲಾರದು.

ನಿಮ್ಮಿಂದ ನಮಗೆ ಉಪಕಾರವಾಗಿರುವುದಲ್ಲದೆ ನಿಮ್ಮ ಭಾಷೆಯಿಂದ ಮಹೋಪಕಾರವಾಗಿದೆ. ರಾಜಕೀಯ ದೃಷ್ಟಿಯಿಂದ ಬ್ರಿಟಿಷರನ್ನು ಭಾರತದಿಂದ ಹೊರಗಟ್ಟಲು ಸಿದ್ಧವಾಗಿದ್ದ ಭಾರತ, ಯಾವ ದೃಷ್ಟಿಯಿಂದಲೂ ಇಂಗ್ಲಿಷ್ ಭಾಷೆಯನ್ನು ಭಾರತದಿಂದ ಹೊರದೂಡಲು ಸಿದ್ಧವಾಗಿಲ್ಲ. ನಮ್ಮ ರಾಜಕೀಯ, ಸಾಮಾಜಿಕ, ಸಾಹಿತ್ಯಿಕ, ಪ್ರಗತಿಗೆ ಇಂಗ್ಲಿಷ್ ಭಾಷೆಯಿಂದ ಆಗಿರುವ ಉಪಕಾರ ನಾವು ಮರೆಯಲು ಸಾಧ್ಯವಿಲ್ಲ. ವಿಶ್ವದ ಜ್ಞಾನ ಭಂಡಾರವನ್ನೇ ನಮ್ಮ ಕೈವಶಮಾಡಿದ ಇಂಗ್ಲಿಷ್ ಭಾಷೆ ನಮ್ಮ ನಾಡಿನ ಹದಿನಾಲ್ಕು ಭಾಷೆಗಳಷ್ಟೇ ನಮಗೆ ಪ್ರಿಯವೂ, ಗೌರವಾರ್ಹವೂ ಆದುದಾಗಿದೆ.

ಬ್ರಿಟನ್ನಿನಿಂದ ಉಪಕೃತನಾಗಿರುವ ಭಾರತ ತನ್ನ ಸಾಂಸ್ಕೃತಿಕ ಸಂಪತ್ತನ್ನು ಮರು ಕಾಣಿಕೆಯಾಗಿ ಬ್ರಿಟನ್ನಿಗೆ ಕೊಡಬೇಕಾದುದಗತ್ಯ. ವೇದೋಪನಿಷತ್ತುಗಳ ಕಾಲದಿಂದಲೂ ಭಾರತದಲ್ಲಿ ಬೆಳದು ಬಂದಿರುವ ಅಧ್ಯಾತ್ಮ ಪರಂಪರೆ ವಿಶ್ವಜೀವನಕ್ಕೆ ಇಂದಿಗೂ ಸಮರ್ಥ ಸೇವೆಯನ್ನೆಸಗಬಹುದು. ಭಾರತದ ಭವ್ಯ ಸಾಂಸ್ಕೃತಿಕ ಪರಂಪರೆಯನ್ನು ನಿತ್ಯ ಜೀವನದಲ್ಲಿ ಅಜರಾಮರಗೊಳಿಸಿದ ಒಬ್ಬ ಸಾಧ್ವಿಯ ಚಿತ್ರವನ್ನೇ ನಾನು 'ಭಾರತೀಯ ತಾಯಿ' ಕಾದಂಬರಿಯಲ್ಲಿ ಕಡೆದಿದ್ದೇನೆ. ಈ ಚಿತ್ರ ಒಬ್ಬ ಕಲಾವಿದನ ಕಾಲ್ಪನಿಕ ಕೃತಿಯಲ್ಲ ; ಇಂದಿಗೂ ನನ್ನ ಕಥಾನಾಯಕಿಯಂಥ ಸಹಸ್ರಾರು

ಸ್ತ್ರೀಯರು ಭಾರತದಲ್ಲಿ ವಿರಾಜಿಸುತ್ತಿದ್ದಾರೆ. ನನ್ನ ತಾಯಿದೇವಿಯೂ ಅಂಥ ಒಬ್ಬ ಸ್ತ್ರೀ.

ಇಂಗ್ಲೆಂಡ್, ಫ್ರಾನ್ಸ್, ಅಮೆರಿಕಾ ದೇಶಗಳಲ್ಲಿ ಸಮಾನ ಹಕ್ಕು ಬಾಧ್ಯತೆಗಳಿಗಾಗಿ ಸ್ತ್ರೀ ಸತತ ಹೋರಾಟ ನಡೆಸಬೇಕಾಯಿತು. ಭಾರತದಲ್ಲಿ ಅಂಥ ಹೋರಾಟ ನಡೆದಿಲ್ಲವಾದ್ದರಿಂದ ಭಾರತ ಬಹಳ ಹಿಂದುಳಿದಿದೆ ಯೆಂದು ತಾವು ಭಾವಿಸಬಾರದು. ಸ್ತ್ರೀ ತಮ್ಮ ಸಮಾನಳು ಮಾತ್ರವೇ ಅಲ್ಲ, ತಮಗಿಂತ ಶ್ರೇಷ್ಠಳೆಂದು ಭಾವಿಸುತ್ತಾರೆ. ಪ್ರತಿಯೊಬ್ಬ ಸ್ತ್ರೀಯನ್ನೂ ಮಾತೃಸ್ಥಾನದಲ್ಲಿ ಕೂಡಿಸಿ ಭಾರತೀಯರು ಆರಾಧಿಸುತ್ತಾರೆ. 'ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ!' 'ಜನನೀಜನ್ಮ ಭೂಮಿಶ್ಚ ಸ್ವರ್ಗಾದಪಿ ಗರೀಯಸಿ' ಮೊದಲಾದ ಮಹಾವಾಕ್ಯಗಳೂ, ಗಾರ್ಗಿ, ಮೈತ್ರೇಯಿ, ಉಭಯ ಭಾರತಿ ಮೊದಲಾದ ಮಹಿಳೆಯರ ಉದಾತ್ತ ಜೀವನವೂ ಇದಕ್ಕೆ ಸಾಕ್ಷ್ಯಗಳಾಗಿವೆ.

ನನಗೂ ನನ್ನ ಸಾಹಿತ್ಯಕೃತಿಗೂ ತಾವೆಲ್ಲರೂ ತೋರಿರುವ ಅಪಾರ ವಿಶ್ವಾಸಕ್ಕೆ ಮತ್ತೊಮ್ಮೆ ಕೃತಜ್ಞತೆ ಸಮರ್ಪಿಸಿ, ಇದೇ ವಿಶ್ವಾಸ ಚಿರಕಾಲ ವಿರಲೆಂದು ಪ್ರಾರ್ಥಿಸುತ್ತೇನೆ.'

ಎಂದು ಕುಳಿತ. ಸಭಿಕರು ದೀರ್ಘಕಾಲ ಕರತಾಡನ ಮಾಡಿ ತಮ್ಮ ಸಂತೋಷ ವ್ಯಕ್ತಮಾಡಿದರು.

ಸತ್ಕಾರಕೂಟ ಮುಗಿಯಲು ಅತಿಥಿಗಳೊಬ್ಬೊಬ್ಬರಾಗಿ ಹ್ಯಾರಿಸ್, ಸ್ವಾಮಿ ಇಬ್ಬರಿಗೂ ಹಸ್ತಲಾಘವವನ್ನಿತ್ತು ಗೃಹಾಭಿಮುಖರಾದರು.

ಆಮಂತ್ರಿತರೆಲ್ಲಾ ತೆರಳಿದರು. ಸ್ವಾಮಿ ಅವನ ಗೆಳೆಯರು ಮಾತ್ರ ಅಲ್ಲಿದ್ದರು. ಹ್ಯಾರಿಸ್ ಸಂತೋಷದಿಂದ,

"ಮಿ. ಸ್ವಾಮಿ, ಇವತ್ತಿನ ನನ್ನ ಪಾರ್ಟಿ ಅಭೂತಪೂರ್ವ ಯಶಸ್ಸು ಗಳಿಸಿತು. ನಿಮ್ಮ ಭಾಷಣ ಅಮೋಘವಾಗಿತ್ತು. ನಿಮ್ಮ ಉಪಕಾರಕ್ಕೆ ನಾನು ಚಿರಋಣಿಯಾಗಿದ್ದೇನೆ."

"ಉಪಕೃತನಾಗಿರುವವನು ನಾನು ಮಿ. ಹ್ಯಾರಿಸ್–ಹಬ್ಬ, ಹರಿದಿನ, ಮುಂಜಿ, ಮದುವೆ ಮೊದಲಾದ ಸಂತೋಷ ದಿನಗಳಲ್ಲಿ ಉಡುಗೆರೆ ಕೊಡುವುದು ನಮ್ಮಲ್ಲಿ ವಾಡಿಕೆ. ಅದರಂತೆ ನೀವಿಂದು ನನಗೆ ಉಡುಗೆರೆ ಕೊಡಬೇಕಾಗಿತ್ತು."

" ಏನು ಕೊಡಬೇಕು ಹೇಳಿ–ಈಗಲೇ ತರಿಸಿಕೊಡುತ್ತೇನೆ. "

" ಖಂಡಿತವೇ ? "

" ಅನುಮಾನವೇಕೆ ? "

" ದಯೆಯಿಟ್ಟು ನಿಮ್ಮ ಪ್ರಕಾಶನ ಸಂಸ್ಥೆಯಿಂದ ಪೀಟರ್ ಸಿಮ್ಮನ್ಸರ ಕಾವ್ಯ ಪ್ರಕಟಿಸಿ–ಇದೇ ನಾನು ಕೇಳುವ ಉಡುಗೆರೆ. "

" 'ಯೂನಿವರ್ಸ್–ಮೈ ಹೋಮ್' ಬಗ್ಗೆ ರೀಡರ್ಸ್ ರಿಪೋರ್ಟ್ (Readers' report) ಬಂದಿದೆ–ಐವರಲ್ಲಿ ಇಬ್ಬರು ಪ್ರಕಟನೆ ವಿರೋಧಿಸಿದ್ದಾರೆ. ಇನ್ನಿಬ್ಬರ ಹೆಚ್ಚು ಉತ್ಸಾಹ ತೋರಿಸದೆ, ಪ್ರಕಟಿಸಬಹುದು ಎಂದಿದ್ದಾರೆ – ಒಬ್ಬರು ಮಾತ್ರ ' ಇದು ಮಹಾಕಾವ್ಯವೆನ್ನುವುದರಲ್ಲಿ ಸಂದೇಹವಿಲ್ಲ. ಈ ಕಾವ್ಯ ರಚಿಸಿರುವ ಕವಿ ಇಂಗ್ಲೆಂಡಿನ ಕಾವ್ಯ ಮುಖವನ್ನೇ ಬದಲಿಸುತ್ತಾನೆ " ಎಂದು ಮುಕ್ತಕಂಠದಿಂದ ಹೊಗಳಿದ್ದಾರೆ. ಅವರು ಯಾರು ಬಲ್ಲಿರಾ ? "

" ನಿಮ್ಮ ರಹಸ್ಯ ಭೇದಿಸಲು ನಾನು ಇಚ್ಛಿಸುವುದಿಲ್ಲ. "

" ನಿಮ್ಮಲ್ಲಿ ಹೇಳಲಡ್ಡಿಯಿಲ್ಲ – ಇಂಗ್ಲೆಂಡಿನ ಕವಿಶ್ರೇಷ್ಠರಾದ ಡಬ್ಲ್ಯೂ. ಎಚ್ ಆಡೆನ್ (W. H. Auden) ಅವರ ಅಭಿಪ್ರಾಯ ಇದು. "

" ಪೀಟರ್ ನಿಜವಾಗಿಯೂ ಭಾಗ್ಯಶಾಲಿ. "

" ಆಡೆನ್ ಅವರ ಅಭಿಪ್ರಾಯವನ್ನೇ ಮುಖ್ಯವಾಗಿಟ್ಟುಕೊಂಡು ಕಾವ್ಯ ಪ್ರಕಟಿಸಲು ನಾನು ನಿರ್ಧರಿಸಿದ್ದೇನೆ. ನಾಳೆ ಮಿ. ಪೀಟರ್ ಸಿಮ್ಮನ್ಸ್‌ರನ್ನು ನನ್ನ ಕಛೇರಿಗೆ ಕಳಿಸಿಕೊಡಿ. "

" ಪೀಟರ್ ಇಲ್ಲೇ ಇದ್ದಾರೆ. ಪರಿಚಯಮಾಡಿಕೊಡುತ್ತೇನೆ."

ಎಂದು ಓಡಿಹೋಗಿ ಗೆಳೆಯರ ಸಮೂಹದಲ್ಲಿ ಕುಳಿತು ಮಾತನಾಡುತ್ತಿದ್ದ ಪೀಟರನ್ನು ದರದರನೆ ಎಳೆದುಕೊಂಡು ಬಂದು ಹ್ಯಾರಿಸ್‌ರವರಿಗೆ ಪರಿಚಯಮಾಡಿಸಿದ.

" ನಮ್ಮ ಕಂಪೆನಿಯವರು ನಿಮ್ಮ ಕಾವ್ಯ ಪ್ರಕಟಿಸಲು ಒಪ್ಪಿಕೊಂಡಿದ್ದಾರೆ ಮಿ. ಸಿಮ್ಮನ್ಸ್. ನಾಳೆ ಕಛೇರಿಗೆ ಬಂದರೆ ವ್ಯವಹಾರ ಭಾಗ ಮುಗಿಸಿಬಿಡಬಹುದು. "

" ಆಗಲಿ "

ಎಂದು ಪೀಟರ್ ಒಪ್ಪಿಕೊಂಡ.

ಪೀಟರ್ ವಿಜಯದ ಸನ್ಮಾನಾರ್ಥವಾಗಿ ಎಲ್ಲರೂ ಪ್ಯಾಕೇಯಲ್ಲಿ ಟೀ ಕುಡಿಯಲು ನಿಶ್ಚಯಿಸಿದರು.

ನಾರಾಯಣಸ್ವಾಮಿಗೆ ಯಾವ ರೀತಿಯಲ್ಲಿ ಕೃತಜ್ಞತೆ ತೋರಿಸಬೇಕೆಂಬುದೇ ಪೀಟರಿಗೆ ತಿಳಿಯದಾಯಿತು. ಪ್ಯಾಕೆಯಲ್ಲಿ ಎಲ್ಲರೂ ಚಹಾ ಕುಡಿಯುತ್ತ ಕುಳಿತಾಗ ಪೀಟರ್ ಮೆಲ್ಲನೆ

" ಸ್ವಾಮಿ - ನೀವು ಮಾಡಿರುವ ಉಪಕಾರಕ್ಕೆ ನಾನು ತುಂಬ ಋಣಿಯಾಗಿದ್ದೇನೆ " ಎಂದ

ನಾರಾಯಣಸ್ವಾಮಿ ಸ್ವಲ್ಪ ನಿಷ್ಠುರವಾಗಿಯೇ " ಪೀಟ್, ನಾವು ಗೆಳೆಯರೆಂಬುದನ್ನು ಮರೆಯಬೇಡ ನಿನಗೆ ದೊರೆತಿರುವ ವಿಜಯ ಕೇವಲ ವೈಯಕ್ತಿಕವಾದುದಲ್ಲ - ವಿಶ್ವಮೈತ್ರಿಗೆ ದೊರೆತ ಮಹಾವಿಜಯ. " ಎಂದ.

ಎಲ್ಲರೂ ಪ್ಯಾಕೇ ಟೀಷಾಪ್ ಬಿಟ್ಟು ಚೆದುರಲು ಮಧ್ಯರಾತ್ರಿಯಾಯಿತು

ಮನೆಗೆ ಬಂದಕೂಡಲೆ ಸ್ವಾಮಿ ವಿಶ್ರಾಂತಿಗೆ ತೆರಳದೆ, ಕುಳಿತು ತಂದೆಗೆ ಸಮಾರಂಭವನ್ನು ವಿವರಿಸಿ ದೀರ್ಘ ಪತ್ರ ಬರೆದ

## ೨೬

ಮಾಧವರಾಯ ಮಗನಿಗೆ ಕಾಗದ ಬರೆದು ಮನೆಕೊಂಡ ವಿಷಯ, ಗೃಹಪ್ರವೇಶಮಾಡಿದ ವಿಷಯಗಳನ್ನೆಲ್ಲಾ ವಿಶದವಾಗಿ ನಿರೂಪಿಸಿದ್ದ.

ತಂದೆ ತನ್ನ ಕಾಗದದಲ್ಲಿ ಒತ್ತಿಯೊತ್ತಿ 'ನಿನ್ನ ಮನೆ–ನಿನ್ನ ಮನೆ' ಎಂದು ಹೇಳಿದ್ದುದು ನಾರಾಯಣಸ್ವಾಮಿಗೆ ಬೇಸರವನ್ನುಂಟು ಮಾಡಿತು.

'ನನ್ನನ್ನೇಕೆ ಇವರು ಒಬ್ಬ ಪ್ರತ್ಯೇಕ ವ್ಯಕ್ತಿಯಂತೆ ಕಾಣುತ್ತಾರೆ' ಎಂದು ಚಿಂತಿಸಿದ

ತಂದೆಯ ಕಾಗದದ ಜತೆಯಲ್ಲಿ ಬಂದಿದ್ದ ಕಮಲ, ಪದ್ಮರ ಕಾಗದ ನೋಡಿ ನಾರಾಯಣಸ್ವಾಮಿಗೆ ಅಪರಿಮಿತ ಆನಂದವಾಯಿತು. 'ಭಾರತೀಯ ತಾಯಿ' ಓದಿದಾಗ ತಮ್ಮೆಲ್ಲರ ಮನಸ್ಸಿಗೂ ಆದ ಅನುಭವವನ್ನು ಕಮಲ ಚಾ - ಚೂ ಬಿಡದೆ ವರ್ಣಿಸಿದ್ದಳು ತನ್ನವರೇ ತನ್ನನ್ನೂ ತನ್ನ ಕೃತಿಯನ್ನೂ ಒಪ್ಪಿಕೊಂಡುದುದನ್ನು ಕಂಡು ನಾರಾಯಣಸ್ವಾಮಿಗೆ ವಿಶೇಷ ತೃಪ್ತಿಯಾಯಿತು.

ನಾರಾಯಣಸ್ವಾಮಿಯ ಥೀಸಿಸ್ ಕೆಲಸ ಮುಗಿದಿದ್ದುದರಿಂದ ಅವನು ತನ್ನ ಕಾದಂಬರಿಗೆ ಪೂರ್ಣಕಾಲ ವಿನಿಯೋಗಿಸಲು ಸಾಧ್ಯವಾಯಿತು. ವರ್ಣವಿಭೇದದ ಕಟ್ಟು ಕಾಯಿದೆ ಅತಿಕ್ರಮಿಸಿ, ಮಿಶ್ರ ವಿವಾಹ ಮಾಡಿಕೊಂಡವರು ಕಾಲಕ್ರಮೇಣ ಸಮಾಜಬಾಹಿರರಾಗಿ, ಅಸ್ಪೃಶ್ಯರಾದ ಇತಿವೃತ್ತವನ್ನೇ ನಾರಾಯಣಸ್ವಾಮಿ ತನ್ನ '**ಸನ್ ಆಫ್ ಗಾಡ್**' (Son of God - ದೇವ ಪುತ್ರ) ಕಾದಂಬರಿಯ ವಸ್ತು

ವನ್ನಾಗಿ ಆರಿಸಿಕೊಂಡ ಉತ್ತಮುತನ ಜಾತಿಯಿಂದ ಸಾಧಿಸುವುದಿಲ್ಲ. ಗುಣದಿಂದ ಸಾಧಿಸುತ್ತದೆ ಎಂಬ ಸಿದ್ಧಾಂತವೇ ಅವನ ಕಾದಂಬರಿಯ ಅಡಿಗಲ್ಲಾಯಿತು ಅಸ್ಪೃಶ್ಯರ ಆರ್ಥಿಕ ವಿಪನ್ನಾವಸ್ಥೆಯನ್ನು ಮನ ಮುಟ್ಟುವಂತೆ ಚಿತ್ರಿಸಿ, ಉತ್ತಮ ಕುಲದವರ ಜವಾಬ್ದಾರಿಯನ್ನು ಸ್ಪಷ್ಟವಾಗಿ ನಿರ್ದೇಶಿಸಲು ಅವನು ನಿರ್ಧರಿಸಿದ.

ಮನೆ, ಮೇಜು ಬಿಟ್ಟು ಕದಲದಿದ್ದ ನಾರಾಯಣಸ್ವಾಮಿಯನ್ನು ಆಗಾಗ್ಗೆ ಚಂದ್ರಶೇಖರ್, ಪೀಟರ್ ಬಂದು ಜತೆಯಲ್ಲಿ ಕರೆದೊಯ್ಯುತ್ತಿದ್ದರು. ಸಂಜೆ ಅವರೊಡನೆ ತಿರುಗಾಡಿ ಬಂದು ನಾರಾಯಣಸ್ವಾಮಿ ಹೊಸ ಹುರುಪಿನಿಂದ ಬರೆಯಲು ಕೂಡುತ್ತಿದ್ದ

ಇಂದುಮತಿಯ ಯೋಗಕ್ಷೇಮವನ್ನು ಎಲ್ಲರೂ ತಪ್ಪದೆ ವಿಚಾರಿಸುತ್ತಿದ್ದರು. ಕ್ರಿಸ್‌ಮಸ್ ಹಬ್ಬ ಸಮೀಪಿಸುತ್ತಿರಲು ಸೀನಾ

"ಮಿ ಸ್ವಾಮಿ, ಕ್ರಿಸ್‌ಮಸ್ ಹಬ್ಬದವೇಳೆಗೆ ನಿಮ್ಮ ಪತ್ನಿ ಇಲ್ಲಿದ್ದಿದ್ದರೆ ಚೆನ್ನಾಗಿರುತ್ತಿತ್ತು. ಎಲ್ಲರೂ ಕೂಡಿ ಸಂತೋಷವಾಗಿ ಹಬ್ಬವನ್ನಾಚರಿಸಬಹುದಾಗಿತ್ತು" ಎಂದಳು.

"ಅವರ ತಾಯಿಗಿನ್ನೂ ಗುಣವಾಗಿಲ್ಲ ಸೀನಾ – ಅವರ ತಾಯಿಯವರ ಆರೋಗ್ಯ ಸುಧಾರಿಸಿದ್ದರೆ ನಾನೇ ಕರೆಸಿಬಿಡುತ್ತಿದ್ದೆ." ಎಂದ.

ಒಂದು ದಿನ ಮಿತ್ರಮಂಡಳಿ ಮ್ಯಾಕೆ ಟೀಷಾಪಿನಲ್ಲಿ ಸೇರಿತು. ಸ್ವಲ್ಪ ತಡವಾಗಿ ಬಂದ ಪ್ರೊ. ಡ್ರೂ ವಿಶೇಷ ಉತ್ಸುಕರಾಗಿದ್ದರು. ಅವರ ಕಣ್ಣುಗಳಲ್ಲಿ ತುಂಟನಗೆ ಮಿನುಗುತ್ತಿತ್ತು.

ಸೀನಾಳನ್ನು ಹತ್ತಿರ ಕರೆದು ಡ್ರೂ, "ಸೀನಾ, ಇವತ್ತು ಎಲ್ಲರಿಗೂ ಸೊಗಸಾದ ಔತಣ ನೀಡುವುದು ನಿನ್ನ ಭಾರ" ಎಂದರು.

"ಏಕೆ ಪ್ರೊಫೆಸರ್ ?"

"ಔತಣ ಸಿದ್ಧವಾಗಲಿ – ಮುಂದಿನ ವಿಷಯ ಆಮೇಲೆ ಹೇಳುತ್ತೇನೆ. ಔತಣದ ಬಿಲ್ ಮಾತ್ರ ಮಿ. ಸ್ವಾಮಿಯವರಿಗೆ ಕೊಡು."

ಫ್ಲೋರಾ ನಸುನಗುತ್ತ

"ಮುದುಕರಾದರೂ ತುಂಟತನ ಬಿಡಲೊಲ್ಲರಲ್ಲ ಪ್ರೊಫೆಸರ್"

ಡ್ರೂ ಸುಳ್ಳು ಗಂಭೀರತೆ ನಟಿಸುತ್ತಾ

" ಯಂಗ್ ವುಮನ್ (young woman) ಮುದುಕನನ್ನು ಎಂದಿಗೂ ಮುದುಕ ಎಂದು ಕರೆಯಕೂಡದು "

" ಇನ್ನೇನೆಂದು ಕರೆಯಲಿ – ನವತರುಣ ಎಂದು ಕರೆಯಲಿ ?"

" ಯಾಕಾಗಬಾರದು ಡ್ರೂನ ವೃದ್ಧದೇಹದಲ್ಲಿ ಪ್ರಾಯದ ಆತ್ಮವಿದೆ ಫ್ಲೋ ನಮಗೆ ಪ್ರಿಯರಾದವರು ಅಭಿವೃದ್ಧಿಗೆ ಬಂದರೆ ನಮ್ಮ ತಾರುಣ್ಯ ಹೆಚ್ಚುವುದಿಲ್ಲವೇ ? ನಿಮಗೆ ಅತ್ಯಂತ ಹರ್ಷನೀಡುವ ಸುದ್ದಿಯ ದೂತನಾಗಿ ಬಂದಿದ್ದೇನೆ "

" ಅದೇನು ಬೇಗ ಹೇಳಿ ಪ್ರೊಫೆಸರ್ "

ಎಂದು ನೀನಾ ಒತ್ತಾಯಮಾಡಿದಳು.

ಪ್ರೊಫೆಸರು ಎದ್ದುನಿಂತು ಕೈಚಾಚಿ ಗಂಭೀರವಾಗಿ

" ಕನ್‌ಗ್ರ್ಯಾಚುಲೇಷನ್ಸ್ (Congratulations) ಡಾಕ್ಟರ್ ನಾರಾಯಣಸ್ವಾಮಿ " ಎಂದರು

ನಾರಾಯಣಸ್ವಾಮಿ ಎದ್ದು ನಿಂತು ಪ್ರೊಫೆಸರ್ ಕೈ ಕುಲುಕಿದ. ಗೆಳೆಯರೆಲ್ಲಾ ನಾರಾಯಣಸ್ವಾಮಿಯನ್ನು ಸುತ್ತುಗಟ್ಟಿ ಅವನನ್ನು ಅಭಿನಂದಿಸಿದರು.

ಅಷ್ಟೇ ಅಲ್ಲ. ಸ್ವಾಮಿಯವರಿಗೆ ಮೊದಲನೆಯ ವರ್ಗದಲ್ಲಿ ಡಾಕ್ಟರೇಟ್ ಸಿಕ್ಕಿದೆ, ನಮ್ಮ ವಿಶ್ವವಿದ್ಯಾನಿಲಯದಲ್ಲಿ ಈ ಗೌರವ ಪಡೆದಿರುವ ಪ್ರಥಮ ಭಾರತೀಯರು ಡಾ. ನಾರಾಯಣಸ್ವಾಮಿ. "

ನಾರಾಯಣಸ್ವಾಮಿ ಪರಮ ಕೃತಜ್ಞತೆಯಿಂದ " ಇವೆಲ್ಲಾ ತಮ್ಮ ಕಟಾಕ್ಷ ಪ್ರೊಫೆಸರ್. " ಎಂದ.

ಅಂದಿನ ಪಾರ್ಟಿಯ ವೆಚ್ಚವನ್ನೆಲ್ಲಾ ನಾರಾಯಣಸ್ವಾಮಿಯೇ ವಹಿಸಬೇಕೆನ್ನುವ ವಿಷಯದಲ್ಲಿ ಭಿನ್ನಾಭಿಪ್ರಾಯವೇ ಉಳಿಯಲಿಲ್ಲ.

ಪಾರ್ಟಿ ನಡೆದಿದ್ದಂತೆ ಪ್ರೊಫೆಸರ್ ಡ್ರೂ, " ಡಾ ಸ್ವಾಮಿಯವರು, ಗಳಿಸಿದ ವಿಜಯದಿಂದ ನನಗೆ ತುಂಬ ಸಹಾಯವಾಯಿತು." ಎಂದರು.

ನನ್ನಿಂದ ನಿಮಗೆ ಸಹಾಯವೇ ? "

“ ಹೌದು ಸ್ವಾಮಿ-ಭಾರತದ ಆದಿವಾಸಿಗಳ ಬಗ್ಗೆ ಸಂಶೋಧನೆ ನಡಿಸುವ ವಿಷಯ ನಾನು ವಿಶ್ವವಿದ್ಯಾನಿಲಯಕ್ಕೆ ಅರಿಕೆ ಮಾಡಿಕೊಂಡಿದ್ದುದು ನೆನಪಿದೆಯಷ್ಟೆ, ”

“ ಇದೆ ”

“ ನಿಮ್ಮನ್ನು ಜತೆಗಾರರಾಗಿ ತೆಗೆದುಕೊಳ್ಳುತ್ತೇನೆಂದು ಸ್ಥಾನಪತಿಗಳಿಗೆ ಬರದಿದ್ದೆ. ಅವರು ಅದಕ್ಕೆ ಸಮ್ಮತಿಸಿದ್ದಾರೆ. ”

“ ಹಾಗಾದರೆ ನಿಮ್ಮ ಭಾರತ ಯಾತ್ರೆ ಖಚಿತವಾಯಿತು. ”

ಎಂದು ಫ್ಲೋರಾ ಹೇಳಿದಳು.

“ನಾವು ಈಗಲೇ ಹೊರಡುವುದಿಲ್ಲ, ಫ್ಲೋ. ಬಹಳ ಸಿದ್ಧತೆ ಮಾಡಿಕೊಳ್ಳಬೇಕಾಗಿದೆ. ಆ ಬಗ್ಗೆ ಇರುವ ಸಮಸ್ತ ಸಾಹಿತ್ಯ, ಅಂಕಿ ಅಂಶಗಳನ್ನು ಸಂಗ್ರಹಿಸಬೇಕಾಗಿದೆ. ಡಾ. ಸ್ವಾಮಿಯವರಿಗೆ ಬಿಡುವು ದೊರೆತ ಕೂಡಲೇ ಈ ಕೆಲಸ ಆರಂಭಿಸುತ್ತೇವೆ. ಆರು ತಿಂಗಳಲ್ಲಿ ನಾನೂ ಅವರೂ ಇದನ್ನು ಮುಗಿಸಲು ಸಾಧ್ಯವಾಗಬಹುದು - ಸ್ವಾಮಿ, ನಿಮ್ಮ ‘ ದೇವ ಪುತ್ರ ’ ಕಾದಂಬರಿ ಎಲ್ಲಿಗೆ ಬಂತು ? ”

“ ಇನ್ನು ಎರಡು ವಾರಗಳಲ್ಲಿ, ಹಸ್ತಪ್ರತಿ ಮಿ. ಹ್ಯಾರಿಸ್ ಅವರಿಗೆ ಒಪ್ಪಿಸಿಬಿಡುತ್ತೇನೆ, ಪ್ರೊಫೆಸರ್. ”

“ ಸದ್ಯಕ್ಕೆ ನೀವು ಮಿ. ಹ್ಯಾರಿಸ್ ಜತೆಯಲ್ಲಿ ಹೊಸ ಒಪ್ಪಂದ ಮಾಡಿಕೊಳ್ಳಬೇಡಿ. ಆದಿವಾಸಿ ಸಂಶೋಧನೆ ಮುಗಿಯುವವರೆಗೆ ನಾನು ನಿಮಗೆ ಪುರಸತ್ತು ಕೊಡುವುದಿಲ್ಲ. ”

“ ಅಲ್ಲಿಯವರೆಗೆ ಡಾ. ಸ್ವಾಮಿ ಉಪವಾಸವಿರುವುದಕ್ಕಾಗುತ್ತದೆಯೋ ಪ್ರೊಫೆಸರ್ ”

ಎಂದು ನೀನಾ ಕೇಳಿದಳು.

“ ವಿಶ್ವವಿದ್ಯಾನಿಲಯ ನನಗೂ, ಅವರಿಗೂ ಕಾಲಕ್ಷೇಪ ಕೊಡುತ್ತದೆ ಮೈ ಡಿಯರ್-ಯೋಚಿಸಬೇಡ. ಲಂಡನ್ನಿನಲ್ಲಿ ನೀನಿರುವವರೆಗೆ ಸ್ವಾಮಿ, ಉಪವಾಸವಿರಬೇಕಾದ ಪ್ರಮೇಯವೇ ಇಲ್ಲವಲ್ಲಾ ? ”

“ ದುಡ್ಡು ಕೊಡದೆ ಮಿ. ಸ್ವಾಮಿ ಒಂದು ಕಪ್ ಟೀ ಕೂಡ ನನ್ನ ಚಹಾದಂಗಡಿಯಲ್ಲಿ ಸ್ವೀಕರಿಸಿಲ್ಲ. ಅವರೂ, ನೀವೂ ಇಲ್ಲಿಗೆ ಬರುವುದೇ

ನನಗೆ ದೊಡ್ಡ ಗೌರವ ಗೌರವ ಮಾತ್ರವೇ ಅಲ್ಲ–ಲಾಭವೂ ಆಗಿದೆ ಪ್ರೊಫೆಸರ್ "

" ಲಾಭ ! ನಮ್ಮಿಂದ ಯಾರಿಗಾದರೂ ಲಾಭವಾಗುವುದು ಸಾಧ್ಯವೇ ? "

" ಅಂದು ಪತ್ರಿಕೋದ್ಯಮಿಗಳು ಮಿ. ಸ್ವಾಮಿಯನ್ನು ಮುತ್ತಿದ ಮೇಲೆ ನನ್ನ ಚಹಾದಂಗಡಿಯ ವ್ಯಾಪಾರ ಬಹಳ ಕುದುರಿದೆ ಕೆಲಸ ಹೆಚ್ಚಾಗಲು ನಾನು ಒಬ್ಬ ಅಡಿಗೆಯವನನ್ನೂ (Chef), ಒಬ್ಬ ಊಳಿಗ ದಾಳಿಯನ್ನೂ ತೆಗೆದುಕೊಂಡಿದ್ದೇನೆ "

" ಇದನ್ನು ಕೇಳಿ ನನಗ ಸಂತೋಷವಾಗಿದೆ ನೀನಾ. "

" ನಮ್ಮನ್ನೆಲ್ಲಾ ಬಿಟ್ಟು ನೀವು ಭಾರತ ಪ್ರವಾಸ ಮಾಡಿಕೊಂಡು ಬರುವಿರಾ ಪ್ರೊಫೆಸರ್. "

ಎಂದು ಫ್ಲೋರಾ ಕೇಳಿದಳು.

" ನೀನೂ ಡಾಕ್ಟರೂ ನಮ್ಮ ಜತ ಏಕೆ ಬರಬಾರದು ಫ್ಲೋ ? "

" ನನ್ನ ಸಂಸಾರ ಎಷ್ಟು ದೊಡ್ಡದೆಂದು ನೀವೇ ಬಲ್ಲಿರಿ "

" ನಿಜ-ಆದರೂ ಸ್ವಲ್ಪ ಬಿಡುವು ಮಾಡಿಕೊಳ್ಳಬೇಕು.

" ಭಾರತ ನೋಡಬೇಕೆಂಬ ನನ್ನ ಆಸೆಗೆ ಕೊನೆಮೊದಲಿಲ್ಲ, ಪ್ರೊಫೆಸರ್ ಆದರೆ ಸೊಸೈಟಿಯ ಕೆಲಸ ಯಾರಿಗೆ ಒಪ್ಪಿಸಲಿ ? "

ಪ್ರೊಫೆಸರ ತಲೆಯಲ್ಲಿ ನೂರೆಂಟು ವಿಚಾರಗಳು ಹೊಳೆದವು. ಅವು ನಿಷ್ಕೃಷ್ಟ ಸ್ವರೂಪ ತಳೆಯಲೆಂದು ಅವರು ಸುಮ್ಮನಾದರು. ನೀನಾ ತಂದ ಚಹಾ, ಉಪಹಾರದ ಸಾಮಾನುಗಳನ್ನು ಪೀಟರ್ ಕೈಗೆ ತೆಗೆದುಕೊಂಡು ಮೇಜಿನಮೇಲಿಟ್ಟ.

ಉಪಹಾರ ಮುಗಿದಮೇಲೆ ಎಲ್ಲರೂ ಗೃಹಾಭಿಮುಖರಾದರು. ಗ್ರೇಟ್ ಕೋಟ್ (Great Coat) ಧರಿಸುತ್ತಾ ಪೀಟರ್.

" ಬರುವುದಿಲ್ಲವೇ ಪ್ರೊಫೆಸರ್ " ಎಂದು ಕೇಳಿದ.

" ನೀನು ಹೋಗು ಪೀಟರ್-ನಾನು ಸ್ವಲ್ಪಹೊತ್ತು ಬಿಟ್ಟು ಬರುತ್ತೇನೆ " ಎಂದರು.

ಎಲ್ಲರೂ ಹೋದ ಮೇಲೆ ಪ್ರೊಫೆಸರ್ ಡ್ರೂ ಸಾವಕಾಶವಾಗಿ

ಒಂದು ಸಿಗಾರ್ ಹಚ್ಚಿ ಕುಳಿತರು.

ನೀನಾ ಬಂದು ಎದುರಿಗೆ ಕುಳಿತಳು.

ಪ್ರೊಫೆಸರು ಸಿಗಾರಿನ ಧೂಮದಲ್ಲಿ ಚಕ್ರಗಳನ್ನು ನಿರ್ಮಿಸುತ್ತ,

" ನೀನಾ . . . " ಎಂದರು

" ಏನು ಪ್ರೊಫೆಸರ್ ? "

' ನಿನ್ನ ಜತೆ ಮಾತನಾಡಬೇಕೆಂದೇ ನಾನು ಕುಳಿತೆ. ಈಗ ನಿನ್ನ ಟೀಷಾಪ್ ಬಿಸಿನೆಸ್ ಚೆನ್ನಾಗಿದೆಯೆಂದು ಹೇಳಿದೆ. "

" ಹೌದು. "

" ಇದನ್ನೇ ಅಭಿವೃದ್ಧಿ ಪಡಿಸಬೇಕೆಂದು ಯೋಚಿಸಿರುವೆಯಾ ? "

" ಅಭಿವೃದ್ಧಿ ಪಡಿಸಿಕೊಳ್ಳಲೇಬೇಕು – ಟೀಷಾಪ್ ನನ್ನ ಕಷ್ಟಕ್ಕಾಯಿತು ನನಗೂ ನನ್ನ ತಂದೆಗೂ ಅನ್ನ ಒದಗಿಸಿತು. "

" ಸರಿ ಹಾಗಾದರೆ. "

" ಏಕೆ ಪ್ರೊಫೆಸರ್. "

" ನಾನು ಬೇರೊಂದು ಯೋಚನೆ ಮಾಡುತ್ತಿದ್ದೆ "

" ಹೇಳಿ "

" ಸೊಸೈಟಿಯ ಕೆಲಸ ಮಿತಿಮೀರಿ ಬೆಳೆದಿದೆ. ಫ್ಲೋ ಹಗಲಿರುಳು ದುಡಿಯುತ್ತಿದ್ದಾಳೆ. ಅವಳಿಗೆ ಯಾರಾದರೂ ಸಹಾಯಕರಾಗಿ ನಿಲ್ಲಬೇಕು. "

" ಫ್ಲೋ ಮೇಲೆ ನನ್ನ ಜವಾಬ್ದಾರಿ ಹೇಗೆ ಹೇರಲಿ ? "

" ಜವಾಬ್ದಾರಿ ಪ್ರಶ್ನೆಯೇ ಇಲ್ಲ. ಫ್ಲೋ ಯಾರನ್ನು ಸಹಾಯಕ್ಕೆ ತೆಗೆದುಕೊಂಡರೂ ಅವರ ಸಂಸಾರದ ಖರ್ಚು ವೆಚ್ಚ ನಿರ್ವಹಿಸಲೇ ಬೇಕಾಗುತ್ತದೆ. "

" ಫ್ಲೋ ನನ್ನ ಸಹಾಯ ಅಪೇಕ್ಷಿಸಿದರೇ ? "

" ಇನ್ನೂ ಆ ಮಾತು ಬಂದಿಲ್ಲ – ನಿನ್ನ ಮನಸ್ಸಿನಲ್ಲೇನಿದೆ ತಿಳಿದುಕೊಂಡು ಅನಂತರ ಅವಳಜತೆ ಮಾತಾಡಬೇಕೆಂದಿದ್ದೇನೆ. "

" ನೀವು ಏನು ಹೇಳಿದರೂ ಮಾಡಲು ನಾನು ಸಿದ್ಧಳಾಗಿದ್ದೇನೆ."

" ಇನ್ನೂ ಒಂದು ವಿಷಯದಲ್ಲಿ ನಿನ್ನ ಸ್ಪಷ್ಟಾಭಿಪ್ರಾಯ ತಿಳಿ

ಯಲು ಆತುರನಾಗಿದ್ದೇನೆ. ”

“ ನೀವು ಸಂಕೋಚಪಟ್ಟುಕೊಳ್ಳುವ ಕಾರಣವಿಲ್ಲ. ”

“ ನೀನಾ, ನೀನು ಚಿಕ್ಕವಳು. ”

“ . . .... . ”

“ ನಿನ್ನ ಬಾಳಿನ ವೃಕ್ಷ ಕುಡಿಯೊಡೆಯುತ್ತಿರುವಾಗಲೇ ದೈವ ಅದನ್ನು ಚಿವುಟಿಹಾಕಿತು.

“. . . .. .... ”

“ ಅಳಬೇಡ ನೀನಾ – ನಾಲ್ವರ ರಾಜ್ಯಲೋಭದಿಂದಾಗಿ ಇಡಿಯ ವಿಶ್ವವೇ ನಿನ್ನಂತೆ ಕಣ್ಣೀರಿಡುತ್ತಿದೆ. ಬ್ರಿಟನ್ ಇಂದು ಸಂತ್ರಸ್ತರ ಆರ್ತ ನಾದದಿಂದ, ವಿಧವೆಯರ ಕಣ್ಣೀರಿನಿಂದ ತುಂಬಿಹೋಗಿದೆ ”

“. . . . . .... . ...”

“ ಪುತ್ರಶೋಕದಿಂದ ಕಂಗೆಟ್ಟಿರುವ ಬ್ರಿಟನ್ನಿನ ದುಃಖ ನಿವಾರಣೆ ಮಾಡುವುದು ಬ್ರಿಟಿಷ್ ಪುತ್ರಿಯರ ಕರ್ತವ್ಯ. ”

“ ನಾನೇನು ಮಾಡಬೇಕು. ”

“ ಪುನರ್ವಿವಾಹವಾಗಬೇಕು. ”

“ ಹೇಗೆ ಸಾಧ್ಯ ಪ್ರೊಫೆಸರ್. ರಣರಂಗದಲ್ಲಿ ವೀರನಂತೆ ಮಡಿದ ನನ್ನ ಪತಿಯ ನೆತ್ತರಿನ ಬಿಸಿಯಿನ್ನೂ ಆರಿಲ್ಲ. ಅಮರಪ್ರೇಮದಿಂದ ಅವರು ನನ್ನ ನೆತ್ತಿಗೇರಿಸಿದ ಹೂವಿನ ಬಣ್ಣವಿನ್ನೂ ಕಂದಿಲ್ಲ – ಸಾವು ನಮ್ಮನ್ನಗಲಿಸಿದೆಯಾದರೂ ಸ್ಮೃತಿಯನ್ನಳಿಸಲಾಗಿಲ್ಲ. ”

“ ನಿನ್ನ ಮನೋನಿರ್ಧಾರವನ್ನು ನಾನು ಪ್ರತಿಭಟಿಸುತ್ತಿಲ್ಲ ನೀನಾ – ಈ ಬಗ್ಗೆ ನಿನ್ನ ಅಭಿಪ್ರಾಯ ಕೇಳಿದೆ ಅಷ್ಟೇ ! ”

“ ನಮ್ಮೆಲ್ಲರ ಜೀವನ ಗೆಲುವಾಗಬೇಕು ಚೆಲುವಾಗಬೇಕು ಎಂದು ನೀವು ಪ್ರಯತ್ನಿಸುತ್ತಿರುವಿರಿ. ನಿಮ್ಮ ಪಾದಸ್ಪರ್ಶದಿಂದ ಮರು ಭೂಮಿ ನಂದನವನವಾಗುತ್ತದೆ – ಬರಡು ಹೃದಯ ಆನಂದಮಂದಿರ ವಾಗುತ್ತದೆ. ನಾನೀಗ ತೃಪ್ತಳಾಗಿದ್ದೇನೆ – ಸುಖಿಯಾಗಿದ್ದೇನೆ. ನೀವೂ ನಿಮ್ಮ ಗೆಳೆಯರೂ ನನ್ನ ಜೀವನ ಬಯಸುತ್ತಿದ್ದ ಶಾಂತಿ, ತೃಪ್ತಿ,

ಆನಂದವನ್ನು ಕರುಣಿಸಿದ್ದೀರಿ. ಇದಕ್ಕಿಂತ ಹೆಚ್ಚಿನದನ್ನು ನಾನೇಕೆ ಬಯಸಲಿ ? ”

ಪ್ರೊಫೆಸರ್ ಎದ್ದು ನಿಂತು

“ ಪುರುಷ ಸ್ವಪ್ರಯತ್ನದಿಂದ ದೊಡ್ಡವನಾಗುತ್ತಾನೆ–ಸ್ತ್ರೀ ದೊಡ್ಡವಳಾಗಿಯೇ ಹುಟ್ಟುತ್ತಾಳೆ – ಈ ವೃದ್ಧನ ಭಕ್ತಿಪೂರ್ವಕ ಪ್ರಣಾಮ ಸ್ವೀಕರಿಸು ನೀನಾ ”

ಎಂದು ಹೇಳಿದವರೇ ಅಲ್ಲಿ ನಿಲ್ಲದೆ ಹೊರಟುಬಿಟ್ಟರು.

## ೨೭

ನಾರಾಯಣಸ್ವಾಮಿಯ ಪ್ರಗತಿ ಕಂಡು ಮಾಧವರಾಯನಿಗೆ ಸಂತೋಷವಾಗಿದ್ದುದಲ್ಲದೆ ಮನಸ್ಸಿನ ಭಾರವೂ ಇಳಿದಿತ್ತು. ಮಗನ ಕಾಗದ ಬಂದ ದಿನ ಅವನಿಗೆ ಹಬ್ಬದ ದಿನವಾಗುತ್ತಿತ್ತು. ತಾನು ಹತ್ತಾರು ಬಾರಿ ಓದಿಕೊಂಡು ಕಂಡಕಂಡವರಿಗೆ ಅದನ್ನು ಓದಿ ಹೇಳಿದ ಹೊರತೂ ಅವನಿಗೆ ತೃಪ್ತಿಯಾಗುತ್ತಿರಲಿಲ್ಲ. 'ಭಾರತೀಯ ತಾಯಿ' ಯಂತೂ ಮಾಧವರಾಯನ ಆರಾಧ್ಯಗ್ರಂಥವಾಯಿತು. ಒಮ್ಮೊಮ್ಮೆ ನಾರಾಯಣಸ್ವಾಮಿಯನ್ನು ಮುಟ್ಟಿ ನೇವರಿಸುವಂತೆ ಗ್ರಂಥವನ್ನು ಮೃದುವಾಗಿ ನೇವರಿಸುವನು.

ನಾರಾಯಣಸ್ವಾಮಿ ಪ್ರೊ. ಡ್ರೂ ಅವರ ಸಂಗಡ ಬರುವ ವಿಷಯ ತಿಳಿದಮೇಲಂತೂ ಮಾಧವರಾಯನ ಸಂತೋಷಕ್ಕೆ ಪಾರವೇ ಇಲ್ಲವಾಯಿತು.

ಕಮಲನ ಅನಿಶ್ಚಿತ ಭವಿಷ್ಯದ ಬಗ್ಗೆ ಮಾಧವರಾಯ ದೀರ್ಘವಾಗಿ ವಿಚಾರಮಾಡುತ್ತಿದ್ದ. ಸದ್ಯಕ್ಕಂತೂ ಜೀವನ ಕಳೆದುಹೋಗುತ್ತಿತ್ತು – ಮುಂದೇನು ಗತಿ? ಕಮಲನ ರಜಾ ಮುಗಿಯುತ್ತಾ ಬಂದಿತ್ತು. ಅವಳು ಪುನಃ ಕೆಲಸಕ್ಕೆ ಹೋಗಬೇಕೇ ಬೇಡವೇ? ಕಮಲ ಕೆಲಸಕ್ಕೆ ಹೋದರೆ ಪ್ರಿನ್ಸಿಪಾಲ್ ಮರಕತಂ ಅವಳನ್ನು ಹುರಿದು ಮುಕ್ಕುವುದರಲ್ಲಿ ಸಂದೇಹವಿರಲಿಲ್ಲ. ಕಮಲ ಕೆಲಸಕ್ಕೆ ರಾಜೀನಾಮೆ ಕೊಡಬಹುದು – ಕೊಟ್ಟು ಅವಳೇನು ಮಾಡುವುದು? ಅವಳನ್ನೂ ಅವಳ ಮಕ್ಕಳನ್ನೂ ಸಾಕುವುದು ಹೇಗೆ?

ಕೇಶವಮೂರ್ತಿ ಆಗಾಗ್ಗೆ ಕೆಲವು ಕ್ಲಿಷ್ಟ ಕೇಸುಗಳ ಬಗ್ಗೆ

ಮಾಧವರಾಯನೊಂದಿಗೆ ಸಮಾಲೋಚನೆ ನಡೆಸಿ ಅಲ್ಪಸ್ವಲ್ಪ ಹಣ ಕೊಡುತ್ತಿದ್ದ ಆದರೆ ಅದನ್ನು ನಂಬಿಕೊಂಡು ಕೂಡಲು ಸಾಧ್ಯವಿರಲಿಲ್ಲ

ಇದರ ಜತೆಗೆ ಜವರೇಗೌಡರ ಸಾಲದ ಹೊರೆಯೂ ಗಂಟು ಬಿದ್ದಿತ್ತು. ಗೌಡರು ಹಣವನ್ನು ಸಾಲವೆಂದು ಕೊಟ್ಟಿರಲಿಲ್ಲ. ಆದರೆ ಸಾವಿರಾರು ರೂಪಾಯಿಗಳನ್ನು ಗೌಡರು ಏತಕ್ಕೆ ಕೊಡಬೇಕು? ಅವರಿಂದ ಅಷ್ಟು ಹಣ ದಾನವಾಗಿ ತಾನು ಸ್ವೀಕರಿಸುವುದಾದರೂ ನ್ಯಾಯವೇ? ಗೌಡರು ಕೊಟ್ಟಿದ್ದ ಹಣ ಹಿಂದಿರುಗಿಸುವ ಬಗೆ ಹೇಗೆಂಬ ಚಿಂತೆ ಮಾಧವರಾಯನನ್ನು ಬಲವಾಗಿ ಕಾಡಲಾರಂಭಿಸಿತು.

ಈಯಲ್ಲಾ ಚಿಂತೆ, ದುಃಖಗಳಿಗೆ ಕಳಶವಿಟ್ಟಂತೆ ಗೋದಮ್ಮನವರು ಹಾಸಿಗೆ ಹಾಸಿ ಮಲಗಿಬಿಟ್ಟರು.

ಗೋದಮ್ಮ ಒಂದು ದಿನವೂ ಕಾಹಿಲೆಯೆಂದು ಮಲಗಿದವರಲ್ಲ. ನಿಷ್ಠಾ ಜೀವನದಿಂದ ವಜ್ರಶಕ್ತಿ ಪಡೆದಿದ್ದ ಅವರ ದೇಹವೂ ವೃದ್ಧಾಪ್ಯಕ್ಕೆ ಮಣಿಯಬೇಕಾಯಿತು. ದೃಷ್ಟಿಪಾಟ ತೀರ ದುರ್ಬಲವಾಗಿ ಮನೆಯಲ್ಲಿ ಓಡಿಯಾಡುವುದೇ ಕಷ್ಟವಾಯಿತು. ಕಮಲಾ, ಮಾಧವರಾಯ ಇಬ್ಬರಲ್ಲಿ ಒಬ್ಬರು ಸದಾ ಅವರ ಜತೆಯಲ್ಲಿದ್ದು ಅವರ ನಿತ್ಯನೈಮಿತ್ತಿಕ ಕರ್ಮಗಳಿಗೆ ಸಹಕರಿಸಬೇಕಾಗಿತ್ತು. ದೇಹ ದುರ್ಬಲವಾದರೂ ಗೋದಮ್ಮ ತಮ್ಮ ಜೀವನಕ್ರಮ ಬದಲಾಯಿಸಲಿಲ್ಲ. ಸ್ನಾನ, ಪೂಜೆ ಉಪವಾಸಗಳೆಲ್ಲವೂ ಎಂದಿನಂತೆಯೇ ನಡೆಯುತ್ತಿತ್ತು.

ಕಮಲ ರಜಾ ಮುಂದುವರಿಸಬೇಕೆಂದು ಯೋಚಿಸುತ್ತಿರುವಲ್ಲಿ ಪ್ರಿನ್ಸಿಪಾಲ್ ಮರಕತಂ ಅವರಿಂದ ಬಂದ ಕಾಗದ ಅವಳನ್ನು ಚಕಿತಳನ್ನಾಗಿ ಮಾಡಿತು. ಮೈಸೂರು ಕಾಲೇಜಿಗೆ ಕಮಲನನ್ನು ಟ್ರಾನ್ಸ್‌ಫರ್ (transfer) ಮಾಡಿರುವುದಾಗಿ ಪ್ರಿನ್ಸಿಪಾಲ್ ತಿಳಿಸಿದ್ದರು.

ಟ್ರಾನ್ಸ್‌ಫರ್ ಆಜ್ಞೆಯನ್ನು ರದ್ದುಗೊಳಿಸಲು ಮಾಧವರಾಯ ಭೂಮ್ಯಾಕಾಶ ಒಂದು ಮಾಡಿದ. ಒಂದು ದಿನ ಒಬ್ಬರ ಮನೆಯ ಬಾಗಿಲು ಮೆಟ್ಟದಿದ್ದವನು ಸೆನೇಟ್ ಸದಸ್ಯರು, ಸ್ಥಾನಪತಿಗಳು, ಶಿಕ್ಷಣ ಮಂತ್ರಿಗಳು ಎಲ್ಲರನ್ನೂ ಕಂಡು ಕಮಲನ ಟ್ರಾನ್ಸ್‌ಫರ್ ರದ್ದು ಮಾಡಲು ಪ್ರಾರ್ಥಿಸಿದ.

‘ ಹೇಗೆ ಸಾಧ್ಯ ? ’ ಎಂದು ಕೆಲವರು ಹೇಳಿದರು.

‘ ಪ್ರಯತ್ನಿಸಿ ನೋಡುತ್ತೇವೆ ’ ಎಂದು ಕೆಲವರು ಕೇಳಿದರು.

‘ ಖಂಡಿತ ರದ್ದುಮಾಡಿಸುತ್ತೇನೆ ’ ಎಂದು ಕೆಲವರು ಹೇಳಿದರು.

ಟ್ರಾನ್ಸ್‌ಫರ್ ಆಜ್ಞೆ ಮಾತ್ರ ರದ್ದಾಗಲಿಲ್ಲ

ಕಮಲ ರಾಜೀನಾಮೆ ನಲ್ಲಿಸುವುದು ಅನಿವಾರ್ಯವಾಯಿತು

ಡಾಕ್ಟರ ಔಷಧ ತೆಗೆದುಕೊಳ್ಳುವುದಕ್ಕೆ ಗೋದಮ್ಮ ಸುತರಾಂ ಒಪ್ಪಲಿಲ್ಲ ಅವರೇ ನಾರುಬೇರುಗಳನ್ನು ತರಿಸಿ ಕಷಾಯಮಾಡಿಸಿ ಕುಡಿಯುತ್ತಿದ್ದರು

ಒಂದು ದಿನ ತಲೆ ಹಿಡಿಯುಸಂಥ ನೋವು ಆರಂಭವಾಯಿತು

“ ಶ್ರೀಗಂಧ ತೇಯ್ದು ತಲೆಗೆ ಪಟ್ಟುಹಾಕೇ ತಾಯಿ ”

ಎಂದು ಗೋದಮ್ಮ ಕಮಲನಿಗೆ ಹೇಳಿದರು

ಕಮಲ ಅಜ್ಜಿಯ ಹಾಸಿಗೆಯ ಬಳಿ ಕುಳಿತು ಸಾಣೆಯಕಲ್ಲಿನ ಮೇಲ ಶ್ರೀಗಂಧ ತೇಯುತ್ತಿದ್ದಳು ಗೋದಮ್ಮ ಕ್ಷೀಣಸ್ವರದಲ್ಲಿ

“ ಕಮಲಾ ” ಎಂದರು

“ ಏನಜ್ಜಿ ? ”

“ ನಾಣಿ ಯಾವಾಗ ಬರುತ್ತಾನಂತೆ ? ”

“ ಇನ್ನೂ ಐದಾರು ತಿಂಗಳಾಗಬಹುದು. ”

“ ಅವನನ್ನು ನೋಡದೆ ನಾನು ಸಾಯುವುದಿಲ್ಲಕಣೇ ! ”

“ ನೀನೇಕೆ ಸಾಯಬೇಕಜ್ಜಿ ”

“ ಕೈಕಾಲು ಗಟ್ಟಿಗಡುತರವಾಗಿರುವಾಗಲೇ ಹೋಗಿಬಿಡಬೇಕು ಕಮಲಾ – ನಿಮ್ಮಮ್ಮನ ಹಾಗೆ. ಇನ್ನು ನಾನು ಇದ್ದಷ್ಟು ದಿನವೂ ನಿಮಗೆಲ್ಲಾ ತೊಂದರೆ. ”

“ ತೊಂದರೆ ಎಂದು ನಾವು ಯಾವಾಗಲಾದರೂ ಹೇಳಿದೆವೇ – ತೋರಿಸಿಕೊಂಡೆವೇ ? ”

“ ಇಲ್ಲಪ್ಪಾ ನಿಮ್ಮಂಥಾ ಮಕ್ಕಳು ಮೊಮ್ಮಕ್ಕಳನ್ನು ಪಡೆದಿರುವ ನಾನೇ ಭಾಗ್ಯವತಿ ”

“ ಅಮ್ಮ ಹೋದಮೇಲೆ ನೀನೇ ನಮ್ಮಮ್ಮ. ನೀನೂ ಹೋಗವ

ಮಾತಾಡಿದರೆ ನಮಗೆ ಯಾರು ದಿಕ್ಕು ? ”

“ ನಾನೂ ಒಂದು ದಿನ ಹೋಗಲೇಬೇಕಲ್ಲಾ ಕಮಲಾ. ನಿಮ್ಮಮ್ಮ ಪಂಜುಹೊತ್ತಿಸಿ ನಿಮ್ಮ ಕೈಯಲ್ಲಿಟ್ಟಿದ್ದಾಳೆ– ಅದರ ಬೆಳಕಿನಲ್ಲಿ ನೀವು ಎಲ್ಲಿ ನಡೆದರೂ ಬಾಧಕವಿಲ್ಲ.– ಕಾಹಿಲೆಬಿದ್ದಮೇಲೆ ನಾನು ಜೀವ ಸಾವಿನ ಬಗ್ಗೆ ಬಹಳ ಯೋಚಿಸಿದ್ದೇನೆ. ರುಕ್ಕೂ ಯೋಗ್ಯತೆ ಯಾರಿಗೂ ಬರುವುದಿಲ್ಲ ಕಮಲಾ. ನನಗಿಂತ ಅವಳು ಚಿಕ್ಕವಳಾದರೂ ಅವಳ ಉಂಗುಷ್ಟ ಹೋಲುವ ಯೋಗ್ಯತೆ ನನಗಿಲ್ಲ. ಅವಳು ಧೀರೆಯಾಗಿ ಬಾಳಿದ್ದು ಮಾತ್ರವಲ್ಲ; ಧೀರೆಯಾಗಿಯೇ ಕಣ್ಮುಚ್ಚಿದಳು. ಆ ಧೀರಶಕ್ತಿ ನಮ್ಮಲ್ಲಿಲ್ಲ ಸಾಯುವ ಕಾಲದಲ್ಲಿಯೂ ಆಸೆಯಾಮಿಷಗಳು, ವಾಂಛಲ್ಯ, ಲೋಭ, ಮೋಹ ನಮ್ಮನ್ನು ಕಾಡುತ್ತವೆ.”

“ ಇವುಗಳನ್ನೆಲ್ಲಾ ನೀನು ಮೀರಿ ನಿಂತಿರುವೆಯಲ್ಲಾ ಅಜ್ಜೀ ”

“ ಇಲ್ಲಾ ಕಮಲಾ, ನಿಜ ಹೇಳಲೇನು ? ”

“ ಹೇಳು ”

“ ಪದ್ಮನ ಬಾಣಂತನಮಾಡುವವರೆಗೆ ಸಾಯಲು ನನಗಿಷ್ಟವಿಲ್ಲ. ಅವಳ ಮಗನನ್ನೊ ಮಗಳನ್ನೊ ಎತ್ತಿ ಆಡಿಸುವವರೆಗೆ ಈ ಜೀವಕ್ಕೆ ಸಮಾಧಾನವಿಲ್ಲ. ”

“ ಈ ಆಸೆ ಲೋಭಮೋಹಕ್ಕೆ ಸೇರಿದುದಲ್ಲ, ಅಜ್ಜೀ. ಪದ್ದು ನೀನು ಸಾಕಿದ ಮಗು. ಅವಳ ಬಾಳು ಸುಖಸಂತೋಷಗಳಿಂದ ಬೆಳಗಬೇಕೆಂದು ನೀನು ಹಾರೈಸುವುದು ಸಹಜ. ”

“ ನಿಮಗೆಲ್ಲಾ ಈ ಅಜ್ಜಿ ಮಂಕುಬೂದಿ ಚೆಲ್ಲಿದ್ದಾಳೆ ಕಣೇ ಕಮಲಾ. ಅಜ್ಜಿ ಏನುಮಾಡಿದರೂ ಕೋಲೆಬಸವನ ಹಾಗೆ ನೀವು ತಲೆಯಳ್ಳಾಡಿಸುವಿರಿ. ”

ಕಮಲ ನಕ್ಕು ಗೋದಜ್ಜಿಯ ಹಣೆಗೆ ಪಟ್ಟು ಬಳಿಯುತ್ತಾ

“ ನಾಳೆ ನಾಣಿ ಹೆಂಡತಿಯನ್ನು ಕರೆದುಕೊಂಡು ಬಂದರೆ ಏನು ಮಾಡುತ್ತೀ ಗೋದಜ್ಜಿ. ” ಎಂದಳು.

“ ಎಂಥಾ ಪ್ರಶ್ನೆ ಕೇಳುತ್ತೀಯೇಮ್ಮ. ನಾಣಿ ಹೆಂಡತಿಯೂ ನನ್ನ ಮೊಮ್ಮಗಳಲ್ಲವೇ ? ”

" ಅವಳ ಜಾತಿ-ಕುಲ ! "

" ಜಾತಿ, ಕುಲ ಬೇರೆಯಾದರೆ ಜತೆಯಲ್ಲಿ ಕುಳಿತು ಊಟ ಮಾಡದಿದ್ದರಾಯಿತು. ವಿಶ್ವಾಸಕ್ಕೆ ಜಾತಿ ಕುಲಗಳಿವೆಯೇ ? "

" ಹಿರಿಯರಿಗೆಲ್ಲಾ ಇಷ್ಟು ವಿವೇಕವಿದ್ದರೆ ನಮ್ಮ ದೇಶ ವೈಕುಂಠ ವಾಗಿಬಿಡುತ್ತದೆ, ಅಜ್ಜಿ. "

" ವಿವೇಕವಿಲ್ಲದ ಹಿರಿಯರಿಗೆ ವಿವೇಕ ಕಲಿಸುವುದು ನಿಮ್ಮ ಕರ್ತವ್ಯ "

" ಅವರ ಕಣ್ಣುಮುಂದಿನ ಮಕ್ಕಳು ನಾವು – ನಾವು ಹೇಳಿದರೆ ಅವರು ಕೇಳುತ್ತಾರೆಯೇ ? "

" ಒಳ್ಳೆಯಮಾತು ಯಾರು ಹೇಳಿದರೂ ಕೇಳಲೇಬೇಕು. ನಚಿಕೇತ, ಶುಕ, ಧೃವ, ಪ್ರಹ್ಲಾದ, ಇವರೆಲ್ಲಾ ಗಡ್ಡದ ಜೋಗಿಗಳೇ ? "

ಕಮಲ ನಿರುತ್ತರಳಾದಳು.

ಒಂದೆರಡು ಗಂಟೆಕಾಲ ಕೇಶವಮೂರ್ತಿ ಕಛೇರಿಗೆ ಹೋಗಿ ಬಂದಮೇಲೆ ಉಳಿದ ಕಾಲವನ್ನೆಲ್ಲಾ ಮಾಧವರಾಯ ತಾಯಿಯ ಸಂಗಡ ಕಳೆಯುತ್ತಿದ್ದ. ಗೋದಮ್ಮನವರ ಯೋಗಕ್ಷೇಮ ನೋಡಿಕೊಳ್ಳುವುದರಲ್ಲಿ ಕಿಂಚಿತ್ತಾದ ನ್ಯೂನತೆಯೂ ಬಾರದಂತೆ ಎಲ್ಲರೂ ಎಚ್ಚರವಾಗಿದ್ದರು

'ಸಿಲ್ವಿನ್, ಬ್ಲೌಂಟ್ ಕಂಪೆನಿ'ಯವರು ನಾರಾಯಣಸ್ವಾಮಿಯ 'ದೇವಪುತ್ರ'(Son of God) ಕಾದಂಬರಿಯನ್ನೂ, ಪೀಟರ್ ಸಿಮ್ಮನ್ಸನ 'ಯೂನಿವರ್ಸ್-ಮೈ ಹೋಂ'(Universe–My home) ಕಾವ್ಯವನ್ನೂ ಕ್ರಿಸ್‌ಮಸ್ ಹಬ್ಬಕ್ಕೆ ಪ್ರಕಟಿಸಲು ನಿರ್ಧರಿಸಿ, ಪ್ರಚಾರ ಕಾರ್ಯ ನಡೆಸಿದ್ದರು.

ಪೀಟರನ ಕಾವ್ಯ ಪ್ರಕಾಶಕರಿಂದ ಸ್ವೀಕೃತವಾದುದಲ್ಲದೆ, ತನ್ನ ಕಾದಂಬರಿಯ ಜತೆಯಲ್ಲಿಯೇ ಪ್ರಕಟವಾಗುವುದು ನಾರಾಯಣ ಸ್ವಾಮಿಗೆ ಇಮ್ಮಡಿ ಸಂತೋಷವನ್ನುಂಟುಮಾಡಿತ್ತು. ಪ್ರಕಾಶಕರಿಂದ ಬಂದಿದ್ದ ಪತ್ರವನ್ನು ನಾರಾಯಣಸ್ವಾಮಿ, ಚಂದ್ರಶೇಖರರಿಗೆ ತೋರಿಸ ಬೇಕೆಂಬ ಉತ್ಸಾಹದಿಂದ ಪೀಟರ್ ನ್ಯಾಕೆ ಚಹಾ ಅಂಗಡಿಗೆ ಬಂದು ಕುಳಿತ

ಅಂದು ಚಹಾ ಅಂಗಡಿಯ ಹತ್ತಿರ ಯಾರೂ ಸುಳಿಯದಿದ್ದುದನ್ನು ಕಂಡು ಪೀಟರ್ ನಾರಾಯಣಸ್ವಾಮಿಯ ರೂಮಿಗೇ ಹೋಗಲು ನಿಶ್ಚಯಿಸಿದ. ನೀನಾ ಕೆಲಸ ಮುಗಿಸಿಕೊಂಡು ಬಂದು ಅವನ ಎದುರು ಕುಳಿತಳು.

"ಈ ವೇಳೆಗೆ ಸ್ವಾಮಿ, ಚಂದ್ರಶೇಖರ್ ಬರಬೇಕಾಗಿತ್ತಲ್ಲವೇ?"

"ಹೌದು-ಏನು ಕೆಲಸವೋ-ಅವರು ಇಡಿಯ ದಿನ ಇತ್ತ ಸುಳಿದಿಲ್ಲ. ಅವರಿಗೆ ಕಾದುಕಾದು ನಿಮಗೆ ಬೇಸರವಾಗಿರಬಹುದು."

"ಈ ಸಂತೋಷದ ಸುದ್ದಿ ಅವರ ಕಿವಿ ಮುಟ್ಟಿಸುವವರೆಗೆ ನನ್ನ ಮನಸ್ಸಿಗೆ ಸಮಾಧಾನವಿಲ್ಲ. ನೀನಾ, ನಿನ್ನ ಕೆಲಸ ಮುಗಿಯಿತೇ ?"

" ಮುಗಿಯಿತು ಏಕೆ ? "

" ಬಾ, ಇಬ್ಬರೂ ಹೋಗಿ ಸ್ವಾಮಿಯನ್ನು ಕಂಡುಬರೋಣ "

ನೀನಾ ಕುತ್ತಿಗೆ ತುಂಬ ಶಾಲು ಸುತ್ತಿಕೊಂಡು ಹೊರಡಲನುವಾದಳು

ಇಬ್ಬರೂ ಹೈಡ್‌ಪಾರ್ಕ್ ಸೇರಿದರು.

ಅಲ್ಲಿ ಮಾಟವಾಗಿ ಬೆಳಸಿದ್ದ ಬಗೆಬಗೆಯ ಹೂಗಳನ್ನು ಹಲವು ವರ್ಣದ ವಿದ್ಯುದ್ದೀಪಗಳು ಬೆಳಗಿಸಿದ್ದವು. ಪೀಟರ್ ಅವುಗಳನ್ನು ನೋಡುತ್ತಾ ನಿಂತು ವಿಸ್ಮಿತನಾದ.

ನೀನಾ ಮೆಲ್ಲನೆ ಅವನ ತೋಳು ಮುಟ್ಟಿ,

" ಬನ್ನಿ–ಕುಳಿತುಕೊಂಡು ನೋಡೋಣ " ಎಂದಳು.

ಪಾರ್ಕಿನಲ್ಲಿದ್ದ ಬೆಂಚಿನಮೇಲೆ ಇಬ್ಬರೂ ಕುಳಿತರು

ಪುಷ್ಪಸೌಂದರ್ಯ ವೀಕ್ಷಣೆಯಲ್ಲಿ ಮಗ್ನನಾಗಿದ್ದ ಪೀಟರ್ ಸ್ವಲ್ಪ ಹೊತ್ತು ಕಳೆದಮೇಲೆ.

" ಇದನ್ನು ನೋಡಿದರೆ ನನಗೆ ಬ್ಲಾಕ್‌ಔಟ್ (Black-out) ದಿನಗಳ ನೆನಪಾಗುತ್ತದೆ. " ಎಂದ.

" ಏಕೆ ಪೀಟರ್ ? "

" ಸನಸವೋಸ್ಮೇಷಶಾಲಿನಿಯಾದ ನಮ್ಮ ಲಂಡನ್ ಆಗ ವಿಧವೆಯಂತೆ ಕಾಣುತ್ತಿದ್ದಳು – ಎತ್ತಲೂ ಕಾರ್ಗತ್ತಲೆ – ಎತ್ತಲೂ ಕಪ್ಪು"

ನೀನಾ ಅವನತಮುಖಿಯಾಗಿ ಕುಳಿತಳು.

ತಾನು ವಿಧವೆಯ ಸಾಮ್ಯಕೊಟ್ಟುದು ತಪ್ಪಾಯಿತೆಂದು ಪೀಟರಿಗೆ ಹೊಳೆಯಿತು

" ಕ್ಷಮಿಸು ನೀನಾ – ಉದ್ದೇಶಪೂರ್ವಕ ನಾನು ಆ ಮಾತಾಡಲಿಲ್ಲ. "

" ನಾನು ಬಲ್ಲೆ ಪೀಟರ್. "

" ಕತ್ತಲೆ ಕಳೆದಮೇಲೆ ಬೆಳಕು ಹರಿಯಬೇಕಲ್ಲವೇ "

" ಇಫ್ ವಿಂಟರ್ ಕಮ್ಸ್ ಸ್ಪ್ರಿಂಗ್ ಫಾಲೋಸ್ (If winter comes spring follows) "

" ಮನುಷ್ಯನ ದುರ್ಭರ ಬಾಳುವೆಗೆ ಅದೇ ಕ್ರತುಶಕ್ತಿ "

" ಹೌದು ಪೀಟರ್. "

" ಪ್ರತಿಯೊಂದು ಜೀವವೂ ಸುಖ, ಶಾಂತಿಯನ್ನು ಬಯಸುತ್ತದೆ ನೀನಾ "

" ಕೀರ್ತಿಮಂದಿರದ ಹೆಬ್ಬಾಗಿಲು ತೆರೆಯುತ್ತಿರುವಾಗ ನೀವೇಕೆ ನಿರ್ವಿಣ್ಣರಾಗಬೇಕು. "

" ಕೀರ್ತಿಯೊಂದು ನೀರಬೊಬ್ಬುಳಿಕೆ – ನಾನು ಕೀರ್ತಿ ಬಯಸುವುದಿಲ್ಲ. "

" ನೂರಾರು, ಸಾವಿರಾರು ಜನ ನಿಮ್ಮ ಕಾವ್ಯ ಓದಬೇಕೆಂದು ಬಯಸುವುದಿಲ್ಲವೇ ? "

" ಸಹೃದಯಾಹ್ಲಾದವೇ ಕಾವ್ಯಧರ್ಮ – ಇದರ ಜತೆಗೆ ಮಾನವ ಧರ್ಮವೂ ಒಂದಿದೆ "

" ಏನದು ? "

" ಆತ್ಮಸಂತೋಷ. "

" ಆತ್ಮಸಂತೋಷದಿಂದ ನೀವು ವಂಚಿತರಾಗಿರುವಿರಾ ? "

" ಹೌದು ನೀನಾ, "

" ಏಕೆಂದು ನಾನು ಕೇಳಬಹುದೇ ? "

" ನೀನು ಕೇಳಲೇಬೇಕು – ಹೃದಯ ತೆರೆದು ನಾನು ಮಾತನಾಡಬೇಕಾಗಿದೆ ಅನಿಶ್ಚಿತ ಪರಿಸ್ಥಿತಿಯಿಂದ ನನಗೆ ತುಂಬಾ ಹಿಂಸೆಯಾಗುತ್ತಿದೆ. "

" ಹೇಳಿ ಪೀಟರ್. "

" ಯಾವ ಮಾತೂ – ಯಾವ ಕಾರಣವೂ ನಮ್ಮ ಸ್ನೇಹಕ್ಕೆ ಅಡ್ಡಿಬರುವುದಿಲ್ಲವೆಂದು ನೀನು ಮಾತುಕೊಟ್ಟರೆ ಹೇಳುತ್ತೇನೆ."

" ಈ ಬಗ್ಗೆ ನೀವು ಸಂದೇಹವಿಟ್ಟುಕೊಳ್ಳಲೇ ಬೇಡಿ. "

" ನೀನಾ... "

" ಪೀಟರ್... "

" ನನ್ನ ಬಾಳಿನೊಂದಿಗೆ ನಿನ್ನ ಬಾಳನ್ನು ಕೂಡಿಸುವುದು

ಸಾಧ್ಯವೇ ? ”

ನೀನಾ ಮಂತ್ರಮುಗ್ಧಳಂತೆ ಕುಳಿತುಬಿಟ್ಟಳು. ಪೀಟರ್ ಈ ಪ್ರಶ್ನೆ ಕೇಳಬಹುದೆಂದು ಅವಳು ಕನಸುಮನಸ್ಸಿನಲ್ಲಿಯೂ ಭಾವಿಸಿರಲಿಲ್ಲ. ಏನು ಉತ್ತರ ಹೇಳಬೇಕೆಂಬುದೇ ಅವಳಿಗೆ ತಿಳಿಯಲಿಲ್ಲ. ದೃಷ್ಟಿಶೂನ್ಯ ನೇತ್ರಗಳಿಂದ ನೆಲ ನೋಡುತ್ತ ಕುಳಿತಳು

ಅವಳ ಉತ್ತರವನ್ನೇ ನಿರೀಕ್ಷಿಸುತ್ತ ಪೀಟರ್ ಅವಳನ್ನು ದಿಟ್ಟಿಸಿ ನೋಡುತ್ತ ಕುಳಿತ

ನೀನಾ ಕಣ್ಣುಗಳಲ್ಲಿ ಹನಿಗೂಡಿತ್ತು

“ ನಾನು ಪುನರ್ವಿವಾಹವಾಗುವುದಾದರೆ ನಿಮ್ಮನ್ನಲ್ಲದೆ ಬೇರೆ ಯಾರನ್ನೂ ಮದುವೆಯಾಗುವುದಿಲ್ಲ. ”

“ . . . . . . . ”

“ ಆದರೆ ಪೀಟರ್, ಪುನರ್ವಿವಾಹವಾಗುವ ಯೋಚನೆ ನಾನು ಮಾಡಿಲ್ಲ. ಒಮ್ಮೆ ಪ್ರೊ. ಡ್ರೂ ಈ ವಿಷಯ ಪ್ರಸ್ತಾಪಿಸಿದರು – ಅವರಿಗೂ ಇದೇ ಉತ್ತರವಿತ್ತೆ. ”

“ . . .. . ”

“ ಪೀಟರ್, ನಾನು ನಿಮಗಿಂತ ಎಂಟುಹತ್ತು ವರ್ಷಕ್ಕೆ ದೊಡ್ಡವಳು ಜೀವನವನ್ನು ಆಸೆ, ಆತುರದಿಂದ ನಿರೀಕ್ಷಿಸುತ್ತಿರುವವರು ನೀವು, ಜೀವನದ ಕಹಿ ಸಿಹಿಯೆರಡನ್ನೂ ಉಂಡು ಬೇಸತ್ತಿರುವವಳು ನಾನು. ಜೀವನ ನಿಮಗೀಗ ಆರಂಭವಾಗಿದೆ – ನನಗೆ ಎಂದೋ ಮುಗಿದು ಹೋಗಿದೆ. ಅನೇಕ ಕಾರಣಗಳಿಗಾಗಿ ನಾನು ನಿಮ್ಮನ್ನು ವಿವಾಹವಾಗಲಾರೆ. – ನನ್ನ ನಿರಾಕರಣೆಯಿಂದ ನಿಮ್ಮ ಜೀವನ ಕೆಡುವುದಾದರೆ ನಾನು ಸಮ್ಮತಿಸಲು ಸಿದ್ಧಳಾಗಿದ್ದೇನೆ. ನನ್ನ ಪತಿಯ ನೆನಪು, ಅವರ ಪ್ರೇಮ, ಅವರ ವೀರ ಮರಣ ಎಂದೆಂದಿಗೂ ನನ್ನ ದೃಕ್ಪಟಲದಿಂದ ಮಾಸಲಾರದು. ನಿಮ್ಮ ಕೈಹಿಡಿದು ಈ ಇಬ್ಬಗೆಯ ಬಾಳು ಬಾಳಲೇ ? ಇದರಿಂದ ನಿಮಗೆ ಸುಖ, ಶಾಂತಿ ದೊರೆಯುತ್ತದೆಯೇ ? – ನಿಮ್ಮ ನಿರೀಕ್ಷಣೆಗೂ ಮೀರಿ ನಾನು ನಿಮ್ಮನ್ನು ಪ್ರೀತಿಸುತ್ತೇನೆ ಪೀಟರ್. ಇಂಗ್ಲೆಂಡಿನ ಮಹಾಕವಿಯೊಬ್ಬರು ನನ್ನ ಗೆಳೆಯರಾಗಿದ್ದಾರೆ ಎಂಬ ಭಾವನೆ ನನಗೆ

ಹೆಮ್ಮೆಯನ್ನುಂಟುಮಾಡುತ್ತದೆ ನಿಮ್ಮ ಕಾವ್ಯವನ್ನು ಹಲವುಬಾರಿ ಓದಿ ಆನಂದಪಟ್ಟಿದ್ದೇನೆ – ಇಂಥ ಸುಂದರಗೀತೆಗಳನ್ನು ಬರೆದು ಲೋಕ ಹಿತ, ಲೋಕಶಾಂತಿ, ಲೋಕಾನಂದಕ್ಕಾಗಿ ತಪಿಸುತ್ತಿರುವ ಕವಿ ಚಿರಾಯುವಾಗಿರಲಿ, ನಿತ್ಯ ಸುಖಿಯಾಗಿರಲಿ ಎಂದು ಹೃತ್ಪೂರ್ವಕವಾಗಿ ಭಗವಂತನನ್ನು ಪ್ರಾರ್ಥಿಸಿದ್ದೇನೆ. – ನಿಮಗಾಗಿ ನಾನು ಏನುಬೇಕಾದರೂ ಮಾಡಲು ಸಿದ್ಧಳಾಗಿದ್ದೇನೆ ದಯೆಯಿಟ್ಟು ಮದುವೆ ವಿಷಯ ಮಾತ್ರ ಮರೆತುಬಿಡಿ ”

ಭಗ್ನಮನೋರಥನಾದ ಪೀಟರ್ ತುಟಿಯೆರಡು ಮಾಡದೆ ನೀರವವಾಗಿ ಕುಳಿತುಬಿಟ್ಟ.

ನೀನಾ ಅವನ ಸಮೀಪಕ್ಕೆ ಬಂದು, ಅವನ ಕೈಯನ್ನೆತ್ತಿಕೊಂಡು

“ ದುಃಖವಾಯಿತೆ ಪೀಟರ್ ” ಎಂದು ಕೇಳಿದಳು

“ ದುಃಖವಾಗಿಲ್ಲವೆಂದರೆ ತಪ್ಪಾಗುತ್ತದೆ ನೀನಾ–ನಾನು ಮನಃಪೂರ್ವಕವಾಗಿ ನಿನ್ನನ್ನು ಪ್ರೀತಿಸಿದೆ. ”

“ .... . ... . . . .... . . . ”

“ ನೀನು ಹೇಳುವುದರಲ್ಲಿ ಬಹಳ ಅರ್ಥವಿದೆ ನೀನಾ. ನಿನ್ನ ದಾಂಪತ್ಯ ಜೀವನದ ವಿಷಯ ನನಗೆ ತಿಳಿದಿದ್ದರೆ ಈ ವಿಷಯ ನಾನು ಪ್ರಸ್ತಾಪಿಸುತ್ತಿರಲಿಲ್ಲ ನಿನ್ನ ನಿರಾಕರಣೆಯಿಂದ ನನ್ನ ವಿಶ್ವಾಸ ಹೆಚ್ಚಿತೇ ವಿನಾ ಕಡಿಮೆಯಾಗಲಿಲ್ಲ ನಾವು ಕಾವ್ಯದಲ್ಲಿ ಬಣ್ಣಿಸುವ ಸತಿಯ ಅಮಲ ಪ್ರೇಮದ ಚಿರಂತನ ಜೀವಂತಮೂರ್ತಿಯಾಗಿರುವೆ. ನಿನ್ನ ನಡತೆ ಸ್ತ್ರೀತ್ವಕ್ಕೇ ಶೋಭಾಯಮಾನವಾದುದು ನಿನ್ನ ಹಿರಿಯ ಗುಣಕ್ಕೆ ನಾನು ಭಕ್ತಿಪೂರ್ವಕ ನಮಿಸುತ್ತೇನೆ ಸೋದರಿ ”

ನೀನಾ ತನ್ನ ಸೋದರನನ್ನಪ್ಪಿ ಅವನ ಕಣ್ಣೀರು ತೊಡೆದಳು.

ಅಂದು ನಾರಾಯಣಸ್ವಾಮಿಯನ್ನು ನೋಡುವ ಯೋಚನೆ ಬಿಟ್ಟು ಪೀಟರ್ ಮನೆಗೆ ಹಿಂದಿರುಗಿದ.

ತನ್ನ ಕೋಣೆಗೆ ಹಿಂದಿರುಗಿದ ನೀನಾ ಶಾಲನ್ನು ತೆಗೆದು ಬಿಸುಟು

‘ ನಾನು ಮಾಡಿದ್ದು ಸರಿಯೇ ? ’

ಎಂದು ಚಿಂತಿಸುತ್ತ ಕುಳಿತಳು

# ೨೪

ಪೂರ್ಣ ಗರ್ಭವತಿಯಾಗಿದ್ದ ಪದ್ಮ ಒಬ್ಬಳೇ ತನ್ನ ಮನೆಯಲ್ಲಿರಲು ಸಾಧ್ಯವಿರಲಿಲ್ಲ. ತೌರುಮನೆಯಲ್ಲವಳು ಹೆರಿಗೆ, ಬಾಣಂತನ ಮುಗಿಸಿಕೊಂಡು ಹೋಗಬೇಕೆಂದು ನಿರ್ಧರವಾಯಿತು.

ಮಾಧವರಾಯ ಕಮಲ ಹೋಗಿ ಪದ್ಮನನ್ನು ಕರೆದುಕೊಂಡು ಬಂದರು  ಅಳೀಮಯ್ಯನಿಗೆ ಉಪಚಾರ ಹೇಳಿ ಮಾಧವರಾಯ

" ನಿಮ್ಮ ಬಟ್ಟೆಬರೆಯನ್ನೂ ತಂದುಬಿಡಿ. ಪದ್ಮನ ವೈಕಳೆಯುವ ವರೆಗೂ ನೀವೂ ಇಲ್ಲೇ ಇರಬೇಕು. "

ಮಾವನ ಸಲಹೆಯನ್ನು ಸರ್ವೋತ್ತಮ ಸಂತೋಷದಿಂದ ಒಪ್ಪಿಕೊಂಡ.

ಬಸುರಿ ಹೆಣ್ಣುಮಗಳ ಆದರೋಪಚಾರದ ಬಗ್ಗೆ ಸ್ವಲ್ಪವೂ ನ್ಯೂನಾತಿರೇಕವಾಗದಂತೆ ಕಮಲ ಎಚ್ಚರ ವಹಿಸಿದಳು. ಮೊಮ್ಮಗಳ ಯೋಗಕ್ಷೇಮ ನೋಡಿಕೊಳ್ಳಲಾಗದಂತೆ ತಾವು ಮಲಗಿದುದಕ್ಕೆ ಗೋದಮ್ಮ ವ್ಯಗ್ರರಾದರು.

ಮೊದಲೇ ಚಲುವೆಯಾಗಿದ್ದ ಪದ್ಮ ದಿನಗಳೆದಂತೆ ಮತ್ತಷ್ಟು ಚೆಲುವುಗೊಂಡಳು. ಗೋದಮ್ಮ ದಿನಕ್ಕೆರಡುಬಾರಿಯಾದರೂ ಅವಳಿಗೆ ದೃಷ್ಟಿ ತೆಗೆಯದಿರುತ್ತಿರಲಿಲ್ಲ.

ಒಂದು ದಿನ ಸರ್ವೋತ್ತಮ ಊರಿನಲ್ಲಿರಲಿಲ್ಲ – ಡ್ಯೂಟಿಯ ಮೇಲೆ ಹೋಗಿದ್ದ. ಪದ್ಮ ಒಬ್ಬಳೇ ರೂಮಿನಲ್ಲಿ ಕುಳಿತಿದ್ದಳು.

ಪದ್ಮನನ್ನು ಹುಡುಕಿಕೊಂಡು ಬಂದ ಕಮಲ ಅವಳ ಕಣ್ಣುಗಳಲ್ಲಿ ನೀರು ಮಿಡಿಯುತ್ತಿದ್ದುದನ್ನು ಕಂಡು, ಹತ್ತಿರ ಬಂದು ಕುಳಿತು

" ಏಕೆ ಪದ್ಮ - ಏನಾಯಿತಮ್ಮ " ಎಂದಳು

" ಏನೂ ಇಲ್ಲಕ್ಕ "

" ಏಕೆ ಅಳುತ್ತಿರುವೆ. "

" . . . . . . . . "

" ಹೇಳು ಪದ್ಮ - ಪರವಾಗಿಲ್ಲ. ನಾನು ಹೊರಗಿನವಳೇ ?

" ಅಮ್ಮನ ಜ್ಞಾಪಕ ಬಂತು. "

ಕಮಲನ ಕಣ್ಣುಗಳಿಂದಲೂ ಹನಿಗಳು ತೊಟ್ಟಿಕ್ಕಿದವು.

" ಅಮ್ಮ ಇದ್ದಿದ್ದರೆ. . "

" ಅಮ್ಮ ದೂರದಲ್ಲಿದ್ದುಕೊಂಡೇ ನಮ್ಮೆಲ್ಲರನ್ನೂ ರಕ್ಷಿಸುತ್ತಿದ್ದಾಳೆ ಪದ್ಮ "

" ನೀವೆಲ್ಲರೂ ನನಗೆ ಏತಕ್ಕೂ ಕಡಿಮೆಮಾಡಿಲ್ಲ - ಆದರೂ ಅಮ್ಮನ ನೆನಪು ಬರುತ್ತದೆ. "

" ಅದರಲ್ಲಿ ತಪ್ಪೇನು ಪದ್ದು - ಈ ಸ್ಥಿತಿಯಲ್ಲಿ ಪ್ರತಿಯೊಂದು ಹೆಣ್ಣು ತಾಯಿಯ ಆಶ್ರಯ ಬಯಸುತ್ತದೆ. "

" ಅಕ್ಕ - ನನಗೇಕೋ ಭಯವಾಗುತ್ತದೆ. "

" ಭಯವೇಕೆ ? ಹಲ್ಲುಸಿಂದ ತೊಟ್ಟು ಕಳಚಿದಂತೆ ಸುಖವಾಗಿ ಪ್ರಸವವಾಗುತ್ತದೆ ನಿನ್ನ ಪುತ್ರರತ್ನವನ್ನು ನೋಡಿದಾಗ ಇಷ್ಟು ನೋವು ತಿಂದುದು ಸಾರ್ಥಕವಾಯಿತೆನಿಸುತ್ತದೆ "

" ನೀನು ನನ್ನ ಜತೆಯಲ್ಲಿಯೇ ಇರುವೆಯಲ್ಲವೇ ? "

" ನಿನ್ನ ಬಳಿ ಬಿಟ್ಟು ಕದಲುವುದಿಲ್ಲ. "

" ನಾನು ಕಾಲೇಜಿನಲ್ಲಿದ್ದಾಗಲೂ ನೀನೇ ತಾಯಿಯಂತೆ ನೋಡಿಕೊಂಡೆ-ಈಗಲೂ ನೀನೇ ತಾಯಿಯಂತೆ ನೋಡಿಕೊಳ್ಳಬೇಕು"

" ಹೀಗೆ ನೀನು ಮಾತನಾಡಿದರೆ ನನ್ನ ಎದೆ ಬಿರಿದು ಹೋಗುತ್ತದೆ. "

ಎಂದು ವಿಷಯಾಂತರ ಮಾಡಲು

" ಅಣ್ಣಯ್ಯನ ಕಾಗದ ಬಂತು - ಅವನೂ ಅವನ ಪ್ರೊಫೆಸರೂ ಮಾರ್ಚಿ ತಿಂಗಳಲ್ಲಿ ಇಲ್ಲಿಗೆ ಬರುವರಂತೆ ! "

" ಆ ವೇಳೆಗೆ ನಾನೂ ಹಾಸಿಗೆ ಬಿಟ್ಟು ಎದ್ದಿರುವೆನಲ್ಲವೆ ? "

" ಅದರಲ್ಲಿ ಅನುಮಾನವೇ ಇಲ್ಲ. ಇನ್ನೊಂದು ವಿಷಯ ಕೇಳಿದೆಯೋ – ಅಣ್ಣಯ್ಯನ ಎರಡನೆಯ ಕಾದಂಬರಿ ' ದೇವಪುತ್ರ ' ಕ್ರಿಸ್‌ಮಸ್ ಹಬ್ಬದ ಕಾಲದಲ್ಲಿ ಪ್ರಕಟವಾಗುವುದಂತೆ ! "

" ಅಣ್ಣಯ್ಯ ಇಷ್ಟು ಕೀರ್ತಿಶಾಲಿಯಾಗುತ್ತಾನೆಂದು ನಾವು ಯಾರೂ ಭಾವಿಸಿರಲಿಲ್ಲ – ಅಲ್ಲವೇ ? "

" ನಮ್ಮಲ್ಲಿ ಒಬ್ಬರು ಮಾತ್ರ ಅವನ ಯೋಗ್ಯತೆಯಲ್ಲಿ ದೃಢ ನಂಬಿಕೆ ತಳೆದಿದ್ದರು "

" ಯಾರದು ? "

" ಗೋದಜ್ಜಿ "

" ಅಕ್ಕ – ಗೋದಜ್ಜಿಯೇ ನನ್ನ ಹೆರಿಗೆ, ಬಾಣಂತನ ಮಾಡುತ್ತಾಳಂತೆ ! "

" ಹೂ – ಹೆದರಿಕೆಯಾಗುತ್ತದೆಯೇ ? "

" ಕತ್ತಲೆಮನೆ ಬಾಣಂತನ ನಾನು ಮಾಡಿಸಿಕೊಳ್ಳಲಾರೆನಮ್ಮ ಅವರು ಕುಡಿಸುವ ನಾರುಬೇರಿನ ಕಷಾಯ ಹೇಗಕ್ಕಾ ಕುಡಿಯುವುದು."

" ಹಳೆಯಕಾಲದ ಬಾಣಂತನ ಸ್ವಲ್ಪ ರಣಬಾಣಂತನವೇ ಸರಿ – ಆದರೆ ಅದರ ಸಮಾನವಿಲ್ಲ ಪದ್ದು – ಮೈ ಕಲ್ಲಿನಂತೆ ಗಟ್ಟಿಯಾಗುತ್ತದೆ. "

" ಕತ್ತಲೆಮನೆ ವಾಸ ತಪ್ಪಿಸಕ್ಕ – ಹೆರಿಗೆಯಾದ ಮೇಲೆ ಬೇಕಾದರೆ ಕಷಾಯ ಕುಡಿಯುತ್ತೇನೆ. "

" ಈ ವಿಷಯ ನನಗೆ ಬಿಟ್ಟು ನೀನು ನಿಶ್ಚಿಂತಳಾಗಿರು. ಉಪಾಯವಾಗಿ ಅಜ್ಜಿಯನ್ನು ಒಪ್ಪಿಸುತ್ತೇನೆ. " ಎಂದಳು.

ಅಜ್ಜಿಯನ್ನು ಒಪ್ಪಿಸುವುದಕ್ಕೆ ಕಮಲ ಕಷ್ಟಪಡಬೇಕಾಗಿರಲಿಲ್ಲ.

ತುಂಬಿದ ಬಸುರಿ ಪದ್ಮನ ಪರೀಕ್ಷೆ ನಡೆಸಿದ ಲೇಡಿ ಡಾಕ್ಟರು

" ಈ ಕೇಸ್ ಸ್ವಲ್ಪ ಕ್ಲಿಷ್ಟವಾಗಿದೆ. ಮನೆಯಲ್ಲಿ ಹೆರಿಗೆ ಮಾಡಿಸುವುದು ಅಪಾಯಕರ. ಆಸ್ಪತ್ರೆಗೆ ಕಳಿಸಿಕೊಡಿ " ಎಂದರು.

ಪದ್ಮನಿಗೆ ನೋವು ಬಂದು ಬಂದು ನಿಲ್ಲುತ್ತಿದ್ದುದು ಎಲ್ಲರಿಗೂ

ಆತಂಕವನ್ನುಂಟುಮಾಡಿತ್ತು

ಗೋದಮ್ಮನವರಿಗೆ ಸ್ವಲ್ಪವೂ ಬಿಡುವಿಲ್ಲದಂತಾಯಿತು ಅವರ ಪೂಜೆ, ಪುರಸ್ಕಾರ, ವ್ರತಗಳು ಇಮ್ಮಡಿಸಿದವು 'ಸದ್ಯ ಪದ್ಮ ಪ್ರೈ ಕಳೆದು ಮನೆಗೆ ಬಂದರೆ ಸಾಕು' ಎಂಬ ಚಿಂತೆಯೊಂದೇ ಅವರನ್ನು ಕಬಳಿಸಿತು.

ಒಂದು ಶುಕ್ರವಾರ ಗೋದಮ್ಮನವರು ಪದ್ಮನ ಕೈಯಲ್ಲಿ ಹೂವೀಳ್ಯವಮಾಡಿಸಿ ಎಂಭತ್ತು ಜನ ಮುತ್ತೈದೆಯರಿಗೆ ಬಾಗಿನ, ಉಡುಗೆರೆ ಕೊಡಿಸಿದರು ಶನಿವಾರವೇ ನೋವು ಮರುಕಳಿಸಲು ಪದ್ಮ ಆಸ್ಪತ್ರೆ ಸೇರಬೇಕಾಯಿತು

ಪದ್ಮನ ಜತೆಯಲ್ಲಿ ಸಾವಿತ್ರಮ್ಮ ಆಸ್ಪತ್ರೆಯಲ್ಲಿ ನಿಂತಳು ಗೋದಮ್ಮನವರು ಮನೆಬಿಟ್ಟು ಕದಲುವಂತಿರಲಿಲ್ಲ. ಆಸ್ಪತ್ರೆ ಡ್ಯೂಟಿಯನ್ನು ಕಮಲಾ, ಮಾಧವರಾಯ ಹಂಚಿಕೊಳ್ಳಬೇಕಾಯಿತು.

ಸರ್ವೋತ್ತಮ ಬಹು ಪ್ರಯಾಸದಿಂದ ರಜಾ ದೊರಕಿಸಿಕೊಂಡ

ನೋವಿನ ಬಾಧೆಯಲ್ಲಿ ಪದ್ಮ ಹಣ್ಣಾದಳು. ಕಮಲ ಹತ್ತಿರಲೇ ಕುಳಿತುಕೊಂಡು ಅವಳಿಗೆ ಧೈರ್ಯಕೊಡುತ್ತಿದ್ದಳು ಅವಳ ಬಾಧೆ ಕಂಡು ಒಮ್ಮೊಮ್ಮೆ ಕಮಲನೂ ಅಧೀರಳಾಗುತ್ತಿದ್ದಳು ಕಣ್ಣು ತುಂಬಿ ಹೊರಗೆ ಧುಮುಕುತ್ತಿದ್ದ ಕರುಣಾಜಲವನ್ನೇ ತಾಯಿಯ ಪಾದಪದ್ಮಗಳಿಗೆ ಅಭಿಷೇಕಮಾಡುತ್ತಾ

'ಅಮ್ಮಾ - ಪದ್ಮನನ್ನು ಉಳಿಸು.'

ಎಂದು ದೀನಳಾಗಿ ಪ್ರಾರ್ಥಿಸುತ್ತಿದ್ದಳು

ಎರಡು ದಿವಸ ಸತತವಾಗಿ ಪದ್ಮ ನೋವು ಅನುಭವಿಸಬೇಕಾಯಿತು.

ಗೋದಮ್ಮನವರಿಗೆ ಜೀವ ತಡೆಯಲಿಲ್ಲ ಒಂದು ದಿನ ಮಾಧವರಾಯನನ್ನು ಬಲವಂತಮಾಡಿ, ಗಾಡಿಮಾಡಿಕೊಂಡು ಆಸ್ಪತ್ರೆಗೆ ಬಂದು ಪದ್ಮನನ್ನು ಕಂಡರು. ಅಜ್ಜಿ ಹೇಳಿದ ಧೈರ್ಯದ ಮಾತುಗಳಿಂದ ಪದ್ಮಳಿಗೆ ಪುನರ್ಜನ್ಮ ಬಂದಂತಾಯಿತು.

ಮಂಗಳವಾರ ರಾತ್ರಿ ಸುಮಾರು ಹನ್ನೊಂದು ಗಂಟೆಯ ವೇಳೆಗೆ

ಪದ್ಮ ಹೆಣ್ಣುಮಗುವನ್ನು ಪ್ರಸವಿಸಿದಳು ಸರ್ವೋತ್ತಮ ಕೂಡಲೆ ಮನೆಗೆ ಬಂದು ಅಜ್ಜಿಗೆ, ಮಾವನಿಗೆ ಸುದ್ದಿ ಮುಟ್ಟಿಸಿದ.

" ಹೆಣ್ಣೋ ಗಂಡೋ ಪದ್ಮ ದೊಡ್ಡಜೀವ ಉಳಿಯಿತಲ್ಲಾ - ಅಷ್ಟೇಸಾಕು - ಭಗವಂತ ದೊಡ್ಡವನು "

ಎಂದು ಗೋದಮ್ಮನವರು ಸಮಾಧಾನಪಟ್ಟುಕೊಂಡರು.

ಪದ್ಮ ಮೂರುವಾರ ಆಸ್ಪತ್ರೆ ಬಿಡಲಾಗಲಿಲ್ಲ. ವಿಶೇಷ ರಕ್ತ ಸ್ರಾವವಾಗಿ ಅವಳು ತುಂಬ ದುರ್ಬಲಳಾಗಿದ್ದಳು. ಸಣ್ಣಜ್ವರ ಬೇರೆ ಕಾಣಿಸಿಕೊಂಡಿತ್ತು. ಡಾ. ಶಂಕರಾಂಬಾಳ್ ಅವರ ದಕ್ಷತೆಯಿಂದ ಪದ್ಮ ಕ್ರಮಕ್ರಮೇಣ ಆರೋಗ್ಯದ ಹಾದಿ ಹಿಡಿದಳು.

ಪದ್ಮ, ಪದ್ಮನ ಮಗು ಮನೆಗೆ ಬರುವ ದಿನವಂತೂ ಎಲ್ಲರಿಗೂ ಸಂಭ್ರಮ

ಮಗುವನ್ನು ಕಮಲ ಎತ್ತಿಕೊಂಡಳು. ಪದ್ಮನಿಗೆ ಸಾವಿತ್ರಮ್ಮ ನೆರವಾದರು. ಮನೆಯ ಹೆಬ್ಬಾಗಿಲಿನಲ್ಲಿಯೇ ಶ್ರೀದೇವಿ ಬಾಣಂತಿ ಮಗುವಿಗೆ ಆರತಿ ಬೆಳಗಿದಳು

ಕಮಲ ಮಗುವನ್ನು ತಂದು ಅಜ್ಜಿಗೆ ತೋರಿಸಿ

" ನಿನ್ನ ಮೊಮ್ಮಗಳು ಹೇಗಿದ್ದಾಳೆ ಅಜ್ಜೀ " ಎಂದಳು.

" ನನ್ನ ಮೊಮ್ಮಗಳು ತುಂಬ ಪುಣ್ಯವಂತೆ ಕಣೇ ಕಮಲಾ, ತಾಯಿಯನ್ನು ಬದುಕಿಸಿಕೊಂಡಳು. "

ಎಂದು ಮಗುವನ್ನು ತಮ್ಮ ತೊಡೆಯಮೇಲೆ ಮಲಗಿಸಿಕೊಂಡು ಶಿಶುಭಾಷೆಯಲ್ಲಿ ಅದನ್ನು ಮಾತನಾಡಿಸಿ

" ರುಕ್ಕು ಮುಖ ತಂದಿಟ್ಟಹಾಗಿದೆಯಲ್ಲವೇ ಕಮಲಾ " ಎಂದರು.

" ಹೌದಜ್ಜೀ - ನನಗೂ ಹಾಗೇ ಅನಿಸಿತು. "

" ರುಕ್ಕೂ ಹೇಗೆ ನಿಮ್ಮನ್ನು ರಕ್ಷಿಸುತ್ತಿದ್ದಾಳೆ ನೋಡಿದೆಯಾ ?"

" ಮಗೂಗೆ ಏನು ಹೆಸರಿಡುತ್ತೀ ಅಜ್ಜೀ ?"

" ಸಾಯೋ ಮುದುಕಿ ನನ್ನ ಮಾತು ಕಟ್ಟಿಕೊಂಡೇನು ? ಅಪ್ಪ ಅಮ್ಮ ಯಾವ ಯಾವ ಅಚ್ಚರಿ ಹೆಸರುಗಳನ್ನು ಯೋಚಿಸಿದ್ದಾರೋ

ಕೇಳಿನೋಡು. ”

“ ಈ ಕಂದನಿಗೆ ನೀನೇ ಹೆಸರಿಡಬೇಕು ಅಜ್ಜೀ – ಮುಂದೆ ಆಗುವ ಮಕ್ಕಳಿಗೆ ಪದ್ಮ ಅಚ್ಚರಿ ಹೆಸರುಗಳನ್ನಿಟ್ಟುಕೊಳ್ಳಲಿ. ”

“ ನಮ್ಮ ಮನೆ ಭಾಗ್ಯದೇವತೆಯ ಹೆಸರಿಗಿಂತ ಇನ್ನು ಹೆಸರೇ ಕಮಲಾ ?— ನನ್ನ ರುಕ್ಕೂ ಯೋಗ್ಯತೆ ಈ ಮಗುವಿನಲ್ಲಿ ಪೂರ್ಣವಾಗಿ ಬೆಳಗಲಿ. ”

ಕಮಲಾ ಅಭಿಮಾನಪೂರ್ವಕವಾಗಿ ಮಗುವಿನ ಗಲ್ಲ ಹಿಡಿದು “ ರುಕ್ಕೂ – ರುಕ್ಕೂ – ರುಕ್ಮಿಣಿ ” ಎಂದಳು.

ಪದ್ಮನ ಮಗುವಿಗೆ ‘ **ರುಕ್ಮಿಣಿ** ’ ಎನ್ನುವ ಹೆಸರೇ ಸ್ಥಿರವಾಯಿತು.

## ೩೦

ಕ್ರಿಸ್‌ಮಸ್ ಹಬ್ಬ ಆರಂಭವಾಗುವ ಮುನ್ನವೇ ನಾರಾಯಣ ಸ್ವಾಮಿಯ 'ದೇವಪುತ್ರ' ಕಾದಂಬರಿ ಪೀಟರಿನ 'ಯೂನಿವರ್ಸ್ – ಪ್ಸ್ಯ ಹೋಂ' ಕಾವ್ಯ ಪ್ರಕಟವಾದವು ಸಂತೋಷದಿಂದ ತುಂಬಿರಬೇಕಾಗಿದ್ದ ಪೀಟರನ ಮನಸ್ಸು ವ್ಯಥಿತವಾಗಿತ್ತು ಯಾವುದೋ ಶಂಕೆ ಅವನನ್ನು ಒಂದೇಸಮನಾಗಿ ಕಾಡುತ್ತಿತ್ತು. ಗೆಳೆಯನ ದುಮ್ಮಾನ ಕಂಡು ಸಂತಾಪಗೊಂಡ ನಾರಾಯಣಸ್ವಾಮಿ

"ನಿನಗೇನಾಗಿದೆ ಪೀಟರ್" ಎಂದು ಕೇಳಿದ

ನಾರಾಯಣಸ್ವಾಮಿಯ ಪ್ರಶ್ನೆಗೆ ಉತ್ತರವೀಯದೆ ಪೀಟರ್

"ನೀನೂ ಪ್ರೊಫೆಸರ್ ಯಾವಾಗ ಪ್ರಯಾಣಮಾಡುವಿರಿ" ಎಂದ.

"ಫೆಬ್ರವರಿ ಕೊನೆಗೆ ಅಥವಾ ಮಾರ್ಚಿ ಮೊದಲನೆಯ ವಾರದಲ್ಲಿ ನಾವು ಹೊರಟುಹೋಗುತ್ತೇವೆಂದು ಚಿಂತೆಯಾಗಿದೆಯೇ ?"

"ಹೂ - ಅದೂ ಒಂದು ಕಾರಣ."

"ಜತೆಯಲ್ಲಿ ನೀನೂ ಬಂದುಬಿಡು ಪೀಟರ್. ಹಣದ ವ್ಯವಸ್ಥೆ ಹೇಗೋ ಮಾಡಿಕೊಂಡರಾಗುತ್ತದೆ."

"ಲಂಡನ್ ಬಿಟ್ಟು ಭಾರತಕ್ಕೆ ಬಂದರೆ ನನ್ನ ದುಃಖ ಪರಿಹಾರವಾಗುವುದೇ ?"

"ನಿನ್ನ ದುಃಖವೇನೆಂಬುದನ್ನೇ ತಿಳಿಯದೆ ನಾನೇನು ಹೇಳಲಿ."

"ಈ ವೇಳೆಗೇ ನಾನು ನಿನಗೆ ತಿಳಿಸಬೇಕಾಗಿತ್ತು. ತಿಳಿಸಲಿಲ್ಲ – ಕ್ಷಮಿಸು."

" ತಿಳಿಸದಿರುವುದಕ್ಕೆ ಪ್ರಬಲ ಕಾರಣಗಳಿರಬೇಕು. "

" ಇಲ್ಲ ಮನಸ್ಸಿನ ದೌರ್ಬಲ್ಯವೇ ಕಾರಣ. "

" ' ಯೂನಿವರ್ಸ್ – ಮೈ ಹೋಂ ' ಕಾವ್ಯದಿಂದ ನೀನು ನೂತನ ಜಗತ್ತನ್ನೇ ನಿರ್ಮಾಣ ಮಾಡಿದ್ದೀ. ಇದಕ್ಕೂ ಶ್ರೇಷ್ಠವಾದ ಕೃತಿಗಳನ್ನು ಓದುಗರು ಸಹಜವಾಗಿ ನಿನ್ನಿಂದ ನಿರೀಕ್ಷಿಸುತ್ತಾರೆ – ಅಪೇಕ್ಷಿಸುತ್ತಾರೆ. "

" ಹೌದು–ನಾನು ನಿರ್ವಿಣ್ಣನಾಗಬಾರದು. ಕವಿಯೂ ಮಾನವ ನಲ್ಲವೇ ಸ್ವಾಮಿ. ಅವನಿಗೂ ಸಹಜ ಸಂವೇದನೆಗಳಿಲ್ಲವೇ ? ಅವನ ಮನಸ್ಸೂ ಪ್ರೇಮ, ಶಾಂತಿ, ತೃಪ್ತಿಗಳನ್ನು ಬಯಸುವುದಿಲ್ಲವೇ ? "

" ಇಲ್ಲವೆಂದವರು ಯಾರು ? "

" ನೀನಾಗೆ ನಾನು ಪ್ರಪೋಸ್(Propose) ಮಾಡಿದೆ ಸ್ವಾಮಿ."

" ಅವಳೇನಂದಳು ? "

" ನನ್ನನ್ನು ನಿರಾಕರಿಸಿದಳು "

" ನಿರಾಕರಿಸಿದಳು ! ! "

" ಹೌದು ಅವಳು ಹೇಳಿದ ಕಾರಣವೂ ಸಮಂಜಸವಾಗಿದೆ. "

ಎಂದು ನೀನಾಗೂ ತನಗೂ ನಡೆದ ಸಂಭಾಷಣೆಯನ್ನು ವಿವರ ವಾಗಿ ವರದಿಮಾಡಿದ.

ನಾರಾಯಣಸ್ವಾಮಿ ತಲೆಯಮೇಲೆ ಕೈಹೊತ್ತು ಕುಳಿತು

" ನೀನಾ ಜತೆ ನಾನೂ ಮಾತನಾಡಲೇ ? "

" ಅದರಿಂದ ಏನು ಪ್ರಯೋಜನ ? "

" ಅವಳು ಮನಸ್ಸು ಬದಲಾಯಿಸಬಹುದು. "

" ಆ ಮಾತು ಅವಳೇ ಹೇಳಿದ್ದಾಳೆ. ಮದುವೆಯಾಗಲೇ ಬೇಕೆಂದು ನಾನು ಹಟ ಹಿಡಿದರೆ ಆಗುವುದಾಗಿ ಹೇಳಿದ್ದಾಳೆ. "

" ನಿಮ್ಮ ಸ್ನೇಹ, ಪ್ರೇಮಕ್ಕೆ ನೀನಾ ಹೆಚ್ಚಿನ ಸ್ಥಾನಮಾನ ಕೊಟ್ಟಂತಾಯಿತು. "

" ನಿಜ – ನಿಜ ಸ್ವಾಮಿ – ಆದರೆ.... ? ! "

" ಕಾವ್ಯಕಲ್ಪವೃಕ್ಷಕ್ಕೂ ಬೇಸಾಯ ಬೇಕಲ್ಲವೇ ಪೀಟರ್ ? "

“ಬೇಕು.”

“ನಿನ್ನ ಕಾವ್ಯ ಏನನ್ನು ಬಯಸುತ್ತದೆ ಬಲ್ಲೆಯಾ ?”

“ಏನನ್ನು ?”

“ನಿನ್ನ ಬಲಿದಾನವನ್ನು.”

“.........   . .       .”

“ಕಾವ್ಯಶ್ರೀಯ ಉತ್ಕರ್ಷಕ್ಕಾಗಿ ನೀನು ಸೀನಾಳನ್ನು ಮರೆಯಬೇಕು.”

“ಅವಳಲ್ಲದೆ ಬೇರೆ ಯಾರೂ ನನ್ನ ಜೀವನ ತುಂಬಲಾರರು, ಸ್ವಾಮಿ ”

“ನಿರ್ವ್ಯಾಜ ಅಂತಃಕರಣದಿಂದ ಅವಳು ನಿನ್ನನ್ನು ದೂರ ಮಾಡಿಲ್ಲ. ವಿಶ್ವದ ಹಿತಬಯಸುವ ಕವಿ ಇತರರಿಗಾಗಿ ಸ್ವಸುಖವನ್ನು ಮರೆಯಬೇಕಾಗುತ್ತದೆ ಈ ವಿಷಯ ಪ್ರೊಫೆಸರಿಗೆ ಹೇಳಿರುವೆಯಾ ?”

“ನಾನು ಹೇಳಿಲ್ಲ. ಅವರು ಊಹಿಸಿರಬಹುದು ”

“ನಾನು ಹೇಳಿದ ಮಾತನ್ನೇ ಅವರೂ ಹೇಳುತ್ತಾರೆ.”

“ಅದರಲ್ಲಿ ಸಂದೇಹವೇ ಇಲ್ಲ.”

ಪೀಟರನ್ನು ಹೇಗೆ ಸಮಾಧಾನಪಡಿಸುವುದೆಂಬುದೇ ಸ್ವಾಮಿಗೆ ದೊಡ್ಡ ಸಮಸ್ಯೆಯಾಯಿತು. ಸೀನಾ ಹತ್ತಿರ ವಿಷಯ ಪ್ರಸ್ತಾಪಿಸಿ ಪ್ರಯೋಜನವಿಲ್ಲ ನಾರಾಯಣಸ್ವಾಮಿ ಈ ವಿಷಯ ಕುರಿತು ದೀರ್ಘವಾಗಿ ಆಲೋಚಿಸಿ ಒಂದು ದಿನ

“ಪೀಟರ್ ಇನ್ನುಮೇಲೆ ನೀನು ಗಣಿ ಕೆಲಸಕ್ಕೆ ಹೋಗುವೆಯಾ ?” ಎಂದು ಕೇಳಿದ

“ಏಕೆ ?”

“ಕಾವ್ಯಸೃಷ್ಟಿಗೇ ನೀನು ಎಲ್ಲಾ ಕಾಲವನ್ನೂ ಮೀಸಲು ಮಾಡುವುದು ಒಳ್ಳೆಯದಲ್ಲವೇ ?”

“ಪ್ರೊಫೆಸರೂ ಇದೇ ಸಲಹೆಯಿತ್ತಿದ್ದಾರೆ.”

“ನನಗೆ ಇನ್ನೂ ಒಂದು ಯೋಚನೆ ಹೊಳೆದಿದೆ”

“ಏನದು ?”

" ಡಾ ಚಂದ್ರಶೇಖರ್, ಫ್ಲೋರಾ ಅವರಿಗೆ ಜನಸಹಾಯ ಬೇಕು. ಅವರ ಸೊಸೈಟಿ ದಿನದಿನಕ್ಕೆ ಬೆಳೆಯುತ್ತಿದೆ. ಸೊಸೈಟಿಗೆ ದುಡಿದೂ ದುಡಿದೂ ಈ ದಂಪತಿಗಳು ಹಣ್ಣಾಗಿದ್ದಾರೆ. ನೀನಾ ಅವರ ಜತೆ ಸೇರುವ ಸಂಭವವಿದೆ ನೀನೂ ಸೊಸೈಟಿಗೆ ನೆರವಾದರೆ ಚೆನ್ನಾಗುತ್ತದೆಂದು ಯೋಚಿಸಿದೆ "

" ನಾನು ಶುದ್ಧ ಸೋಮಾರಿ. "

" ಚಿಂತೆಯಿಲ್ಲ ನಿನ್ನ ಕೈಯಲ್ಲಿ ಕೆಲಸ ತೆಗೆಯುವುದನ್ನು ಫ್ಲೋರಾಗೆ ಹೇಳಿಕೊಡಬೇಕಾಗಿಲ್ಲ "

" ಈ ಸಲಹೆ ಡಾಕ್ಟರಿಂದ ಬಂದಿತೇ ? "

" ಇಲ್ಲ. ನಾನೇ ಯೋಚಿಸಿದೆ. "

" ನನಗೆ ಸ್ವಲ್ಪ ಕಾಲಾವಧಿ ಕೊಡು- ನಾನೂ ಯೋಚಿಸಿ ತಿಳಿಸುತ್ತೇನೆ. "

" ನಾನೂ ಪ್ರೊಫೆಸರೂ ಭಾರತಕ್ಕೆ ಹೊರಡುವುದಕ್ಕೆ ಮುಂಚೆ ಈ ವಿಷಯ ಇತ್ಯರ್ಥವಾಗಬೇಕು "

" ಆಗಲಿ "

ಎಂದು ಪೀಟರ್ ಒಪ್ಪಿಕೊಂಡ.

ಪೀಟರಿಂದ ನಿರ್ದಿಷ್ಟವಾದ ಒಪ್ಪಿಗೆ ದೊರೆಯದಿದ್ದರೂ, ಅವನು ತನ್ನ ಸಲಹೆಯನ್ನಂಗೀಕರಿಸುವುದರ ಬಗ್ಗೆ ನಾರಾಯಣಸ್ವಾಮಿ ಅನುಮಾನಪಡಲಿಲ್ಲ.

ಪ್ರೊಫೆಸರು ಮತ್ತು ನಾರಾಯಣಸ್ವಾಮಿ ಪ್ರಯಾಣಮಾಡುವ ದಿನಗಳು ಸಮೀಪಿಸಿದವು. ಗೆಳೆಯರು ಪ್ರತಿನಿತ್ಯ ಮ್ಯಾಕೆ ಟೀಷಾಪಿನಲ್ಲೋ, ಡಾ. ಚಂದ್ರಶೇಖರ್ ಮನೆಯಲ್ಲಿಯೋ ಸೇರುತ್ತಿದ್ದರು.

ಒಂದು ದಿನ ಫ್ಲೋರಾ ಅನುಮಾನಿಸುತ್ತಲೇ

" ನಿಮ್ಮ ಪತ್ನಿಯವರು ನಮ್ಮೆಲ್ಲರನ್ನೂ ಮರೆತಂತಿದೆ ಮಿ. ಸ್ವಾಮಿ " ಎಂದಳು.

" ಹಾಗೇನಿಲ್ಲ. ಅವಳಿಗೂ ಪುರುಸತ್ತಿಲ್ಲವಾಗಿದೆ. "

" ಅವರ ತಾಯಿಗೆ ಹೇಗಿದೆ ? "

"ಸ್ವಲ್ಪ ವಾಸಿಯುಂತೆ!"

"ಈಗ ನೀವು ಭಾರತಕ್ಕೆ ಹೋದರೆ ಮರಳಿ ಬರುವುದು ಯಾವಾಗ."

"ನಮ್ಮ ಕೆಲಸ ಆರು ತಿಂಗಳಲ್ಲಿ ಮುಗಿಯಬಹುದು. ತರುವಾಯ ನಾನು ಹಿಂದಿರುಗುವ ವಿಷಯ ಯೋಚಿಸಬೇಕು"

"ನೀವು ಬರುವುದಿಲ್ಲವೇ?"

"ಇಲ್ಲಿ ಕೆಲಸವಿದ್ದರೆ ಬರುತ್ತೇನೆ. ಫೈನಲ್ ರಿಪೋರ್ಟ್ ಸಿದ್ಧಗೊಳಿಸುವಾಗ ನನ್ನ ಅಗತ್ಯಬಿದ್ದರೆ ಬರಬೇಕಾಗುತ್ತದೆ."

"ಒಮ್ಮೆ ನೀವೂ ಮಿಸಸ್ ಸ್ವಾಮಿ ಬಂದು ಹೋಗಿ"

"ಆಗಲಿ. ಫ್ಲೋ, ಪೀಟರ್ ನಿಮ್ಮ ಸೊಸೈಟಿ ಸೇರಲಿಚ್ಛಿಸುತ್ತಾನೆ. 'ನಾನು ಸೋಮಾರಿ – ನನ್ನಿಂದ ಫ್ಲೋಗೆ ಯಾವ ಪ್ರಯೋಜನವೂ ಇಲ್ಲ' ಎಂದವನ ಅಭಿಪ್ರಾಯ"

"ನೀನಾ ಪೀಟರ್ ಇಬ್ಬರೂ ನಮ್ಮ ಜತೆಗೆ ಬಂದರೆ ನಮ್ಮ ಕೆಲಸ ವಾಯುವೇಗದಲ್ಲಿ ಮುಂದುವರಿಯುತ್ತದೆ ಸೋಮಾರಿ ಪೀಟರ್ 'ಯೂನಿವರ್ಸ್-ನ್ಸ್ ಹೋಪ್' ಬರೆಯಲು ಸಾಧ್ಯವಾದರೆ ಜಾಗೃತ ಪೀಟರ್ ಏನು ಬರೆಯಬಹುದು"

"ನನ್ನ ಗೆಳೆಯ ಗೆಳತಿಯರು ಒಟ್ಟಾಗಿದ್ದು, ಒಂದೇ ಧ್ಯೇಯಕ್ಕಾಗಿ ದುಡಿಯುವುದನ್ನು ಕಂಡರೆ ನನಗೆ ಪರಮಸಂತೋಷವಾಗುತ್ತದೆ."

"ನಮ್ಮೆಲ್ಲರನ್ನು ಒಟ್ಟುಗೂಡಿಸಿದವರೇ ನೀವು – ಮಿ. ಸ್ವಾಮಿ."

"ನಾನಲ್ಲ ಫ್ಲೋ...ನಾನು ಬಹಳ ಸಣ್ಣ ವ್ಯಕ್ತಿ – ಈ ಕೀರ್ತಿ ಸಲ್ಲಬೇಕಾದುದು ನನ್ನ ಪುಣ್ಯದೇವತೆಯಾದ ನನ್ನ ತಾಯಿಯದು. ನನ್ನ ಪ್ರತಿಯೊಂದು ಚಿಂತನೆ, ವಿವೇಚನೆ, ಕೆಲಸಕಾರ್ಯದ ಹಿಂದೆ ನಿಂತು ನನ್ನ ಕೈಹಿಡಿದು ನಡೆಸುತ್ತಿರುವವಳೇ ಆ ಮಹಾಶಕ್ತಿ – ಅವಳ ಕೈಗೊಂಬೆ ನಾನು."

ಎಂದು ಉದ್ವೇಗಪೂರಿತನಾಗಿ ನುಡಿದ

ಫೆಬ್ರವರಿ ತಿಂಗಳು ಕೊನೆಯವಾರದಲ್ಲಿ ಭಾರತಪ್ರವಾಸ ಕೈಗೊಂಡ ಪ್ರೊ. ಡ್ರೊ, ನಾರಾಯಣಸ್ವಾಮಿಯವರಿಗೆ ಗೆಳೆಯರೆಲ್ಲಾ ಶುಭಾಶಯ ಬಯಸಿ, ಸುಖ ಪ್ರಯಾಣ ಕೋರಿದರು.

ಸಾಂಸ್ಕೃತಿಕ ರಾಯಭಾರಿಗಳನ್ನು ಹೊತ್ತ ಹಡಗು ಗಂಭೀರವಾಗಿ ಭಾರತದತ್ತ ಸಾಗಿತು

## ೩೧

" ನಿನ್ನ ಅಣ್ಣ ಬರುತ್ತಾನಂತೆ ಪದ್ಮೂ "

ಎಂದು ಕೇಬಲ್‌ಗ್ರ್ಯಾಮ್ (Cablegram) ಒಡೆದು ನೋಡಿದ ಕಮಲ ಹೇಳಲು ಪದ್ಮ ಕುತೂಹಲದಿಂದ

" ಎಂದು ? " ಎಂದಳು.

" ಮುಂದಿನ ವಾರ ಮುಂಬಯಿಯಲ್ಲಿ ಇಳಿಯುತ್ತಾನಂತೆ. "

" ನಾವೆಲ್ಲಾ ಅಲ್ಲಿಗೆ ಹೋಗಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು. "

" ಈಗ ಹೇಗೆ ಸಾಧ್ಯ ? "

" ಮುಂಬಯಿಯಲ್ಲೇ ಇದ್ದು ಅಣ್ಣನಿಗೆ ಸ್ವಾಗತ ಬಯಸಲು ಅವರಿಗೆ ಹೇಳುತ್ತೇನಕ್ಕ. "

" ಹಾಗೆ ಮಾಡು. "

" ಅಕ್ಕ, ನೀನೊಬ್ಬಳಾದರೂ ಏಕೆ ಮುಂಬಯಿಗೆ ಹೋಗಿ ಅಣ್ಣನನ್ನು ಇಲ್ಲಿಗೆ ಕರೆದುಕೊಂಡು ಬರಬಾರದು. "

" ಒಬ್ಬಳೇ ಹೇಗೆ ಹೋಗಲಿ. "

" ಅವರು ಕರೆದುಕೊಂಡು ಹೋಗುತ್ತಾರೆ. "

" ನಾಣಿ ಜತೆಯಲ್ಲಿ ಅವನ ಪ್ರೊಫೆಸರೂ ಬರುತ್ತಾರಂತೆ. ಅವರ ಕೆಲಸ ಕಾರ್ಯಗಳು ಹೇಗಿವೆಯೋ ? ನಾನು ಮುಂಬಯಿಗೆ ಹೋದರೆ ಅವನಿಗೆ ತೊಂದರೆಯಾಗಬಹುದು. "

" ಇನ್ನು ನಾನು ಮನೆಗೆ ಹೋಗಬಹುದೇ ? "

" ಈಗಲೇ ಏನವಸರ. ನಾಣಿ ಇಲ್ಲಿಗೆ ಬರಲಿ – ಆಮೇಲೆ ನೀನು ಹೋಗುವ ಯೋಚನೆಮಾಡಿದರಾಯಿತು."

ನಾರಾಯಣಸ್ವಾಮಿ ಬರುವ ಸುದ್ದಿ ಕೇಳಿ ಗೋದಮ್ಮ ಎದ್ದು ಕುಳಿತರು. ಕಮಲಾ ಗಾಬರಿಗೊಂಡು

"ಇದೇನಜ್ಜಿ – ಎದ್ದು ಬಿಟ್ಟಿ – ಹಾಸಿಗೆ ಬಿಟ್ಟೇಳಕೂಡದು ಎಂದು ಡಾಕ್ಟರು ಹೇಳಿಲ್ಲವೇ ?"

"ನನ್ನ ಆರೋಗ್ಯದ ವಿಷಯ ಡಾಕ್ಟರಿಗೇನು ಗೊತ್ತೇ ಕಮಲಾ – ಎಷ್ಟೋ ದಿನಗಳಮೇಲೆ ನನ್ನ ಮೊಮ್ಮಗ ಬರುತ್ತಾನೆಂದರೆ ನಾನು ಹಾಸಿಗೆ ಹಾಸಿಕೊಂಡು ನರಳುತ್ತ ಬಿದ್ದಿರಲೇ ? ನಾಳೆಗೆ ನಾನೇ ಅಡಿಗೆ ಮಾಡಿ ಬಡಿಸಬೇಕು ಪಾಪ! ಅವನು ಸರಿಯಾಗಿ ಊಟ ಮಾಡಿ ಎಷ್ಟು ದಿನವಾಯಿತೋ ಏನೋ ?"

"ನಿನ್ನ ಕಣ್ಣಲ್ಲಿ ನಾಣಿಯನ್ನು ಆರೇಳುವರ್ಷದ ಹುಡುಗ ಅಲ್ಲವೇ ಅಜ್ಜಿ ?"

"ನಿನ್ನ ತಮ್ಮ ದೊಡ್ಡ ಕವಿಯಾಗಿದ್ದಾನೆ ಲೋಕಕ್ಕೆ ಲೋಕವೇ ಅವನನ್ನು ಹೊಗಳುತ್ತಿದೆ ಎಂದು ನಿನಗೆ ಜಂಭವಿಲ್ಲವೇನೇ ಕಮಲಾ"

"ಜಂಭವಿಲ್ಲದೆ ಇರುತ್ತದೆಯೇ ಗೋದಜ್ಜಿ"

"ಆ ನಿನ್ನ ತಮ್ಮ ನನ್ನ ತೊಡೆಯಮೇಲೆ ಬೆಳೆದ ಕಂದ ಕಣೇ ಕಮಲಾ ಅವನು ಎಷ್ಟೇ ಖ್ಯಾತಿಗಳಿಸಿಕೊಂಡರೂ ನನ್ನ ಕಣ್ಣಿಗೆ ನಾಣಿಯೇ! ಹೆಂಡತಿಯನ್ನು ಕರೆದುಕೊಂಡು ಬಾ ಎಂದು ಬರೆಯೇ ಕಮಲಾ!"

"ಅವರು ಬರುತ್ತಾರೋ ಇಲ್ಲವೋ ?"

"ಏಕೆ ?"

"ನಾವು ಬಡವರಲ್ಲವೇ ಗೋದಜ್ಜಿ"

"ಯಾರು ಹೇಳಿದರು ಇಂದುಮತಿ ಲೌಕಿಕ ಸಂಪತ್ತಿನ ಯಜಮಾನಿತಿ ಆಗಿರಬಹುದು. ಆದರೆ ನಿಮ್ಮಮ್ಮ ನಿಮಗೆಲ್ಲಾ ಕಡಿಮೆ ಆಸ್ತಿ ಇಟ್ಟಿಲ್ಲ ಕಮಲಾ. ಎಷ್ಟು ತಲೆಮಾರು ನೀವು ಬಳಸಿದರೂ ಕಡಿಮೆಯಾಗದಂತ ಅಪೂರ್ವನಿಧಿಯನ್ನಿಟ್ಟು ಹೋಗಿದ್ದಾಳೆ. ಆ ಆಸ್ತಿಯಲ್ಲಿ ಇಂದುಮತಿಗೂ ಒಂದು ಪಾಲಿದೆ. ಅವಳು ಜಾಣೆಯಾದರೆ ತನ್ನ ಪಾಲು ಬೇಗ ತೆಗೆದುಕೊಳ್ಳಬೇಕು."

" ಇಂದುಮತೀಗೆ ಆ ತಿಳುವಳಿಕೆ ಬರಬೇಕಲ್ಲಾ ! "

" ಬರತ್ತೆ ಕಮಲಾ – ನಾಣಿ ವಿಷಯದಲ್ಲಿ ಹೇಗೆ ನನಗೆ ನಂಬಿಕೆಯಿತ್ತೋ ಹಾಗೆ ಇಂದುಮತಿ ವಿಷಯದಲ್ಲಿಯೂ ನಂಬಿಕೆ ಇದೆ. ಕೆಲವು ಹಣ್ಣುಗಳು ಬೇಗ ಮಾಗುತ್ತವೆ, ಕೆಲವು ಸ್ವಲ್ಪ ತಡವಾಗಿ ಮಾಗುತ್ತವೆ "

ಅಜ್ಜಿಯ ಆತ್ಮನಂಬಿಕೆ ಕಂಡು ಕಮಲಾ ಆಶ್ಚರ್ಯಚಕಿತಳಾದಳು

ನಾರಾಯಣಸ್ವಾಮಿ ಮುಂಬಯಿಗೆ ಬಂದ ದಿನವೇ ಮನೆಗೆ ತಾರುಮಾಡಿ ತಿಳಿಸಿದ

ಪತಿಯನ್ನು ಸ್ವಾಗತಿಸಲು ಬಂದಿದ್ದ ಇಂದುಮತಿ, ನಾರಾಯಣಸ್ವಾಮಿಯನ್ನೂ ಪ್ರೊ ಡ್ರೊ ಅವರನ್ನೂ ತನ್ನ ಮನೆಗೆ ಕರೆದುಕೊಂಡು ಹೋದಳು ಅವರು ಮನೆಮುಟ್ಟಿದ ಸ್ವಲ್ಪ ಹೊತ್ತಿನೊಳಗಾಗಿ ಬಂದ ಸರ್ವೋತ್ತಮನನ್ನು ಕಂಡು ನಾರಾಯಣಸ್ವಾಮಿಗೆ ಅಪರಿಮಿತ ಆನಂದವಾಯಿತು ಊರಿನ ಸುದ್ದಿಯನ್ನೆಲ್ಲಾ ಅವನಿಂದ ಸಂಗ್ರಹಿಸಿಕೊಂಡು

" ನಿನ್ನ ಮಗೂಗೆ ಏನು ಹೆಸರಿಟ್ಟಿದ್ದೀ ಸರ್ವೋತ್ತಮ "

ಎಂದು ಕೇಳಿದ

" ಊಹಿಸು ನೋಡೋಣ "

" ನಾನು ಹೇಗಪ್ಪಾ ಊಹಿಸಲಿ ? "

" ಮಗುವಿಗೆ ಹೆಸರಿಡಲು ನಮಗೆ ಅವಕಾಶವೇ ಆಗಲಿಲ್ಲ ಆ ಜವಾಬ್ದಾರಿ ಗೋದಜ್ಜಿ ಸಂಪೂರ್ಣವಾಗಿ ನಿರ್ವಹಿಸಿದರು. "

" ಈಗ ಹೆಸರು ಊಹಿಸಬಲ್ಲೆ. "

" ಏನು ಹೇಳು "

" **ರುಕ್ಮಿಣಿ.** "

" ಹೌದು ನಾರಾಯಣಸ್ವಾಮಿ – ನಿಜವಾಗಿ ಅದೇ ಹೆಸರಿಟ್ಟಿದ್ದಾರೆ. "

" ಗೋದಜ್ಜಿ ಬಹಳ ಅಪರೂಪದ ವಸ್ತು ಸರ್ವೋತ್ತಮ. "

"ಅವರು ನನಗೆ ಮಾಡಿರುವ ಉಪಕಾರ ಮರೆಯಲಾರೆ ನಾರಾಯಣಸ್ವಾಮಿ. ನೀನು ಬೆಂಗಳೂರಿಗೆ ಯಾವಾಗ ಬರುತ್ತೀ ? "

" ಇಂದೋ ನಾಳೆಯೋ ನಾನೂ ಪ್ರೊಫೆಸರೂ ನಮ್ಮ ಪ್ರೋಗ್ರಾಂ (Program) ಹಾಕುತ್ತೇವೆ. ನಾವು ಪ್ರಾಯಶಃ ಉತ್ತರ ಭಾರತದ ಕಡೆ ಹೋಗಬೇಕಾಗುತ್ತದೆ. ನಾವು ಹೊರಡುವ ಮುನ್ನ ಊರಿಗೆ ಬಂದು ಒಂದೆರಡು ದಿನವಿರುತ್ತೇವೆ ನೀನು ಯಾವಾಗ ಹೊರಡುತ್ತೀ "

" ನಾಳೆ ಬೆಳಿಗ್ಗೆ. "

" ಒಳ್ಳೆಯದು. ಎಲ್ಲರಿಗೂ ಹೇಳು. " ಎಂದ.

ಸರ್ವೋತ್ತಮ ಹೋಪಮೇಲೆ ಪ್ರೊ. ಡ್ರೂ ಹೊಟೇಲಿಗೆ ಹೋಗುವ ವಿಷಯ ನಾರಾಯಣಸ್ವಾಮಿಯಲ್ಲಿ ಪ್ರಸ್ತಾಪಿಸಿದರು.

"ನೀವೂ ಇಲ್ಲಿಯೇ ಇರಬೇಕೆಂದು ಇಂದುಮತಿಯ ಇಚ್ಛೆ."

ಮುಂಬಯಿಯನ್ನೇ ನಾನು ಹೆಡ್‌ಕ್ವಾಟರ್ಸ್ (HeadQuarters) ಮಾಡಿಕೊಳ್ಳಬೇಕಾಗಿದೆ ತಿಂಗಳು ಗಟ್ಟಳೆ ನಿಮ್ಮ ಮಾವನವರ ಮನೆಯಲ್ಲಿ ಹೇಗೆ ಕೂಡಲಿ ? "

ಪ್ರೊಫೆಸರ ನಿರ್ಧಾರಕ್ಕೆ ಇಂದುಮತಿ ಸಮ್ಮತಿಸಲೇಬೇಕಾಯಿತು. ನಾರಾಯಣಸ್ವಾಮಿ, ಇಂದುಮತಿ ಪ್ರೊಫೆಸರ ಜತೆ ಹೋಗಿ 'ಮೆಜೆಸ್ಟಿಕ್ ಹೊಟೇಲಿನಲ್ಲಿ' (Majestic Hotel) ಅವರು ತಂಗಲು ತಕ್ಕ ವ್ಯವಸ್ಥೆ ಮಾಡಿದರು.

ಮನೆಗೆ ಹಿಂದಿರುಗುತ್ತಾ ನಾರಾಯಣಸ್ವಾಮಿ ಹೆಂಡತಿಗೆ

" ನೀನು ಕಾಗದ ಬರೆಯಲಿಲ್ಲವೆಂದು ಫ್ಲೋ, ನೀನಾ ಇಬ್ಬರೂ ಬಹಳ ನೊಂದುಕೊಂಡರು ಇಂದೂ. "

" ಬರೆಯಲು ಹತ್ತುಸಲ ಕಾಗದ, ಲೇಖನಿ ಕೈಗೆತ್ತಿಕೊಂಡೆ. ಏನು ಬರೆಯುವುದು ಎನ್ನುವುದೇ ಹೊಳೆಯಲಿಲ್ಲ. "

" ಅವರು ಬಡವರು ಇಂದೂ. ... "

" ಸ್ವಾಮಿ, ದಯೆಯಿಟ್ಟು ಇನ್ನುಮೇಲೆ ಬಡತನ, ಸಿರಿತನಗಳ ವಿಷಯವೆತ್ತಬೇಡಿ. ಫ್ಲೋ, ನೀನಾ ನನಗೆ ಕಲಿಸಿದ ಪಾಠ ನಾನು ಮರೆತಿಲ್ಲ. ವಿವೇಕರಹಿತಳಾಗಿ ನಾನು ವರ್ತಿಸಿದೆ – ಅದಕ್ಕೆ ಸಾಕಷ್ಟು

ಪಶ್ಚಾತ್ತಾಪವನ್ನೂ ಅನುಭವಿಸಿದೆ. ”

“ ಈಗ ನನ್ನ ಮನಸ್ಸಿಗೆ ನೆಮ್ಮದಿಯಾಯಿತು ಇಂದೂ. ನೀನು ನನಗೊಂದು ಉಪಕಾರಮಾಡಬೇಕು. ”

“ ಹೇಳಿ – ಅಷ್ಟು ದೊಡ್ಡ ಮಾತು ಉಪಯೋಗಿಸಬೇಡಿ. ”

“ ಬೆಂಗಳೂರಿಗೆ ನನ್ನ ಜತೆ ಬರುವೆಯಾ ? ”

“ ನಾನು ಬರುವುದು ಸೂಕ್ತವೇ ? ”

“ ಏಕೆ ಸೂಕ್ತವಲ್ಲ ? ”

“ ನಿಮ್ಮ ಮನೆಯವರು ಒಂದು ಸಂಪ್ರದಾಯದಲ್ಲಿ ಬೆಳೆದವರು ; ನಾನು ಬೇರೊಂದು ಸಂಪ್ರದಾಯದಲ್ಲಿ ಬೆಳೆದವಳು ”

“ ಸಂಪ್ರದಾಯ ಬೇರೆಯಾದರೂ ಸಂಸ್ಕೃತಿ ಒಂದೇ ಅಲ್ಲವೇ ? ನನ್ನ ಮನೆಯವರಿಗೆ ನೀನು ಹೊರಗಿನವಳಲ್ಲ – ಅವರೂ ನಿನಗೆ ದೂರ ದವರಲ್ಲ. ನನ್ನ ಜನ ನಿನ್ನ ಜನವಲ್ಲವೇ ? ”

“ ನನ್ನ ನಡತೆಯಲ್ಲಿ ನ್ಯೂನಾತಿರೇಕ ಕಂಡುಬಂದರೆ ತಿದ್ದುವುದು ನಿಮ್ಮ ಭಾರ. ”

“ ಆಗಬಹುದು – ಅದಕ್ಕೆ ಅವಕಾಶವೇ ಇರುವುದಿಲ್ಲವೆಂದು ನಾನು ತಿಳಿದಿದ್ದೇನೆ. ”

ಅಂದೇ ಸಂಜೆ ಸ್ವಾಮಿ, ಪ್ರೊ ಡ್ರೂ ಕುಳಿತು ತಮ್ಮ ಪ್ರೋಗ್ರಾಂ ನಿಶ್ಚಯಿಸಿ ಪ್ರಾಂತ್ಯಸರ್ಕಾರಗಳಿಗೆ ಕಾಗದಗಳನ್ನು ಬರೆದರು. ಕೊನೆಯ ಕಾಗದಕ್ಕೆ ಸಹಿಹಾಕಿ, ಲಕೋಟೆ ನೇರಿಸಿದಮೇಲೆ ಪ್ರೊಫೆಸರು

“ ಸ್ವಾಮಿ, ನಾವು ಹೊರಡುವುದಕ್ಕೆ ಒಂದುವಾರ ಬೇಕೇಬೇಕು. ನಾನು ಇಲ್ಲಿಯೇ ಕುಳಿತು ಪೂರ್ವಸಿದ್ಧತೆ ಮಾಡಿಕೊಳ್ಳುತ್ತೇನೆ. ನೀವು ಬೇಕಾದರೆ ಊರಿಗೆ ಹೋಗಿ ಬನ್ನಿ. ”

“ ಮುಂಬಯಿಯಲ್ಲಿ ನೀವೊಬ್ಬರೇ ಇರಬೇಕಲ್ಲ. ನೀವೂ ಏಕೆ ನನ್ನ ಜತೆ ಬರಬಾರದು ? ”

“ ಈಗ ಬೇಡ ಸ್ವಾಮಿ – ನೀವು ಹೋಗಿ ಬನ್ನಿ. ಪ್ರವಾಸ ಮುಗಿಸಿ ಕೊಂಡು ಬಂದಮೇಲೆ ನಾನು ಖಂಡಿತ ಬೆಂಗಳೂರಿಗೆ ಬಂದು ನಿಮ್ಮ ಅಜ್ಜಿ, ತಂದೆ, ಅಕ್ಕ ತಂಗಿಯರ ಪರಿಚಯಮಾಡಿಕೊಳ್ಳುತ್ತೇನೆ. ”

ಪ್ರೊಫೆಸರ ಯೋಜನೆ ನಾರಾಯಣಸ್ವಾಮಿಗೆ ಸಮಂಜಸವಾಗಿ ಕಂಡುಬಂದಿತು.

ನಾರಾಯಣಸ್ವಾಮಿ ಬೆಂಗಳೂರಿಗೆ ಹೊರಡುವ ಮುನ್ನ 'ಆರ್ಯನ್ ಪಬ್ಲಿಕೇಷನ್ಸ್' (Aryan Publications) ಮ್ಯಾನೇಜರೂ ತನ್ನ ಹಳೆಯ ಸ್ನೇಹಿತನೂ ಆಗಿದ್ದ ಪಾಂಡುಗೆ ಪ್ರೊ ಡ್ರೂ ಪರಿಚಯ ಮಾಡಿಕೊಟ್ಟ.

"ನಾನು ಬರುವವರೆಗೆ ಪ್ರೊಫೆಸರ ಯೋಗಕ್ಷೇಮ ನಿನಗೆ ಸೇರಿದ್ದು ಪಾಂಡು" ಎಂದು ಹೇಳಿದ

"ಅವಶ್ಯಕವಾಗಿ ಆಗಲಿ ಮಿ. ನಾರಾಯಣಸ್ವಾಮಿ. ಭಾರತ ಪ್ರೇಮಿಗಳಾದ ಪ್ರೊಫೆಸರ ಸೇವೆಮಾಡುವುದೂ ಒಂದು ಪುಣ್ಯವಲ್ಲವೇ? – ನಿಮ್ಮ 'ಭಾರತೀಯ ತಾಯಿ' – 'ದೇವಪುತ್ರ' ಎರಡು ಗ್ರಂಥಗಳನ್ನು ಇಲ್ಲಿ ಓದದವರೇ ಇಲ್ಲ. ನಿಮ್ಮ ಪ್ರಕಾಶಕರ ಅನುಮತಿ ದೊರಕಿಸಿಕೊಡುವುದಾದರೆ ಭಾರತೀಯ ಭಾಷೆಗಳಿಗೆ ಅನುವಾದ ಮಾಡಿಸಿ ಪ್ರಕಟಿಸುವ ಕೆಲಸ ಕೈಗೊಳ್ಳುತ್ತೇನೆ"

"ನನ್ನ ಗ್ರಂಥಗಳು ನನ್ನ ದೇಶದ ಭಾಷೆಗಳಲ್ಲಿ ಬರುವುದು ನನಗೆ ಹೆಮ್ಮೆಯ ವಿಷಯವಲ್ಲವೇ. ಮಿ ಹ್ಯಾರಿಸ್ ಅವರಿಗೆ ಪರಿಚಯ ಪತ್ರ ಕೊಡುತ್ತೇನೆ. ನೀವೇ ಅವರಿಗೆ ಬರೆದು ಅನುಮತಿ ದೊರಕಿಸಿಕೊಳ್ಳಿ."

"ಆಗಬಹುದು ವ್ಯವಹಾರಭಾಗ ?"

"ಅದನ್ನು ಮಿ ಹ್ಯಾರಿಸ್ ಅವರೊಂದಿಗೇ ಚರ್ಚಿಸಿ ನಿರ್ಧರಿಸಿ"

"ನಿಮ್ಮನ್ನು ಕಾಣಲು ಮುಂಬಯಿಯ ವಿದ್ಯಾಭಿಮಾನಿಗಳು ಕಾತರರಾಗಿದ್ದಾರೆ ಮಿ. ಸ್ವಾಮಿ ನೀವು ಒಪ್ಪುವುದಾದರೆ ನಾನೊಂದು ಸಂತೋಷಕೂಟ ಏರ್ಪಡಿಸುತ್ತೇನೆ"

"ಈಗ ಬೇಡ. ನಾನೂ ಪ್ರೊಫೆಸರೂ ಉತ್ತರಭಾರತ ಪ್ರವಾಸ ಮುಗಿಸಿಕೊಂಡು ಬಂದಮೇಲೆ ನಿಮ್ಮ ಸಂತೋಷಕೂಟದ ವ್ಯವಸ್ಥೆಯಾಗಬಹುದು. ಆದರೆ ಮುಖ್ಯ ಅತಿಥಿಗಳು ಪ್ರೊ. ಡ್ರೂ ಎಂಬುದನ್ನು ನೀವು ಸ್ಪಷ್ಟವಾಗಿ ಆಹ್ವಾನಪತ್ರಿಕೆಗಳಲ್ಲಿ ಕಾಣಿಸಬೇಕು."

"ನಿಮ್ಮನ್ನು ಮುಖ್ಯ ಅತಿಥಿಗಳನ್ನಾಗಿ ಮಾಡಬೇಕೆಂದು

ಸನ್ಯಾಸಿ ”

“ ನಾನು ಒಬ್ಬ ಮನುಷ್ಯನಾದುದು - ಲೇಖಕನಾದುದು - ಭಾರತ ಪ್ರೇಮಿಯಾದುದು ಪ್ರೊ. ಡ್ರ್ಯೂ ಅವರಿಂದ ಮಿ. ಪಾಂಡು. ಗುರುವನ್ನು ಮರೆತು ಶಿಷ್ಯನನ್ನು ಗೌರವಿಸುವುದು ನಮ್ಮ ದೇಶಕ್ಕೆ ಅಪಮಾನಕರವಾದುದು ”

ಪಾಂಡು ಆಶ್ಚರ್ಯಚಕಿತನಾಗಿ

“ ಮಿ. ಸ್ವಾಮಿ, ನಿಮ್ಮಲ್ಲಿ ಎಂಥ ಅದ್ಭುತ ಮಾರ್ಪಾಡಾಗಿದೆ ” ಎಂದ.

“ ಏನು ಮಾರ್ಪಾಟು ? ”

“ ಮುಂಬಯಿಯಲ್ಲಿ ನಾನು ಕಂಡಿದ್ದ ನಾರಾಯಣಸ್ವಾಮಿಯೇ ಬೇರೆ, ಈ ನಾರಾಯಣಸ್ವಾಮಿಯೇ ಬೇರ   ಆ ನಾರಾಯಣಸ್ವಾಮಿ ಸ್ವಕೀರ್ತಿ ಪಸರಿಸಬೇಕೆಂದು, ಸ್ವಪ್ರತಿಷ್ಠೆ ಬೆಳೆಸಬೇಕೆಂದು ಹಾತೊರೆಯುತ್ತಿದ್ದ ವ್ಯಕ್ತಿ . ಈ ನಾರಾಯಣಸ್ವಾಮಿ   . ”

“ ಲಂಡನ್ ಕೇವಲ ಭೋಗಾಗಾರವೆಂದು ನಮ್ಮ ಭಾವನೆಯಲ್ಲವೇ ಮಿ. ಪಾಂಡು ”

“ ಹೌದು. ”

“ ಆ ಭೋಗಾಗಾರದಲ್ಲಿಯೇ ನನಗೆ ಮಹಾತ್ಯಾಗಿಗಳ ಪರಿಚಯವಾಯಿತು. ಜೀವನ್ಮುಕ್ತರಂತೆ ಬಾಳುವೆ ನಡಸುತ್ತಿರುವ ನನ್ನ ಗುರುಗಳು ಪ್ರೊ. ಡ್ರ್ಯೂ, ದೀನದಲಿತರ ಸೇವೆಗೆ ತ್ರಿಕರಣವನ್ನರ್ಪಿಸಿರುವ ಫ್ಲೋರಾ, ಡಾ ಚಂದ್ರಶೇಖರ್, ದಟ್ಟದಾರಿದ್ರ್ಯದಲ್ಲಿಯೂ ಶೀಲವನ್ನು ರಕ್ಷಿಸಿಕೊಂಡು ಬಂದಿರುವ ನೀನಾ ತಾಯಿ – ಇವರೇ ನನ್ನ ಅಸಂಸ್ಕೃತ ಬಾಳನ್ನು ಕಡೆದ ಶಿಲ್ಪಿಗಳು ! ಭಾರತ ತನ್ನ ನಿಶ್ಚಲಶಾಂತಿಯನ್ನು ಪಾಶ್ಚಾತ್ಯ ದೇಶಗಳಿಗೆ ಧಾರೆಯೆರದುಕೊಡಬೇಕು, ಅವರ ಜೀವನನಿಷ್ಠೆ, ಸಾಂಘಿಕಶೀಲವನ್ನು ಆದರದಿಂದ ಬರಮಾಡಿಕೊಳಬೇಕು. ”

ಪಾಂಡುವಿಗೆ ಮತ್ತಷ್ಟು ಆಶ್ಚರ್ಯವಾಯಿತು. ಅಭಿಮಾನದಿಂದವನು

“ ಸ್ವಾಮಿ, ನೀವು ಲೇಖಕರು ಮಾತ್ರವೇ ಅಲ್ಲ ಪ್ರವಾದಿಗಳೂ ಆಗಿದ್ದೀರಿ ” ಎಂದ.

“ ಪ್ರತಿಯೊಬ್ಬ ಮಾನವನೂ ಪ್ರವಾದಿಯೇ ಪಾಂಡು . ”

ಎಂದು ನಾರಾಯಣಸ್ವಾಮಿ ವಿನೀತನಾಗಿ ನುಡಿದ.

ಪ್ರೊ. ಡ್ರೂ ಅವರ ಅಪ್ಪಣೆಪಡೆದು ನಾರಾಯಣಸ್ವಾಮಿ, ಇಂದು ವುತಿ ಬೆಂಗಳೂರಿಗೆ ಪ್ರಯಾಣ ಬೆಳಸಿದರು

# ೩೨

ನಾರಾಯಣಸ್ವಾಮಿ, ಇಂದುಮತಿಯನ್ನು ಸ್ವಾಗತಿಸುವುದಕ್ಕೆ ಮನೆಮಂದಿಯೆಲ್ಲಾ ಸಿದ್ಧವಾದರು. ಗೋದಮ್ಮನವರು, ಮಾಧವರಾಯ, ಪದ್ಮ ಮಾತ್ರ ಹೋಗುವಂತಿರಲಿಲ್ಲ.

ಅರ್ಧಗಂಟೆ ಮುಂಚಿತವಾಗಿ ಎಲ್ಲರೂ ಏರೋಡ್ರೋಮ್ (Aerodrome) ಸೇರಿದರು. ಗೋಪಾಲಿ, ಸೌಭಾಗ್ಯನ ಕುತೂಹಲ ಹೇಳತೀರದಾಯಿತು. ಕಮಲ ಅವರನ್ನು ಕರೆದೊಯ್ದು ಏರೋಡ್ರೋಮಿನ ಪರಿಚಯಮಾಡಿಕೊಟ್ಟು, ದೂರದಿಂದಲೇ ವಿಮಾನಗಳನ್ನು ತೋರಿಸಿದಳು. ವಿಮಾನದಲ್ಲಿ ಕೂಡಬೇಕೆಂದು ಸೌಭಾಗ್ಯ ಒಂದೇ ಸಮನಾಗಿ ಹಟಹಿಡಿದಳು.

"ಈಗ ಮಾವ ಬರ್‍ತಾನೆ – ಅವನ ಜತೆ ಎಲ್ಲರೂ ಹೋಗೋಣ ಸುಮ್ಮನಿರಿ"

ಎಂದು ಕಮಲ ಸಮಾಧಾನ ಹೇಳಿದಳು.

ಹಕ್ಕಿಯಂತೆ ಗಂಭೀರವಾಗಿ ವಿಮಾನ ಕೆಳಗಿಳಿಯಿತು. ಧ್ವನಿವಾಹಕ ಯಂತ್ರದಲ್ಲಿ ಪ್ರಚಾರಕ

"ಇದೇ ಮುಂಬಯಿಯಿಂದ ವಿಮಾನ ಬಂದಿತು."

ಎಂದು ಸೂಚಿಸಿದ. ಗೋಪಾಲಿ, ಸೌಭಾಗ್ಯ ಹರ್ಷಗೊಂಡು

"ವಿಮಾನ ಬಂತು – ಮಾವ ಎಲ್ಲಿ – ತೋರಿಸೇ ಅಮ್ಮ"

ಎಂದು ಕಾಡಿದರು.

ವಿಮಾನ ನಿಲುಗಡೆಗೆ ಕಟ್ಟಿದ್ದ ತಂತೀ ಆವರಣದಿಂದ ಬಂದ ನಾರಾಯಣಸ್ವಾಮಿ ಕಮಲನನ್ನು ಕಂಡವನೇ ಅಪ್ಪಿದ. ಸೌಭಾಗ್ಯ,

ಗೋಪಾಲಿ ಮಾವನಿಗೂ ಅತ್ತೆಗೂ ಹಾರ ಹಾಕಿದರು. ನಾರಾಯಣ ಸ್ವಾಮಿ ಎಲ್ಲರಿಗೂ ಇಂದುಮತಿಯ ಪರಿಚಯ ಮಾಡಿಕೊಟ್ಟು ಸೌಭಾಗ್ಯನನ್ನೆತ್ತಿಕೊಂಡ.

ಸಾಮಾನುಗಳು ತುಂಬಿದ ಟ್ಯಾಕ್ಸಿಯಲ್ಲಿ ರಾಮು, ಶ್ರೀದೇವಿ ಕುಳಿತರು. ಇನ್ನೊಂದು ಟ್ಯಾಕ್ಸಿಯಲ್ಲಿ ನಾರಾಯಣಸ್ವಾಮಿ, ಇಂದು ಮತಿ, ಕಮಲಾ, ಗೋಪಾಲಿ, ಸೌಭಾಗ್ಯ ಕುಳಿತರು.

ಆ ಸಂದರ್ಭದಲ್ಲಿ ಯಾರ ಬಾಯಲ್ಲಿಯೂ ಮಾತು ಹೊರಡದು. ಸೌಭಾಗ್ಯನೇ ಮೌನ ಮುರಿದು

' ಮಾವ ಬಂದಸಲ್ಲ – ವಿಮಾನದಲ್ಲಿ ಕರದುಕೊಂಡು ಹೋಗು."

ಎಂದಳು. ಸೌಭಾಗ್ಯನ ಗೊಣಗಿನ ಕಾರಣವನ್ನರಿತ ನಾರಾಯಣ ಸ್ವಾಮಿ ಆದರ ಕಾರಣವನ್ನು ಅವಳ ಬಾಯಿಂದಲೇ ಕೇಳಿಸಿ

" ನಾನು ಕರದುಕೊಂಡು ಹೋಗುತ್ತೇನೆ ಸೌಭಿ – ಅಮ್ಮನನ್ನು ಕೇಳಬೇಡ " ಎಂದ.

" ಅವಳದ್ದು ಗಂಟೆಗೊಂದೊಂದು ಅಹವಾಲು ಇದ್ದೇ ಇರತ್ತೆ. ಇನ್ನು ಒಂದೇನಮೂನೆ ನಿನ್ನ ಪ್ರಾಣ ಹಿಂಡುತ್ತಾಳೆ ನೋಡು. "

" ಮಾತುಕೊಟ್ಟು ತಪ್ಪಬಾರದು ಕಮಲಾ – ಮಕ್ಕಳಿಗೆ ಕೊಟ್ಟ ಮಾತು ಖಂಡಿತ ತಪ್ಪಬಾರದು. ಹಿರಿಯರ ಚಾಳಿಯನ್ನೇ ಅವರೂ ರೂಢಿಸಿಕೊಳ್ಳುತ್ತಾರೆ – ಮನೆಯಲ್ಲಿ ಎಲ್ಲರೂ ಆರೋಗ್ಯವೇ ? "

"ಎಲ್ಲರೂ ಆರೋಗ್ಯ–ನಿನ್ನ ಗುರುತೇ ಸಿಕ್ಕುವುದಿಲ್ಲನಲ್ಲ ನಾಣಿ."

" ನಾನು ಸ್ವಲ್ಪ ಬೆಳೆದಿರುವೆನಲ್ಲವೆ ? "

" ಹೌದು ನಾಣಿ – ಎಲ್ಲಾರೀತಿಯಲ್ಲಿಯೂ ಬೆಳೆದಿರುವೆ. "

ನಾರಾಯಣಸ್ವಾಮಿ, ಇಂದುಮತಿ ದಾರಿ ನೋಡುತ್ತಾ ಗೋದಮ್ಮ, ಮಾಧವರಾಯ ಬಾಗಿಲಲ್ಲೇ ನಿಂತಿದ್ದರು. ಅಜ್ಜಿಯ ಮಾತನ್ನು ನಿರ್ಲಕ್ಷಿಸಿ ಪದ್ಮ ಅಣ್ಣನ ಬರುವನ್ನು ಎದುರುನೋಡು ತ್ತಿದ್ದಳು.

ಕಾರಿನಿಂದ ಇಳಿದುಬಂದವನೇ ನಾರಾಯಣಸ್ವಾಮಿ ಮೊದಲು ಅಜ್ಜಿಗೆ ತರುವಾಯ ತಂದೆಗೆ ನಮಸ್ಕರಿಸಿದ. ಇಂದುಮತಿ ಅವನ

ಮೇಲ್ಪಂಕ್ತಿಯನ್ನನುಸರಿಸಿದಳು

ಗೋದಜ್ಜಿ ಮೊಮ್ಮಗನನ್ನಪ್ಪಿಕೊಂಡು ಆನಂದಬಾಷ್ಪ ಸುರಿಸುತ್ತಾ

" ಬಂದೆಯಾ ನನ್ನ ಕಂದ " ಎಂದರು

ಮಾಧವರಾಯ ಉದ್ವೇಗದಿಂದ ಕ್ಷೀಣವಾಗಿದ್ದ ಧ್ವನಿಯಲ್ಲಿ

" ಚೆನ್ನಾಗಿದ್ದೀಯ ನಾಣಿ " ಎಂದ.

" ಚೆನ್ನಾಗಿದ್ದೇನಣ್ಣಾ. "

ಇಂದುಮತಿಯನ್ನು ಗಮನಿಸಿದ ಗೋದಜ್ಜಿ

" ಭಾಗ್ಯಲಕ್ಷ್ಮಿಯ ಹಾಗೆ ಸೊಸೆ ಮನೆಗೆ ಬರುತ್ತಿದ್ದಾಳೆ. ಯಾರಾದರೂ ಆರತಿ ಎತ್ತಿರೆ– ಶ್ರೀದೇವಿ, ನೀನೂ ಸೌಭಾಗ್ಯ ಆರತಿ ಬೆಳಗಿಯಮ್ಮ – ನನ್ನ ರುಕ್ಕು ಇದ್ದಿದ್ದರೆ ಮಗ ಸೊಸೆಯನ್ನು ಎಷ್ಟು ಮೆರಸುತ್ತಿದ್ದಳೋ ? ಅವಳು ಇಲ್ಲಾಂತ ಅನ್ನಿಸಬೇಡ್ವೇ. " ಎಂದರು.

ಅಜ್ಜಿಯ ಮಾತನ್ನು ನಾರಾಯಣಸ್ವಾಮಿ ಇಂಗ್ಲಿಷಿಗೆ ಅನುವಾದ ಮಾಡಿ ಇಂದುಮತಿಗೆ ತಿಳಿಸಿದ

ಆರತಿ ಬೆಳಗಿದಮೇಲೆ ನಾರಾಯಣಸ್ವಾಮಿ ಇಂದುಮತಿಗೆ ಪದ್ದು ಪರಿಚಯ ಮಾಡಿಕೊಟ್ಟ. ಇಂದುಮತಿ ಪ್ರೀತಿಯಿಂದ ಪದ್ಮನ ಮಗಳನ್ನೆತ್ತಿಕೊಂಡು ಗಂಡನಿಗೆ ತೋರಿಸುತ್ತಾ

" ನಿಮ್ಮ ತಾಯಿದೇವಿ ರುಕ್ಮಿಣಿಯನ್ನು ನೋಡಿ " ಎಂದಳು.

ನಾರಾಯಣಸ್ವಾಮಿ ಮಗುವಿನ ಗಲ್ಲಹಿಡಿದು ಮುದ್ದಿಸಿದ.

ಅಡಿಗೆಯ ಮನೆ ಬಳಿ ನಿಂತಿದ್ದ ಸಾವಿತ್ರಮ್ಮನನ್ನು ಕರೆದು ಗೋದಜ್ಜಿ ಮೊಮ್ಮಗನಿಗೆ ಪರಿಚಯಮಾಡಿಸಿದರು.

ಸಾವಿತ್ರಮ್ಮನಿಗೂ ಹೊಸಹುರುಪು ಬಂದಂತಾಗಿತ್ತು. ಒಂದೇ ನಿಮಿಷದಲ್ಲಿ ಎಲ್ಲರಿಗೂ ಉಪ್ಪಿಟ್ಟು, ಸಜ್ಜಿಗೆ, ಕಾಫಿ ಒದಗಿಸಿದಳು.

ಗೋದಜ್ಜಿ ನೆಲದಮೇಲೆ ಕುಳಿತುಕೊಂಡು ನಾಣಿ, ಇಂದೂ ಉಪಾಹಾರ ಸೇವಿಸುವುದನ್ನು ನೋಡುತ್ತಿದ್ದವರು

" ಹೀಗೆ ತಿಂದರೆ ಹೇಗೋ ನಾಣಿ – ನಿನ್ನ ಹೆಂಡತಿಯನ್ನೂ ಸರಿಯಾಗಿಯೇ ತಯಾರುಮಾಡಿದ್ದೀ. ನಿನ್ನ ಮನೆಗೆ ನಮ್ಮಂಥವರು ಊಟಕ್ಕೆ ಬಂದರೇನಪ್ಪಾ ಗತಿ ? "

" ಇಂದು ತುಂಬ ಅಡಿಗೆಮಾಡಿ ಚೆನ್ನಾಗಿ ಬಡಿಸುತ್ತಾಳೆ ಹೆದರ ಬೇಡ ಗೋದಜ್ಜೀ. "

ಇಂದುಮನ್ನೇ ದಿಟ್ಟಿಸಿ ನೋಡುತ್ತಿದ್ದ ಗೋದಜ್ಜ ಕಮಲನನ್ನು ಕರೆದು

" ನಿಮ್ಮತ್ತಿಗೆ ಎಷ್ಟು ಚೆಲುವಾಗಿದ್ದಾಳೆ ಕಮಲಾ – ತಿದ್ದಿದ ಗೊಂಬೆ ಹಾಗೆ! – ನಮ್ಮ ರುಕ್ಕೂನು ಇಷ್ಟು ಚೆಲುವೆಯಲ್ಲಮ್ಮ! "

" ಹೋಗಜ್ಜಿ – ನಾವೆಲ್ಲಾ ಕುರೂಪಿಗಳೇನು ? "

" ಅಲ್ಲಾ ಕಣೆ ಹುಚ್ಚು ಹುಡುಗಿ, ಇಂದುಮತಿ ತುಂಬಾ ಚೆಲುವೆ ಎಂದರೆ ನೀವೆಲ್ಲಾ ಕುರೂಪಿಗಳು ಎಂದರ್ಥವೇ ? "

" ನಮಗೇನೂ ಹೊಟ್ಟೇಕಿಚ್ಚಿಲ್ಲ ಅಜ್ಜಿ–ನೀನು ಹೇಳಿದ್ದು ನಿಜ."

ನಾರಾಯಣಸ್ವಾಮಿ ಈ ಸಂಭಾಷಣೆ ಇಂಗ್ಲಿಷಿಗೆ ಅನುವಾದಿಸಿ ಇಂದುಮತಿಗೆ ಹೇಳಲು ಅವಳು

" ಈ ಜನ ಎಷ್ಟು ಸರಳರು – ಎಷ್ಟು ನಿಷ್ಕಲ್ಮಷರು " ಎಂದಳು.

ಇಂದುಮತಿಗೆ ಕನ್ನಡಬಾರದೆಂಬ ಭಾವನೆಯೇ ಗೋದಜ್ಜಿಯ ಮನಸ್ಸಿನಲ್ಲಿ ಹೊಳೆಯಲಿಲ್ಲದು. ನಾಣಿಯ ಹೆಂಡತಿಯನ್ನು ತುಂಬ ಮಾತನಾಡಿಸಬೇಕೆಂಬುದೇ ಅವರ ಆಕಾಂಕ್ಷೆ.

" ನನ್ನ ಬಡ ಮೊಮ್ಮಗನ ಕೈಹಿಡಿದ ನೀನೆಂಥ ಗುಣವಂತೆಯೇ ತಾಯಿ " ಎಂದರು.

ದುಭಾಷಿಯಾಗಿ ಕಮಲ ಅವರ ಸಂಭಾಷಣೆಗೆ ನೆರವು ನೀಡಿದಳು. ಭಾಷೆಗಳ ಗೊಂದಲ ಕಂಡ ಗೋದಜ್ಜಿ ಇಂದುಮತಿಗೆ,

" ನಿನ್ನ ಭಾಷೆ ನಮಗೆಲ್ಲಾ ಹೇಳಿಕೊಡು–ಇಲ್ಲದಿದ್ದರೆ ನೀನೇ ಕನ್ನಡ ಕಲಿತುಕೋ. ನಿನ್ನ ಕೈಯಲ್ಲಿ ಮಾತಾಡುವಾಗಲೆಲ್ಲಾ ಈ ಕಮಲನ್ನ ಅನುಸರಿಸೋದು ಭೋ ಕಷ್ಟ. " ಎಂದರು.

ಇಂದುಮತಿ ನಸುನಗುತ್ತಾ,

" ನಿಮಗೆಲ್ಲಾ ಏಕೆ ತೊಂದರೆ–ನಾನೇ ಕನ್ನಡ ಕಲಿತುಕೊಳ್ಳು ತ್ತೇನೆ. " ಎಂದಳು.

ಕಮಲ ಮೆಲ್ಲನೆ,

" ಏಳು ನಾಣಿ–ಸ್ನಾನಮಾಡಿ ಬಟ್ಟೆ ಬದಲಾಯಿಸು. ಅಜ್ಜಿ ಮಾತು ಕೇಳುತ್ತ, ಕುಳಿತರೆ ಸಂಜೆಯಾಗುತ್ತದೆ " ಎಂದಳು

ಇಂದುಮತಿಯೊಡನೆ ಮಹಡಿಯೇರಿ ಬಂದ ನಾರಾಯಣಸ್ವಾಮಿ ತನ್ನ ರೂಮಿನ ಅಚ್ಚುಕಟ್ಟು ನೋಡಿ,

" ಕಮಲಾ...... ...." ಎಂದ.

" ಏನು ನಾಣಿ, "

" ಇಷ್ಟೆಲ್ಲಾ ವ್ಯವಸ್ಥೆ ಯಾರಿಗಾಗಿ ? "

" ಯಾರಿಗೇಂದ್ರೇ–ನಿನಗೆ ಅತ್ತಿಗೆಮ್ಮನಿಗೆ ! "

" ನಾನು ಈ ಮನೆಯ ಅತಿಥಿಯಲ್ಲ ಕಮಲಾ, ಈ ಮನೆಗೆ ಸೇರಿದವನು. "

" ಇದೆಲ್ಲಾ ಜವರೇಗೌಡರ ವ್ಯವಸ್ಥೆಯಪ್ಪ – ನಮಗೊಂದೂ ಗೊತ್ತಿಲ್ಲ. ಅಣ್ಣನ ವಿಷಯ ನಿನಗೆ ಗೊತ್ತೇ ಇದೆಯಲ್ಲಾ–ಗೌಡರು ಹೇಳಿದ್ದಕ್ಕೆ ' ಹೂ ' ಎನ್ನುವುದು-ನೀನೂ ಅತ್ತಿಗೆಮ್ಮ ಸ್ನಾನ ಮುಗಿಸಿ ನಾನು ಬರುತ್ತೇನೆ "

ಎಂದು ಹೇಳಿ ಕಮಲಾ ಕೆಳಗಿಳಿದುಹೋದಳು.

ಇಂದುಮತಿ ಪತಿಯ ಕೊರಳನ್ನಪ್ಪಿಕೊಂಡು ಕಂಬನಿಗರೆಯುತ್ತ ನಿಂತಳು.

" ಏಕೆ ಇಂದೂ-ಏನಾಯಿತು ? "

" ಏನೂ ಇಲ್ಲ ಡಿಯರ್. "

" ಅಳುವುದೇತಕ್ಕೆ ? "

" ನಿಮ್ಮ ಜನ ನೋಡಿ ಸಂತೋಷವಾಯಿತು. ನಿಮ್ಮಜ್ಜಿ ಎಂಥಾ ಜೀವ ! "

" ನಿನಗೆಷ್ಟು ಉಪಚಾರ ಮಾಡಿದರೂ ಅಜ್ಜಿಗೆ ಸಾಲದಾಗಿದೆ ಇಂದೂ. "

" ಲಂಡನ್ನಿನಲ್ಲಿ ಆರಂಭವಾದ ಶಿಕ್ಷಣ ಬೆಂಗಳೂರಿನಲ್ಲಿ ಮುಗಿಯುತ್ತದೆ. ಜೀವನ ಸುಂದರವಾಗಬೇಕಾದರೆ, ಉತ್ತಮ ಜೀವನದ ಪರಿಚಯವಾಗಲೇ ಬೇಕು....ನಿಮ್ಮ ತಾಯಿಯವರನ್ನು ನೋಡಲಿಲ್ಲ

ವಲ್ಲಾ ಎಂದು ಬಹಳ ವಿಷಾದವಾಗಿದೆ. ”

“ ನೀನೊಮ್ಮೆ ನೋಡಿದ್ದರೆ ಚೆನ್ನಾಗಿತ್ತು–ಆದರೇನು ಮಾಡುವುದು ? ಅವಳ ದಿವ್ಯಸ್ಮೃತಿಯೇ ನಮ್ಮ ಬಾಳಿನ ಬೆಳಕು. ”

“ ಆ ಬೆಳಕು ನನಗೂ ದಾರಿ ತೋರಿಸಲಿ. ”

“ ದೇವಿಯ ದಿವ್ಯಹಾಸದಿಂದೊಗೆಯುವ ಬೆಳಕು ವಿಶ್ವವನ್ನೇ ಬೆಳಗಿಸುವುದು ಇಂದೂ. ಬೆಳಕು ಮೂಡಿದಾಗ ನಾವು ಕಣ್ದೆರೆಯಬೇಕು. ಸದಾ ಕಣ್ಮುಚ್ಚಿಕೊಂಡಿರುವವರಿಗೆ ಬೆಳಕಿನ ಪರಿಚಯವಾಗುವುದು ಶಕ್ಯವಿಲ್ಲ. ”

“ ನಾನು ಕಣ್ಣು ಬಿಡುತ್ತಿದ್ದೇನೆ ಡಿಯರ್-ಬಿಟ್ಟಕಣ್ಣು ಮತ್ತೆ ಮುಚ್ಚುವ ಸಂಭವವಿಲ್ಲ. ”

“ ಅಜ್ಜಿ ಹೇಳಿದ್ದು ನಿಜ ಇಂದೂ–ನೀನು ಮಹಾ ಚೆಲುವೆ. ”

“ ನಿಮ್ಮ ಅಜ್ಜಿಯವರ ಚೆಲುವಿನ ಮುಂದೆ ನನ್ನದು ಸೂರ್ಯನ ಮುಂದೆ ಸೊಡರು ಹಚ್ಚಿದಂತೆ. ನನಗೆ ಅವರು ಸ್ವಾಗತ ಬಯಸಿದ ಬಗೆಯನ್ನು ನಾನೆಂತು ಮರೆಯಲಿ. ನೀವು ಬೆಂಗಳೂರಿಗೆ ಬಾ ಎಂದು ಕರೆದಾಗ ನಾನು ನಿಜವಾಗಿ ಹೆದರಿದೆ ತಪ್ಪಿಸಿಕೊಳ್ಳೋಣ ಎಂದೂ ಯೋಚಿಸಿದೆ ನಿಮ್ಮ ಜನ ನನ್ನನ್ನು ಉಪೇಕ್ಷಿಸಬಹುದೆಂದು ಭಾವಿಸಿದ್ದೆ ಆದರೆಲ್ಲವೂ ತಿರುಗಮುರುಗಾಯಿತು. ನನ್ನ ಲೆಕ್ಕಚಾರವೇ ತಪ್ಪಾಯಿತು. ”

“ ಜಗತ್ತಿನಲ್ಲಿ ಸುಖವೆಂಬುದಿಲ್ಲ ಎನ್ನುವ ಮಾತು ಸುಳ್ಳು ಇಂದೂ–ನಾನು ಪರಮಸುಖಿ. ”

“ ನಿಮ್ಮ ಸುಖ ಶಾಶ್ವತವಾಗಿರಲಿ. ”

“ ಅದಕ್ಕೆ ಶಾಶ್ವತ ಸ್ವರೂಪ ಕೊಡುವುದು ನಿನ್ನ ಕೈಯಲ್ಲಿದೆ. ”

“ ನಿಮ್ಮನ್ನು ನಿರಾಶೆಗೊಳಿಸುವುದಿಲ್ಲ ಡಿಯರ್ ”

“ ಥ್ಯಾಂಕ್ ಯು ಮೈ ಡಿಯರ್(Thank you my dear ! )”

“ ಏಳಿ – ಸ್ನಾನ ಮುಗಿಸಿ, ಕಮಲಾಬಹೆನ್ ಕೋಪಿಸಿಕೊಂಡಾರು ? ”

“ ಇಗೋ ಎದ್ದೆ. ”

" ನಾನು ಯಾರು ಯಾರನ್ನು ಹೇಗೆ ಕರೆಯುಬೇಕು. "

" ಕಮಲನನ್ನು ಕಮಲಕ್ಕ ಎನ್ನು, ಪದ್ಮನನ್ನು ಪದ್ದು ಎನ್ನು, ಅಜ್ಜಿಯನ್ನು ಗೋದಜ್ಜಿ ಎನ್ನು "

" ಮಾವನವರನ್ನು.. . .. "

" ಮಾವನವರನ್ನು ಹೆಸರು ಹಿಡಿದು ಕರಯುುವ ಪದ್ಧತಿ ನಮ್ಮಲ್ಲಿಲ್ಲ: ನನ್ನನ್ನು ಏನೆಂದು ಕೂಗುವೆ ? "

" ವಿಕೆಡ್ ಡಿಯರ್ (wicked dear) ಎಂದು. "

" ನಾನು ವಿಕೆಡ್ಡೇ ? (wicked) "

" ಅಲ್ಲವೇ ? "

" ಏಕೆ ? "

" ನಿಜ ಹೇಳಲೇ ? "

" ಹೇಳು. "

" ನನ್ನನ್ನು ಪ್ರೀತಿಸುವುದರಿಂದ "

" ಅದು ಹೇಗೆ ಗೊತ್ತು ? "

" ಭಗವದನುಗ್ರಹದಿಂದ. "

" ಇದಕ್ಕೂ ಭಗವಂತನಿಗೂ ಏನು ಸಂಬಂಧ. "

" ಗಂಡಸರಿಗೆ ಕೊಡದ ಒಂದು ವಿಶಿಷ್ಟಗುಣವನ್ನು ಅವನು ನಮಗೆ ಕೊಟ್ಟಿದ್ದಾನೆ. "

" ಏನದು ? "

" ಸಹಜಗುಣವನ್ನರ್ಥಮಾಡಿಕೊಳ್ಳುವ ಶಕ್ತಿ... ಅಜ್ಜಿ ನನ್ನ ಬಗೆ ಪ್ರೀತಿ ವ್ಯಕ್ತಪಡಿಸಿದಾಗ ನಿಮ್ಮ ಕಣ್ಣುಗಳು ಹೇಗೆ ಮಿನುಗಿದವು. ನಾನು ಸದಾ ಸುಖಿಯಾಗಿರಲೆಂದು ನೀವೆಷ್ಟು ಬಯಸುವಿರಿ ? "

" ಆ ಭಾವನೆ ಗಂಡಹೆಂಡಿರಲ್ಲಿ ಸಹಜವಾಗಿರಬೇಕು. "

" ಇರಬೇಕು–ಆದರೆ ಇರುವುದಿಲ್ಲ. "

" ನಾನು ಸದಾಸುಖಿಯಾಗಿರಬೇಕೆಂದು ನೀನು ಬಯಸುವುದಿಲ್ಲವೇ ಇಂದು. "

" ಬಯಸುತ್ತೀನೆ ಡಿಯರ್ - ಮನಃಪೂರ್ವಕವಾಗಿ ಬಯಸುತ್ತೀನೆ ನಾನೊಬ್ಬ ಮಹಾ ವ್ಯಕ್ತಿಯನ್ನು ಮದುವೆಯಾಗಿದ್ದೆನೆಂಬ ಭಾವನೆ ನನ್ನಲ್ಲಿ ತುಂಬಿ ತುಳುಕುತ್ತಿದೆ "

" ಮಹಾವ್ಯಕ್ತಿಯನ್ನಲ್ಲಾ ಇಂದೂ—ಮಹಾ ತಾಯಿಯ ಅಲ್ಪ ಪುತ್ರನನ್ನು ಎಂದು ಹೇಳು ನಾನು ಮಾಡುವ ತಪ್ಪುಗಳಿಗೆಲ್ಲಾ ನಾನೇ ಹೊಣೆ-ಅವು ನನ್ನ ಪ್ರಾರಬ್ಧ ಕರ್ಮದ ಅವಶೇಷಗಳು. ನಾನು ಮಾಡುವ ಒಳ್ಳೆಯ ಕೆಲಸ, ಆಡುವ ಒಳ್ಳೆಯ ಮಾತು ಆ ತಾಯಿಯದು-ಅವುಗಳನ್ನು ಆಡುವವಳು, ಮಾಡುವವಳು ಅವಳೇ ಅಲ್ಲದೆ ನಾನಲ್ಲ. 'ಭಾರತೀಯ ತಾಯಿ' ಒಬ್ಬ ಕ್ಷುಲ್ಲಮಾನವನ ಕೃತಿಯಲ್ಲ-ಅದು ನೀನು ಬಲ್ಲಂತೆ ದೈವಾಯತ್ತವಾದುದು ಬರೆಯುವುದಕ್ಕೆ ಲೇಖನಿ ಹೇಗೆ ಬೇಕೊ ಹಾಗೇ ಕೈಯೂ ಬೇಕು ಲೇಖನಿ, ಕೈಗಳು ಮಹಾಕಾವ್ಯ ರಚಿಸಬಲ್ಲವೇ ? "

ಇಂದುಮತಿ ಭಾವನಾವೇಶಗೊಂಡವಳಾಗಿ,

" ಯಾವಾಗಲೂ ಹೀಗೆ ಇರಿ ಡಿಯರ್. ಖ್ಯಾತಿಯಾಗಲಿ ಧನವಾಗಲಿ ನಿಮ್ಮ ಋಜುಮನಸ್ಸನ್ನು ಮಲಿನ ಮಾಡದಿರಲಿ " ಎಂದಳು.

ಇಂದುಮತಿ, ನಾರಾಯಣಸ್ವಾಮಿ ಇಬ್ಬರಿಗೂ ಸ್ವಲ್ಪವೂ ಬಿಡುವಿಲ್ಲದಂತಾಯಿತು ಅವರು ಊರಿಗೆ ಬಂದಿರುವ ಸುದ್ದಿ ಕೇಳಿ ಜವರೇಗೌಡರು, ಷರೀಫ್‌ಸಾಹೇಬರು, ಮಾದ, ಲಕ್ಕಿ ಧಾವಿಸಿ ಬಂದರು.

ಮನೆತುಂಬಿದ ರುಕ್ಮಿಣಿಯ ಬಳಗ ಕಂಡು ಗೋದಮ್ಮನವರು

" ಎಲ್ಲಾ ಇದೆ - ಎಲ್ಲರೂ ಇದ್ದಾರೆ - ಅವಳೊಬ್ಬಳು ಇಲ್ಲ. "

ಎಂದು ಒಂದೇ ಸಮನಾಗಿ ಮರುಗಿದರು.

ನಾರಾಯಣಸ್ವಾಮಿ ಪಟ್ಟಣಕ್ಕೆ ಬರಲೇಬೇಕೆಂದು ಗೌಡರು ಒತ್ತಾಯಪಡಿಸಿದರು. ತನ್ನ ಕೆಲಸಕಾರ್ಯ ವಿವರಿಸಿ ಹೇಳಿ ಉತ್ತರ ಭಾರತ ಯಾತ್ರೆ ಮುಗಿದ ಮೇಲೆ ಖಂಡಿತ ಬರುವುದಾಗಿ ನಾರಾಯಣಸ್ವಾಮಿ ಆಶ್ವಾಸನವಿತ್ತ.

ಐದು ದಿನಗಳು ಕಳೆದು ಹೋದುದು ಯಾರ ಗಮನಕ್ಕೂ ಬರಲಿಲ್ಲ. ಪ್ರೊ. ಡ್ರೂ ಅವರಿಂದ ಬಂದ ಕಾಗದ ನಾರಾಯಣಸ್ವಾಮಿ

ಯನ್ನು ಎಚ್ಚರಗೊಳಿಸಿತು.

ಅವನು ಹೊರಡುವ ಸುದ್ದಿ ಕೇಳಿ ಮನೆಯವರೆಲ್ಲಾ ಅಸಮಾಧಾನ ವ್ಯಕ್ತಮಾಡಿದರು

" ಅತ್ತಿಗೆಯನ್ನಾದರೂ ಇಲ್ಲಿ ಬಿಟ್ಟು ಹೋಗಣ್ಣಾ "

ಎಂದು ಪದ್ಮ ಅಂಗಲಾಚಿದಳು.

ದಂಪತಿಗಳನ್ನು ಅಗಲಿಸಬಾರದೆಂದು ಕಮಲ ಹೇಳಿ ಪದ್ಮನ ಬಾಯಿ ಮುಚ್ಚಿಸಿದಳು

" ಕಮಲಕ್ಕ ನಮ್ಮ ಜತೆ ಏಕೆ ಬರಬಾರದು "

ಎಂದು ಇಂದುಮತಿ ಕೇಳಿದಳು.

" ಬರಬಹುದು – ಅವಳಿಗೀಗ ಕೆಲಸದ ಗಲಾಟೆಯೂ ಇಲ್ಲ. "

" ಅಜ್ಜಿಯನ್ನೂ ಅಣ್ಣನನ್ನೂ ಬಿಟ್ಟು ಹೇಗೆ ಬರಲಿ ? "

" ನಾಲ್ಕು ದಿವಸಕ್ಕೆ ಬನ್ನಿ – ಇಲ್ಲಿಗೆ ಹಿಂದಿರುಗಬೇಕೆನಿಸಿದರೆ ಸರ್ವೋತ್ತಮರಾಯರ ಜತೆ ಬರಬಹುದಲ್ಲ ! "

" ಅಜ್ಜಿ ಒಪ್ಪಿದರೆ ನಾನು ಬರಲು ಸಿದ್ಧ. "

" ಅವರಿಗೆ ನಾನು ಹೇಳಲೋ – ನೀವೇ ಹೇಳುವಿರೋ ? "

" ನೀವೇ ಹೇಳಿ. "

ಕಮಲನನ್ನೇ ದುಭಾಷಿ ಮಾಡಿಕೊಂಡು ಇಂದುಮತಿಯೇ ಗೋದಜ್ಜಿಯನ್ನು ಪ್ರಾರ್ಥಿಸಿದಳು.

" ಹೋಗಿ ಬಾ ಕಮಲಾ – ನಿಮ್ಮ ಅತ್ತಿಗೆ ಪ್ರೀತಿಯಿಂದ ಕರೆಯುವುದು ಹೆಚ್ಚೋ ನೀನು ಹೋಗುವುದು ಹೆಚ್ಚೋ. "

" ನೀನೊಬ್ಬಳೇ........ "

" ನನ್ನ ಚಿಂತೆ ಬಿಡು. "

" ಗೋಪಾಲಿ, ಸೌಭಾಗ್ಯ. "

" ಮನೆತುಂಬ ಇಷ್ಟು ಜನರಿದ್ದುಕೊಂಡು ನಾಲ್ಕುದಿನ ನಿನ್ನ ಮಕ್ಕಳನ್ನೂ ನೋಡಿಕೊಳ್ಳುವುದಿಲ್ಲವೇ ? "

ಗೋದಜ್ಜಿ ಸಮ್ಮತಿಸಿದುದನ್ನು ಕಂಡು ಇಂದುಮತಿಗೆ ಮತ್ತಷ್ಟು ಆನಂದವಾಯಿತು.

ನಾರಾಯಣಸ್ವಾಮಿ, ಇಂದುಮತಿ, ಕಮಲಾ ಪ್ರಯಾಣ ಮಾಡುವ ಹಿಂದಿನ ರಾತ್ರಿ ಕೇಶವಮೂರ್ತಿ ಎಲ್ಲರನ್ನೂ ತನ್ನ ಮನೆಗೆ ಕರೆದು ಸೊಗಸಾದ ಔತಣಮಾಡಿಸಿದ

ಮಾರನೆಯ ಬೆಳಿಗ್ಗೆ ಪ್ಲೇನಿನಲ್ಲಿ ನಾರಾಯಣಸ್ವಾಮಿ, ಇಂದುಮತಿ, ಕಮಲಾ ಮುಂಬಯಿಗೆ ಪ್ರಯಾಣ ಬೆಳಸಿದರು.

# ೩೩

ಮುಂಬಯಿ ತಲುಪಿದ ಎರಡು ದಿನಗಳ ತರುವಾಯ ನಾರಾಯಣ ಸ್ವಾಮಿ, ಪ್ರೊ ಡ್ರೂ ಅವರೊಂದಿಗೆ ಉತ್ತರಭಾರತ ಪ್ರವಾಸಕ್ಕೆ ಹೊರಟ ಕಮಲ ಇಂದುಮತಿಯ ಮನೆಯಲ್ಲಿ ಇದ್ದಳು.

ಇಂದುಮತಿ, ಕಮಲನಲ್ಲಿ ಅನ್ಯೋನ್ಯತೆ ಬೆಳೆಯಲು ತಡವಾಗಲಿಲ್ಲ. ಕಮಲಸಿಂದ ಇಂದುಮತಿ ತನ್ನ ಪತಿಯ ಶೈಶವ್ಯ, ಬಾಲ್ಯ ಜೀವನದ ಸಮಸ್ತ ಸಂಗತಿಗಳನ್ನೂ ಅವರ ಮನೆತನದ ಸಂಪೂರ್ಣ ಇತಿಹಾಸವನ್ನೂ ಸಂಗ್ರಹಿಸಿಕೊಂಡಳು.

ಕಮಲನ ಕರುಣಾರ್ದ್ರ ಜೀವನ ಕೇಳಿ ಇಂದುಮತಿ ಸುಮ್ಮಲ ಮರಗಿದಳು.

“ ಕೆಲಸ ಹೋದುದಕ್ಕೆ ದುಃಖವಾಗುತ್ತದೆಯೇ ಕಮಲಕ್ಕ ? ”

“ ಹೌದು – ಕೆಲಸದ ಗಲಾಟೆಯಲ್ಲಿ ದುಃಖ ಮರೆಯುತ್ತಿದ್ದೆ. ಅದಕ್ಕೂ ವಿಧಿ ಅಡ್ಡಬಂದಿತು. ಕೆಲಸ ಉಳಿಸಿಕೊಳ್ಳುವುದಕ್ಕೆ ಶೀಲವನ್ನು ಬಲಿದಾನವಾಗಿ ಒಪ್ಪಿಸಲು ನಾನು ಸಿದ್ಧಳಾಗಿರಲಿಲ್ಲ. ”

“ ಏನಾಯಿತು ? ”

ಮರಕತಂ ಮನೆಯಲ್ಲಿ ನಡೆದ ಪ್ರಸಂಗವನ್ನೂ ಕೂಲಂಕಷವಾಗಿ ಕಮಲ ವಿವರಿಸಿ

“ ಆ ಸ್ಥಿತಿಯಲ್ಲಿ ನಾನು ಏನು ಮಾಡಬೇಕಾಗಿತ್ತು ಹೇಳಿ. ”

“ ಯಾವುದು ಯೋಗ್ಯವೋ ಅದನ್ನೇ ಮಾಡಿದಿರಿ. ನಿಮ್ಮ ಮನೆ – ಅಲ್ಲ ನಮ್ಮ ಮನೆ – ವಿಷಯ ಹೆಚ್ಚು ತಿಳಿಯುತ್ತ ತಿಳಿಯುತ್ತ ನನ್ನ ಅಭಿಮಾನ, ಗೌರವ, ವಿಶ್ವಾಸ ಹೆಚ್ಚುತ್ತಿದೆ ಕಮಲಕ್ಕ. ”

"ಅತ್ತಿಗೆ, ದೇವರು ನಮಗೆ ತುಂಬ ಕಷ್ಟ ಕೊಟ್ಟಿದ್ದಾನೆ. ಬಡತನ, ರೋಗ, ಜನಾಪವಾದ ಎಲ್ಲವನ್ನೂ ಅನುಭವಿಸಿದ್ದೇವೆ. ಆದರವನು ನಮಗೆ ಮಹಾಭಾಗ್ಯವನ್ನೂ ಇತ್ತ – ಎಲ್ಲ ಕಷ್ಟನಷ್ಟಗಳನ್ನೂ ಅನುಭವಿಸಿದರೂ ಋಜುಮಾರ್ಗದಲ್ಲಿ ಬಾಳುವ ರೀತಿಯನ್ನೂ ತೋರಿಸಿ ಕೊಟ್ಟ. ಯಾವ ದುಃಖ, ಕಷ್ಟ ಬಂದರೂ ನಾವು ಅಮ್ಮನನ್ನು ಸ್ಮರಿಸಿಕೊಳ್ಳುತ್ತೇವೆ. ಕ್ಷಣಾರ್ಧದಲ್ಲಿ ಅವು ಮಾಯವಾಗುತ್ತವೆ."

"ಆ ಭಾಗ್ಯದಲ್ಲಿ ನನಗೂ ಪಾಲಿದೆಯೆಂದು ನಿಮ್ಮ ತಮ್ಮ ಹೇಳಿದರು."

"ನಿಮ್ಮದು ದೊಡ್ಡ ಪಾಲು ಅತ್ತಿಗೆ. ನಾಣಿ ಮನೆಯ ಗಂಡು ಮಗನಲ್ಲವೇ ?"

"ಪವಾಡಗಳಕಾಲ ಮುಗಿಯಿತೆಂದಿದ್ದೆ ಕಮಲಕ್ಕ – ನನ್ನ ತಿಳುವಳಿಕೆ ತಪ್ಪಾಯಿತು."

"ಅಮ್ಮ ನಿತ್ಯ ಪವಾಡಮಾಡುತ್ತಿದ್ದುದನ್ನು ನಾನೇ ಕಣ್ಣಾರೆ ಕಾಣುತ್ತಿದ್ದೆ, ಅತ್ತಿಗೆ ಮೊದಲು ಅಣ್ಣ ರಾಜಕೀಯದಲ್ಲಿ ಓಡಿಯಾಡುತ್ತಿದ್ದರು– ಅವರನ್ನು ಎಲೆಕ್ಷನ್ ಹುಚ್ಚು ಕೆಲವು ಕಾಲ ಕಾಡಿತು. ಆ ಸಂದರ್ಭದಲ್ಲಿ ಹಲವರು ಅವರ ಶತ್ರುಗಳಾದರು. ಆ ಶತ್ರುಗಳ ಬಗ್ಗೆಯೂ ಅಮ್ಮ ತೋರುತ್ತಿದ್ದ ಸೌಜನ್ಯ ಸ್ಮರಿಸಿಕೊಂಡರೆ ನನಗೇ ಆಶ್ಚರ್ಯವಾಗುತ್ತದೆ. ಅಣ್ಣನಮೇಲೆ ಕ್ಷಾತ್ರ ಸಾಧಿಸುತ್ತಿದ್ದವರು ಎಷ್ಟೋ ಬಾರಿ ಬಂದು ಅಮ್ಮನ ಆಶೀರ್ವಾದ ಪಡೆದು ಹೋಗುತ್ತಿದ್ದರು. ಮಂಡ್ಯದಲ್ಲಿ ಇನ್‌ಫ್ಲುಯಂಜಾ ಬೇನೆ ಹಬ್ಬಿದಾಗ ಅವಳು ಮಾಡಿದ ಸೇವೆ ಪವಾಡವಲ್ಲದೆ ಮತ್ತೇನು ? ಪ್ರಸಿದ್ಧ ಡಾಕ್ಟರುಗಳ ಔಷಧಿಗೆ ಮಣಿಯದಿದ್ದ ಬೇನೆ ಅಮ್ಮನ ಕಷಾಯಕ್ಕೆ ಬೆದರಬೇಕೆ ? ಮಹಾತಾಯಿ ಹೇಗಿದ್ದಳೋ ಹಾಗೇ ಕಣ್ಮುಚ್ಚಿದಳು. ಸಾವಿಗೆ ಅಂಜಲಿಲ್ಲ, ಅಳುಕಲಿಲ್ಲ. ಅಂದು ಹರಿದ್ರಾಕುಂಕುಮ, ಪುಷ್ಪಾಲಂಕೃತಳಾಗಿ ಮಲಗಿದ್ದ ತಾಯಿ ದೇವಿಯ ಚಿತ್ರ ಇನ್ನೂ ನನ್ನ ಕಣ್ಣಲ್ಲಿ ಕಟ್ಟಿದಂತಿದೆ. ಆ ನಿಶ್ಚಲ ಶಾಂತಿಯನ್ನು ನಾನು ಯಾವ ದೇವರ ವಿಗ್ರಹದ ಮುಖದಮೇಲೂ ಕಂಡಿಲ್ಲ ಅತ್ತಿಗೆ ಇಂಥ ತಾಯಿಯನ್ನು ಕಳೆದುಕೊಂಡು ಇನ್ನೂ ನಾವು

ಎಂದು ಒಮ್ಮೊಮ್ಮೆ ಅನ್ನಿಸುತ್ತದೆ. ಅಂದೇ ಅಮ್ಮ ಕನಸಿನಲ್ಲಿ ಬಂದು 'ಬದುಕಬೇಕು ಕಮಲಾ – ಸಾವು ಬಂದಾಗ ಅದನ್ನು ಸ್ವಾಗತಿಸಬೇಕಲ್ಲದೆ. ನಾವೇ ಅದನ್ನು ಹುಡುಕಿಕೊಂಡು ಹೋಗಬಾರದು. ನೀವು ನನ್ನ ಹೆಸರು ಹೇಳುವಂತೆ ನಿಮ್ಮ ಮಕ್ಕಳು ನಿಮ್ಮ ಹೆಸರು ಹೇಳಬೇಕು – ಅವರ ಮಕ್ಕಳು ಅವರ ಹೆಸರು ಹೇಳ ಬೇಕು ನನ್ನ ದಿವ್ಯ ಸಂತಾನ ಅನಂತವಾಗಿ ಸಾಗಬೇಕು!' ಎಂದು ಬುದ್ಧಿ ಹೇಳುತ್ತಾಳೆ"

ಇಂದುಮತಿ ತದೇಕ ಚಿತ್ತಳಾಗಿ ಕುಳಿತು ರುಕ್ಮಿಣಿಯ ದಿವ್ಯ ಚರಿತ್ರೆ ಕೇಳುತ್ತಿದ್ದಳು. ಆಲಸ್ಯ, ಬೇಸರವಿಲ್ಲದ ಅವಳ ಆಸಕ್ತಿ ಕಂಡು ಕಮಲ ಮತ್ತಷ್ಟು ಸ್ಫೂರ್ತಿಗೊಳ್ಳುತ್ತಿದ್ದಳು.

ನಾರಾಯಣಸ್ವಾಮಿ ಎರಡು ಮೂರು ದಿನಕ್ಕೊಮ್ಮೆ ತಪ್ಪದೆ ಪತ್ರ ಬರೆದು ತಮ್ಮ ಕೆಲಸ ಮುಂದುವರಿಯುತ್ತಿದ್ದ ಬಗೆಯನ್ನು ವಿವರಿಸುತ್ತಿದ್ದ

ಇಂದುಮತಿ, ಕಮಲಾ ಅವನ ಪತ್ರಗಳನ್ನು ಮೂರುಮೂರು ಸಲ ಓದಿ ಹಿಗ್ಗುತ್ತಿದ್ದರು

ಕಾಶ್ಮೀರ, ಮಧ್ಯಭಾರತ, ಬಂಗಾಳ ಪ್ರವಾಸ ಮುಗಿಸುವ ವೇಳೆಗೆ ಏಪ್ರಿಲ್ ತಿಂಗಳು ಬಂದಿತು. ಊರಿಗೆ ಹೋಗಲು ಕಮಲ ಧಾವತಿಪಟ್ಟಳು.

"ಅವರೂ ಬಂದುಬಿಡಲಿ ಎಲ್ಲರೂ ಒಟ್ಟಿಗೆ ಹೋಗೋಣ"

ಎಂದು ಇಂದುಮತಿ ಹೇಳಿದಳು.

"ಇಲ್ಲ ಅತ್ತಿಗೆ. ಹೆಚ್ಚು ದಿನ ನಾನು ಅಜ್ಜಿಯನ್ನೂ ಅಣ್ಣನನ್ನೂ ಬಿಟ್ಟಿರುವುದು ನ್ಯಾಯವಲ್ಲ ಊರಿಗೆ ಹೋಗಲು ಅಪ್ಪಣೆ ಕೊಡಿ. ನಾಣಿ ಊರಿಗೆ ಬಂದಕೂಡಲೆ ನೀವು ಬಂದುಬಿಡಿ" ಎಂದಳು.

ಇಂದುಮತಿ ಅರೆಮನಸ್ಸಿನಿಂದ ಒಪ್ಪಿ ಸರ್ವೋತ್ತಮರಾಯನ ಜತೆಯಲ್ಲಿ ಕಮಲನನ್ನು ಬೆಂಗಳೂರಿಗೆ ಕಳಿಸಿಕೊಟ್ಟಳು

ಊರಿಗೆ ಹಿಂದಿರುಗಿದ ಕಮಲಾ ಇಂದುಮತಿಯ ಆತಿಥ್ಯ, ಹಾರ್ದಿಕತೆ, ಸುಸಂಸ್ಕೃತಿಯನ್ನು ಹಾಡಿ ಹೊಗಳಿ

" ನಾಣಿ ನಿಜವಾಗಿಯೂ ಪುಣ್ಯವಂತ " ಎಂದಳು

ಅವಳ ಮಾತು ಕೇಳಿ ಹಿಗ್ಗಿದ ಗೋದಜ್ಜಿ

" ನನ್ನ ಮಾತೂಂದರೆ ನಿಮಗೆ ಪಥ್ಯವಿಲ್ಲಮ್ಮ – ಹಳೇ ಕಾಲದ ಗೂಡ್ಡು ಎಂದು ಹಾಸ್ಯಮಾಡುತ್ತೀರಿ ಈಗ ನಿಮಗೇ ತಿಳಿಯುತ್ತಿದೆ."

" ನಿನ್ನ ಯಾರು ಹಾಸ್ಯಮಾಡಲು ಸಾಧ್ಯ ಗೋದಜ್ಜಿ "

" ಇಲ್ಲಾ ಕಣೇ ಕಮಲಾ – ತಮಾಷೀಗಂದೆ – ನನ್ನ ಮಕ್ಕಳು, ಮೊಮ್ಮಕ್ಕಳು ಎಲ್ಲರೂ ಚಿನ್ನದಂಥವರಮ್ಮ "

" ನಿನ್ನ ಹತ್ತಿರ ಸರ್ಟಿಫಿಕೇಟ್ (Certificate) ತೆಗೆದುಕೊಳ್ಳುವುದು ಬಲು ಸುಲಭ ಗೋದಜ್ಜಿ. "

" ಯಾಕೇ ಹಾಗಂತೀಯ ? "

" ಎರಡು ತೊಟ್ಟುಕಣ್ಣೀರು ಹಾಕಿದರೆ ಸಾಕು – ನೀನು ಕರಗಿ ನೀರಾಗಿಬಿಡುತ್ತೀ ! "

" ನಿಜಕಣೇ ಕಮಲಾ – ಯಾರ ದುಃಖ ನೋಡಿಯೂ ನಾನು ಸಹಿಸಲಾರೆಕಣೇ – ಜಗತ್ತಿನಲ್ಲಿ ದುಃಖವೇ ಇಲ್ಲದಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು "

" ದುಃಖವಿಲ್ಲದಿದ್ದರೆ ಸಂತೋಷಕ್ಕೆ ಬೆಲೆ ಎಲ್ಲಿ ಬರುತ್ತಿತ್ತು ಅಜ್ಜಿ. "

" ಅದೂ ನಿಜ. ದುಃಖವಿರುವುದಕ್ಕೆ ಇನ್ನೂ ಒಂದು ಕಾರಣವಿದೆ ಕಮಲಾ. ದುಃಖದಲ್ಲಿ ಬೆಂದಹೊರತು ಜೀವ ಹಣ್ಣಾಗುವುದಿಲ್ಲ. ಮನುಷ್ಯನಿಗೆ ತಾರತಮ್ಯಜ್ಞಾನ, ಋಜುತ್ವದ ಕಲ್ಪನೆ, ಸತ್ಯಸ್ವರೂಪ ಅರ್ಥವಾಗಬೇಕಾದರೆ ದುಃಖಾನುಭವವಾಗಲೇಬೇಕು. "

" ನಮ್ಮ ಆಸೆಗಳು ಅಲ್ಪವಾದುದರಿಂದ ನಮ್ಮ ಸುಖದುಃಖವೂ ಅಲ್ಪವಾಗುತ್ತದೆ. "

" ಅದಕ್ಕೇ ಹಿರಿಯರು ಮಹತ್ತಿಗೆ ಮಹತ್ತಾದ ಪರಮಾತ್ಮನ ಸಾಕ್ಷಾತ್ಕಾರವೇ ಮನುಷ್ಯನ ಗುರಿಯಾಗಿರಬೇಕೆಂದು ಸಾರಿದುದು. "

" ನಮಗೆ ವಿವೇಕ ಹೇಳಿ ಮುಂದಕ್ಕೆ ತಂದಂತೆ ಗೋಪಾಲಿ, ಸೌಭಾಗ್ಯರನ್ನು ಕಾಪಾಡುವುದು ನಿನ್ನ ಭಾರ ಗೋದಜ್ಜಿ. "

" ಸಧ್ಯ ಬೇಡಮ್ಮಾ ಬೇಡ ಆ ಜವಾಬ್ದಾರಿ. ನಾಣಿಯನ್ನು ಮುದ್ದು ಮಾಡಿ ಕೆಡಿಸುತ್ತೀ ಎಂತಾ ನಿಮ್ಮಮ್ಮ ಬಯ್ಯುತ್ತಿದ್ದಳು ; ಗೋಪಾಲಿಯನ್ನು ಕೆಡಿಸಿದೆ ಎಂತಾ ನೀನು ಬಯ್ಯೋದಿಕ್ಕೆ ಆರಂಭಿಸುತ್ತೀ "

" ಎಲ್ಲಾರ ಕೈಯಲ್ಲೂ ನೀನು ಬಹಳ ಬಯ್ಯಿಸಿಕೊಂಡಿರುವೆ ಅಲ್ಲವೇ ಅಜ್ಜಿ. "

ಗೋದಮ್ಮನವರು ನಕ್ಕು

" ಇಲ್ಲಾ ಕಮಲಾ, ಯಾರೂ ನನ್ನ ಬಯ್ಯಲ್ಲಪ್ಪಾ. – ನಾಣಿ ಈಗೆಲ್ಲಿದ್ದಾನೆ "

" ಆಸಾಮ್ ಪ್ರಾಂತಕ್ಕೆ ಹೋಗಿದ್ದಾನಂತೆ. ಇನ್ನು ಒಂದು ತಿಂಗಳಲ್ಲಿ ಮುಂಬಯಿಗೆ ಬರುತ್ತೇನೆಂದು ಬರೆದಿದ್ದಾನೆ. "

" ಈ ಸಾರಿ ಇಲ್ಲಿಗೆ ಬಂದಮೇಲೆ ಅವನು ಪುನಃ ವಿಲಾಯಿತಿಗೆ ಹೋಗುತ್ತಾನೆಯೇ ? "

" ಗೊತ್ತಿಲ್ಲ ಅವನ ಪ್ರೊಫೆಸರು ಬಾರೆಂದು ಕರೆದರೆ ಹೋಗ ಬೇಕಾಗುತ್ತದೆ, ಏಕಜ್ಜೀ "

" ಸುಮ್ಮನೆ ಕೇಳಿದೆ ಕಮಲಾ. ನನ್ನ ಕಾಲ ಸಮೀಪಿಸುತ್ತಾ ಬಂತು – ಈ ಮನೆ ಯಜಮಾನಿಕೆ ನಾಣಿ ವಹಿಸಿಕೊಂಡದ್ದು ನೋಡಿ ತೃಪ್ತಿಯಿಂದ ಪರಮಾತ್ಮನ ಸಾನಿಧ್ಯ ಸೇರಬೇಕೆಂದಿದ್ದೇನೆ. "

" ಇಂಥ ಮಾತಾಡಬೇಡ ಗೋದಜ್ಜಿ "

" ಹುಚ್ಚಿಯಂತಾಡಬೇಡ ಕಮಲಾ – ನಾನೇನು ಭೀಷ್ಮ, ಮಾರ್ಕಂಡೇಯ, ಆಂಜನೇಯರಂತೆ ಚಿರಂಜೀವಿಯೇ ? ಇದ್ದ ದ್ದಾಯಿತು – ಬಾಳಿದ್ದಾಯಿತು. ಯಮನ ಕೈಯಲ್ಲಿ ಬಯ್ಯಿಸಿಕೊಂಡು ಅವನ ಮನೆ ಸೇರುವುದರ ಬದಲು ನಾನೇ ನಗುನಗುತ್ತಾ ಹೋಗು ವುದು ಲೇಸಲ್ಲವೇ ? "

ಗೋದಜ್ಜಿಯ ಭವಿಷ್ಯವಾಣಿ ನಿಜವಾಗುವುದರಲ್ಲಿ ಸಂದೇಹವಿಲ್ಲ ವೆಂದು ತಿಳಿದಿದ್ದ ಕಮಲನ ಹೃದಯಕ್ಕೆ ಕಿಚ್ಚಿಕ್ಕಿದಂತಾಯಿತು.

ಪ್ರೊ. ಡ್ರೂ, ನಾರಾಯಣಸ್ವಾಮಿ ಪ್ರವಾಸ ಮುಗಿಸಿಕೊಂಡು ಮುಂಬಯಿ ತಲುಪಿದರು. ಆದಿವಾಸಿಗಳ ಬಗ್ಗೆ ಅವರು ಸಂಗ್ರಹಿಸಿದ್ದ ಸಾಹಿತ್ಯವನ್ನು ಕ್ರೋಢೀಕರಿಸುವುದಕ್ಕೇ ಒಂದೆರಡು ತಿಂಗಳು ಬೇಕಾಗಿದ್ದವು

ನಾರಾಯಣಸ್ವಾಮಿ ಪಾಂಡುವಿಗೆ ಮಾಡಿದ ವಾಗ್ದಾನ ಪೂರ್ಣವಾಗದೆ ಉಳಿದಿತ್ತು

“ ಈಗ ನೀವು ಮುಂಬಯಿಯ ವಿದ್ವನ್ಮಂಡಳಿಗೆ, ಪತ್ರಿಕಾ ವೃಂದಕ್ಕೆ ನಮ್ಮ ಪರಿಚಯಮಾಡಿಕೊಟ್ಟರೆ ನಾವು ಮುಂಬಯಿಯಲ್ಲಿ ಉಳಿಯುವುದೇ ದುಸ್ತರವಾಗುತ್ತದೆ ಮಿ ಪಾಂಡೂ ಕೈತುಂಬ ಕೆಲಸ ಇಟ್ಟುಕೊಂಡು ನಾವು ಮಾನಸನ್ಮಾನಗಳಲ್ಲಿ ಹೊತ್ತುಗಳೆಯುವುದು ಯಾವ ನ್ಯಾಯ. ವಿಷಯಸಂಗ್ರಹ ಮುಗಿದೊಡನೆಯೇ ಪ್ರೊಫೆಸರು ಊರಿಗೆ ಹಿಂದಿರುಗಬೇಕಾಗುತ್ತದೆ. ”

“ ಈಗಾಗಲೇ ನಾನು ಹಲವರಿಗೆ ನಿಮ್ಮ ವಿಷಯ ತಿಳಿಸಿದ್ದೇನೆ. ನೀವು ನಿರಾಕರಿಸಿದರೆ ನನಗೆ ತುಂಬ ತೊಂದರೆಯಾಗುತ್ತದೆ. ”

ನಾರಾಯಣಸ್ವಾಮಿ ನಿರ್ವಾಹವಿಲ್ಲದೆ ಒಪ್ಪಿಕೊಳ್ಳಬೇಕಾಯಿತು.

‘ ಗ್ರೀನ್ಸ್ ಹೊಟೇಲಿ ’ ನಲ್ಲಿ (Green's Hotel) ಪಾಂಡು ಸತ್ಕಾರಸಮಾರಂಭ ವ್ಯವಸ್ಥೆಮಾಡಿ ಮುಂಬಯಿಯ ಸಾಹಿತಿಗಳು, ಪ್ರಕಾಶಕರು, ಕಲಾವಿದರು, ಪ್ರೊಫೆಸರುಗಳು, ಪತ್ರಿಕಾ ಪ್ರತಿನಿಧಿಗಳು ಎಲ್ಲರಿಗೂ ಆಮಂತ್ರಣವಿತ್ತ.

ಸಮಾರಂಭದಲ್ಲಿ ಔಪಚಾರಿಕ ಭಾಷಣಮಾಡಿದ ಪ್ರೊ. ಡ್ರೂ,

ನಾರಾಯಣಸ್ವಾಮಿ ಅವರ ನಿಜಸತ್ವ ಪ್ರಕಾಶಕ್ಕೆ ಬರಲು ತಡವಾಗಲಿಲ್ಲ. ಪ್ರೊಫೆಸರೂ, ನಾರಾಯಣಸ್ವಾಮಿ ಎರಡು ದಿವಸ ಮುಂಬಯಿಯಲ್ಲಿ ನಿಂತು ಸರ್ ಕವಾಸ್ಜಿ ಜಹಾಂಗೀರ್ ಸಭಾಮಂದಿರದಲ್ಲಿ ಭಾಷಣ ಮಾಡುವುದು ಅನಿವಾರ್ಯವಾಯಿತು.

ಬೆಂಗಳೂರಿಗೆ ನಾರಾಯಣಸ್ವಾಮಿ, ಡ್ರೂ ಮತ್ತು ಇಂದುಮತಿ ಹೊರಡುವುದೆಂದು ನಿಶ್ಚಯವಾಯಿತು.

ಏರೋಡ್ರೋಮಿನಲ್ಲಿಳಿದು ಮನೆಗೆಬಂದ ಅತಿಥಿಗಳನ್ನು ಮಾಧವ ರಾಯ, ಕಮಲಾ ಸ್ವಾಗತಿಸಿದರು.

ಪ್ರೊಫೆಸರು ಇಳಿದುಕೊಳ್ಳುವ ವಿಷಯ ನಾರಾಯಣಸ್ವಾಮಿ, ಇಂದುಮತಿ ಚರ್ಚೆಮಾಡುತ್ತಿರುವಲ್ಲಿ ಅವರೇ

"ನಿಮ್ಮ ಅಭ್ಯಂತರವಿಲ್ಲದಿದ್ದರೆ ನಾನು ಇಲ್ಲಿಯೇ ಇರುತ್ತೇನೆ ಸ್ವಾಮಿ ಮನೆಯ ಪ್ರಶಾಂತ ವಾತಾವರಣ ನನ್ನ ಕೆಲಸಕ್ಕೆ ಅನುಕೂಲ ವಾಗಿದೆ." ಎಂದರು.

ತಮಗಾಗಿ ಯಾವ ವಿಶೇಷ ವ್ಯವಸ್ಥೆ ಮಾಡುವುದಕ್ಕೂ ಪ್ರೊಫೆಸರು ಒಪ್ಪಲಿಲ್ಲ.

"ನಿಮ್ಮ ಜತೆಯಲ್ಲಿದ್ದ ಮೇಲೆ ನಾನು ನಿಮ್ಮ ಹಾಗೇ ಇರಬೇಕು" ಎಂದರು.

ಮಧ್ಯಾಹ್ನ ಹಜಾರದಲ್ಲಿಯೇ ಎಲ್ಲರಿಗೂ ಎಲೆ ಹಾಕಲಾಗಿತ್ತು. ಪ್ರೊ. ಡ್ರೂ ಅವರಿಗೆ ಅಲ್ಲಿಯೇ ಮೇಜು, ಕುರ್ಚಿಹಾಕಿ, ಊಟದ ವ್ಯವಸ್ಥೆ ಮಾಡಲಾಗಿತ್ತು.

ಎಲ್ಲರೂ ಊಟಕ್ಕೆ ಬಂದು, ಎಲೆಗಳ ಮುಂದೆ ಕುಳಿತರು. ಸ್ವಾಮಿ ಮೇಜಿನ ಕಡೆ ಕೈತೋರಿಸಿ.

"ಇದು ತಮಗೆ"

ಎಂದು ಪ್ರೊಫೆಸರಿಗೆ ಹೇಳಿದ.

ಕುರ್ಚಿಯಮೇಲೆ ಕುಳಿತು ಊಟಮಾಡಲು ಪ್ರೊಫೆಸರು ಸುತರಾಂ ಒಪ್ಪಲಿಲ್ಲ. ಅವರಿಗೂ ನೆಲದಮೇಲೆ ಎಲೆ ಹಾಕಲಾಯಿತು.

ಪದ್ಮಾಸನ ಹಾಕಿ ಊಟಕ್ಕೆ ಕುಳಿತುಕೊಳ್ಳುವುದನ್ನು ಪ್ರೊಫೆಸರು

ಮೊದಲು ಪಾಠಮಾಡಿಕೊಂಡರು. ಅವರ ಪಕ್ಕದಲ್ಲಿಯೇ ಕುಳಿತ ಇಂದುಮತಿ, ಕೈಯಲ್ಲಿ ಊಟಮಾಡುವ ರೀತಿಯನ್ನು ಹೇಳಿಕೊಟ್ಟಳು.

ಗೋದಮ್ಮ ಎದುರಿಗೆ ಕುಳಿತು ಎಲ್ಲರನ್ನೂ ಉಪಚರಿಸಿದರು.

ಊಟಮುಗಿದ ಮೇಲೆ ಕಮಲಾ

" ನಿಮಗೆ ಅರೆಹೊಟ್ಟೆ ಊಟವಾಯಿತು ಪ್ರೊಫೆಸರ್ " ಎಂದಳು.

" ಹಾಗೇನಿಲ್ಲ – ಸೊಗಸಾಗಿ ಊಟವಾಯಿತು. "

" ನಿಮಗೆ ಕೈಯಲ್ಲಿ ಊಟಮಾಡುವ ಅಭ್ಯಾಸವಿಲ್ಲ "

" ಅಭ್ಯಾಸಮಾಡಿಕೊಳ್ಳುತ್ತೇನೆ. "

ಪ್ರೊಫೆಸರ ನಿತ್ಯಕಾರ್ಯಕ್ರಮ ಕಂಡು ಗೋದಮ್ಮನವರು ಆಶ್ಚರ್ಯ ಚಕಿತರಾದರು. ಬೆಳಿಗ್ಗೆ ಐದು ಘಂಟೆಗೇ ಏಳುತ್ತಿದ್ದ ಪ್ರೊಫೆಸರು ಸ್ನಾನ ಮುಗಿಸಿ ಕೆಲಸಕ್ಕೆ ಕೂಡುತ್ತಿದ್ದರು ಏಳು ಗಂಟೆಗೆ ಸರಿಯಾಗಿ ಕಮಲಾ ಒಂದು ಕಪ್ ಚಹಾ ಮಾಡಿ ತಂದುಕೊಡುತ್ತಿದ್ದಳು ಚಹಾ ಮುಗಿಸಿದ ಮೇಲೆ ಹತ್ತು ಗಂಟೆಯವರೆಗೆ ಪ್ರೊಫೆಸರು ಕೆಲಸ ಮುಂದುವರಿಸಿ ಎಲ್ಲ ರೊಂದಿಗೆ ಉಪಾಹಾರ ಸ್ವೀಕರಿಸಿ, ಸ್ವಲ್ಪ ಹೊರಗೆ ಹೋಗಿ ಬರುತ್ತಿದ್ದರು. ಹನ್ನೆರಡು ಗಂಟೆಗೆ ಸರಿಯಾಗಿ ಊಟವಾಗುತ್ತಿತ್ತು ಊಟ ಮುಗಿದ ಮೇಲೆ ಒಂದು ಗಂಟೆ ಕಾಲ ವಿಶ್ರಾಂತಿ ಪಡೆದು ಸಂಜೆ ಆರರವರೆಗೆ ಪ್ರೊಫೆಸರು ರೂಮುಸೇರಿ ತಮ್ಮ ಕೆಲಸ ಮುಂದುವರಿಸುತ್ತಿದ್ದರು. ಅದರ ತರುವಾಯ ಸ್ವಾಮಿ, ಇಂದುಮತಿ, ಕಮಲಾ, ಮಕ್ಕಳ ಜತೆ ಲಾಲ್ ಬಾಗಿಗೋ, ಕಬ್ಬನ್ ಪಾರ್ಕಿಗೋ ಹೋಗಿ ಬಂದು, ಎಂಟು ಗಂಟೆಯವರೆಗೆ ಎಲ್ಲರ ಜತೆ ಮಾತನಾಡುತ್ತಿದ್ದು ರಾತ್ರಿ ಊಟ ಮುಗಿ ಸುತ್ತಿದ್ದರು. ಒಂಬತ್ತರಿಂದ ಹನ್ನೆರಡರವರೆಗೆ ಪ್ರೊಫೆಸರ್, ಸ್ವಾಮಿ ಇಬ್ಬರೂ ಕುಳಿತು ಕೆಲಸ ಮುಂದುವರಿಸುತ್ತಿದ್ದರು

ಸ್ವಾಮಿ, ಕಮಲಾ ಇಬ್ಬರೂ ಪ್ರೊಫೆಸರನ್ನು ಕರೆದುಕೊಂಡು ಹೋಗಿ ಬೆಂಗಳೂರಿನ ಪ್ರೇಕ್ಷಣೀಯ ಸ್ಥಳಗಳಾದ ಗವಿಗಂಗಾಧರೇಶ್ವರ ದೇವಾಲಯ, ಬಸವಣ್ಣನಗುಡಿ, ಕೆಂಪೇಗೌಡನ ಗೋಪುರಗಳು, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್, ಕೆನಿಸಿಂಗ್‌ಟನ್ ಪಾರ್ಕ್ ಗಳನ್ನು ತೋರಿಸಿಕೊಂಡು ಬಂದರು.

ಪ್ರೊಫೆಸರಿಗೂ ಮಾಧವರಾಯರಿಗೂ ಗಾಢ ಸ್ನೇಹ ಬೆಳೆಯಿತು.

ನಾರಾಯಣಸ್ವಾಮಿಯ ಬಗ್ಗೆ ಪ್ರೊಫೆಸರು ವ್ಯಕ್ತ ಮಾಡಿದ ಉದಾತ್ತಭಾವನೆ ಕಂಡು ಮಾಧವರಾಯ ಹಿರಿಹಿರಿ ಹಿಗ್ಗಿದ.

ಗೋದಜ್ಜಿಯ ಬಗ್ಗೆ ಪ್ರೊಫೆಸರಿಗೆ ವಿಶೇಷ ಗೌರವ ಹುಟ್ಟಿತು. ಒಂದೊಂದು ದಿನ ಕಮಲನನ್ನು ದುಭಾಷಿ ಮಾಡಿಕೊಂಡು ಅವರು ಗೋದಜ್ಜಿಯ ಜತೆ ಮಾತನಾಡಲು ಕೂಡುತ್ತಿದ್ದರು. ಪ್ರೊಫೆಸರು ಕೇಳುತ್ತಿದ್ದ ತಾತ್ತ್ವಿಕ ಪ್ರಶ್ನೆಗಳಿಗೆ ಗೋದಮ್ಮನವರು ಸಮಂಜಸವಾಗಿ ಉತ್ತರಿಸುತ್ತಿದ್ದರು ಪ್ರತಿ ನಿತ್ಯ ತಾವು ಗೋದಮ್ಮನವರ ಸಂಗಡ ಮಾತನಾಡಿದ ವಿಷಯಗಳ ವರದಿ ಸಿದ್ಧಗೊಳಿಸಿ ಪ್ರೊಫೆಸರ್ ಫೈಲ್ (File) ಮಾಡುತ್ತಾ ಬಂದರು. ಅನುಭಾವದ (Mysticism) ಬಗ್ಗೆ ಗೋದಮ್ಮನವರು ಮಾಡಿದ ವ್ಯಾಖ್ಯಾನ ಕೇಳಿ ಪ್ರೊಫೆಸರು ಮುಗ್ಧರಾಗಿ,

"ಸ್ವಾಮಿ, ನಿಮ್ಮ ಗ್ರ್ಯಾಂಡ್‌ಮಾ (Grandma) ಎಷ್ಟು ಓದಿದ್ದಾರೆ-ಎಷ್ಟು ತಿಳಿದುಕೊಂಡಿದ್ದಾರೆ" ಎಂದರು

ನಾರಾಯಣಸ್ವಾಮಿ ನಕ್ಕು,

"ಅವರು ಏನೂ ಓದಿಲ್ಲ ಪ್ರೊಫೆಸರ್. ಪುರಾಣ, ಪುಣ್ಯಕಥೆಗಳನ್ನು ಕೇಳಿ ಕೇಳಿ ವಿಷಯ ಸಂಗ್ರಹಿಸಿಕೊಂಡಿದ್ದಾರೆ ದರ್ಶನಗಳ ಬಗ್ಗೆ ಅವರು ಹೇಳುವ ಮಾತುಗಳೆಲ್ಲಾ ಅನುಭವಜನ್ಯವಾದವುಗಳು; ಯಾವದನ್ನೂ ಪುಸ್ತಕ ಓದಿ ಗೋದಜ್ಜಿ ಕಲಿತಿಲ್ಲ." ಎಂದ.

"ಇದು ಅದ್ವಿತೀಯ ಶಕ್ತಿ. ನಿಮ್ಮ ತಾಯಿಯವರೂ ಹೀಗೇ ಇದ್ದರೇ."

"ಈ ಪೀಳಿಗೆಯವರೆಲ್ಲಾ ಹೀಗೇ ಪ್ರೊಫೆಸರ್, ಪಾಂಡಿತ್ಯ, ಅಧ್ಯಾತ್ಮಜ್ಞಾನ ಅವರಿಗೆ ರಕ್ತಗತವಾಗಿರುತ್ತದೆ."

"ಭಾರತದ ಪ್ರೌಢಿಮೆಗೆ ಇದಕ್ಕಿಂತ ಸಾಕ್ಷ್ಯ ಬೇಕೇ ಸ್ವಾಮಿ" ಎಂದರು.

ಗೋದಜ್ಜಿಗೂ ಪ್ರೊಫೆಸರನ್ನು ಕಂಡರೆ ಅಪಾರ ಗೌರವ ಹುಟ್ಟಿತು. ಒಂದು ದಿನ ಕಮಲನಿಗೆ,

" ನಮ್ಮ ನಾಣಿ ಗುರುಗಳು ಎಂಥಾ ದೊಡ್ಡ ವ್ಯಕ್ತಿ ಕಮಲಾ ಅವರಲ್ಲಿ ಜ್ಞಾನ ತುಂಬಿ ತುಳುಕುತ್ತಿದೆ. ಆದರೂ ಮನುಷ್ಯ ಎಂಥಾ ನಿಗರ್ವಿ. ಅವರ ನಿಷ್ಟಾನಂತ ಜೀವನ ನೋಡಿ ಬ್ರಾಹ್ಮಣರು ಕೂಡ ನಾಚಬೇಕಾಗಿದೆ. "

" ಅವರ ಜೀವನವೇ ಹಾಗಂತೆ ಅಜ್ಜಿ ಸಾವಿರಾರು ರೂಪಾಯಿ ಸಂಪಾದಿಸಿ, ಎಲ್ಲವನ್ನೂ ದಾನಧರ್ಮಕ್ಕಿತ್ತು ಅಹನ್ಯಹನಿ ಕಾಲಕ್ಷೇಪ ಮಾಡುತ್ತಾರಂತೆ ! "

" ದೊಡ್ಡದು ಎಲ್ಲಿದ್ದರೂ ದೊಡ್ಡದೇ ಕಮಲಾ. ಅದಕ್ಕೆ ಕೈಯೆತ್ತಿ ಮುಗಿದು ನಾವು ಧನ್ಯರಾಗಬೇಕು. ಭಗವಂತ ಹೇಳಿರುವಂತೆ

ಯದ್ಯದ್ವಿಭೂತಿಮತ್ಸತ್ತ್ವಂ
ಶ್ರೀಮದೂರ್ಜಿತಮೇವ ವಾ
ತತ್ತದೇವಾವಗಚ್ಛ ತ್ವಂ
ಮಮ ತೇಜೋಂಶಸಂಭವತ್ ॥"

ಎಂದು ಹೇಳಿದರು.

ಒಂದು ತಿಂಗಳು ಸತತ ಶ್ರಮಪಟ್ಟು ಪ್ರೊಫೆಸರು ತಮ್ಮ ಟಿಪ್ಪಣಿ ಕಲಸ ಮುಗಿಸಿ,

" ಮಿ. ಸ್ವಾಮಿ. ನನ್ನ ಕೆಲಸ ಮುಗಿಯಿತು. ಇನ್ನು ನಾನು ಹೊರಡುವ ಯೋಚನೆ ಮಾಡಬೇಕು. " ಎಂದರು

" ದಕ್ಷಿಣಭಾರತ ಪ್ರವಾಸ ಹಾಗೇ ಉಳಿಯಿತಲ್ಲಾ "

" ಉತ್ತರ ಭಾರತದ ಬಗ್ಗೆ ನಾನು ಸಂಗ್ರಹಿಸಿರುವ ವಿಷಯವೇ ಮೂರು ನಾಲ್ಕು ಸಂಪುಟಗಳಾಗುತ್ತವೆ. ಇದರ ಕ್ರೋಢೀಕರಣ ಮುಗಿಸಿ ವರದಿ ಸಿದ್ಧಗೊಳಿಸುತ್ತೇನೆ. ಆಮೇಲೆ ನುತ್ತೊಮ್ಮೆ ಭಾರತಕ್ಕೆ ಬಂದು ದಕ್ಷಿಣಭಾರತ ಪ್ರವಾಸ ಕೈಗೊಳ್ಳುತ್ತೇನೆ. ನಿಮ್ಮ ಕಾರ್ಯಕ್ರಮ ಹೇಗೆ ನಿರ್ಧರಿಸಿರುವಿರಿ. ನನ್ನ ಜತೆಯಲ್ಲಿ ಬರಲು ಸಾಧ್ಯವೇ ? "

" ಬಾ ಎಂದರೆ ಬರುತ್ತೇನೆ. "

" ನೀವು ಇಲ್ಲಿ ಇರಬೇಕಾದರೆ ಇರಿ. ಪೂರ್ವಭಾವಿಯಾಗಿ

ಮಾಡಬೇಕಾದ ಕೆಲಸ ಮುಗಿಸಿ ನಾನು ನಿಮ್ಮನ್ನು ಬರಮಾಡಿಕೊಳ್ಳು ತ್ತೇನೆ. ವರದಿಯ ಅಂಕೆ, ಅಂಶಭಾಗ ನಾನು ಬರೆಯುತ್ತೇನೆ, ಜನತೆಯ ಸಂಸ್ಕೃತಿಯನ್ನು ವಿವರಿಸುವ ಭಾಗ ನೀವು ಬರೆಯ ಬೇಕಾಗಿದೆ ಈ ಸಂಪುಟಗಳು ನಮ್ಮಿಬ್ಬರ ಹೆಸರಿನಲ್ಲಿಯೂ ಪ್ರಕಟ ವಾಗಬೇಕು. "

"ನನ್ನ ಹೆಸರೇಕೆ? ಕಷ್ಟಪಟ್ಟು ದುಡಿದಿರುವವರು ತಾವು - ನಾನೇನು ಮಾಡಿದೆನೆಂದು ಈ ಕೀರ್ತಿಯಲ್ಲಿ ಪಾಲು ಪಡೆಯಬೇಕು. "

"ನಿಮ್ಮ ಸಹಾಯವಿಲ್ಲದಿದ್ದರೆ ನಾನು ಈ ಕೆಲಸ ಕೈಗೊಳ್ಳು ತ್ತಲೇ ಇರಲಿಲ್ಲ ಸ್ವಾಮಿ—ಇನ್ನೂ ಒಂದು ವಿಷಯ ನಿಮ್ಮ ಅಜ್ಜಿ ಯವರ ಜತೆ ನಾನು ನಡೆಸಿದ ಸಂಭಾಷಣೆಗಳಿಗೆ ಒಂದು ಶಾಶ್ವತರೂಪ ಕೊಡಬಯಸುತ್ತೇನೆ. 'ಟಾಕ್ಸ್ ವಿತ್ ಎನ್ ಇಂಡಿಯನ್ ಗ್ರ್ಯಾಂಡ್ ಮದರ್' (Talks with an Indian Grand-mother) – ಆಗ ಬಹುದಷ್ಟೆ ? "

"ನಾನು ಮಾಡಬೇಕಾಗಿದ್ದ ಕೆಲಸವನ್ನು ದೊಡ್ಡವರಾದ ತಾವು ನಿರ್ವಹಿಸಿದರೆ ನನಗೆ ಸಂತೋಷವಲ್ಲವೇ ? "

"ನೀವೆಲ್ಲರೂ ನನ್ನನ್ನು ಪರಮಸುಖಿಯನ್ನಾಗಿ ಮಾಡಿದಿರಿ ಸ್ವಾಮಿ ನಾನು ತುಂಬ ಕೃತಜ್ಞನಾಗಿದ್ದೇನೆ "

"ತಮ್ಮ ಆಗಮನದಿಂದ ನಮ್ಮ ಮನೆ ಪಾವನವಾಯಿತು. "

"ನನ್ನ ಮನಸ್ಸು ಪಾವನವಾಯಿತು ಸ್ವಾಮಿ. ನನಗೆ ನಿಜ ಮಾನವ್ಯದ ದರ್ಶನವಾಯಿತು ಪೀಟರನ್ನೂ ಕರೆದುಕೊಂಡು ಬರ ಬೇಕಾಗಿತ್ತು ಸಾಮಾನ್ಯಜನರು ಪರಿಶುದ್ಧವಾಗಿರುವ ಈ ಭಾರತವನ್ನು ಅವನೊಮ್ಮೆ ನೋಡಲೇ ಬೇಕು. "

'ನೋಡಲೇ ಬೇಕು' ಎಂದು ಪ್ರೊಫೆಸರು ತಮ್ಮಷ್ಟಕ್ಕೇ ಹೇಳಿಕೊಂಡರು.

# ೩೫

ಪ್ರೊಫೆಸರು ಪ್ರಯಾಣಮಾಡುವ ದಿನ ನಿಷ್ಕರ್ಷೆಯಾಯಿತು ಮುಂಬಯಿಯವರೆಗೆ ನಾರಾಯಣಸ್ವಾಮಿ ಅವರ ಜತೆ ಹೋಗಿ, ಅವರನ್ನು ಪ್ಲೇನ್ ಹತ್ತಿಸಿ ಹಿಂದಿರುಗುವುದೆಂದು ನಿಶ್ಚಯವಾಯಿತು.

ಊರಿಗೆ ಪ್ರಯಾಣಮಾಡುವ ಹಿಂದಿನ ಸಂಜೆ ಪ್ರೊಫೆಸರು ಕಮಲಾ, ಇಂದುಮತಿಯನ್ನು ಜತೆಯಲ್ಲಿ ಕರೆದುಕೊಂಡು ಹೊರಟರು.

ದಾರಿಯಲ್ಲಿ ಬರುವಾಗ

" ಕಮಲಾ; ನಾನು ಕೆಲವು ಉಡುಗೆರೆಗಳನ್ನು ಕೊಳ್ಳ ಬೇಕಾಗಿದೆ. ಅಂಗಡಿಗೆ ಕರೆದುಕೊಂಡು ಹೋಗು" ಎಂದರು

" ಯಾರಿಗೆ ಕೊಡುವುದಕ್ಕೆ ಪ್ರೊಫೆಸರ್ ? "

" ಅದು ರಹಸ್ಯ - ಈಗ ಹೇಳುವುದಿಲ್ಲ. "

ಪ್ರೊಫೆಸರ್ ಇಚ್ಛೆಯಂತೆ ಕಮಲಾ ಅವರನ್ನು ಬಟ್ಟೆಯಂಗಡಿಗೆ ಕರೆದೊಯ್ದಳು. ಪುಕ್ಕಳ ಬಟ್ಟೆಗಳನ್ನೂ ಪ್ರೊಫೆಸರೇ ಆಯ್ದು, ಎರಡು ಸೀರೆಗಳನ್ನಾರಿಸಲು ಕಮಲಾ, ಇಂದುಮತಿಯನ್ನು ಪ್ರಾರ್ಥಿಸಿದರು.

ಸೀರೆ ವ್ಯಾಪಾರ ಮುಗಿಯಲು ಪ್ರೊಫೆಸರು ಒಂದು ಉತ್ತಮ ಕಾಶ್ಮೀರ ಶಾಲನ್ನು ಕೊಂಡರು.

ರಾತ್ರಿ ಎಲ್ಲರೂ ಊಟಮುಗಿಸಿ ಹರಟೆಗೆ ಕುಳಿತಾಗ ಪ್ರೊಫೆಸರು ಉಡುಗೆರೆಯನ್ನು ತಂದು ಎಲ್ಲರಿಗೂ ಹಂಚಿ, ಶಾಲನ್ನು ಗೋದಮ್ಮ ನವರಿಗೆ ಒಪ್ಪಿಸಿದರು.

" ನನಗೇಕಪ್ಪಾ ಉಡುಗೆರೆ " ಎಂದು ಗೋದಜ್ಜಿ ಸಂಕೋಚ ಪಟ್ಟುಕೊಂಡರು.

"ಗ್ರ್ಯಾಂಡ್ – ಮಾ (Grandma) ನಿಮ್ಮ ಹೆಸರು ಹೇಳಿ ನಾನು ಸಾವಿರಾರು ರೂಪಾಯಿ ಸಂಪಾದಿಸುತ್ತೇನೆ. ಕಾಣಿಕೆಯಾಗಿ ನಾನು ಇಷ್ಟನ್ನಾದರೂ ಸಲ್ಲಿಸಬೇಡವೇ ?"

"ನನ್ನ ಹೆಸರು ಹೇಳಿಕೊಂಡು ಸಂಪಾದನೆಯೆ ?"

"ಹೌದು ಗ್ರ್ಯಾಂಡ್‌ಮಾ – ನೀವೂ ನಾನೂ ನಡೆಸಿದ ಸಂಭಾಷಣೆಗಳನ್ನು ಬರೆದು ಗ್ರಂಥರೂಪವಾಗಿ ಪ್ರಕಟಿಸುತ್ತೇನೆ ಅದರಿಂದ ನನಗೆ ಸಾವಿರಾರು ರೂಪಾಯಿ ಗೌರವಧನ ಸಿಕ್ಕುತ್ತದೆ."

"ಈ ಮುದಿಯಾತ್ಮಳ ಮಾತಿನಿಂದ ಯಾರಿಗೇನು ಪ್ರಯೋಜನ?"

"ಪ್ರಯೋಜನವೇ ? ಅದನ್ನೋದಿದವರ ಜನ್ಮ ಪಾವನವಾಗುತ್ತದೆ" ಎಂದರು

ಕಮಲಾ ಗೋದಮ್ಮನವರನ್ನು ಪರಿಹಾಸ್ಯಮಾಡುತ್ತಾ

"ನೀನೇ ಪರವಾಗಿಲ್ಲ ಗೋದಜ್ಜಿ ಅಂತರ – ರಾಷ್ಟ್ರೀಯ ವ್ಯಕ್ತಿಯಾದೆ (International Personality)"

"ವಯಸ್ಸಿನಲ್ಲಿ ನಾನು ಹಿರಿಯಳು ನಿಜ – ಆದರೆ ನನಗೂ ಗುರುವಾಗಿದ್ದವಳು ನಿಮ್ಮಮ್ಮ ಕಣೇ ಕಮಲಾ – ಈ ಮರ್ಯಾದೆ ಅವಳಿಗೆ ಸೇರಬೇಕು ಆ ಮಹಾತಾಯಿ ಹಚ್ಚಿ ನಮ್ಮ ಕೈಯಲ್ಲಿಟ್ಟಿದ್ದ ಜ್ಞಾನದೀಪ ನಂದದಂತೆ ನಾವು ನೋಡಿಕೊಂಡರ ಸಾಕು ನನ್ನ ಮಾತು ಕೇಳಿ ಈ ಪುಣ್ಯಾತ್ಮ ಒಂದು ಪುಸ್ತಕ ಬರೆಯುತ್ತಾರಂತೆ – ಅವಳ ಮಾತು ಕೇಳಿದರೆ ನೂರು ಪುಸ್ತಕ ಬರೆಯುತ್ತಿದ್ದರು"

ಎಂದರು.

ಬೆಳಿಗ್ಗೆ ಪ್ರೊಫೆಸರನ್ನೂ ನಾರಾಯಣಸ್ವಾಮಿಯನ್ನೂ ಏರೋಪ್ಲೇನಿನಲ್ಲಿ ಬಿಟ್ಟುಬರಲು ಕಮಲಾ, ಇಂದುಮತಿ ಅನುವಾದರು ಗೋಪಾಲ, ಸೌಭಾಗ್ಯ ಬಿಡದೆ ಗಂಟೇಬಿದ್ದರು.

ಪ್ರೊಫೆಸರನ್ನು ಅಗಲುವ ವೇಳೆ ಸಮೀಪಿಸಿದಂತೆ ಎಲ್ಲರ ಖಿನ್ನತೆ ಹೆಚ್ಚಿತು.

ಪ್ರೊಫೆಸರೂ ಖಿನ್ನರಾಗಿದ್ದರು.

ಟ್ಯಾಕ್ಸಿ ಹತ್ತುವ ಮುನ್ನ ಪ್ರೊಫೆಸರು ಒಳಗೆ ಬಂದು ಮಾಧವ

ರಾಯನ ಅಪ್ಪಣೆ ಪಡೆದು, ಎಲ್ಲರನ್ನೂ ವಿಶ್ವಾಸಪೂರ್ವಕ ಮಾತ ನಾಡಿಸಿ, ಗೋದಜ್ಜಿಯ ಪಾದಮುಟ್ಟಿ ನಮಸ್ಕರಿಸಿದರು.

ಗೋದಜ್ಜಿ ಕಣ್ಣುಗಳು ಹನಿಗೂಡಿದವು

" ಹೋಗಿ ಬಾ ನಮ್ಮಪ್ಪ – ಭಗವಂತನು ನಿಮ್ಮನ್ನು ಸದಾಸುಖಿ ಯನ್ನಾಗಿಟ್ಟಿರಲಿ. "

ಎಂದು ಮನಃಪೂರ್ವಕವಾಗಿ ಆಶೀರ್ವದಿಸಿದರು.

ಲಂಡನ್ ಗೆಳೆಯ ಗೆಳತಿಯರಿಗೆಲ್ಲಾ ವಿಶ್ವಾಸ ತಿಳಿಸಬೇಕೆಂದು ನಾರಾಯಣಸ್ವಾಮಿ ಪ್ರಾರ್ಥಿಸಿದ.

ಏರೋಡ್ರೋಮಿನಲ್ಲಿ ಸಿದ್ಧವಾಗಿ ನಿಂತಿದ್ದ ವಿಮಾನಕ್ಕೆ ಪ್ರೊಫೆಸರು, ಸ್ವಾಮಿಯ ಸಾಮಾನುಗಳನ್ನು ಕೂಲಿಗಳು ಒಯ್ದಿಟ್ಟರು.

ಪ್ರೊಫೆಸರು ಹಿಂದೂ ಪದ್ಧತಿಯಂತೆ ಕಮಲಾ, ಇಂದುಮತಿಗೆ ಕೈಮುಗಿದು

" ಈ ಮುದುಕನನ್ನು ಮರೆಯಬೇಡಿ " ಎಂದು ಮಕ್ಕಳನ್ನೆತ್ತಿ ಕೊಂಡು ಅಪ್ಪಿ ಮುದ್ದಾಡಿದರು.

ಮಾತನಾಡಲರಿಯದೆ ಕಮಲಾ, ಇಂದುಮತಿ ದುಃಖಿಸುತ್ತ ನಿಂತರು.

ವಿಮಾನ ಮೆಲ್ಲನೆ ನೆಲಬಿಟ್ಟು ಮೇಲಕ್ಕೇರಿತು—ಪ್ರೊಫೆಸರ ಆತ್ಮಪಕ್ಷಿಯ ಊರ್ಧ್ವಗಮನ ನಿರ್ದೇಶಿಸುವಂತೆ !

ಮುಂಬಯಿಯಲ್ಲಿ ಪ್ರೊಫೆಸರು ಇಳಿಯಲಿಲ್ಲ. ಏರೋಡ್ರೋಮಿ ನಲ್ಲೇ ಉಪಾಹಾರ ಮುಗಿಸಿಕೊಂಡು ಲಂಡನ್ನಿಗೆ ಪ್ರಯಾಣಮಾಡು ತ್ತಿದ್ದ ಏರ್ ಇಂಡಿಯ–ಇಂಟರ್‌ನ್ಯಾಷನಲ್ (Air India-International) ಹತ್ತಲನುವಾದರು.

ಧ್ವನಿವರ್ಧಕ ಯಂತ್ರ ಮೊದಲನೆಯ ಸೂಚನೆಯಿತ್ತಿತು.

ಪ್ರೊಫೆಸರು ಸ್ವಾಮಿಯನ್ನಪ್ಪಿ

" ಬೇಗ ಬನ್ನಿ ಸ್ವಾಮಿ – ಎಂದರು. "

ನಾರಾಯಣಸ್ವಾಮಿ ಭಕ್ತಿಪೂರ್ವಕವಾಗಿ ಗುರುಚರಣಗಳಿಗೆ ಅಭಿವಂದಿಸಿದ.

ಪ್ರೊಫೆಸರು ವಿಮಾನ ಹತ್ತುವ ಮುನ್ನ

" ಲಂಡನ್ನಿಗೆ ಬರುವ ಮುನ್ನ ಒಂದು ಕಾದಂಬರಿ ಮುಗಿಸಿ ಹಸ್ತ ಪ್ರತಿ ತೆಗೆದುಕೊಂಡು ಬನ್ನಿ "

" ಏನು ಬರೆಯಬೇಕೆಂಬುದೇ ಹೊಳೆಯುತ್ತಿಲ್ಲದು ಪ್ರೊಫೆಸರ್ "

" ಯೋಚನೆ ಯಾಕೆ ? ನಿಮ್ಮ ತಾಯಿಯವರನ್ನೊಮ್ಮೆ ಸ್ಮರಿಸಿ ಕೊಂಡು ಬರೆಯುವುದಕ್ಕಾರಂಭಿಸಿ ಕಾದಂಬರಿ ತಾನೇ ರೂಪು ಗೊಳ್ಳುತ್ತದೆ. "

ಧ್ವನಿವರ್ಧಕ ಯಂತ್ರ ದ್ವಿತೀಯ ಸೂಚನೆಯಿತ್ತಿತು.

ಪ್ರೊಫೆಸರು ' ನಮಸ್ತೇ ' ಎಂದರು

ಸ್ವಾಮಿ ' ನಮಸ್ತೇ ಗುರುದೇವ ' ಎಂದ

ವಿಮಾನ ಗುಡುಗಿ ಮೇಲಕ್ಕೇರಿತು

ಅದೇ ರಾತ್ರಿ ನಾರಾಯಣಸ್ವಾಮಿ ರೈಲು ಹತ್ತಿ ಬೆಂಗಳೂರತ್ತ ಪ್ರಯಾಣ ಬೆಳಸಿದ.

ಜೀವನದ ಒಂದು ಅಧ್ಯಾಯ ಮುಗಿದು, ಎರಡನೆಯ ಅಧ್ಯಾಯ ಆರಂಭವಾಯಿತು ಎಂಬ ಭಾವನೆ ಥಟ್ಟನೆ ಅವನ ಮನಸ್ಸಿಗೆ ಹೊಳೆಯಿತು

# ಈವರೆಗಿನ ಕೈಹೊತ್ತಿಗೆಗಳು

| | | |
|---|---|---|
| ೧. | *ಗೃಹಲಕ್ಷ್ಮಿ | ಅ. ನ. ಕೃ |
| ೨. | *ಮಲ್ಲಿ .. | ದೇವುಡು |
| ೩. | *ವಿಮೋಚನೆ | ನಿರಂಜನ |
| ೪. | *ಪರದೇಶಿ | ಕುಲಕರ್ಣಿ ಬಿಂದುಮಾಧವ |
| ೫. | *ಸ್ವರ್ಣರೇಖೆ | ವೀರಕೇಸರಿ |
| ೬. | *ಅಪಸ್ವರ | ತ್ರಿವೇಣಿ |
| ೭. | *ರಾಯರು ಕಂಡ ರಂಗು | ಬೆಳ್ಳಿ ರಾಮಚಂದ್ರರಾವ್ |
| ೮. | *ರುಕ್ಮಿಣಿ | ಅ. ನ. ಕೃ. |
| ೯. | *ವಜ್ರಮುಂಗುರ ... | ನಾ. ರಾಜಣ್ಣ |
| ೧೦. | *ಕೇದಿಗೆ ವನ | ತ. ರಾ. ಸು. |
| ೧೧. | *ಸಮಾಜ ಗರ್ಭದಲ್ಲಿ | ಸಿ. ಬಿ. ಚಂದ್ರಶೇಖರ್ |
| ೧೨. | ತೀರಿದ ಆಸೆ | ಸೇವ ನಮಿರಾಜಮಲ್ಲ |
| ೧೩. | ಪ್ರಕೃತಿ | ಶ್ರೀರಂಗ |
| ೧೪. | ಹೊಲ–ಮನೆ ... | ಶ್ರೀಕೃಷ್ಣ ಪಾಟೀಲ |
| ೧೫. | *ದೇವದಾಸಿ–ಎಚ್ಚಮನಾಯಕ | ದಿವಂಗತ ಕೆ. ಹಿರಣ್ಣಯ್ಯ |
| ೧೬. | ರಾಣೀ ಅಜ್ಞಾತಾ | ನವಗಿರಿನಂದ |
| ೧೭. | ಬಯಕೆಯ ಬೆಲೆ | ಎಚ್ಚೆಸ್ಕೆ |
| ೧೮. | ರಂಗಮ್ಮನ ವಠಾರ | ನಿರಂಜನ |
| ೧೯. | ಗೊಂಡಾರಣ್ಯ | ಶಿವರಾಮ ಕಾರಂತ |
| ೨೦. | ಶ್ರೇಯಾಂಸ—ಭಾಗ ೧ .. | ಮಿರ್ಜಿ ಅಣ್ಣಾರಾಯ |
| ೨೧. | ಶ್ರೇಯಾಂಸ—ಭಾಗ ೨ | ಮಿರ್ಜಿ ಅಣ್ಣಾರಾಯ |
| ೨೨. | ಸಂಸ್ಕೃತಿಯ ವಿಶ್ವರೂಪ | ಅ. ನ. ಕೃ. |
| ೨೩. | ಕಾಂಚನಗೀತ | ಇಂದಿರಾತನಯ |
| ೨೪. | ತಾಯಿ–ಮಕ್ಕಳು | ಅ. ನ. ಕೃ. |

## ಅಚ್ಚಿನಲ್ಲಿ

| | | |
|---|---|---|
| ೨೫. | ಅದಲು-ಬದಲು | ನಾವಿಗೇರ್ ಕೃಷ್ಣರಾಯ |

## ಮುಂಬರುವ ಪ್ರಕಟನೆಗಳು

| | |
|---|---|
| ಕಳಂಕಿನಿ ... | ಅ. ನ. ಕೃ. |
| ನಕ್ಷತ್ರಗಾನ .. | ಇಂದಿರಾತನಯ |

---

*ಪ್ರತಿಗಳು ಮುಗಿದಿವೆ.